ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 11
ಸಂಚಿಕೆ 2
ಏಪ್ರಿಲ್-ಜೂನ್-1982

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 11. No. 2, April–June 1982

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಕೆ. ಸಿ. ಶಿವಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಶಬ್ದ ಸಂಪಾದನೆ

ಜಯಸುದರ್ಶನ

ಲೆಕ್ಕವಿಲ್ಲದ ಹಾಗೆ ಮೈಯೆಲ್ಲ ತೆರೆತೆರೆಯ ರೆಕ್ಕೆ
ಯೊಡೆದು, ಎಷ್ಟು ಬಡಿದರೂ,
ಕಡಲ ಕಳವಳದ ನೀರೊಡಲೆದ್ದು
ಮುಗಿಲಲ್ಲಿ ಒಮ್ಮೆಯೂ ನಿಸೂರಾಗಿ ಹಾರಲಿಲ್ಲ.
ಉತ್ತುಂಗ ಶೃಂಗ ಶ್ರೇಣಿ ಗತ್ತಾಗಿ ತಲೆ ಸೆಟೆಸಿ,
ಎಷ್ಟು ಕಾದರೂ, ಬಾನ ಕೇವಲದ ನಿಸ್ಪೃಕ ಸ್ಪರ್ಶಾನುಭವ
ಯಾವ ಬೋಳು ನೆತ್ತಿಯ ಮೇಲೂ ಆಡಲಿಲ್ಲ.

ಎಲ್ಲ ವಸ್ತು, ಸ್ಥಿತಿ, ವರ್ತನ, ಸ್ವಭಾವ ಬಾಹುಳ್ಯಕ್ಕೆ,
ಭಾವ, ತರ್ಕ, ಚಿಂತನಾ ವೈಪುಲ್ಯಕ್ಕೆ
ಗೊತ್ತಾದ ಒಂದೊಂದು ಶಬ್ದವಿರಲೇಬೇಕು
ಕಾದಿಟ್ಟ ಹಾಗೆ ನಿಘಂಟಿನಲ್ಲಿ ;
ಅಲ್ಲಿ ದನಿ ಇಲ್ಲದ್ದು ಆಚೆ ಎಲ್ಲಿದ್ದರೂ,
ಅದು ತಿಳಿಯುವಂತಿಲ್ಲ
ತಿಳಿಯಲೇಬೇಕಾದಷ್ಟು ಆಪ್ತವಾಗಿ.

ದೇಶ ತಪ್ಪಿದ ಕಾಲ ಭೈರವನಂತೆ ದಿಕ್ಕೆಟ್ಟು,
ನಾನು ಕುಣಿದಿದ್ದೇನೆ ನಿಂತಲ್ಲಿ, ನಡೆದಲ್ಲಿ
ಕೆಲವೊಮ್ಮೆ ಹುಚ್ಚಾಗಿ–
ಕೊತ್ತಂಬರೀ ಸೊಪ್ಪು, ಶುಂಠಿ ಬೇರು, ತುಟಿ ಬೆವರಿನಾಚೆ
ಹೊಮ್ಮಿ, ಗುಮ್ಮಿ ಬರುವ ಒಗರು ಘಾಟಿನಲ್ಲಿ ;
ಬಳಿಗೇ ಕರೆವ ಅಕ್ಕರೆಯ ಮಾವು, ಮಲ್ಲಿಗೆ, ಮೊಲ್ಲೆಯ
ಪಕ್ವ ಸ್ವಾದ, ಪರಿಮಳದ ಲೋಕದಲ್ಲಿ;
ಮತ್ತು ಎಡಬಿಡದೆ ಹುಟ್ಟುತ್ತಲೇ ಇರುವ
ಆಸಕ್ತ ಕೆಂದುಟಿಗಳಲ್ಲಿ
ನಿಸ್ಸಂಕೋಚ ಅಭಿವ್ಯಕ್ತಿ ಪಡೆವ ರಕ್ತ ಸಂಚಾರ,
ಪ್ರದಕ್ಷಣೆಯ ಪರಿಪೂರ್ಣತೆಯಲ್ಲಿ,
ನನಗೆ ಬೇಕಾದ ಒಂದು ಶಬ್ದಕ್ಕಾಗಿ ಹುಡುಕಿ.
ಗಾಳಿಯಾಡದ ಕನಸ ನೆಲ ಮಾಳಿಗೆಯ ಹೊಕ್ಕಿದ್ದೇನೆ

ಶ್ವಾಸ ಬಿಗಿದವನೆ, ದುಡುಕಿ ;
ಅಬ್ಬಬ್ಬ, ಉಸಿರುಗಟ್ಟಲು ಅಲ್ಲಿ, ಹೊರಗೋಡಿ ಬಂದಿದ್ದೇನೆ
ಬಡ ಜೀವ ಹೇಗೋ ಬದುಕಿ.

ತಿಳಿಯುವುದಿಲ್ಲ ನನ್ನ ಈ ಪರದಾಟ
ಬೆಳುದಿಂಗಳಿನ ಸುಪ್ತ, ಅನುರಕ್ತ ಚಲನೆಗಳಿಗೆ ;
ದಾರಿಯುಲ್ಲಡ್ಡ ನಿಂತು ಕೆರಳಿಸುವ
ಧರೆಯು ಮತ್ತ, ವಿಷಯಾಸಕ್ತ ಛಾಯೆಗಳಿಗೆ ;
ಇರುಳಿಂದ್ದ ಧ್ಯಾನದ ಹಾಗೆ ಎಚ್ಚರವಿದ್ದು,
ಅಷ್ಟಗಲ ಬೆಳಕು ಹರಿದಾಗ,
ಕಣ್ಮುಚ್ಚಿ ಕಾಣದಾಗುವ ಧ್ರುವ ತಾರೆಯಾಶ್ವಾಸನೆಗೆ ;
ಹತ್ತಿರವಾದಂತೆ ಮೈ ಚಳಿ ಬಿಟ್ಟು, ಬಿಚ್ಚಿ ನಿಲ್ಲುವ
ಚಚ್ಚರದ ಬೆಟ್ಟ-ಗುಡ್ಡಕ್ಕೆ,
ಸ್ವಸ್ಥ ಪ್ರೇಮ-ಕಾಮಕ್ಕೆ ;
ಗಾಳಿಯುಲ್ಲಾಡುವ ನೆಲದೇಳುಬೀಳುಂಗಳಿಗೆ ;
ಅಂತೇ, ಒಲಿದ ಹೆಣ್ಣಿನ ತಿಳಿವ ಹೃದಯಕ್ಕೆ ಸಹಿತ.
ತಿಳಿಯುವುದಿಲ್ಲ, ಮುಟ್ಟಹೋದರೆ ಬಯಸಿ,
ಅಷ್ಟಕ್ಕೇ ಮುನಿಸಿ, ದೂರವಾಗುವಕ್ಷತ ಕನ್ಯ ಕ್ಷಿತಿಜಕ್ಕೆ.
ತಿಳಿಯಲೇ ಇಲ್ಲ ಓ ನನ್ನ ಈ ಪಾಡು
ಬಳಿಯಿದ್ದ ತಾಯ್ಮುಡಿಗೆ.

ಅಭಯ ಮುದ್ರೆ ಧರಿಸಿದ್ದ ಅಂಗೈಯಲ್ಲಿ
ಆ ರೀತಿ, ಈ ರೀತಿ, ತನ್ನದೇ ರೀತಿ
ಅಭಿನಯಿಸಿ,
ಬರಿದೇ ಆಕಾಶ ಕಾಣಿಸುವ ಪದಾರ್ಥ ಲೋಕದ
ಮಾತುಗಾರಿಕೆಯು ಭೋಗರತ, ಅಲಿತ
ಆಚೆ ಪರಿಸರದಲ್ಲಿ.
ಕೆಳಗೆ ಚಿಗುರಿಟ್ಟು, ಎಲೆ ಹರಡಿ,
ರೆಂಬೆ-ಕೊಂಬೆಗಳು ಮೇಲೆದ್ದು ಬಲಿತು,
ಹೂ, ಕಾಯಿ ಗೊಂಚಲು ತೂಗಿ, ಫಲ ಒಂದೊಂದೆ ಮಾಗಿ,
ಬೀಜ ತಾನಾಗಿ ಒಳಗಿಂದ ಮೈ ಕೊಡವಿ,
ಎದ್ದು ಬರುವಂಥ ವೈವಿಧ್ಯ, ಸಮೃದ್ಧಿ
ಮಣ್ಣ ಮೊಗಡೆಯಲ್ಲಿ.
ಒಳಗೆ ಇಷ್ಟು ಹೇರಳವಾಗಿ, ಹೊರವಾಗಿ ಬೆಳೆದುದೇ ಇಲ್ಲ
ತನ್ನಾಳ ಕಂಡು, ಇನ್ನಾಳಕಿಳಿಯದ ತಾಯಿ ಬೇರು.

Classic ಮತ್ತು Romantic ಇವುಗಳಿಗೆ ಕನ್ನಡ ಪರ್ಯಾಯಗಳು.?

ಗೌರೀಶ ಕಾಯ್ಕಿಣಿ

ಹೊಸಗನ್ನಡ ಸಾಹಿತ್ಯದ ವಿಮರ್ಶಾಪ್ರಪಂಚದಲ್ಲಿ "ಮಾರ್ಗ" ಮತ್ತು "ದೇಸೀ" ಇವೆರಡು ಪದಗಳು ಪಾಶ್ಚಾತ್ಯರ Classical ಮತ್ತು Romantic ಈ ಎರಡು ಪ್ರಕಾರಗಳಿಗೆ ಪರ್ಯಾಯ ನಾಮಗಳಾಗಿ ಬಳಕೆಯಲ್ಲಿ ಬಂದು ಬಹುಕಾಲ ಸಂದಿದೆ. ಹೆಸರಲ್ಲಿ ಏನಿದೆ ? ಹೂವಿಗೆ ಯಾವ ಹೆಸರಿಟ್ಟರೂ ಅದರ ಕಂಪು ಅದೇ—ಬೇರೆಯಾದೀತೇ ? ಎಂಬುವ 'ಒಳ್ನುಡಿ' ಈ ಸಂದರ್ಭಕ್ಕೆ ಅಷ್ಟೇನು ಸರಿ ಹೋಗುವಂತಿಲ್ಲ.

ಏಕೆಂದರೆ ಇದೊಂದು ವಿಶಿಷ್ಟ ಹಾಗೂ ನಿರ್ದಿಷ್ಟ ಪರಿಭಾಷೆಯ ಪ್ರಶ್ನೆ. ಇಲ್ಲಿ ಸಮಾನಾರ್ಥಕವೆಂದು ಪ್ರಯೋಗಿಸಲಾಗುವ ಪದಗಳಿಗೆ ಅವ್ಯಾಪ್ತಿ ಅತಿವ್ಯಾಪ್ತಿ ದೋಷಗಳು ಅಂಟಿಕೊಂಡಿರಬಾರದು. ಅವ್ಯಾಪ್ತಿಯಿಂದ classical ಪದದ ಅರ್ಥವ್ಯಾಪ್ತಿಯು 'ಮಾರ್ಗ'ಕ್ಕೆ ಇದೆಯೇ ? ಅದೇ ರೀತಿ Romantic ಎಂಬುದನ್ನೆಲ್ಲ "ದೇಸಿ"ಯು ಒಳಗೊಂಡಿದೆಯೇ ? ನಮ್ಮ ಆಧುನಿಕ ಸಾಹಿತ್ಯ ಶಾಸ್ತ್ರಜ್ಞರು ಈ ಬಗೆಗೆ ಗಂಭೀರವಾಗಿ ಪರಿಶೀಲಿಸಬೇಕು. "ಮಾರ್ಗ" ಮತ್ತು "ದೇಸಿ" ಇವೆರಡನ್ನೂ ಕಾವ್ಯನಿರ್ಮಿತಿಯ ಸಂದರ್ಭದಲ್ಲಿ ಅಧಿಕೃತವಾಗಿ ಪ್ರಯೋಗಿಸಿದವನು, ನಾನು ಭಾವಿಸುವ ಮಟ್ಟಿಗೆ ಆದಿಕವಿ ಪಂಪನು. ಆದರೆ ಆತ ಪ್ರಯೋಗಿಸಿದ ಸಂದರ್ಭದಲ್ಲಿ ಇವೆರಡೂ ಪದಗಳಿಗೆ ಇಂದು ನಾವು ಕಲ್ಪಿಸಿದ ಅಥವಾ ಕಟ್ಟಿಕೊಂಡ ಅರ್ಥವ್ಯಾಪ್ತಿ ಇದ್ದಿದ್ದೇ ಇಲ್ಲ. ಪಂಪನ ದೃಷ್ಟಿಯಲ್ಲಿ "ಮಾರ್ಗ"ವೆಂದರೆ ಆ ತನಕ ಸಂಸ್ಕೃತ ಲಕ್ಷಣ ರೀತಿ ನಿಬದ್ಧವಾಗಿ ನಡೆದುಬಂದ ಉದ್ದಾಮವೂ ಉನ್ನತವೂ ಆದ ಭಾಷಾಶೈಲಿ. ಅದು ಅವಂತಿ ಸುಂದರಿಯು ಹೇಳುವಂತೆ "ವಿದಗ್ಧ ಭಣಿತ ಭಂಗಿ" ಮತ್ತು ತದ್ವಿರುದ್ಧವಾಗಿ, ''ದೇಸಿ'' ಅಂದರೆ ಅಂದಿನ ಪ್ರಾದೇಶಿಕ, ಜಾನಪದ, ಬಳಕೆಯ ಮಾತಿನ ಜಾಡು—ಇದರಲ್ಲಿ ಅಚ್ಚಗನ್ನಡದ ಪ್ರಾಕೃತ ಪ್ರಪಂಚದ ಜಾಣ್ನುಡಿಗಳೂ ನಾಣ್ನುಡಿಗಳೂ ಪಡೆನುಡಿ (Idioms)ಗಳೂ ಅಡಕವಾಗಿರುವುದನ್ನು ನಾವು ಪಂಪನ ಪೆಂಪಿನ ವಾಗ್ಧೋರಣೆಯಲ್ಲಿಯೂ ಧಾರಾಳವಾಗಿ ಕಾಣುತ್ತೇವೆ.

ಅಂದರೆ "ಮಾರ್ಗ" "ಮಾರ್ಗೀಯ" ಶೈಲಿ, ವಾಗ್ಧೋರಣೆ ವಿಶೇಷವಾಗಿ ವಿದ್ವಾಂಸರ ವಾಗ್ಧೋರಣೆ, ಅದು ಲಕ್ಷಣಶಾಸ್ತ್ರದ ರೀತಿ, ವೃತ್ತಿಗಳು, ಶೈಲಿಯ

ವಿಶಿಷ್ಟ ವಿನ್ಯಾಸವನ್ನು ಕುರಿತಾದ ಒಂದು ಹೆಸರು. ಪೂರ್ವ ಸೂರಿಗಳು ನಡೆದು ಬಂದ "ಮಾರ್ಗ"ವದು. ನೃಪತುಂಗ ಹೆಸರಿಸುವಂತೆ ಅದು "ಕವಿರಾಜಮಾರ್ಗ". ಹಳ್ಳಿಯ ಹಾದಿ-ಕಾಲುದಾರಿ ಸೀಳುದಾರಿ ಅಲ್ಲ. ಒಟ್ಟಾರೆ "ಮಾರ್ಗ" ಪದ ಪ್ರಯೋಗ ಹೆಚ್ಚಾಗಿ ಅಭಿವ್ಯಕ್ತಿಯ, ಭಾವಾವಿಷ್ಕಾರದ ರೀತಿ–ರೂಪದ ಬಗೆಗೇ ಹೆಚ್ಚಾಗಿ ಅನ್ವಯಿಸುತ್ತದೆ. ಅದು ಮುಖ್ಯವಾಗಿ ಶಾಬ್ದಿಕ ಶೈಲಿ ಶಯ್ಯೆ. ಶಕ್ತಿ ವಿಲಾಸಕ್ಕೇ ಸಂಬಂಧಪಟ್ಟ ಒಂದು ಧೋರಣೆ.

ಈ ಮಾತಿನ ಸ್ಪಷ್ಟತೆಗೆ ಇನ್ನೂ ಒಂದು ಸಂಗತಿಯನ್ನು ನಾವು ಗಮನಿಸ ಬಹುದು. ನಾನು ತಿಳಿದಮಟ್ಟಿಗೆ "ಮಾರ್ಗ" ಎಂಬ ಪದವು ಮೂಲತಃ ಸಾಹಿತ್ಯ ಶಾಸ್ತ್ರದ್ದೂ ಅಲ್ಲ. ಅದನ್ನು ಲಾಕ್ಷಣಿಕರು ಮುಖ್ಯವಾಗಿ ನಾಟ್ಯಶಾಸ್ತ್ರದಿಂದ ಎರವಲು ತಂದಂತಿದೆ. ಅಲ್ಲಿ ಕಟ್ಟುನಿಟ್ಟಾಗಿ ಶಾಸ್ತ್ರವು ಮಾಡಿದಂತೆಯೇ ಸಂಕೇತ–ಸಂಪ್ರದಾಯಕ್ಕೆ ನಿಬದ್ಧವಾಗಿ ಗುರುಶಿಷ್ಯ ಪರಂಪರೆಯಲ್ಲಿ ಚಾಚೂ ತಪ್ಪದೆ ಬಂದ ನೃತ್ತ–ನೃತ್ಯ-ನಾಟ್ಯ ನೇಪಥ್ಯ ವಿಧಾನ "ಮಾರ್ಗ"ವೆಂದು ಕರೆಸಿಕೊಂಡಿದ್ದೂ ಆ ಕಲಾಪ್ರಪಂಚದ ಪರಿಭಾಷೆಯಲ್ಲಿ ಸುಪರಿಚಿತವಾಗಿದೆ.

ಮೂಲತಃ "ಮಾರ್ಗ" ಶಬ್ದ ಇಂಥ ಒಂದು ಶಿಷ್ಟ ವಿಶಿಷ್ಟ ಹಾಗೂ ಶಾಸ್ತ್ರ ಶುದ್ಧ ಪಾರಿಭಾಷಿಕ ಅರ್ಥವನ್ನು ಬೆಳೆಯಿಸಿಕೊಂಡಿದ್ದೂ ಒಂದು ರೂಢಿಯೇ ಹೊರತು ಶಾಸ್ತ್ರವಲ್ಲ. ಆದರೆ "ಶಾಸ್ತ್ರಾತ್ ರೂಢಿ ; ಬಲೀಯಸೀ" ಅನ್ನುತ್ತಾರಲ್ಲವೇ ? ನಿಘಂಟುವಿನಂತೆ "ಮಾರ್ಗ" ಮೂಲತಃ "ಮೃಗ್" ಹುಡುಕಿಕೊಂಡು ಹೋಗು ಎಂಬ ಧಾತುವಿನ ರೂಪ. (ಇದರಿಂದಲೇ "ಮೃಗ"-ಮಿಗ ಬಂದದ್ದು. ಆದಿಮಾನವ ಹುಡುಕಿಕೊಂಡು ಹೋದದ್ದೂ ಆಹಾರಕ್ಕಾಗಿ ಮೃಗವನ್ನೇ). ಅನಂತರ ಮಾರ್ಗ ಒಂದು ದಾರಿ, ಹಾದಿ, ಪಥ, Tract, Trajectory ಆಯಿತು. ಅಲ್ಲಿಂದ ಅದೊಂದು "ಪದ್+ಹತಿ=ಪದ್ಧತಿ", ಅನುಸರಿಸತಕ್ಕ ರೀತಿ, ರೂಢಿ ಸಂಪ್ರದಾಯವೆನಿಸಿಕೊಂಡಿತು. ಇದೇ ಮುಂದೆ ನಾಟ್ಯ ಪ್ರಪಂಚದಿಂದ ಸಾಹಿತ್ಯ ಪ್ರಪಂಚಕ್ಕೆ ವರ್ಗಾಂತರಗೊಂಡಿತು.

ಆಗಲೂ "ಮಾರ್ಗ"ವೆಂದರೆ ಒಂದು ಶೈಲಿ, ವಾಗ್ಧೋರಣೆ ಎಂಬುದೇ ಪ್ರಧಾನ ಅರ್ಥ. "ವೈದರ್ಭೀ ಮಾರ್ಗ" ಎಂಬಲ್ಲಿ ಇದೇ ಅಭಿಪ್ರೇತವಾಗಿದೆ. ಆದರೆ ಕಾಲಾಂತರದಿಂದ ಯಾವ ನಿಶ್ಚಿತ ಕಾಲದಲ್ಲಿಯೋ,–ಈ "ಮಾರ್ಗ"ಕ್ಕೆ "ದೇಶಿ"ಯ ವಿರುದ್ಧ ಒಂದು ಅಭಿಜಾತ ಅಭಿರುಚಿಯ ಪರಿಷ್ಕೃತ ರೂಪ–ಈ ರೀತಿ ಎಂಬ ವಿಶೇಷ ಅರ್ಥಗೌರವವು ಉಂಟಾಯಿತು. ಹಾಗೆಯೇ "ದೇಶೀ" "ದೇಶೀಯ" ಎಂಬುದಕ್ಕೆ ಸ್ಥಾನಿಕ ಪ್ರಾದೇಶಿಕ ಎಂಬ ಭಾವವೇ ಮುಂಚೆ ಇತ್ತು. ಅದರ ಮುಂದಿನ ಹೆಜ್ಜೆಯಾಗಿ ಪ್ರಾಕೃತ, ಜಾನಪದ, ದಿನಬಳಕೆಯದೆಂಬ ವಿಶೇಷ

ಅರ್ಥವು ಸೇರಿಕೊಂಡಿತು. ಆದರೆ ಒಂದು ಸೋಜಿಗವೆಂದರೆ "ಮಾರ್ಗ" "ದೇಶಿ" ಇವೆರಡೂ ಪದಗಳು ಸಂಸ್ಕೃತದಲ್ಲಿ ಎಂದಿನಿಂದಲೂ ರೂಢವಿದ್ದರೂ, ಅವುಗಳಿಗೆ ಪಂಪಮಹಾಕವಿ ಪ್ರಯೋಗಿಸಿದಂಥ ಅರ್ಥದ ಒತ್ತಾಗಲಿ ತಿರುವಾಗಲಿ ಸಂಸ್ಕೃತ ವಾಙ್ಮಯದಲ್ಲಿ ಇರುವುದಿಲ್ಲ.

ಇಷ್ಟಾಗಿಯೂ Classic ಎಂಬ ಶಬ್ದದ ಅರ್ಥಗೌರವ ಭಾವಸಂಪತ್ತು ಈ "ಮಾರ್ಗ" ಶಬ್ದಕ್ಕೆ ತುಂಬಿಕೊಳ್ಳುವುದಿಲ್ಲ ! ಈ ಸಂದರ್ಭದಲ್ಲಿ "ಮಾರ್ಗ"ಕ್ಕೆ ಅವ್ಯಾಪ್ತಿ ದೋಷವು ತಗಲುತ್ತದೆ. Classic ಅಂದಾಗ ಒಂದು ಕೃತಿಯ ಒಟ್ಟು ಗುಣಮಟ್ಟ ತೂಕ ಅಚ್ಚುಕಟ್ಟು, ಬಂಧಸೌಷ್ಠವ, ಅದರ Structure ಮತ್ತು Texture–ಎಲ್ಲವೂ ಒಟ್ಟಾಗಿ ಮನದಟ್ಟಾಗುತ್ತವೆ. "ಮಾರ್ಗ" ಪದ ಪ್ರಯೋಗ ದಿಂದ ಅದೆಲ್ಲಾ ಅಷ್ಟೆಲ್ಲಾ ಆಗುವುದಿಲ್ಲ. ಒಂದು ಸ್ಥೂಲ ಶ್ರೇಣೀಕರಣ (Classification) ಬೋಧವಾಗುತ್ತದೆ. ಮಾರ್ಗವೆಂದೊಡನೆ ಬೋಧವಾಗು ವುದು "ಸಂಪ್ರದಾಯ" (Tradition)

ಆದರೆ classic ಅಂದೊಡನೆ ಅದಕ್ಕೂ ಭವ್ಯವೂ ಭಾವ ಭರಿತವೂ ಆದ ಹೆಚ್ಚಿನ ಮತ್ತು ಹೆಡಸಾದ ಅರ್ಥವತ್ತತೆಯು "ಪದಾರ್ಥ" ಮನಸ್ಸಿಗೆ ಬರುತ್ತದೆ. ಅದೇಕೆ ಹಾಗೆ ? class ಅಂದೊಡನೆ ಅದು mass ಶಬ್ದಕ್ಕೆ ವಿರುದ್ಧವೆಂದು ಅರಿವಾ ಗುತ್ತದೆ. mass ಸಾಮಾನ್ಯ—ಸಮುದಾಯ, ತದ್ವಿರುದ್ಧವಾಗಿ class ಒಂದು ವಿಶಿಷ್ಟ (ಶಿಷ್ಟ) ವರ್ಗ ಶ್ರೇಣಿ, ಕೆಲವೊಂದು ಸರ್ವಸಮ್ಮತ ಸರ್ವಮಾನ್ಯ ಗುಣ ಲಕ್ಷಣಗಳ–ಅದೂ ಉತ್ತಮತೆಯನ್ನು ಸೂಚಿಸುವಂತೆ–ಮಟ್ಟವನ್ನು ಮಾನದಂಡ ವನ್ನೂ ಪ್ರತಿನಿಧಿಸುತ್ತದೆ. ಆ ಮಟ್ಟಿಗೆ ಅದು "ಮಾರ್ಗ"ದಂತೆ ಪ್ರಾಚೀನ ಪರಂಪರಾ ಗತ ಪ್ರತಿಷ್ಠೆಯ ಕೃತಿಗಳ ಜಾಡನ್ನು ಸೂಚಿಸುತ್ತದೆ. ಜತೆಗೇ ಅಂಥ ಎಲ್ಲ ಕೃತಿಗಳಿಗೆ ಸಾಮಾನ್ಯವಾದ ಕೆಲವೊಂದು ಗುಣಲಕ್ಷಣಗಳಿಗೆ ದ್ಯೋತಕವಾಗುತ್ತದೆ. ಈ ಗುಣಗ ಳೆಂದರೆ, ಋಜುತೆ, ಸರಳತೆ, ಸಾಮರಸ್ಯ, ಪ್ರಮಾಣಬದ್ಧ ಸೌಷ್ಠವ. ಅದಕ್ಕೆ ಕಾರಣವಾಗುವ ಸಂಯಮ, classic ಸಾಹಿತ್ಯ ಗುಣ classic ಸೌಂದರ್ಯ classic ಲಕ್ಷಣ–ಎಂದಾಗೆಲ್ಲ ಇದೆಲ್ಲ "ಗುಣ ಸನ್ನಿಪಾತ" ಗಮನಕ್ಕೆ ಬರುತ್ತದೆ, ಇಲ್ಲವೆ ಬರಬೇಕು. ಆದರೆ "ಮಾರ್ಗೀಯ ಸಾಹಿತ್ಯ"ವೆಂದಾಗ ಈ "ಗುಣಾಕಾರ"ದ ಬೋಧ ಆಗುವದೇ ? ಇಲ್ಲವೆಂದೇ ಹೇಳಬೇಕಾಗುವದು.

ಬಹುಶಃ ಸಂಸ್ಕೃತೇತರ ವಾಙ್ಮಯದಲ್ಲಿ ಸಂಸ್ಕೃತ ಕಾವ್ಯ ನಾಟಕಾದಿಗಳ ರೀತಿ ಲಕ್ಷಣ ಬಂಧ-ಛಂದಸ್ಸು ಮುಂತಾದವನ್ನು ಮೆಚ್ಚುಗೆಯಿಂದ ಮನ್ನಣೆಯಿಂದ, ಪ್ರತಿಷ್ಠೆಯ ಪ್ರತೀಕವೆಂಬಂತೆ ಅನುಸರಿಸಲು ಸುರುವಾದಂದಿನಿಂದ ಈ "ಮಾರ್ಗ" ವೆಂಬ ಮಾದರಿ ಪ್ರಚುರವಾಗಿರಬೇಕು,–ಪಾಶ್ಚಾತ್ಯ ಸಾಹಿತ್ಯದಲ್ಲಿ ಗ್ರೀಕ್ ಸಾಹಿತ್ಯ–

ಸಂಸ್ಕೃತಿಯ ಮಾದರಿಯನ್ನು ಗ್ರೀಕೇತರ ವಿದ್ವತ್-ರಸಿಕ ಪ್ರಪಂಚವು ಪುರಸ್ಕರಿಸಿದಾಗ Hellenism ವು ಪ್ರಚಾರದಲ್ಲಿ ಬಂದು ಪ್ರಶಸ್ತಿ ಪಡೆದಂತೆ.

ತಾತ್ಪರ್ಯವೆಂದರೆ, ಇಂದಿಗೂ ನಮಗೆ classic ಎಂಬ ಖಚಿತವಾದ ಸಮರ್ಪಕವಾದ ಹಾಗೂ ಸಮಗ್ರವಾದ ಅರ್ಥವನ್ನು ಕೊಡಬಹುದಾದ ಒಂದು ಪಾರಿಭಾಷಿಕ ಪದವು ಬೇಕಿದೆ–ಎಂದರೆ ತಪ್ಪಾಗದು. "ಮಾರ್ಗ", "ಮಾರ್ಗೀಯ" ಈ ಕೊರತೆಯನ್ನು ತುಂಬಲಾರವು. ಅವುಗಳ ಅರ್ಥವೂ ಪರಿಮಿತ. ಅದರ ವ್ಯಾಪ್ತಿಯೂ ಸೀಮಿತ. ಉದಾಹರಣೆಗೆ ಒಂದು ಹೊಸ ಸಾಹಿತ್ಯದಲ್ಲಿಯೂ ನಾವು ನವ್ಯಕಾವ್ಯಕ್ಕೆ waste land, ನವ್ಯ ಕಾದಂಬರಿಗೆ "ulyssis" ಕೃತಿಗಳನ್ನು classic ಎಂದು ಕರೆಯಬಹುದು. ಯಶವಂತ ಚಿತ್ತಾಲರ ಕತೆಗಳಿಗೆ, ಅಡಿಗರ ಕವನಗಳಿಗೆ, ಶ್ರೀರಂಗರ ನಾಟಕಗಳಿಗೆ, ಕಾರಂತರ ಕಾದಂಬರಿಗೆ ಆಯಾ ಮಾದರಿಯ classic ಅನ್ನಬಹುದು. ಕುವೆಂಪು ಅವರ "ಶ್ರೀಮದ್ರಾಮಾಯಣ ದರ್ಶನಂ" ಹಾಗೆಯೇ "ಮಲೆಗಳಲ್ಲಿ ಮದುಮಗಳು" ಎರಡೂ ತಮ್ಮ ತಮ್ಮ ಜಾಡಿನಲ್ಲಿ classic ಮಟ್ಟ ಮುಟ್ಟಿವೆ ಅಂದರೆ ಒಪ್ಪುವದು. ಆದರೆ ಇವನ್ನೆಲ್ಲ "ಮಾರ್ಗೀಯ" ಕೃತಿಗಳೆಂದು ಬಣ್ಣಿಸಿದರೆ ಹಾಸ್ಯಾಸ್ಪದವಾದೀತು !

ಹೀಗೆ ಪ್ರಯೋಗದಲ್ಲಿ ಗೊತ್ತಾಗುತ್ತದೆ, classic ಮತ್ತು "ಮಾರ್ಗ" ಇವೆರಡರ ಪರ್ಯಾಯ–ವಿನಿಮಯ ಸಾಧ್ಯವಿಲ್ಲ, ಸಾಧುವೂ ಅಲ್ಲ ಎಂಬುವದು.

ಂ ಂ ಂ

ಹಾಗೆಯೇ Romantic ಎಂಬ ಶಬ್ದ ಇದಕ್ಕೆ ನಮ್ಮ ಅನ್ಯ ದೇಶೀ ಭಾಷೆಗಳಲ್ಲಿ ಯಾವ ಪ್ರತಿ ಶಬ್ದಗಳಿವೆಯೋ ಕನ್ನಡದಲ್ಲಿಯಂತೂ ಯುಕ್ತವೂ ಉಪಯುಕ್ತವೂ ಆದ ಪರ್ಯಾಯ ಇನ್ನೂ ಸಿಕ್ಕಂತಿಲ್ಲ, ಬಳಕೆಯಲ್ಲಿ ಬಂದಂತೆಯೂ ಇಲ್ಲ.

"ಮಾರ್ಗ" ಕೆಲಮಟ್ಟಿಗಾದರೂ classic ಪದವನ್ನು ಪ್ರತಿನಿಧಿಸಬಹುದು. ಆದರೆ "ಮಾರ್ಗ"ಕ್ಕೆ ವಿರುದ್ಧವಾದ "ದೇಶಿ" 'Romantic' ಪದವನ್ನು ಪ್ರತಿನಿಧಿಸಲಾರದು. "ದೇಶಿ" ಹೇಳಿ ಕೇಳಿ ಜಾನಪದ ಭಾಷೆಯ, ಆಡುಮಾತಿನ ವಾಗ್ಧೋರಣ ವಾಕ್ಪ್ರಯೋಗಗಳ ಮತ್ತು ಆ ಮೂಲಕ ಒಡಮೂಡುವ ಭಾವಚಿತ್ರಗಳ ಕಲ್ಪನೆಯನ್ನು ಕೊಡಬಹುದು. ಆ ಮಟ್ಟಿಗೆ ಆದು ಜಾನಪದ–ಪ್ರಾಕೃತ-ಅನಾಗರಿಕ ಬಾಳಿನ ಬದುಕಿನ ನೆಲೆಬೆಲೆಗಳ ಪುರಸ್ಕಾರಕ್ಕೆ ಮೀಸಲಾದ Romantic ಸಂಪ್ರದಾಯದ ಒಂದು ಅಂಗವನ್ನೋ ಅಂಶವನ್ನೋ ಆವರಿಸಬಹುದು. ಪ್ರಕೃತಿ ಸೌಂದರ್ಯದಂತೆ ಪ್ರಾಕೃತ ಜೀವನದ ಸ್ವಾರಸ್ಯಗಳು Romantic ಅಭಿರುಚಿಯ ಸೊತ್ತು. ಸೌಂದರ್ಯೋಪಾಸನೆ, ಭಾವ ನಿರ್ಭರತೆ, ಅದ್ಭುತ ರಮ್ಯತೆ ಇವುಗಳಿಗೆ ಆಸ್ಪದವಾಗವಾಗಬಲ್ಲ ಎಲ್ಲ ಐತಿಹಾಸಿಕ, ಪ್ರಾಚೀನ, ಆಖ್ಯಾಯಿಕ, ಸಾಂಪ್ರದಾಯಿಕ,

ಅದಿದೈವತ ಶಕ್ತಿಶ್ರದ್ಧಾ ಸ್ಥಾನಗಳ ಆಕರ್ಷಣೆ ಇತ್ಯಾದಿ ಎಲ್ಲವೂ Romantic ಪ್ರಪಂಚ. ಆದರೆ ಇದು ಅವರ ವ್ಯಾಖ್ಯೆಗೆ ಒಳಪಟ್ಟ ಅಂಶ. ಇಲ್ಲಿ ನಮ್ಮ ಚರ್ಚೆ ಅದರ ಪರಿಭಾಷೆಯ ಕನ್ನಡ ಪರ್ಯಾಯದ್ದು.

Romantic ಎಂಬ ಪದವನ್ನು "ಅದ್ಭುತರಮ್ಯ"ವೆಂದು ಕನ್ನಡಿಸುವದುಂಟು ಆದರೆ ಇದು ಅದರ ಒಂದು ಅಂಶ. ಕಾವ್ಯಪ್ರಪಂಚದ ಮಟ್ಟಿಗೆ "ರಮ್ಯ ಸಂಪ್ರದಾಯ" "ರಸಸಂಪ್ರದಾಯ" ಹೀಗೆಲ್ಲ ಪದಪ್ರಯೋಗಗಳು ರೂಢವಾಗಿವೆ. ಆದರೆ ಎಲ್ಲಕ್ಕೂ ಮಿಗಿಲಾಗಿ "ನವೋದಯ" ಕಾವ್ಯವೆಂಬ ಮಾತು ಬಹುಕಾಲದಿಂದ ಬಳಕೆಯಲ್ಲಿ ಬಂದಂತಿದೆ.

ಈ "ನವೋದಯ" ಒಂದು ಅಸಂಬದ್ಧ ಪ್ರಯೋಗ. 'ಉದಯ' ವೆಂಬುದು ಯಾವಾಗಲೂ ''ನವ"ವೇ. ಎಂದೇ ಉದಯವಾಗಿರಲಿ ಅದು ಹೊಚ್ಚ ಹೊಸ ಆವಿರ್ಭಾವವೇ. ಅಂದಾಗ ತತ್ವತಃ ''ನವೋದಯ" ಕ್ಕೆ ವಿಶೇಷ ಅರ್ಥವಿಲ್ಲ. ಹೆಚ್ಚೆಂದರೆ, ಅದೊಂದು ಕಾಲಖಂಡವನ್ನು ಸೂಚಿಸಬಹುದು. ನಮ್ಮ ವಿಮರ್ಶಕರೂ ''ನವೋದಯ ಕಾಲ'' ವೆಂಬ ಮಾತನ್ನೆ ''ನವೋದಯ ಕಾವ್ಯ'' ವೆಂಬುದಕ್ಕಿಂತ ಹೆಚ್ಚಾಗಿ ಬಳಸುತ್ತಿರುತ್ತಾರೆ. "ನವೋದಯ ಕಾವ್ಯ" ವೆಂದಾಗಲೂ ಅದು ಆ ಕಾಲದ ಕಾವ್ಯವೆಂದೇ ಅಭಿಪ್ರಾಯವಿರುತ್ತದೆ.

ಆದರೂ ನಮ್ಮ ಆಧುನಿಕ ಸಾಹಿತ್ಯ ವಿಮರ್ಶಕರು ಹೊಸಗನ್ನಡದ Romantic ಕಾವ್ಯಧಾರೆಯನ್ನು ಸಮೀಕ್ಷಿಸುವಾಗ ಈ ತನಕವೂ ''Romantic" ಎಂಬ ಪದಕ್ಕೆ ತಕ್ಕ ಕನ್ನಡ ಪರ್ಯಾಯ ಯಾವುದು? ಅದು ಏಕೆ ಇಲ್ಲ? ಇದ್ದ ಪರ್ಯಾಯಗಳು ಹೇಗೆ ಅಸಮರ್ಪಕ–ಎಂಬ ಕುರಿತು ಸಮಾಲೋಚನೆ ಮಾಡಿದಂತಿಲ್ಲ.

ಇಲ್ಲಿ ಒಂದು ಮಾತನ್ನು ಒಪ್ಪಲೇಬೇಕು. ಇಂಥ ಪದಪ್ರಯೋಗಗಳ ವಿಚಾರದಲ್ಲಿ, ಅವುಗಳ ಯೌಗಿಕ ಅರ್ಥ ಉಪಪತ್ತಿಗಳಿಗಿಂತ ಕಾಲಕ್ರಮದಲ್ಲಿ ಪ್ರಯೋಗ–ಪ್ರಯೋಜನಗಳಿಂದಾಗಿ ಅವು ಪುಷ್ಟವಾಗಿ ಪಡೆದುಕೊಂಡು ಬಂದ ಅರ್ಥದ ಛಾಯಾ ವರ್ಣಿಕೆಗಳೇ ಆಯಾ ಪದದ ಮೂಲ ಅರ್ಥಕ್ಕಿಂತ ಮಹತ್ವದ್ದಾಗಿ ಬಿಡುತ್ತವೆ—ಶಬ್ದದ ಅಭಿಧಾಶಕ್ತಿಗಿಂತ ಅದರ ವ್ಯಂಜನೆ ಲಕ್ಷಣ, ಧ್ವನಿಶಕ್ತಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಒದಗುವಂತೆ. ಹೀಗಾದ್ದರಿಂದ ಇಂಥ ಪರಿಭಾಷೆ ಪ್ರಯೋಗ ಪರಂಪರೆಯಲ್ಲಿ ಪಳಗಿ ಬೆಳೆದು ಬರುವಾಗ ಮೂಲದ ಯಾವ ಶಬ್ದವೂ ಅನೇಕ ಸಾಂದರ್ಭಿಕ ಸಾಹಚರ್ಯಗಳಿಂದ ವಿಶಿಷ್ಟ ಅರ್ಥವಲಯವನ್ನು ಪಡೆಯಬಹುದು. ಅಂದಾಗ Romantic ಶಬ್ದದ Roman-Romance ಮೂಲದಿಂದ ಈ Romantic ಪದಕ್ಕೆ ವಿಶಾಲವೂ ವಿಶೇಷವೂ ಆದ ಭಾವಾರ್ಥ ಕೋಶವು ಸುತ್ತಿಕೊಂಡಿದ್ದೂ ಸಾಂಸ್ಕೃತಿಕ ವಿಕಾಸದ

ಹಾಗೂ ಇತಿಹಾಸದ ಒಂದು ಪರಿಪಾಕವು ಅದೇ. ರೀತಿ ನಮ್ಮಲ್ಲಿ "ಕಾದಂಬರಿ" ಶಬ್ದಕ್ಕೆ ಅಂಥ ಅರ್ಥಸತ್ವ ಬೆಳೆದುಬಂದಿದೆ. ಮೂಲತಃ "ಕದಂಬ" ಈಚಲ ಮರ 'ಕಾದಂಬರಿ' ಈಚಲ ಮರದಿಂದ ತೆಗೆದ ಮದ್ಯ. ಆದರೆ ಬಾಣಬಟ್ಟನು ತನ್ನ ಆ ಅದ್ಭುತ ರಮ್ಯ ಕಲ್ಪನಾರಮ್ಯ ಕಥೆಯ ನಾಯಕಿಗೆ ''ಕಾದಂಬರಿ" ಎಂಬ ಹೆಸರಿಟ್ಟನು. ಈ ಕಥೆ "ಕಾದಂಬರೀ ಕಥಾ" ಎಂದು ಹೆಸರಾಯಿತು. ಅದು ಎಷ್ಟೊಂದು ಜನಪ್ರಿಯವಾಯಿ ತೆಂದರೆ ಅಂದಿನಿಂದ ಅಂಥ ಯಾವುದೇ ಕಲ್ಪನಾ ರಮ್ಯ ಕಟ್ಟು ಕಥೆಗೆ, ಅದು ಹಾಗೆಯೇ ಸುದೀರ್ಘವಾಗಿದ್ದರೆ, 'ಕಾದಂಬರಿ' ಎಂಬ ಹೆಸರು ರೂಢವಾಯಿತು. ನಮಗೆಲ್ಲಾ 'ಕಾದಂಬರಿ' ಎಂದರೆ 'Novel' ('Novel' ಶಬ್ದವೂ ಮೂಲತಃ ಹೊಸತು. 'ನವಲ' ಎಂಬ ಅರ್ಥ ಕೊಡುವದು) ಆಯಿತು.

"ನವೋದಯ" ಶಬ್ದಕ್ಕೆ ಹೀಗೆಯೇ Romantic ಶಬ್ದದಂತೆ, ಶಬ್ದದ ಎಲ್ಲ ಭಾವಾರ್ಥ ಸಂಪತ್ತು ತುಂಬಿಕೊಳ್ಳಲು ಅದೆಷ್ಟು ಕಾಲ ಸಲ್ಲಬೇಕೂ ! ಸದ್ಯಕಂತೂ ಅದು ಒಂದು ಕಾಲಖಂಡವನ್ನೇ ಸೂಚಿಸುವಂತಿದೆ. ಅದೇ ರೀತಿ ಹಿಂದಿಯ "ಛಾಯಾ ವಾದ", ಹಿಂದೆ ಹೇಳಿದ ಅದ್ಭುತ ರಮ್ಯ "ರಸ ಸಂಪ್ರದಾಯ" ಇತ್ಯಾದಿ ಪದಗಳೂ ಈ ತನಕ ಕೇವಲ ಕಾವ್ಯದ ಒಂದು ಪ್ರಕಾರಕ್ಕೆ ಅದರಲ್ಲಿಯ ಪರಂಪರೆಗೆ ಅನ್ವಯಿಸಿ ಬಂದಿವೆ. ಆದರೆ Romantic ಹಾಗಲ್ಲ. ಅದು ಕಾವ್ಯ ಪ್ರಭೇದದೊಂದಿಗೇ ಒಂದು ಜೀವನ ದೃಷ್ಟಿಯನ್ನೂ ವೈಚಾರಿಕ ನಿಲುಮೆಯನ್ನೂ ಸಾಂಸ್ಕೃತಿಕ ಸಂದರ್ಭವನ್ನೂ ವೈಯಕ್ತಿಕ ಸ್ವಭಾವ ವೈಶಿಷ್ಟ್ಯವನ್ನೂ, ಮನೋವೃತ್ತಿಯನ್ನೂ ಸೂಚಿಸುತ್ತದೆ. ಇಂಥ ವಿಶಾಲ ವ್ಯಾಪ್ತಿಯಲ್ಲಿ "ನವೋದಯ" ಎಂದೂ ಸಲ್ಲಲಿಕ್ಕಿಲ್ಲ.

Romance-Romantic - Romanticism ಈ ಪದಗಳ ಇತ್ಯರ್ಥವನ್ನು ವಿವರಿಸಲಿಕ್ಕೆ ನಾನು ಇಲ್ಲಿ ಹೊರಟರೆ ಅದು ಇನ್ನೊಂದು ಲೇಖನವೇ ಆಗಿ ಬೆಳೆಯ ಬಹುದು. ವಾಸ್ತವತೆಗೆ ವಿರುದ್ಧವಾಗಿ ಯಥಾರ್ಥತೆಗೆ ಇದುರಾಗಿ ಒಂದೂ ಕಲ್ಪನಾ ವೈಖರಿಯ ಭಾವನಾ ವೈಭವದ ಪ್ರತಿಭಾವಿಲಾಸವನ್ನೂ ಅದರಲ್ಲಿ ಅಡಕವಾದ ಸೌಂದರ್ಯ ಪ್ರಜ್ಞೆಯನ್ನೂ ಆದರ್ಶ ದೃಷ್ಟಿಯನ್ನೂ ಆತ್ಮನಿಷ್ಠ ಆವೇಶ ಉತ್ಸಾಹ ವನ್ನೂ ಉದ್ರೇಕವನ್ನೂ ರಸಾನುಕೂಲವನ್ನೂ ಒಟ್ಟಾಗಿ ಸ್ಪಂದಿಸುವ Romantic ತತ್ವವೂ ದೃಷ್ಟಿಯೂ ವೃತ್ತಿಯೂ ಕನ್ನಡ ಕಾವ್ಯ ಹಾಗೂ ವ್ಯಾಪಕ ಕಲಾಮೂಲ್ಯ ಗಳ ವಿಮರ್ಶೆ ಸಮೀಕ್ಷೆಗಳಲ್ಲಿ ಯೋಗ್ಯವಾದ ಪರ್ಯಾಯ ಪರಿಭಾಷೆಯನ್ನು ಇನ್ನೂ ಕಂಡುಕೊಂಡಿಲ್ಲ. ಇದು ಹೇಗೆ ಏಕೆ ಎಂಬುದನ್ನು ನಮ್ಮ ಸಾಹಿತ್ಯ-ಕಲಾಪ್ರಪಂಚದ ಅಧಿಕಾರಿ ವಿದ್ವಾಂಸರು ಪರಾಮರ್ಶಿಸಬಹುದೇ ?

ಆಂಧ್ರಪ್ರದೇಶದಲ್ಲಿ ಕನ್ನಡ ಭಾಷೆ

ಎಚ್. ಎಸ್. ಅನಂತನಾರಾಯಣ

ಆಂಧ್ರ ಪ್ರದೇಶದಲ್ಲಿ ಕನ್ನಡದ ಉಪಯೋಗವೆಂದಿನಿಂದಾಗುತ್ತಿದೆ ಎನ್ನುವ ಬಗ್ಗೆ ನಿರ್ಧಾರವಾಗಿ ಹೇಳುವುದು ಅಷ್ಟು ಸುಲಭವಲ್ಲ. ಕಾರಣ, ಪ್ರೊಫೆಸರ್ ಭೀಮಸೇನರಾಯರು ಒಂದೆಡೆ ಹೇಳಿರುವಂತೆ, "ಕನ್ನಡ ಬೆಳೆದದ್ದು ಇಲ್ಲಿಯೆ, ಕನ್ನಡ ತಿರುಳ್ಗನ್ನಡವೆನಿಸಿಕೊಂಡುದು ಇಲ್ಲಿಯೇ, ಕನ್ನಡ ಹಬ್ಬಿದುದು ಇಲ್ಲಿಂದಲೇ, ಕನ್ನಡದ ಉತ್ತಮ ಕವಿಗಳು ಗ್ರಂಥಗಳನ್ನು ಬರೆದುದು ಇಲ್ಲಿಯೇ". ಆದರೆ. ಈ ಸ್ಥಿತಿ ಉದ್ದಕ್ಕೂ ಉಳಿದುಬರಲಿಲ್ಲ. ಸ್ವಲ್ಪ ಕಾಲ ಬಹಳ ಕ್ಷೀಣವಾಗಿದ್ದು ನಷ್ಟವಾಗಿಯೇ ಹೋಯಿತೇನೋ ಎನ್ನುವಂತಿದ್ದ ಇದರ ಪರಿಸ್ಥಿತಿಯಲ್ಲಿ ಸ್ವಲ್ಪ ಮಾರ್ಪು ಕಂಡುಬಂದು ಈಗ ಮತ್ತೆ ತಲೆಯೆತ್ತುವಂತಾಗಿದೆಯೆನ್ನಬಹುದು.

ಆಂಧ್ರ ಪ್ರದೇಶವೆಂಬ ಮಾತಿಗೆ ಈ ಲೇಖನದಲ್ಲಿ ಹೈದರಾಬಾದ್ ಎಂಬರ್ಥ ಇಟ್ಟುಕೊಂಡಿದೆ. ಹೈದರಾಬಾದ್ ಅಲ್ಲದೆ, ಆಂಧ್ರ ಪ್ರದೇಶದ ಇತರ ಕಡೆಗಳಲ್ಲಿ (ಉದಾಹರಣೆ : ಕರ್ನೂಲ್, ಗದ್ವಾಲ್, ಶ್ರೀಶೈಲಂ) ಕೂಡ ಕನ್ನಡದ ಉಪಯೋಗವಿರುವುದಾದರೂ ಅನುಕೂಲದ ದೃಷ್ಟಿಯಿಂದ ರಾಜಧಾನಿಯಾದ ಹೈದರಾಬಾದಿನಲ್ಲಿನ ಕನ್ನಡದ ಪರಿಸ್ಥಿತಿಯನ್ನು ಕುರಿತು ಇಲ್ಲಿ ಸ್ವಲ್ಪ ವಿವರಣೆ ನೀಡಲೆಳಿಸಿದೆ.

ಕನ್ನಡದ ಗತವೈಭವವನ್ನು ಸಂಕ್ಷೇಪವಾಗಿ ಈ ರೀತಿ ವರ್ಣಿಸಬಹುದು. ಚಾಲುಕ್ಯರಾಜ ಇಮ್ಮಡಿ ಪುಲಕೇಶಿಯ ಕಾಲ ಕನ್ನಡಿಗರ ಅಭ್ಯುದಯದ ಕಾಲವೆನ್ನಬಹುದು. ಆಗಲೇ ಕನ್ನಡಿಗರಿಗೆ ತಮ್ಮದೇ ಆದ ಸ್ವತಂತ್ರ ಸಾಮ್ರಾಜ್ಯ ಲಭಿಸಿದುದು. ತಮ್ಮ ಸಂಸ್ಕೃತಿ, ಭಾಷೆ, ಸಾಹಿತ್ಯ, ಶಿಲ್ಪ ಮುಂತಾದವನ್ನು ರೂಢಿಸಿ ಬೆಳಸಿಕೊಳ್ಳಲು ಆಗಲೇ ಸದವಕಾಶವುಂಟಾಯಿತು. ರಾಷ್ಟ್ರಕೂಟರ ಅರಸು ನೃಪತುಂಗನ ಕಾಲದಲ್ಲಿ ಕನ್ನಡದ ವೈಭವ ಇನ್ನೂ ಹೆಚ್ಚಾಯಿತು. ಇವನ ಪೂರ್ವಿಕನಾದ ಮೊದಲನೆಯ ಕೃಷ್ಣನು ಎಲ್ಲೋರದ ಕೈಲಾಸ ದೇವಾಲಯವನ್ನು ಕಟ್ಟಿಸಿ ಕನ್ನಡಿಗರ ಶಿಲ್ಪ ಕಲೆಯನ್ನು ಜಗತ್ತಿಗೆ ಪ್ರದರ್ಶಿಸಿದನು. ತನ್ನ ಗ್ರಂಥವಾದ ಕವಿರಾಜಮಾರ್ಗದಲ್ಲಿ ನೃಪತುಂಗನು ಹತ್ತು ಜನ ಕವಿಗಳನ್ನು ಹೆಸರಿಸಿದ್ದಾನೆ. ಹತ್ತನೆಯ ಶತಮಾನದಲ್ಲಿ ಮೂರನೇ ಕೃಷ್ಣನ ಕಾಲದಲ್ಲಿ ಕನ್ನಡ ಸಾಹಿತ್ಯವು ಬೆಳೆದು ಕವಿಚಕ್ರವರ್ತಿಗಳಿಗೆ ಆಶ್ರಯ ನೀಡುವಂತಾಯಿತು. ಈ ಚಕ್ರವರ್ತಿ ಪೊನ್ನನಿಗೆ ಉಭಯ ಕವಿ ಚಕ್ರವರ್ತಿಯೆಂಬ ಬಿರುದನ್ನಿತ್ತು ಗೌರವಿಸಿದನು. ಇದರಿಂದ ಕನ್ನಡ

ಸಾಮ್ರಾಜ್ಯದ ವಿಸ್ತಾರವನ್ನು ಊಹಿಸಿಕೊಳ್ಳಬಹುದು. ಈ ಕಾಲವನ್ನು ಕನ್ನಡಿಗರ ಅತ್ಯಂತ ವೈಭವದ, ಉನ್ನತಿಯ ಕಾಲವೆನ್ನಬಹುದು. ಹತ್ತನೆಯ ಶತಮಾನದ ಅಂತ್ಯದ ವೇಳೆಗೆ ಚಾಲುಕ್ಯ ಎರಡನೇ ತೈಲಪನು ಮಾನ್ಯಖೇಟವನನ್ನು ನಾಶಮಾಡಿ ಕಲ್ಯಾಣವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು. ತನ್ನ ಮಹಾಕವಿ ಕಲ್ಯಾಣಕ್ಕೆ ಬಂದುದು ಈಗಲೇ. ಹಾಗೂ ಅವನಿಗೆ ಕವಿಚಕ್ರವರ್ತಿ ಎಂಬ ಬಿರುದು ದೊರೆತುದೂ ಈ ಕಾಲದಲ್ಲಿಯೇ.

ನಂತರ ಹನ್ನೊಂದನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಶಾಖೆಯಲ್ಲಿ ವಿಕ್ರಮಾರ್ಕನೆಂಬ ಚಕ್ರವರ್ತಿ ಪ್ರಸಿದ್ಧನಾಗಿ ಕನ್ನಡದ ಬೆಳವಣಿಗೆಗೆ ಕಾರಣನಾದನು. ಕಲ್ಬುರ್ಗಿ, ಬೀದರ್, ರಾಯಚೂರು, ಹೈದರಾಬಾದಿನ ಸುತ್ತಣ ಪ್ರಾಂತ್ಯ, ಈಗಿನ ತೆಲಂಗಾಣಪ್ರಾಂತ ಇಲ್ಲೆಲ್ಲಾ ವಿಕ್ರಮಾರ್ಕ ಚಕ್ರವರ್ತಿಯ ಶಾಸನಗಳು ಹೇರಳವಾಗಿ ದೊರೆಯುತ್ತವೆ. ಕನ್ನಡ ಭಾಷೆಯ ಚರಿತ್ರೆಗೆ ಈ ಶಾಸನಗಳು ಬಹಳ ಮುಖ್ಯವೆನ್ನಬಹುದು. ಹಳಗನ್ನಡ ಸ್ವರೂಪದಿಂದ ನಡುಗನ್ನಡದ ಸ್ವರೂಪಕ್ಕೆ ಬದಲಾವಣೆ ಹೊಂದುತ್ತಿದ್ದ ಕನ್ನಡದ ಪರಿಚಯ ಈ ಶಾಸನಗಳಿಂದಲೇ ಸಾಧ್ಯವಾಗುತ್ತದೆ.

ಮೇಲೆ ವಿವರಿಸಿದ ಕನ್ನಡ ವೈಭವಕಾಲ 13ನೆಯ ಶತಮಾನದ ವೇಳೆಗೆ ಮುಗಿದುಹೋಗಿತ್ತೆನ್ನಬಹುದು. ಅಲ್ಲಿಂದ ಮುಂದೆ 19ನೆಯ ಶತಮಾನದ ಮಧ್ಯದ ವರೆಗೆ ಇಲ್ಲಿ ಕನ್ನಡಕ್ಕೆ ಕಷ್ಟಕಾಲವಾಗಿತ್ತೆನ್ನಬಹುದು. 1857ರ ಬಂಡಾಯದ ತರುವಾಯ ಇಲ್ಲಿ ನೆಮ್ಮದಿ ನೆಲೆಗೊಂಡಿತೆಂದು ಹೇಳಬಹುದು. ಆಷ್ಟು ಹೊತ್ತಿಗೆ ಇಲ್ಲಿಯ ಕನ್ನಡಿಗರಿಗೆ ತಮ್ಮ ಭಾಷೆಯ ಅರಿವೇ ಅಳಿದು ಹೋದಂತಾಗಿತ್ತೆಂದರೆ ಆಶ್ಚರ್ಯವೇನಿಲ್ಲ. ಮರಾಠೀ, ಫಾರಸೀಭಾಷೆಗಳ ಪ್ರಭಾವದಲ್ಲಿ ಕನ್ನಡದ ಅವಶ್ಯಕತೆಯೇ ಇಲ್ಲದ ಹಾಗಾಯಿತು. ರಾಜಕೀಯಭಾಷೆ ಫಾರಸಿಯಾಗಿದ್ದುದರಿಂದ, ಪಕ್ಕದ ರಾಜ್ಯದಲ್ಲಿ ಮರಾಠೀಪ್ರಾಬಲ್ಯವಿದ್ದುದರಿಂದ, ವಿದ್ಯೆ ಕಲಿಯಬೇಕೆಂದವರು ಈ ಎರಡು ಭಾಷೆಗಳನ್ನೇ ಕಲಿಯುತ್ತಾ ಬಂದರು. ನಿಜಾಮರ ಆಡಳಿತಕ್ಕೊಳಪಟ್ಟಿದ್ದ ಕನ್ನಡ ಪ್ರದೇಶಗಳಲ್ಲಿನ ಜನರು ಮಾತಾಡುವ ಭಾಷೆಯಾಗಿಯಾದರೂ ಕನ್ನಡ ಉಳಿದದ್ದು ಹಿಂದಿನವರ ಪುಣ್ಯದಿಂದಲೇ ಎನ್ನಬಹುದು.

ದಕ್ಷಿಣದಲ್ಲಿ ಔರಂಗಜೇಬನ ಜೈತ್ರಯಾತ್ರೆಯ ಪರಿಣಾಮವಾಗಿ ಕರ್ನಾಟಕದ ಕೆಲವು ಭಾಗಗಳು ಅವನ ಸಾಮ್ರಾಜ್ಯದಲ್ಲಿ ಸೇರಿಕೊಂಡವು. ಇಲ್ಲಿ ರಾಜ್ಯಾಡಳಿತವನ್ನು ನಡೆಸುವುದಕ್ಕೆ ನೇಮಕವಾದ ಮೊದಲ ಅಧಿಕಾರಿಯಾದ ನಿಜಾಮುಲ್ಮುಲ್ಕ್‌ರವರಿಂದ ಅಸಫ್‌ಜಾಹಿ ರಾಜಮನೆತನದ ಸ್ಥಾಪನೆಯಾಯಿತು. ಆರಂಭದಲ್ಲಿ ಇವರಿಗೆ ಕರ್ನಾಟಕ ಪ್ರಾಂತದ ಸೂಬೇದಾರಿಯನ್ನು ಕೊಡಲಾಯಿತು. ಈ ಮನೆತನದಲ್ಲಿ ಆರನೆಯವರಾದ ಮೀರ್‌ಮಹಬೂಬ್‌ಖಾನರ ಆಳ್ವಿಕೆಯಲ್ಲಿ ಫಾರಸೀಭಾಷೆಯ ಸ್ಥಾನದಲ್ಲಿ ಉರ್ದೂ

ಭಾಷೆಯನ್ನು ಸರ್ಕಾರಿ ಭಾಷೆಯಾಗಿ ಗುರುತಿಸಲಾಯಿತು. ಏಳನೆಯವರಾದ ಮಿಾರ್ ಉಸ್ಮಾನ್‌ಅಲೀಖಾನ್‌ರವರ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚುಗಮನಕೊಡಲಾಯಿತು-ಉಸ್ಮಾನಿಯಾ ವಿಶ್ವವಿದ್ಯಾನಿಲಯ ಸ್ಥಾಪನೆಯಾದದ್ದು ಇವರ ಕಾಲದಲ್ಲಿಯೇ. ಇವರ ರಾಜ್ಯದಲ್ಲಿ ರಾಯಚೂರು, ಕಲ್ಬುರ್ಗಿ, ಬೀದರ್, ಹಾಗೂ ಉಸ್ಮಾನಾಬಾದ್ ಎಂಬ ಕರ್ನಾಟಕದ ಜಿಲ್ಲೆಗಳು ಸೇರಿದ್ದವು. ಮಳಖೇಡ, ಕಲ್ಯಾಣ, ನಾಗಾಯಿ, ಆನೆಗುಂದಿ, ಸುರಪುರ ಕೊಪ್ಪಳ ಮುಂತಾದ ಕರ್ನಾಟಕ ಸಾಮ್ರಾಜ್ಯದ ಮುಖ್ಯ ನಗರಗಳು ಸೇರಿದ್ದವು. ಈ ಭಾಗಗಳಲ್ಲೆಲ್ಲಾ ಕನ್ನಡವೇ ರಾಜ್ಯಭಾಷೆಯಾಗಿತ್ತು.

ಭಾಷಾನುಸಾರವಾಗಿ ಹೈದರಾಬಾದ್ ಸಂಸ್ಥಾನದಲ್ಲಿ ಮೂರು ಭಾಷೆಯನ್ನಾಡುವ ವಿಭಾಗಗಳು ಸೇರಿವೆ. ಇವುಗಳಲ್ಲಿ ಕಲ್ಬುರ್ಗಿ, ರಾಯಚೂರು ಜಿಲ್ಲೆ ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳು, ಕೊಪ್ಪಳ ಕನ್ನಡದ ಭಾಗಗಳು. ಕನ್ನಡ ಮಾತನಾಡುವವರ ಸಂಖ್ಯೆ 1941 ರ ಗಣತಿಯ ಮೇರೆಗೆ 17 ಲಕ್ಷವಿತ್ತು. ಇಂದು ಹೈದರಾಬಾದ್ ನಗರವೊಂದರಲ್ಲಿಯೇ 1 ಲಕ್ಷಕ್ಕೂ ಮೇಲ್ಪಟ್ಟು ಕನ್ನಡಿಗರಿದ್ದಾರೆ.

1918 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯ ಏರ್ಪಟ್ಟಮೇಲೆ ಇಲ್ಲಿಯ ಮುಖ್ಯ ಭಾಷೆಯಾದ ತೆಲುಗು ಹಾಗೂ ಕನ್ನಡ ಭಾಷೆಗಳ ಅಧ್ಯಯನದ ಬಗ್ಗೆ ಆಸಕ್ತಿ ಉಂಟಾಗಿ ಕನ್ನಡಿಗರಲ್ಲಿ ಬಹುಮಂದಿ ಪದವೀಧರರಾಗಿದ್ದಾರೆ. ಇವರ ಪೈಕಿ, ವಕೀಲರು, ನ್ಯಾಯಾಧೀಶರು, ಇಂಜಿನಿಯರುಗಳು, ಪ್ರೊಫೆಸರರೂ ಇದ್ದಾರೆ. ಕರ್ನಾಟಕ ಸರ್ಕಾರದ ಕೊಡುಗೆಯಿಂದಾಗಿ ಈಚೆಗೆ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಶಾಖೆಯು ಪೂರ್ಣಕಾಲಿಕ ಪ್ರೊಫೆಸರರಿಂದ ಕೂಡಿ ಭದ್ರವಾಗಿದೆಯೆನ್ನಬಹುದು. ಆದರೆ, ಪ್ರಾರಂಭದ ದಿನಗಳಲ್ಲಿ ಕನ್ನಡವನ್ನು ಅಭ್ಯಸಿಸುವರ ಸಂಖ್ಯೆ ಹೆಚ್ಚಾಗಿರುತ್ತಿರಲಿಲ್ಲ. ಸರ್ಕಾರಿ ವ್ಯವಹಾರದಲ್ಲಿ ಈ ಭಾಷೆಯ ಆವಶ್ಯಕತೆ ಕಂಡು ಬರಲಿಲ್ಲವಾದ್ದರಿಂದ, ಈ ಭಾಷೆಯನ್ನು ಕಲಿತವರಿಗೆ ಉದ್ಯೋಗ ಸಮಸ್ಯೆ ಏರ್ಪಡುವುದೆಂಬ ತಪ್ಪು ಭಾವನೆಯಿಂದ ಕನ್ನಡ ಕಲಿಯಲು ಜನರು ಹಿಂಜರಿಯುತ್ತಿದ್ದರು. ಈಚೆಗೆ ಪರಿಸ್ಥಿತಿ ಬದಲಾಯಿಸುತ್ತಿವೆ. ಕರ್ನಾಟಕದಿಂದ ಕೂಡ ವಿದ್ಯಾರ್ಥಿಗಳು ಅಲ್ಲಿ ಪ್ರವೇಶ ದೊರಕದೇ ಇಲ್ಲಿಯವರೆಗೆ ಬಂದು ಕನ್ನಡ ಅಧ್ಯಯನವನ್ನೂ ಮಾಡುತ್ತಿದ್ದಾರೆ ದ್ವಿತೀಯ ಭಾಷೆಯಾಗಿ, ಬಿ.ಎ. ತರಗತಿಗಳಲ್ಲಿ ಐಚ್ಛಿಕ ಭಾಷೆಯಾಗಿ, ಎಂ.ಎ. ತರಗತಿಯಲ್ಲಿ ಅದನ್ನೇ ವಿಶೇಷವಾಗಿ ಅಧ್ಯಯನ ಮಾಡುವ ಅವಕಾಶ ಕನ್ನಡದ ವಿದ್ಯಾರ್ಥಿಗಳಿಗೆ ಲಭಿಸಿವೆ.

ಇಂದು ಹೈದರಾಬಾದಿನಲ್ಲಿ ಕನ್ನಡದ ಬೆಳವಣಿಗೆಗೆ ಪೋಷಕವಾದ ಕೆಲವು ಸಾರ್ವಜನಿಕ ಸಂಸ್ಥೆಗಳನ್ನೂ ಕುರಿತು ಕೆಲವು ಮಾತುಗಳನ್ನು ಹೇಳಬಹುದೆನಿಸು

ತ್ತವೆ. ಇವುಗಳಲ್ಲಿ ಮುಖ್ಯವಾದವೆಂದರೆ ಕರ್ನಾಟಕ ಸಾಹಿತ್ಯಮಂದಿರ, ಕನ್ನಡ ಮೈತ್ರಿ ಸಂಘ ಹಾಗೂ ಕನ್ನಡ ನಾಟ್ಯರಂಗವೆನ್ನಬಹುದು. ಕನ್ನಡಸಾಹಿತ್ಯ, ಸಂಸ್ಕೃತಿ, ಕಲೆ ಇತ್ಯಾದಿಗಳನ್ನು ಕನ್ನಡ ಜನತೆಯಲ್ಲಿ ಜಾಗೃತಗೊಳಿಸಲು 1936ರ ಉಗಾದಿ ಹಬ್ಬದ ದಿನ ಜನ್ಮತಾಳಿದ ಕರ್ನಾಟಕ ಸಾಹಿತ್ಯ ಮಂದಿರವು ಈಗಾಗಲೇ ನಾಲ್ಕು ದಶಕಗಳ ಸೇವೆಯನ್ನು ಸಲ್ಲಿಸಿದೆ. ಮೊದಲ ವರ್ಷದ ಅಂತ್ಯದ ವೇಳೆಗೆ 23 ಜನ ಸದಸ್ಯರನ್ನು ಕೂಡಿಸಿದ್ದ ಸಂಸ್ಥೆಯ ಇಂದಿನ ಸದಸ್ಯರ ಸಂಖ್ಯೆ 400 ಕ್ಕೂ ಮೀರಿದೆಯೆನ್ನಬಹುದು. ಇವರ ಪೈಕಿ ಎಲ್ಲ ಧರ್ಮಗಳಿಗೆ ಸೇರಿದ, ಹಲವಾರು ಪ್ರದೇಶಗಳಿಂದ ಇಲ್ಲಿ ಬಂದು ಸೇರಿರುವ ಹಾಗೂ ವಿವಿಧ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರಿದ್ದಾರೆ.ಮಂದಿರಕ್ಕೆ ಸೇರಿದಂತೆ ಒಂದು ಗ್ರಂಥಾಲಯ ಹಾಗೂ ವಾಚನಾಲಯಗಳಿವೆ. ಗ್ರಂಥಾಲಯದಲ್ಲಿ ಸುಮಾರು 8000 ಕ್ಕೂ ಮೀರಿ ಕನ್ನಡ ಪುಸ್ತಕಗಳ ಸಂಗ್ರಹವಿದೆ. ವಾಚನಾಲಯದಲ್ಲಿ ಕನ್ನಡದ ಹಲವಾರು ಪತ್ರಿಕೆಗಳು ಮುಖಪತ್ರಿಕೆಗಳೂ ಓದುಗರಿಗೆ ದೊರೆಯುತ್ತವೆ.

ಸಾಹಿತ್ಯಮಂದಿರದ ಎರಡು ಮುಖ್ಯ ಉದ್ದೇಶಗಳೆಂದರೆ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ನಗರದ ಇತರ ಭಾಷೆಗಳನ್ನಾಡುವವರಿಗೆ ಪರಿಚಯ ಮಾಡಿಸುವುದು ಮತ್ತು ಇಲ್ಲಿ ನೆಲಸಿರುವ ಕನ್ನಡಿಗರಿಗೆ ಕನ್ನಡತನ ಉಳಿದು ಬದುಕು ವಂತಹ ಚಟುವಟಿಕೆಗಳನ್ನೇರ್ಪಡಿಸುವುದು. ಕನ್ನಡದ ಜನತೆಯ ಸರ್ವತೋಮುಖ ವಾದ ಏಳಿಗೆಗಾಗಿ ಸಣ್ಣ ಸಣ್ಣ ಕೂಟಗಳನ್ನೇರ್ಪಡಿಸಿಕೊಂಡಿದೆ. ಹೆಂಗಸರ ಪುರೋಭಿ ವೃದ್ಧಿಗಾಗಿ ದುಡಿಯಲು ಮಹಿಳಾಮಂಡಲ, ಮಕ್ಕಳಿಗಾಗಿ ನಚಿಕೇತ ಮಂಡಲಗಳಿವೆ. ಎಲ್ಲರ ಅನುಕೂಲಕ್ಕಾಗಿ ಸಾಹಿತ್ಯಕೂಟ ಹಾಗೂ ನಾಟ್ಯಕಲಾನಿಕೇತನಗಳಿವೆ. ಸಾಹಿತ್ಯ ಕೂಟದಲ್ಲಿ ಆಗಾಗ್ಗೆ ಪದ್ಯ ವಾಚನ, ಕವಿತೆ, ಕಾದಂಬರಿಗಳನ್ನು ಕುರಿತಾದ ಚರ್ಚೆ, ವಿದ್ವಾಂಸರಿಂದ ವಿವಿಧ ವಿಷಯಗಳ ಬಗ್ಗೆ ಭಾಷಣ ಇತ್ಯಾದಿಗಳೇರ್ಪಡುತ್ತವೆ. ನಾಟಕದಲ್ಲಿ ಅಭಿರುಚಿ ಹೊಂದಿದವರು ಕಲೆತು ಏರ್ಪಡಿಸಿಕೊಂಡ ನಾಟ್ಯಕಲಾನಿಕೇತನದ ಮೂಲಕ ಕನ್ನಡ ಹಾಗೂ ಹಿಂದೀ ನಾಟಕಗಳ ಪ್ರದರ್ಶನ, ಬೇರೆಬೇರೆ ಗುಂಪುಗಳವ ರಿಂದ ನಾಟಕ ಸ್ಪರ್ಧೆ, ಹೊರಗಡೆಯಿಂದ ಬಂದ ನಾಟಕಮಂಡಲಿಯವರ ಉತ್ತಮ ನಾಟಕಗಳ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳಿರುತ್ತವೆ.

ಮಂದಿರದ ಚಟುವಟಿಕೆಗಳಲ್ಲಿ ಯೋಗ್ಯ ಪುಸ್ತಕಗಳ ಮುದ್ರಣ ಸಹ ಸೇರಿದೆ. ಈಗಾಗಲೇ 25ರ ವರೆಗೆ ಪುಸ್ತಕಗಳನ್ನು ಅಚ್ಚುಹಾಕಿಸಿದ್ದಾರೆ. ಇವುಗಳಲ್ಲಿ ಹಿರಿಯರಿ ಗಾಗಿ ನಡುಗನ್ನಡ ಪ್ರಬಂಧಮಾಲೆ, ಆಂಧ್ರವಾಙ್ಮಯಚರಿತ್ರೆ ಎಂಬ ಗ್ರಂಥಗಳೂ, ಮಕ್ಕಳಿಗಾಗಿ ವಸುಂಧರ ಗೀತೆಗಳು, ಜನಜೀವನದ ಕಥೆಗಳು, ಜೀವನಚರಿತ್ರೆಗಳು, ಚರಿತ್ರೆಯ ಕಥೆಗಳು ಮುಖ್ಯವಾದವು. ಇವುಗಳ ಜೊತೆಗೆ ಹಿಂದಿ ಮತ್ತು ತೆಲುಗಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಕಟಿಸಿದ್ದಾರೆ. 1975ರ ಜೂನ್ ತಿಂಗಳಿನಲ್ಲಿ

ಕರ್ನಾಟಕ ವಿಶ್ವವಿದ್ಯಾಲಯದವರು ಸಾಹಿತ್ಯಮಂದಿರದ ಆಶ್ರಯದಲ್ಲಿ "ಕನ್ನಡದಲ್ಲಿ ಷಟ್ಪದಿ ಸಾಹಿತ್ಯ"ವನ್ನು ಕುರಿತು ಪ್ರಸಾರೋಪನ್ಯಾಸಗಳನ್ನೇರ್ಪಡಿಸಿದ್ದರು. ಅದರಲ್ಲಿ ಬೆಂಗಳೂರು, ಮೈಸೂರು, ಉಸ್ಮಾನಿಯಾ ವಿಶ್ವವಿದ್ಯಾನಿಲಯಗಳ ಪ್ರಮುಖ ಸಾಹಿತಿಗಳು ಭಾಗಗೊಂಡಿದ್ದರು.

ಕನ್ನಡ ಮೈತ್ರೀ ಸಂಘ ಮುಖ್ಯವಾಗಿ ಸಿಕಂದರಾಬಾದಿನಲ್ಲಿ ವಾಸಿಸುವ ಕನ್ನಡಿಗರ ಮನರಂಜನೆಗಾಗಿ ಕಾರ್ಯಕ್ರಮಗಳನ್ನೇರ್ಪಡಿಸುತ್ತಾರೆ. ಕಾರ್ಯಕ್ರಮ ವೇನೇ ಆಗಲಿ, ಆ ಕಾರಣದಿಂದಾಗಿ ಕನ್ನಡ ಮಾತನಾಡುವವರು ಒಂದು ಕಡೆ ಸೇರಿ ತಮ್ಮ ಅನುಭವಗಳ ವಿನಿಮಯ ಮಾಡಿಕೊಳ್ಳಲು, ತನ್ಮೂಲಕ ಕನ್ನಡದಮೇಲಿನ ಪ್ರೀತಿ, ಸಂಸ್ಕೃತಿಯ ರಕ್ಷಣೆ, ಸಾಹಿತ್ಯಜ್ಞಾನ ಬೆಳೆಯಿಸಿಕೊಳ್ಳಲು ಸದವಕಾಶವಾಗುತ್ತದೆ.

ನಗರದಿಂದ ಸುಮಾರು 30 ಕಿಲೋ ಮೈಲುಗಳ ದೂರದಲ್ಲಿ ಉದ್ಯೋಗ ನಿಮಿತ್ತ ಬಂದು ಸೇರಿರುವ ಸುಮಾರು 150 ಕನ್ನಡ ಕುಟುಂಬದವರಿಗಾಗಿ ರಾಮಚಂದ್ರಾಪುರದಲ್ಲಿ ಕನ್ನಡ ಸಂಘವೊಂದು ಏರ್ಪಟ್ಟಿದೆ. ತಾಯ್ನಾಡಿನಿಂದ ದೂರವಾಗಿರುವ ಈ ಕುಟುಂಬದವರ ಮನರಂಜನೆ ಹಾಗೂ ಅವರಲ್ಲಿ ಕನ್ನಡತನವನ್ನು ಜಾಗೃತವಾಗಿಟ್ಟಿರಲು ಅನೇಕ ವಿಧವಾದ ಕಾರ್ಯಕ್ರಮಗಳನ್ನು ಈ ಸಂಘವು ಏರ್ಪಡಿಸುತ್ತದೆ. 1966ರಲ್ಲಿ ಪ್ರಾರಂಭವಾದಾಗ ಹೈದರಾಬಾದಿನ ಸಾಹಿತ್ಯ ಮಂದಿರದ ಶಾಖೆಯಾಗಿದ್ದು ಕ್ರಮೇಣ ತನ್ನದೇ ಆದ ಜೀವನವನ್ನು ನಡೆಸುತ್ತಾ ಬಂದಿದೆ. ಆಗಾಗ್ಗೆ, ಸಂಗೀತ ಕಚೇರಿ, ನೃತ್ಯಪ್ರದರ್ಶನ, ನಾಟಕಸ್ಪರ್ಧೆ, ಜಾನಪದ ಕಲೆಯನ್ನು ಕುರಿತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಸಂಘಕ್ಕೆ ಸೇರಿದಂತೆ ಲೈಬ್ರರಿಯೊಂದಿದೆ.

ನಾಟಕಗಳ ಪ್ರದರ್ಶನದ ಮೂಲಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರಕ್ಕೆ ಬದ್ಧಕಂಕಣವಾಗಿರುವ ಸಂಸ್ಥೆಯೆಂದರೆ ಕನ್ನಡ ನಾಟ್ಯರಂಗ. ಹೈದರಾಬಾದಿನಲ್ಲೇ ಅಲ್ಲದೆ ಪಕ್ಕದ ಮಹಾರಾಷ್ಟ್ರ ಹಾಗೂ ಕರ್ನಾಟಕದ ಮುಖ್ಯ ನಗರಗಳಲ್ಲಿ ನಾಟ್ಯರಂಗದ ಪ್ರದರ್ಶನಗಳು ಜರುಗಿವೆ. ಧರ್ಮಸ್ಥಳ, ಕಾಸರಗೋಡು ಮತ್ತಿತರ ಸ್ಥಳಗಳಿಂದ ಯಕ್ಷಗಾನ ತಂಡದವರನ್ನು ಆಹ್ವಾನಿಸಿ ನಾಟ್ಯರಂಗದ ಆಶ್ರಯದಲ್ಲಿ ಪ್ರದರ್ಶನಗಳನ್ನೇರ್ಪಡಿಸಿ ಕರ್ನಾಟಕದಿಂದ ದೂರಬಂದು ಇಲ್ಲಿ ವಾಸವಾಗಿರುವ ಜನತೆಗೆ ತಮ್ಮ ಕಲೆಯ ಪರಿಚಯವಾಗುತ್ತಿರುವಂತೆ ಅವಕಾಶ ಕಲ್ಪಿಸಿಕೊಡುತ್ತಿದೆ. ಕನ್ನಡ ಕುಟುಂಬಗಳನ್ನು ಸಂಜೆಯ ವೇಳೆ ಒಟ್ಟುಗೂಡಿಸಿ ಅವರು ಅಪರಿಚಿತ ಸ್ಥಳದಲ್ಲಿದ್ದೆವೆಂಬ ಭಾವನೆಯನ್ನು ತೊಲಗಿಸಿ, ನಗರದ ಯಾಂತ್ರಿಕ ಜೀವನದ ಬೇಸರವನ್ನು ನೀಗಿಸಿ, ರಸಾನುಭವದ ಮೂಲಕ ಮೈಮನ ಮರೆಸುವಂತೆ ಮಾಡುವುದು, "ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಎಂಬಂತ ನಾಟಕ ಕಲೆಗೆ ಮಾತ್ರ

ಸಾಧ್ಯ. ಈ ಪ್ರಶಂಸನೀಯ ಕಾರ್ಯವನ್ನೂ ನಾಟ್ಯರಂಗ ಬಹುಸಮರ್ಪಕವಾಗಿ ನಡೆಸಿಕೊಂಡು ಬರುತ್ತಿದೆ.

ಇದಿಷ್ಟು ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯಕ್ರಮವಾಯಿತು. ಇನ್ನು ಶಿಕ್ಷಣ ಸಂಸ್ಥೆಗಳ ಬಗ್ಗೆ ಎರಡು ಮಾತುಗಳನ್ನು ಹೇಳಬಹುದೆನಿಸುತ್ತದೆ. ಕನ್ನಡವನ್ನು ದ್ವಿತೀಯಭಾಷೆಯಾಗಿ ಅಭ್ಯಸಿಸುವ ಕನ್ನಡ ಮಕ್ಕಳಿಗೆ ಮುಖ್ಯವಾಗಿ ಎರಡು ಸ್ಕೂಲು ಗಳಿವೆ – ಸುಲ್ತಾನ್ ಬಜಾರ್ ಸ್ಕೂಲು ಹಾಗೂ ನೃಪತುಂಗ ಸ್ಕೂಲು. ನಗರದ ಅತ್ಯುತ್ತಮ ಸ್ಕೂಲುಗಳ ಪೈಕಿ ನೃಪತುಂಗ ಸ್ಕೂಲು ಸೇರಿದೆಯೆನ್ನುವುದು ಕನ್ನಡಿ ಗರಿಗೆ ಹೆಮ್ಮೆಯ ವಿಷಯ. ಕನ್ನಡದವರ ಕೈವಾಡದಲ್ಲಿ ಅಭಿವೃದ್ಧಿ ಹೊಂದುತ್ತಿರುವ, ಕನ್ನಡದವರೇ ಆದ ಉಪಾಧ್ಯಾಯರು ಹಾಗೂ ಪ್ರಿನ್ಸಿಪಾಲರ ಪಾಠ ಪ್ರವಚನಗಳಿಂದ ನೃಪತುಂಗ ಸ್ಕೂಲು ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಂಡಿದೆ. ಕನ್ನಡ ಮಾಧ್ಯಮ ದಲ್ಲೇ ಅಭ್ಯಸಿಸಲು ಕೂಡ ಈ ಸ್ಕೂಲಿನಲ್ಲಿ ಅನುಕೂಲವಿದೆ. ಸಾಕಷ್ಟು ಸಂಖ್ಯೆಯಲ್ಲಿ ಕನ್ನಡ ಅಭ್ಯಸಿಸುವ ವಿದ್ಯಾರ್ಥಿಗಳು ಈ ಎರಡು ಸ್ಕೂಲಿನಲ್ಲಿ ದೊರಕುತ್ತಾರೆ. ನಂತರ ಕಾಲೇಜು ತರಗತಿಗಳಲ್ಲಿ ದ್ವಿತೀಯ ಭಾಷೆಯಾಗಿ ಹಾಗೂ ಐಚ್ಛಿಕ ಭಾಷೆ ಯಾಗಿ ಕನ್ನಡವನ್ನು ಕಲಿಯುವ ಅನುಕೂಲ ನಿಜಾಂ ಕಾಲೇಜು ಮತ್ತು ಸ್ತ್ರೀಯರ ಕಾಲೇಜುಗಳಲ್ಲಿವೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನೇ ವಿಶೇಷವಾಗಿ ಅಭ್ಯಸಿ ಸಲನುಕೂಲವಾಗುವಂತೆ ಕನ್ನಡ ವಿಭಾಗವಿದೆ. ಕರ್ನಾಟಕದಿಂದೆಲ್ಲಾ ವಿದ್ಯಾರ್ಥಿ ಗಳು ಬಂದು ಇಲ್ಲಿ ಓದುತ್ತಿದ್ದಾರೆ.

ಧಾರ್ಮಿಕ ಒಕ್ಕೂಟಕ್ಕೆ ಶಂಕರ ಮಠ, ರಾಘವೇಂದ್ರಸ್ವಾಮಿಗಳ ಮಠ, ವೀರ ಶೈವ ಸಂಸ್ಥೆಗಳಿವೆ. ಇವುಗಳ ಆಶ್ರಯದಲ್ಲಿ ಆಗಿಂದಾಗ್ಗೆ ಆಯಾಧರ್ಮಗಳ ಬಗ್ಗೆ ಪ್ರವಚನವೇರ್ಪಡುತ್ತದೆ. ಕರ್ನಾಟಕದ ಶೃಂಗೇರಿ, ಉಡುಪಿ ಇತ್ಯಾದಿ ಪೀಠಗಳ ಆಚಾರ್ಯರ ಆಗಮನ, ಅವರಿಂದ ಧರ್ಮ ಜಾಗೃತಿಗಳ ಬಗ್ಗೆ ಭಾಷಣದ ಕಾರ್ಯ ಕ್ರಮವಿರುತ್ತದೆ. ಇಂತಹ ಸಂದರ್ಭಗಳಲ್ಲಿ ನೆರೆವ ಕನ್ನಡಿಗರಿಗೆ ಪರಸ್ಥಳದಲ್ಲಿದ್ದೇ ವೆಂಬ ಅರಿವೇ ಉಂಟಾಗುವುದಿಲ್ಲವೆನ್ನಬಹುದು.

ಇನ್ನು ಕೊನೆಯದಾಗಿ, ಇಲ್ಲಿಯ ಕನ್ನಡ ಭಾಷೆಯ ಸ್ವರೂಪವೇನೆಂಬುದನ್ನು ಸ್ವಲ್ಪ ಗಮನಿಸೋಣ, ಕನ್ನಡವನ್ನಾಡುವವರ ಸಂಖ್ಯೆಯೇನೋ ಇಲ್ಲಿ ಸಾಕಷ್ಟಿದೆ. ಆದರೆ ಅವರಾಡುವ ಕನ್ನಡದಲ್ಲಿ ಏಕರೂಪತೆ ಇಲ್ಲ. ಇವರಲ್ಲಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಬಂದವರಿದ್ದಾರೆ, ಹೆಚ್ಚುಭಾಗ ರಾಯಚೂರ್ ಡಿಸ್ಟ್ರಿಕ್ಟ್‌ನವ ರಿದ್ದಾರೆ. ಹಾಗೆಯೇ ಬಿದರ್, ಗುಲ್ಬರ್ಗ, ಬಳ್ಳಾರಿ, ಮೈಸೂರು ಇವೆಲ್ಲ ಪ್ರದೇಶಗಳ ಜನರಿದ್ದಾರೆ. ಹೀಗೆ ಭೌಗೋಳಿಕವಾಗಿ ಇವರೆಲ್ಲರೂ ಒಂದೇ ಕನ್ನಡ ಪ್ರಭೇದವನ್ನಾಡು ವವರಲ್ಲ. ಇದೇ ರೀತಿ, ಶತಮಾನಗಳ ಹಿಂದೆಯೆ ಬಂದು, ಇಲ್ಲಿ ನೆಲಸಿ, ಮನೆ

ಮಠಗಳನ್ನು ಮಾಡಿಕೊಂಡು ಇಲ್ಲಿಯವರೇ ಆಗಿ ಹೋಗಿರುವವರಿದ್ದಾರೆ. ಈಚೀಚೆಗೆ ಕೇಂದ್ರ ಸರ್ಕಾರದ ಹಲವಾರು ಬಗೆಯ ಉದ್ಯೋಗಗಳ ನಿಮಿತ್ತ ಬಂದು ಸೇರಿದವರಿದ್ದಾರೆ. ಧಾರ್ಮಿಕ ದೃಷ್ಟಿಯಿಂದ ಕೂಡ ದ್ವೈತ, ಅದ್ವೈತ, ವೀರಶೈವ, ಎಂದೆಲ್ಲ ಪಂಥದವರಿದ್ದಾರೆ. ಕನ್ನಡವನ್ನು ಮಾತೃಭಾಷೆಯಾಗಿ ಉಪಯೋಗಿಸುವವರಿದ್ದಾರೆ. ಕರ್ನಾಟಕದವರೇ ಆಗಿದ್ದು ಮುಖ್ಯವಾಗಿ ತಮಿಳು ಮಾತೃಭಾಷೆಯುವರಾಗಿದ್ದರೂ ಕನ್ನಡವನ್ನು ಮಾತೃಭಾಷೆಯಂತೆಯೇ ಬಳಸುವವರೂ ಅನೇಕರಿದ್ದಾರೆ. ಹೀಗೆ ಇಲ್ಲಿಯ ಕನ್ನಡ ಭಾಷೆ ಒಂದು ಬಗೆಯದಲ್ಲ, ಹಲವಾರು ಪ್ರಭೇದಗಳಿಂದ ಕೂಡಿದೆಯೆನ್ನಬಹುದು.

ಪ್ರತಿ ಪ್ರಭೇದವನ್ನಾಡುವವರು ಹೆಚ್ಚಾಗಿ ತಮ್ಮ ತಮ್ಮಲ್ಲಿಯೇ ವ್ಯವಹರಿಸುತ್ತಾರಾಗಿ ಇತರ ಪ್ರಭೇದಗಳ ಪ್ರಭಾವಕ್ಕೊಳಗಾಗಿಲ್ಲ. ಭಿನ್ನ ಪ್ರಭೇದದವರು ಕಲೆತಾಗ ಕೂಡ ಅವರವರು ಅವರವರ ಪ್ರಭೇದಗಳನ್ನೇ ಬಳಸುತ್ತಾರಾಗಿ, ತಮ್ಮ ಪ್ರಭೇದಕ್ಕಿಂತ ಇತರರಾಡುವ ಪ್ರಭೇದಗಳು ಉತ್ತಮವೆಂಬೆಣಿಕೆ ಇಲ್ಲದಿರುವುದರಿಂದ ಪರಸ್ಪರ ಪ್ರಭಾವವಿಲ್ಲವೆನ್ನಬಹುದು. ಆದ್ದರಿಂದ ಈ ಭಾಷಾ ಪ್ರಭೇದಗಳೆಲ್ಲದರ ಮಿಶ್ರಣದಿಂದಾಗಿ ಹೊಸದೊಂದು ಬಗೆಯು ಸೃಷ್ಟಿಯಾಗಿಲ್ಲ. ಇದಕ್ಕೆ ಇತರ ಕಾರಣಗಳಿಲ್ಲದಿಲ್ಲ. ಬಹಳ ಹಿಂದೆಯೇ ಬಂದು ಇಲ್ಲಿ ನೆಲಸಿದವರ ಮಕ್ಕಳು ಆ ಕಾಲದ ಪರಿಸ್ಥಿತಿಯಿಂದಾಗಿ ಅಂದಿನ ರಾಜಭಾಷೆಯಾಗಿದ್ದ ಉರ್ದು ಭಾಷೆಯನ್ನೇ ಪ್ರಥಮ ಭಾಷೆಯಾಗಿ ಸ್ಕೂಲಿನಲ್ಲಿ ಕಲಿಯಬೇಕಾಯಿತು. 1948 ರವರೆಗೂ ಅಧ್ಯಯನದ ಮಾಧ್ಯಮ ಕೂಡ ಉರ್ದುವಿನಲ್ಲಿಯೇ ನಡೆಯುತ್ತಿತ್ತು. ಕನ್ನಡವನ್ನು ಕಲಿಯುವ ಅವಶ್ಯಕತೆಯೂ ತೋರಿಬರಲಿಲ್ಲ, ಅನುಕೂಲವೂ ಇರಲಿಲ್ಲ, ಹೀಗಾಗಿ, ಅವರಿಗೆ ಕನ್ನಡದ ಉಪಯೋಗ ಮನೆಯಲ್ಲಿ ಬಂಧುಗಳೊಡನೆ ವ್ಯವಹರಿಸಲು ಮಾತ್ರ ಆಗುತ್ತಿತ್ತು. ಕನ್ನಡದವರೇ ಆದರೂ, ಹೊರಗಡೆ ಕಲೆತಾಗ ಸ್ನೇಹಿತರಿಬ್ಬರ ನಡುವೆ ಸಂಭಾಷಣೆ ಉರ್ದು ಭಾಷೆಯಲ್ಲಿಯೇ ನಡೆಯುತ್ತಿತ್ತು, ಇನ್ನೂ ಕೆಲವು ಜನರಿಗೆ ಮರಾಠಿಯ ಸಂಪರ್ಕ ಹೆಚ್ಚಾಗಿ ಅವರು ಮರಾಠಿಯನ್ನು ಕಲಿತು ಅದನ್ನೇ ಬಳಸುತ್ತಾ ಬಂದರು, ಆಂಧ್ರ ಪ್ರದೇಶವೂ ಭಾರತ ಸರ್ಕಾರದೊಳಗೆ ಸೇರಿದಮೇಲೆ ತೆಲುಗಿಗೆ ಪ್ರಾಧಾನ್ಯ ದೊರೆತು ಈಚೆಗೆ ಬಂದವರು ತೆಲುಗನ್ನೇ ಕಲಿಯಲಾರಂಭಿಸಿದರು, ಅದನ್ನೇ ಸ್ನೇಹಿತರೊಡನೆ ಬಳಸಿದರು.

ಹೀಗೆ ಕಡಿಮೆ ಪರಿಸರಗಳಲ್ಲಿ ಕನ್ನಡ ಉಪಯೋಗವಾಗುತ್ತಿತ್ತಾಗಿ ಅದರಲ್ಲಿ ಹೆಚ್ಚು ಬದಲಾವಣೆಗಳುಂಟಾಗಲಿಲ್ಲ. ಮೇಲೆ ವಿವರಿಸಿದ ಸಾಂಸ್ಕೃತಿಕ ಸಂಸ್ಥೆಗಳು ಹುಟ್ಟಿಕೊಂಡಮೇಲೆ ಸಹ ಕನ್ನಡದ ಉಪಯೋಗ ಅಲ್ಲಿನ ಕಾರ್ಯಕ್ರಮಗಳವರೆಗೆ ಮಾತ್ರ ಸೀಮಿತವಾಗಿತ್ತು.

ಕಾರ್ಯಕ್ರಮ ಮುಗಿದು ಹೊರಬಂದೊಡನೆಯೇ ಅಥವಾ ಮಂದಿರದ ಆವರಣದಲ್ಲಿಯೇ ಸ್ನೇಹಿತರ ನಡುವೆ ಸಂಭಾಷಣೆ ಉರ್ದು ಅಥವಾ ಮರಾಠಿಯಲ್ಲಿ ಹೆಚ್ಚಾಗಿ ನಡೆಯುವುದನ್ನು ಗಮನಿಸಬಹುದು. ಕನ್ನಡವನ್ನೇ ಹೆಚ್ಚಾಗಿ ಬಳಸುವವರೆಂದರೆ ಈಚೀಚೆಗೆ ಬಂದು ಸೇರಿಕೊಂಡಿರುವ ಕನ್ನಡಿಗರು. ಅವರಲ್ಲಿ ಕೂಡ ವಿದ್ಯಾವಂತ ವರ್ಗಕ್ಕೆ ಸೇರಿದವರೇ ಹೆಚ್ಚಾಗಿರುವುದರಿಂದ ಇಂಗ್ಲೀಷಿನ ಉಪಯೋಗ ಕೂಡ ಸಾಕಷ್ಟಿದೆ. ಈ ಎಲ್ಲ ಕಾರಣಗಳಿಂದಾಗಿ ಕನ್ನಡದ ಪ್ರಭೇದಗಳಲ್ಲಿ ಹೆಚ್ಚಿನ ಮಾರ್ಪುಗಳೇನೂ ತೋರಿಬಂದಿಲ್ಲ. ಬೇರೊಂದು ಎಲ್ಲರಿಗೂ ಸಮಾನವಾದ ಹೊಸ ಪ್ರಭೇದದ ಸೃಷ್ಟಿಕೂಡ ಆಗಿಲ್ಲ. ಹೆಚ್ಚೆಂದರೆ, ಬಹುಕಾಲದ ವಸತಿ ಹೊಂದಿರುವ ಕನ್ನಡಿಗರ ಶಬ್ದಕೋಶದಲ್ಲಿ ಉರ್ದು ಹಾಗೂ ಮರಾಠಿ ಶಬ್ದಗಳಿರುವುದನ್ನು ಅವುಗಳ ಉಪಯೋಗವನ್ನೂ ಗಮನಿಸಬಹುದು. ಮೈಸೂರಿನ ಕನ್ನಡ ಪ್ರಭೇದದಲ್ಲೂ ಉರ್ದು ಭಾಷೆಯ ಪ್ರಭಾವ ಕಂಡುಬರುವುದಾದರೂ ಇಲ್ಲಿಯವರ ಕನ್ನಡದಲ್ಲಿ ಅದರ ಪ್ರಭಾವ ಸ್ವಲ್ಪ ಹೆಚ್ಚಾಗಿದೆಯೆನ್ನಬಹುದು. ಸಾಮಾನ್ಯವಾಗಿ ಮೈಸೂರಿನ ಪ್ರಭೇದದಲ್ಲಿ ಉಪಯೋಗವಾಗದ ಕಿರಾಣ, ದುಕಾನ್, ಚಪರಾಶಿ, ಕಿರಾಯಾ, ಜಲ್ದೀ, ಚಾಲಾಕ್, ತೇಜ್, ಇತ್ಯಾದಿ ಉರ್ದು ಪದಗಳು ಇಲ್ಲಿಯ ಕನ್ನಡ ಪ್ರಭೇದದಲ್ಲಿ ಉಪಯೋಗವಾಗುತ್ತಿವೆ. ಹೀಗೆ ಶಬ್ದಕೋಶದಲ್ಲಿನ ಬದಲಾವಣೆಯನ್ನು ಬಿಟ್ಟರೆ, ವ್ಯಾಕರಣದ ಇತರ ಸ್ತರಗಳಲ್ಲಿ ಗಮನಾರ್ಹವಾದ ಬದಲಾವಣೆಗಳಾಗಿಲ್ಲವೆಂದೇ ಹೇಳಬಹುದು.

ಕನ್ನಡದಲ್ಲಿ ನಿಘಂಟು ಶಾಸ್ತ್ರ*

ಟಿ. ಆರ್. ಮಹದೇವಯ್ಯ

ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ತನ್ನದೇ ಆದ ಭವ್ಯ ಇತಿಹಾಸವಿದ್ದಂತೆ ಕನ್ನಡ ನಿಘಂಟು ಶಾಸ್ತ್ರಕ್ಕೂ ಸಹ ಸಾವಿರ ವರ್ಷಕ್ಕೂ ಮಿಗಿಲಾದ ಚರಿತ್ರೆಯಿದೆ. ಈ ಶಾಸ್ತ್ರ ಸಾಗಿಬಂದ ದಾರಿಯನ್ನು ಗಮನಿಸಿ, ಅದರ ಬೆಳಕಿನ ಹೆಜ್ಜೆಗಳನ್ನು ಗುರುತಿಸಿ, ಅದನ್ನು ನಿವೇದಿಸುವುದು ಈ ನಿಬಂಧದ ಉದ್ದೇಶ.

ನಿಘಂಟು ಎಂದರೆ ಶಬ್ದಗಳಿಗೆ ಅರ್ಥವನ್ನು ತಿಳಿಸುವ ಕೋಶ ; ಶಬ್ದಾರ್ಥ ಕೋಶ. ಮನುಷ್ಯನ ಜೀವವಿಕಾಸದಲ್ಲಿ ಭಾಷೆಯ ಆವಿಷ್ಕಾರ ಒಂದು ಅತ್ಯದ್ಭುತ ವಾದ ಘಟನೆ. ಭಾಷೆಯ ಹುಟ್ಟು ಶಬ್ದಗಳಿಂದ. ಅದರ ಬೆಳವಣಿಗೆ, ಪೂರ್ಣತೆಯೂ ಶಬ್ದಗಳಿಂದಲೇ. ಭಾಷೆಯ ಬಲ್ಮೆ, ಸತ್ವಗಳು ಅದರ ಶಬ್ದಗಳಿಂದ. ಕೊರತೆ ಯಾಗುವುದೂ ಶಬ್ದಗಳಿಂದಲೇ. ಆದ್ದರಿಂದ ಶಬ್ದಗಳು ಭಾಷೆಯ ಜೀವ, ಜೀವಾಳ. ಸಂಪರ್ಕ ಸೇತುವೂ, ಜ್ಞಾನವಾಹಿನಿಯ ಪಾತ್ರವೂ ಆದ ಈ ಭಾಷಾಸಂಪತ್ತಿನ ಸಮೃದ್ಧಿಯೇ ನಾಡಿನ ನಾಗರೀಕತೆ—ಸಂಸ್ಕೃತಿಗಳ ಒರೆಗಲ್ಲು. ನಾಗರಿಕತೆಯ ನಿತ್ಯನೂತನತೆ, ಜ್ಞಾನವಾಹಿನಿಯ ಚಿರಂತನತೆ ಹಾಗೂ ಬಾಂಧವ್ಯದ ಬೆಳವಣಿಗೆಗೆ ಯಾವುದೇ ಭಾಷೆಯ ಶಬ್ದಸಂಪತ್ತು ಸಮೃದ್ಧವಾಗಬೇಕೆಂಬ ಮಾತು ಸತ್ಯ.

ಕಾಳಿದಾಸ ತನ್ನ ಸುಪ್ರಸಿದ್ಧವಾದ ಶ್ಲೋಕದಲ್ಲಿ ಹೇಳಿದಂತೆ ಶಬ್ದ ಮತ್ತು ಅರ್ಥಗಳು ಪಾರ್ವತಿ–ಪರಮೇಶ್ವರರಂತೆ ಅನ್ಯೋನ್ಯ. ಯಾವುದೇ ಭಾಷೆ ಇರಲಿ, ಅದನ್ನು ಆಡುವಾತನಿಗೆ ಅದರ ಶಬ್ದಾರ್ಥಜ್ಞಾನ ಬೇಕೇಬೇಕು. ತಾನು ಶಬ್ದಗಳನ್ನು ಅರ್ಥವರಿತು ಬಳಸುವುದು ಮತ್ತು ಇನ್ನೊಬ್ಬರು ಬಳಸಿ ಮಾತನಾಡಿದ ಶಬ್ದಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಎರಡೂ ಮುಖ್ಯ. ನಿಘಂಟು ಶಬ್ದಾರ್ಥ ಜ್ಞಾನವನ್ನು ನೀಡುತ್ತದೆ. ನಿಘಂಟು ಅರ್ಥವನ್ನು ಮುರಿದು ಹೇಳಿ ಪದದಲ್ಲಿ ಹುದುಗಿರುವ ಭಾವವನ್ನೇ ದೀಪಿಸುತ್ತದೆ. ಅದು ಪ್ರಾಚೀನ ಸಾಹಿತ್ಯ ಸಮುದಾಯ ವನ್ನು ಓದಿ ಆನಂದಿಸಲು ನೆರವಾಗುವುದಲ್ಲದೆ ನವಸಾಹಿತ್ಯ ನಿರ್ಮಾಣಕ್ಕೆ ಅಗತ್ಯವಾದ ಶಬ್ದಭಂಡಾರವನ್ನು ತೆರೆದಿಡುತ್ತದೆ. ಶಬ್ದಾರ್ಥಜ್ಞಾನ ವಿದ್ವತ್ತಿನ ಒಂದು ಭಾಗ.

* ತಿಪಟೂರಿನಲ್ಲಿ ನಡೆದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

ಅದನ್ನು ಹೊಂದಿದ್ದೇ ನಿಘಂಟು. ಸಾಹಿತ್ಯಾಭ್ಯಾಸಕ್ಕೆ ನೆರವಾಗುವ ಹಲವು ಪರಿಕರಗಳಲ್ಲಿ ನಿಘಂಟಿನದು ಪ್ರಮುಖ ಸ್ಥಾನ. ಇದು ವಿದ್ವತ್ತನ್ನು ಅರ್ಥಮಾಡಿಕೊಳ್ಳಲು ಮತ್ತು ವಿದ್ವತ್ತನ್ನು ಗಳಿಸಲು–ಎರಡೂ ರೀತಿಯಲ್ಲಿ ಸಹಾಯಕವಾಗುತ್ತದೆ. ಶುದ್ಧವಾದ ಭಾಷೆಯು ಬೆಳೆಯಲು ವ್ಯಾಕರಣಶಾಸ್ತ್ರವು ಶ್ರಮಿಸುವಂತೆ ನಿಘಂಟುಶಾಸ್ತ್ರ ಶಬ್ದಗಳ ಖಚಿತವಾದ ಅರ್ಥ, ನಿಷ್ಪತ್ತಿ ಮೊದಲಾದ ಸಂಗತಿಗಳನ್ನು ತಿಳಿಸಿ, ನಿಶ್ಚಿತ ಭಾಷಾಜ್ಞಾನವುಂಟಾಗುವಂತೆ ಮಾಡುತ್ತದೆ. ಕನ್ನಡದ ಜನ ಕವಿರಾಜಮಾರ್ಗಕಾರ ಮೆಚ್ಚಿ ನುಡಿದಿರುವಂತೆ 'ಪದನಱಿದು ನುಡಿಯಲುಂ, ನುಡಿದುದನಱಿದಾರಯಲುಂ ಆರ್ಪರ್ ನಾಡವರ್ಗಳ್ ನಿಜದಿಂ ಚದುರರ್'. (ಕವಿರಾಜಮಾರ್ಗ 1–38) ನಿಘಂಟುಶಾಸ್ತ್ರ ಅಂಥ 'ಚದುರರನ್ನು' ವರ್ಧಿಸುವ ಶಾಸ್ತ್ರ.

ದ್ರಾವಿಡ ಭಾಷೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ಕನ್ನಡ ಭಾಷೆಯು ಸಂಪದ್ಭರಿತವಾದುದು. ಅದರ ಶಬ್ದ ಸಾಗರ ಆಳ, ವ್ಯಾಪಕ ಹಾಗೂ ವೈವಿಧ್ಯಪೂರ್ಣ. ಹರಿಯುವ ನೀರಿನಂತೆ ಸಾವಿರಾರು ವರ್ಷಗಳಿಂದ ನಿತ್ಯನೂತನವಾಗಿ ಸಾಗಿ ಬಂದ ಈ ಜ್ಞಾನತೀರ್ಥ ಅನ್ಯಭಾಷೆಯ ಸಂಪರ್ಕವಾದಾಗಲೆಲ್ಲಾ ಆ ಭಾಷೆಯ ಅನೇಕ ಶಬ್ದಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತಾ ಬಂದಿದೆ. ಆಡುಮಾತು, ಬರವಣಿಗೆಗಳೆರಡರಲ್ಲೂ ಅವು ಸೇರಿಕೊಂಡು ಕನ್ನಡ ಶಬ್ದಕೋಶ ಹಿಗ್ಗಿದೆ. ಕೆಲವು ಅನ್ಯಭಾಷೆಯ ಶಬ್ದಗಳು ಅಚ್ಚಕನ್ನಡ ಶಬ್ದಗಳಂತೆಯೇ ಇದ್ದು ಭಾಷೆಯ ಕಸುವನ್ನು ಹೆಚ್ಚಿಸಿವೆ. ಸಂಸ್ಕೃತವಂತೂ ಅದನ್ನು ಸಾಕುತಾಯಿಯಂತೆ ಪೊರೆದಿದೆ. ಇದಲ್ಲದೆ ಪ್ರಚಲಿತ ಶಬ್ದಗಳು ತಮ್ಮ ಭಾವದ ತೀವ್ರತೆಯನ್ನು, ಅನುಭವದ ಎತ್ತರ–ಬಿತ್ತರಗಳನ್ನು ವ್ಯಕ್ತಗೊಳಿಸಲು ಅಸಮರ್ಥವೆನಿಸಿದಾಗ ನಮ್ಮ ಕವಿಗಳನೇಕರು ಹೊಸ ಶಬ್ದಗಳನ್ನು ಸೃಷ್ಟಿಸಿ ಬಳಸಿದ್ದಾರೆ. ಪಂಪ, ಹರಿಹರ, ಕುಮಾರವ್ಯಾಸರಂತಹ ಸಮರ್ಥ ಕವಿಗಳು ತಮ್ಮ ಪ್ರತಿಭೆಯ ಟಂಕಸಾಲೆಯಲ್ಲಿ ಹೊಸ ಹೊಸ ಶಬ್ದನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ತಂದಿದ್ದಾರೆ. ಇದರಿಂದಲೂ ಶಬ್ದಭಂಡಾರ ವೃದ್ಧಿಯಾಗಿದೆ. ಪ್ರಾದೇಶಿಕ ಶಬ್ದಗಳು. ಕರಾವಳಿ, ಉತ್ತರ ಕನ್ನಡ ದಕ್ಷಿಣ ಕನ್ನಡ ಇವು. ಕನ್ನಡವೇ ಎಂದು ಗಾಬರಿಪಡುವಂತಿವೆ. ಇಂಥ ದೇಶ್ಯ, ಅನ್ಯದೇಶ್ಯ, ಸಂಸ್ಕೃತ, ತತ್ಸಮ, ತದ್ಭವ ಶಬ್ದಗಳನ್ನು ಸಂಗ್ರಹಿಸಿ, ಅವುಗಳ ಮೂಲ ಸ್ವರೂಪ ಹಾಗೂ ವ್ಯುತ್ಪತ್ತಿಯನ್ನು ಕಂಡುಹಿಡಿದು, ಅರ್ಥ ವಿವರಣೆ ನೀಡುವುದು ನಿಘಂಟಿನ ಕೆಲಸ.

ಇಂಥ ಕಾವ್ಯಶಾಸ್ತ್ರಗಳ ಮಹತ್ವವನ್ನು ಅರಿತೇ ಕೇಶಿರಾಜ ಹೀಗೆಂದಿದ್ದಾನೆ :—

ವ್ಯಾಕರಣದಿಂದ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ

(—ಶಬ್ದಮಣಿದರ್ಪಣ-3 ಪೀಠಿಕೆ)

(ವ್ಯಾಕರಣದಿಂದ ಪದಸಿದ್ಧಿ, ಪದಸಿದ್ಧಿಯಿಂದ ಅರ್ಥಜ್ಞಾನ, ಆ ಜ್ಞಾನದಿಂದ ತತ್ತ್ವವಿಚಾರ, ತತ್ತ್ವವಿಚಾರದಿಂದ ಮುಕ್ತಿಯುಂ ದೊರೆಯುತ್ತದೆ. ಇದೇ ಪಂಡಿತರಿಗೆ ದೊರೆಯುವ ಫಲ).

ಪಂಡಿತರಿಗೆ, ಭಾಷೆ ಮತ್ತು ಸಾಹಿತ್ಯಾಭಿಮಾನಿಗಳಿಗೆ ಮುಕ್ತಿಯನ್ನು ದೊರಕಿಸುವಲ್ಲಿ ನಿಘಂಟುಶಾಸ್ತ್ರದ ಪಾತ್ರ ಎಷ್ಟು ಹಿರಿದೆಂಬುದು ಈ ಮಾತಿನಿಂದ ಗೊತ್ತಾಗುತ್ತದೆ :

ಮನಸ್ಸಿನ ಅಜ್ಞಾನದ ಕತ್ತಲೆಯನ್ನು ಹೊಡೆದಟ್ಟುವ ಅರ್ಥಪ್ರಕಾಶದಿಂದ ಬೆಳಗುವ ನಿಘಂಟು ಸಕಲವಿದ್ಯೆಗಳ ಪ್ರದೀಪ

ಪುದಿದ ಮನಸ್ತಮಮಂ ಬಿಡೆ
ಬಿದಱ ಸದರ್ಥಪ್ರಕಾಶಮಂ ಮಾಡುಗುಮ
ಪ್ಪುದಱಿಂ ಸಮಸ್ತ ವಿದ್ಯಾ
ಪ್ರದೀಪಮಭಿಧಾನಕೋಶಮಲ್ಲದೆ ಪೆಱತೇಂ

—(ವಸ್ತುಕೋಶ 1-3)

ಎಂದಿರುವ ನಾಗವರ್ಮನ ಮಾತಿನಲ್ಲಿ ಅತಿಶಯೋಕ್ತಿಯೇನೂ ಕಾಣಿಸದು.

ನಮ್ಮಲ್ಲಿ ಈವರೆಗೆ ರಚಿತವಾಗಿರುವ ನಿಘಂಟುಗಳನ್ನು ಪರಿಶೀಲನಾ ದೃಷ್ಟಿಯಿಂದ ಮೂರು ಗುಂಪುಗಳಾಗಿ ಮಾಡಬಹುದು.

1) ಛಂದೋಬದ್ಧವಾಗಿ ರಚಿತವಾಗಿರುವ ನಿಘಂಟುಗಳು : ಅವು ಕಂದ, ವೃತ್ತ, ಷಟ್ಪದಿಗಳಲ್ಲಿ ರಚಿತವಾಗಿವೆ.

2) ಟೀಕು ಸಹಿತವಾಗಿ ರಚಿತವಾಗಿರುವ ನಿಘಂಟುಗಳು – ಬಹುಮಟ್ಟಿಗೆ ಸಂಸ್ಕೃತ–ಕನ್ನಡ ನಿಘಂಟುಗಳು ; ಉದಾ. ಅಮರಕೋಶಕ್ಕೆ ಬರೆದ ಟೀಕುಗಳು.

3) ಅಕಾರಾದಿ ಕ್ರಮದಲ್ಲಿ ರಚಿತವಾಗಿರುವ ನಿಘಂಟುಗಳು – ಇತ್ತೀಚಿನ ಕೋಶಗಳು.

1) ಕನ್ನಡದ ಮೊದಲ ಉಪಲಬ್ಧ ನಿಘಂಟು 'ರನ್ನಕಂದ'. 11 ಪದ್ಯಗಳು ಮಾತ್ರ ಸಿಕ್ಕಿದ್ದವು. ಈಚೆಗೆ ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ'ಯಲ್ಲಿ (ಸಂಪುಟ 8, ಸಂಚಿಕೆ 4) ಡಾ॥ ಎಂ. ಎಂ. ಕಲಬುರ್ಗಿಯವರು 45 ಪದ್ಯಗಳನ್ನು ಪ್ರಕಟಿಸಿದ್ದಾರೆ. ಹೀಗಾಗಿ ರನ್ನನು ಪ್ರಥಮ ನಿಘಂಟುಕಾರನೆನಿಸುತ್ತಾನೆ. 10ನೆಯ ಶತಮಾನದ ಹೊತ್ತಿಗೇ ಕನ್ನಡ ಜನ ನಿಘಂಟೊಂದರ ಅಗತ್ಯವನ್ನು ಕಂಡುಕೊಂಡಿದ್ದರು ಮತ್ತು ಆ ಕೊರತೆಯನ್ನು ತುಂಬಲು ಯತ್ನಿಸಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

2) ಇದಾದ ನಂತರ ಬಂದುದು 2ನೇ ನಾಗವರ್ಮನ 'ಅಭಿಧಾನ ವಸ್ತು ಕೋಶ'. ಕಾಲ 1145, ಕಂದ-ವೃತ್ತಗಳಲ್ಲಿರುವ ಈ ನಿಘಂಟು ಕನ್ನಡ ಕಾವ್ಯಗಳಲ್ಲಿ ಬಳಕೆಯಾಗಿರುವ ಸಂಸ್ಕೃತ ಶಬ್ದಗಳಿಗೆ ಅರ್ಥಗಳನ್ನು ಹೇಳಿದೆ :

ಕರಮೆ ಜಡಮತಿಯುಮಱಿವಂ
ತಿರೆ ಕನ್ನಡದಿಂ ಜಲಕ್ಕನಾಗಿರ್ಪನೆಗಂ
ವಿರಚಿಸಿದಂ ಕವಿ ಕಂಠಾ
ಭರಣನಿದಂ ನಾಗವರ್ಮನೆನೆ ಮೆಚ್ಚದರಾರ್ (ವಸ್ತುಕೋಶ 1-4)

ಎಂದು ಆತ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ಅವನೇ ಭಟ್ಟಹಲಾಯುಧನ ಅಭಿಧಾನರತ್ನಮಾಲೆಗೆ ಕನ್ನಡ ಟೀಕು ಬರೆದಿದ್ದಾನೆ. ಅದು ಹಲಾಯುಧ ನಿಘಂಟು ಎಂದು ಪ್ರಸಿದ್ಧವಾಗಿದೆ. ಕವಿ ಅದನ್ನು "ಅಭಿಧಾನರತ್ನಮಾಲಾ ಕವಿಕಂಠವಿಭೂಷಣಾರ್ಥಮುದ್ಧ್ರಿಯತೇ"—'ಶಬ್ದಗಳೆಂಬ ರತ್ನಗಳ ಮಾಲೆ ಕವಿಗಳ ಕೊರಳಿಗೆ ಅಲಂಕಾರವಾಗಲು ಪೋಣಿಸಲ್ಪಟ್ಟಿದೆ.' ಎಂದಿದ್ದಾನೆ.

3) ಪ್ರಸಿದ್ಧ ವೈಯ್ಯಾಕರಣಿ ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ ಧಾತುಪ್ರಕರಣ, ಸಹಜ ಅಟಿ ಪ್ರಕರಣ ಹಾಗೂ ಪ್ರಯೋಗಸಾರವೆಂಬ ಶಬ್ದಾರ್ಥ ನಿರ್ಣಯದ ಪ್ರಸಂಗದಲ್ಲಿ ಕೋಶಕಾರನ ಕೆಲಸವನ್ನು ಮಾಡಿದ್ದಾನೆ. ಅಂತೆಯೇ ಅವನು

ಅಪರಿಮಿತ ವಿದ್ಯರೆನಿಸಿ
ರ್ದ ಪುರಾಣಕವೀಂದ್ರರಖಿಳಕಾವ್ಯಂಗಳ ಗೂ
ಢ ಪದಪ್ರಯೋಗಮಂ ನೆರ
ಪಿ ಪದಾರ್ಥಂಗಳನಣಂ ಮನಂಬುಗೆ ಪೇೞ್ವೆಂ (ಶಬ್ದಮಣಿದರ್ಪಣ ಪರಿ. 1)

ಎಂದಿದ್ದಾನೆ. ಇವು ಶಬ್ದಾರ್ಥನಿರ್ಣಯದಲ್ಲಿ ಬಹಳ ಸಹಾಯಕವಾಗಿವೆ.

4) ಎರಡನೆ ಮಂಗರಾಜನ ಅಭಿನವಾಭಿಧಾನಂ 'ಮಂಗರಾಜ ನಿಘಂಟೆಂದೇ' ಪ್ರಸಿದ್ಧವಾಗಿದೆ. ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಹೇಳಿದೆ. ತನ್ನ ನಿಘಂಟಿನಿಂದ "ಮೂರ್ಖರಜಿಿದಭಿಮತಜ್ಞಾನಿಗಳೆನಿಪ್ಪರು" ಎಂದಿದ್ದಾನೆ (ಮಂಗರಾ. 2-5). ಇದಾದ ನಂತರ ಸು. 1400 ರ ಕಾಲದ ಕರ್ಣಾಟಕ ಶಬ್ದಸಾರ (ಗದ್ಯ), ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು (1450), ಲಿಂಗಮಂತ್ರಿ ವಿರಚಿತ ಕಬ್ಬಿಗರ ಕೈಪಿಡಿ (ವಾರ್ಧಕ ಷಟ್ಪದಿ, 1530), ವಿರಕ್ತ ತೋಂಟದಾರ್ಯನ (1560) ಕರ್ಣಾಟಕ ಶಬ್ದಮಂಜರಿ (ವಾರ್ಧಕ ಷಟ್ಪದಿ), ಕುಮಾರ ವ್ಯಾಸನ ಕಾವ್ಯದಲ್ಲಿನ ಕೆಲ ದೇಶ್ಯಶಬ್ದಗಳಿಗೆ ಅರ್ಥಹೇಳಿರುವ ಭಾರತನಿಘಂಟು (1600) (ಕಂದ), ಚೆನ್ನಕವಿ (1600) ವಿರಚಿತ ನಾನಾರ್ಥ ಕಂದ (ಕಂದ), ದೇವೋತ್ತಮ (1600) ರಚಿಸಿದ ನಾನಾರ್ಥ ರತ್ನಾಕರ (ವೃತ್ತ), ಸೂರ್ಯಕವಿಯ

(1640) 'ಕವಿಕಂಠಹಾರ' ಮೊದಲಾದ ನಿಘಂಟುಗಳೆಲ್ಲಾ ಸಂಸ್ಕೃತ ಹಾಗೂ ಹಳಗನ್ನಡ ಶಬ್ದಗಳಿಗೆ ಅರ್ಥವಿವರಣೆ ನೀಡುತ್ತವೆ.* ಕಠಿಣಪದಗಳಿಗೆ ಅರ್ಥ ಹೇಳುವಾಗಲೂ ಛಂದೋಬದ್ಧವಾಗಿಯೇ ಹೇಳಲು ಕಾರಣ ಆ ಕಾಲದ ಸಂಪ್ರದಾಯ. ಶಬ್ದಾರ್ಥಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಪದ್ಯ ವಾಸಿ. ಅಮರಕೋಶವನ್ನು ಉರುಹಾಕಿದಂತೆ ಈ ಕೋಶಗಳನ್ನು ಬಾಯಿಪಾಠ ಮಾಡಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಆದರೆ ಅವುಗಳ ಬಂಧ ಎಷ್ಟು ಬಿಗಿಯಾಗಿದ್ದವು ಎಂದರೆ ಕ್ರಮೇಣ ಅವುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಯಿತು ; ಆ ನಿಘಂಟುಗಳನ್ನು ಅರ್ಥಮಾಡಿಕೊಳ್ಳಲು ಮತ್ತೊಂದು ನಿಘಂಟನ್ನು ಹುಡುಕಿಕೊಂಡು ಹೋಗುವಂತಾಯಿತು; 'ಕರಮೆ ಜಡಮತಿಯುಮಱಿವಂತಿರೆ...ವಿರಚಿಸಿದೆ' (ನಾಗವರ್ಮ II), 'ಅಖಿಳ ಶಬ್ದಮಂ ಮೂರ್ಖರಱಿದಭಿಮತಜ್ಞಾನಿಗಳೆನಿಪ್ಪರ್' (ಮಂಗರಾಜ II)–ಅಂದರೆ ಮೂರ್ಖರಿಗೂ ತಿಳಿಯುವಂತೆ ನಿಘಂಟು ಬರೆದಿದ್ದೇವೆ ಎಂದು ಅವರು ಹೇಳಿಕೊಂಡರೂ ಅವು 'ನೀರಿಳಿಯದ ಗಂಟಲಿಗಿಟ್ಟ ಕಡುಬು'ಗಳಾದವು. ಆದ್ದರಿಂದಲೇ ಅಂಥ ನಿಘಂಟುಗಳಿಗೆ ವಿವರಣಾತ್ಮಕ ಟೀಕೆ-ಟಿಪ್ಪಣಿಗಳು ಹುಟ್ಟಿಕೊಂಡವು. ಉದಾ : ವಿರಕ್ತ ತೋಂಟದಾರ್ಯನ 'ಕರ್ಣಾಟಕ ಶಬ್ದಮಂಜರಿ'ಗೆ ನಾಲ್ಕು ಟೀಕೆಗಳು ಬಂದಿವೆ. ಹೆಸರುಘಟ್ಟದ ಹೊನ್ನಪ್ಪ 'ವಿಬುಧಾನಂದಿನಿ' ಎಂದೂ, ಎನ್. ಆರ್. ಕರಿಬಸವಶಾಸ್ತ್ರಿ 'ಸುಜನ ಮನೋಲ್ಲಾಸಿನಿ' ಎಂದೂ ಮುನೇಗೌಡ ಮತ್ತು ಶ್ರೀನಿವಾಸ ಎಂಬುವರು 'ಕರ್ಣಾಟಕ ಶಬ್ದಮಂಜರಿಯ ಟೀಕು' ಎಂದೂ ಕರೆದು ಟೀಕೆಗಳನ್ನು ಬರೆದಿದ್ದಾರೆ. 'ಕಬ್ಬಿಗರ ಕೈಪಿಡಿ'ಗೂ ಹೆ. ಹೊನ್ನಪ್ಪನವರು 'ಚಕೋರ ಚಂದ್ರಿಕೆ' ಎಂಬ ಟೀಕೆ ಬರೆದಿದ್ದಾರೆ.

ಪ್ರಾಚೀನ ನಿಘಂಟುಗಳಲ್ಲಿರುವ ಕ್ಲಿಷ್ಟತೆಯನ್ನು ನಿವಾರಿಸಿ, ಕೊರತೆಗಳನ್ನು ತುಂಬಿ ಕಾವ್ಯಾಭ್ಯಾಸಿಗಳಿಗೆ ಕೈಗನ್ನಡಿಯಾಗಬಲ್ಲ ನಿಘಂಟನ್ನು ತಯಾರಿಸಬೇಕೆಂಬ ಬಯಕೆಯಿಂದ ಕೆಲವು ನಿಘಂಟುಗಳು ರೂಪುಗೊಳ್ಳತೊಡಗಿದವು. ಅಂದಿನ ಕೋಶಕಾರರ ಮನದ ಇಂಗಿತವನ್ನು ಹೆಸರುಘಟ್ಟದ ಹೊನ್ನಪ್ಪನವರ ''ಕರ್ಣಾಟಕ ಭಾಷೆಯೊಳನಂತ ಕವಿಗಳ್ ಪ್ರೊಕ್ಕು ಸುಖಮನನುಭವಿಸಿ ಅವರ್ಗಳನನುಭವಿಸಿ ಸುಖಮಂ ಎಲ್ಲರ್ಗುಸುರಲೆಳಸಿ ನಾನಾವಿಧಮಪ್ಪ ವೃತ್ತಂಗಳಿಂ, ಷಟ್ಪದಿಗಳಿಂ, ಗದ್ಯಂಗಳಿಂ, ವಚನಂಗಳಿಂ, ರಗಳೆಗಳೊಳಂ, ನಿಘಂಟುಗಳೊಳ್ ಪ್ರಯೋಗಿಸಿರ್ಪ ಶಬ್ದಂಗಳ್ ಸಾಧಾರಣ ಜನಂಗಳ್ಗಗೋಚರಮಾಗಿರ್ಪುವದರಿಂ ಇವುಗಳೊಳ್ ಕೆಲವಂ ಸಂಗ್ರಹಿಸಿ...ಪೂರೈಸಿದೆಂ'' (ಕರ್ನಾಟಕ ಕಲ್ಪದ್ರುಮ, ಪೀಠಿಕೆ) ಎಂಬ ಮಾತಿನಲ್ಲೂ,

---

* ಇಂಥ ಹದಿನೇಳು ಪ್ರಾಚೀನ ನಿಘಂಟುಗಳ ಸಂಕಲನವೊಂದನ್ನು ಶ್ರೀ ಎನ್ ಬಸವಾರಾಧ್ಯ ಅವರು 'ಹಳಗನ್ನಡ ನಿಘಂಟು' ಎಂಬ ಹೆಸರಿನಲ್ಲಿ ಸಂಪಾದಿಸಿ 1976 ರಲ್ಲಿ ಪ್ರಕಟಿಸಿದ್ದಾರೆ.

ಜಯರಾಮಾಚಾರ್ಯರ ''ಪುರಾತನ ಕರ್ನಾಟಕ ಗ್ರಂಥಗಳಲ್ಲಿ ಪ್ರಯೋಗಿಸಿ ಇರತಕ್ಕ ಕೆಲಕೆಲವು ಪದಗಳಿಗೆ ನಿಷ್ಕೃಷ್ಟವಾದ ಅರ್ಥಗಳೇ ಗೊತ್ತಿಲ್ಲದೆ ಸಂದರ್ಭಾನುಸಾರವಾಗಿ ಅವರವರಿಗೆ ಅನುಕೂಲವಾಗುವಂತೆ ಅರ್ಥಗಳನ್ನು ಹೇಳುತ್ತಾರೆಯಾಗಿ ದೇಶಭಾಷಾ ಪ್ರಾಚುರ್ಯವು ಕಡಿಮೆಯಾಗುತ್ತಾ ಬಂತು. ಈ ಸಂದರ್ಭವನ್ನು ತಿಳಿದು ಈ ದೇಶಭಾಷೆಯನ್ನು ಚೆನ್ನಾಗಿ ಅಭಿವೃದ್ಧಿಗೆ ತರಬೇಕೆಂದು ಸಂಪೂರ್ಣಾಭಿಮಾನವುಳ್ಳ ನಮ್ಮ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹಾದ್ದೂರ್ ಅವರ ಅಭಿಪ್ರಾಯಾನುಸಾರವಾಗಿ...ಬರೆದೆ (ಕರ್ಣಾಟಕ ಭಾಷಾಕರ, ಪೀಠಿಕೆ) ಎಂಬ ನಿವೇದನೆಯಲ್ಲಿ ನಾವು ನಿಚ್ಚಳವಾಗಿ ಕಾಣಬಹುದು. ಅವರಲ್ಲಿ ಕೆಲವರಿಗೆ ಉತ್ಕಟ ಕನ್ನಡಾಭಿಮಾನ. ಕನ್ನಡ ನುಡಿಯ ಬೆಡಗನ್ನು ಉಳಿಸಿ ಬೆಳಸುವ ಕಾಳಜಿ ಅವರದು. 'ಕನ್ನಡದ ಕಣಜ'ವೆಂಬ, (ಇನ್ನು ಹಸ್ತಪ್ರತಿಯಲ್ಲೇ ಉಳಿದಿರುವ ಕೋಶದ ಹರಕೆಯಲ್ಲಿ) ಅದರ ಕರ್ತೃ ಹೀಗೆಂದಿದ್ದಾರೆ:

''ನಮ್ಮ ನುಡಿಗಳ ಮರೆತು ಬೇರೆ ನುಡಿಗಳೆ ನಮ್ಮ ಕನ್ನಡದ ನುಡಿಯೆಂದು ತಿಳಿವಿಗಿಡುತಿದೆ ಮಂದಿ. ಕನ್ನಡಿಗರೆಚ್ಚತ್ತು ತಮ್ಮ ನುಡಿಗಳ ಪೊರೆದು ಸಾಲದಾಗಿರುವಾಗ ಬೇರೆ ನುಡಿಗಳ ಕೊಳಲಿ. ನಮ್ಮ ತಾಯ್ನುಡಿಯೊಲವ ನಾವು ಕಾಣದ ಮೇಲೆ ಬಾಳುವುದೆ, ಬದುಕುವುದೆ ಕನ್ನಡದ ತಿಳಿನುಡಿಯು'' (ಕನ್ನಡದ ಕಣಜ, ಹರಕೆ ; ಹಸ್ತಪ್ರತಿ ; ಕ. ಸಾ. ಪ).

ಕನ್ನಡದ ನವೋದಯದ ಕಾಲ ಬಂತು. ಅದು ನಮಗೆ ಪಾಶ್ಚಿಮಾತ್ಯ ಭಾಷಾ–ಸಾಹಿತ್ಯ ಸಂಪರ್ಕವೇರ್ಪಟ್ಟಿದ್ದ ಪರ್ವಕಾಲ. ಅಕಾರಾದಿ ಕ್ರಮದಲ್ಲಿ ನಿಘಂಟನ್ನು ರಚಿಸಬೇಕೆಂಬ ಕಲ್ಪನೆ ಬಂದದ್ದು ಆಗಲೇ. ಈ ನಿಟ್ಟಿನಲ್ಲಿದೆ. ರೀವ್, ಸ್ಯಾಂಡರ್‌ಸನ್, ಗ್ಯಾರೆಟ್, ಜೀಗ್ಲರ್, ಕಿಟಲ್ ಮೊದಲಾದವರ ಸೇವೆ ಉಲ್ಲೇಖನೀಯ. ರೆ. ರೀವ್ ಅವರು 1832 ರಲ್ಲಿ ಸಿದ್ಧಪಡಿಸಿದ ಕನ್ನಡ–ಇಂಗ್ಲಿಷ್ ನಿಘಂಟು ಆಧುನಿಕ ಕ್ರಮದ ಆದ್ಯಕೃತಿ. ಆನಂತರ ಡೇನಿಯಲ್ ಸ್ಯಾಂಡರ್‌ಸನ್ ಅವರು 1858 ರಲ್ಲಿ ಇದನ್ನು ಪರಿಷ್ಕರಿಸಿ ಪ್ರಕಟಿಸಿದರು. ಅನಂತರ ಗ್ಯಾರೆಟರು ಅದನ್ನು ಪರಿಷ್ಕರಿಸಿದರು. ಆಮೇಲೆ ಜರ್ಮನಿಯಿಂದ ಬಂದ ಕ್ರೈಸ್ತ ಪಾದ್ರಿ ರೆ. ಕಿಟ್ಟೆಲ್‌ರು ಮಂಗಳೂರಿನಲ್ಲಿದ್ದುಕೊಂಡು ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಲಿಯತೊಡಗಿ ಶ್ರದ್ಧಾಸಕ್ತಿಯಿಂದ ಅನುಪಮವಾದ ವಿದ್ವತ್ತನ್ನು ಸಂಪಾದಿಸಿ ಕನ್ನಡ ಭಾಷೆಯ ಶಾಸ್ತ್ರಗ್ರಂಥಗಳನ್ನು ಸಂಪಾದಿಸಿ ಟೀಕೆ-ಟಿಪ್ಪಣಿಯೊಡನೆ ಪ್ರಕಟಿಸುವ ಹಂತಕ್ಕೇರಿ ನಿಂತರು. ಆಗ ಅವರಿಗೆ ಕನ್ನಡ ಭಾಷೆಗೆ ಆಧುನಿಕ ರೀತಿ, ಕ್ರಮಗಳ ಚೌಕಟ್ಟಿನಲ್ಲಿ ಅಳವಡುವ ನಿಘಂಟೊಂದು ಬೇಕು ಎನ್ನಿಸಿತು. ಹತ್ತಾರುವರ್ಷಗಳ ಪರಿಶ್ರಮದಿಂದ ಕನ್ನಡ – ಇಂಗ್ಲಿಷ್ ನಿಘಂಟನ್ನು 1893 ರಲ್ಲಿ ತಯಾರಿಸಿದರು. ಕನ್ನಡ ನಿಘಂಟು ಚರಿತ್ರೆಯಲ್ಲಿ ಇದೊಂದು ಮೈಲಿಗಲ್ಲು. ಪ್ರಾಚೀನ ನಿಘಂಟು

ಹಾಗೂ ಕಾವ್ಯಗಳಿಂದ ಶಬ್ದಸಂಗ್ರಹಿಸಿ ಪ್ರತಿ ಶಬ್ದಕ್ಕೂ ಇಂಗ್ಲಿಷಿನಲ್ಲಿ ಅರ್ಥ ಕೊಟ್ಟಿರುವುದರ ಜೊತೆಗೆ ಆಧಾರವನ್ನೂ, ಅಲ್ಲಲ್ಲಿ ನಿಷ್ಪತ್ತಿಯನ್ನು ಸೂಚಿಸಿ ಪ್ರಮಾಣಭರಿತವಾಗಿಸಿದೆ. ಬದಲಾದ ಹೊಸಕಾಲಕ್ಕೊಂದು ಹೊಸ ನಿಘಂಟಿನ ಆವಶ್ಯಕತೆಯನ್ನು ಮನಗಂಡು, ಆ ನಿಟ್ಟಿನಲ್ಲಿ ಸಾರ್ಥಕ ಕೆಲಸ ಮಾಡಿ ಆದರ್ಶರಾದ ಈ ಪಾಶ್ಚಾತ್ಯ ವಿದ್ವಾಂಸರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು.

ಇದರಿಂದ ಪ್ರಚೋದನೆ ಹೊಂದಿದ ಅನೇಕ ಜನ ವಿದ್ವಾಂಸರು ಈ ನಿಟ್ಟಿನಲ್ಲಿ ಕೆಲಸಮಾಡತೊಡಗಿದರು. ಆಗ ಮೂಡಿಬಂದ ನಿಘಂಟುಗಳು ಇವು

1) ಶಬ್ದಸಂಗ್ರಹ–ಗುರುರಾವ್ ವಿಠಲ ಮೋಹರೆ (1874)
2) ಕರ್ಣಾಟಕ ಕಲ್ಪದ್ರುಮ–ರಾಮಸ್ವಾಮಿ ಶಾಸ್ತ್ರಿ ಮತ್ತು ಹೆ. ಹೊನ್ನಪ್ಪ (1885)
3) ಶಬ್ದಮಂಜರಿ–ಗಂಗಾಧರ ಮಡಿವಾಳೇಶ್ವರ ತುರುಮರಿ (1890)
4) ಕರ್ಣಾಟಕ ಭಾಷಾಕರ – ಅರಮನೆ ಜಯಾಚಾರ್ಯ (1891)
5) ನಾನಾರ್ಥ ಶಬ್ದಾವಳಿ ಮತ್ತು ಸಂಜ್ಞಾರ್ಥಗಳು – ಬಾಸೆಲ್ ಮಿಷನ್ ಪ್ರೆಸ್ (1895)
6) ಜೈನಧರ್ಮ ಪರಿಭಾಷೆ – ಮ.ಪ್ರ. ಪೂಜಾರ್ (1930)
7) ಸಂಸ್ಕೃತ – ಕನ್ನಡ ಶಬ್ದ ವ್ಯುತ್ಪತ್ತಿ – ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಠಕರ (1931)
8) ಸಿರಿಗನ್ನಡ ಅರ್ಥಕೋಶ – ಡಾ. ಶಿವರಾಮ ಕಾರಂತ (1940)
9) ಶಿವಾನುಭವ ಶಬ್ದಕೋಶ – ಡಾ. ಫ. ಗು. ಹಳಕಟ್ಟಿ
10) ಕನ್ನಡ ನಿಘಂಟು – ಮಟ್ಟಿಮಲೆ ಶಂಕರನಾರಾಯಣರಾವ್ ಮತ್ತು ಇತರರು (1951)
11) ಕನ್ನಡ – ಕನ್ನಡ ಶಬ್ದಕೋಶ – ಎಚ್. ವಿ. ರಾಮಾಕಾಂತರಾವ್ (1952)
12) ಕನ್ನಡ – ಕನ್ನಡ ಶಬ್ದಕೋಶ – ಗುರುನಾಥ ಜೋಷಿ ಮತ್ತು ಜಿ. ಅಶ್ವತ್ಥನಾರಾಯಣ (1956)
13) ತದ್ಭವ–ಸಂಸ್ಕೃತ ಕೋಶ – ಡಿ. ವಿ. ಹೊಳ್ಳ (1959)
14) ಕನ್ನಡ–ಕನ್ನಡ ಕಸ್ತೂರಿ ಕೋಶ (ಸಚಿತ್ರ) – ಪಂ. ಚೆ. ವಿ. ಕವಲಿ (1957)

15) ಕಾವ್ಯಪದಮಂಜರಿ – ಪ್ರೊ. ಸ. ಸ. ಮಾಳವಾಡ ಮತ್ತು ಇತರರು
16) ಶ್ರೀವತ್ಸ ನಿಘಂಟು — ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ – (1971)
17) ಕನ್ನಡ ಸಮಾನಾರ್ಥ ಕೋಶ — ಜೆ.ಎಂ. ಹನಸೋಗೆ – (1974)

ಶಬ್ದಾರ್ಥಗಳ ಬಗ್ಗೆ ವಿಪುಲ ಚರ್ಚೆ ನಡೆಸಿ ಅತ್ತ ಗಮನ ಸೆಳೆದ ಕೃತಿಗಳು ನಮ್ಮಲ್ಲಿ ಕೆಲವಿವೆ. ಉದಾ :

1) ಶಬ್ದವಿಹಾರ – ಪ್ರೊ. ಡಿ. ಎಲ್. ನರಸಿಂಹಾಚಾರ್–1956
2) ನಮ್ಮ ನುಡಿ – ಮಾಸ್ತಿ ವೆಂಕಟೇಶ ಅಯ್ಯಂಗಾರ್ – 1960
3) ಪುರಾಣ ನಾಮ ಚೂಡಾಮಣಿ ಬೆನಗಲ್ ರಾಮರಾವ್, ಪಾನ್ಯಂ ಸುಂದರಶೆಟ್ಟಿ – 1941
4) ಸಮಾಲೋಕನ – ತೀ. ನಂ. ಶ್ರೀ
5) ಸಂಶೋಧನಾತರಂಗ – ಡಾ. ಎಂ. ಚಿದಾನಂದಮೂರ್ತಿ ಇತ್ಯಾದಿ.

ಇವಲ್ಲದೆ ವೈದ್ಯ, ಸಂಗೀತ, ನೃತ್ಯ, ವಿಜ್ಞಾನಗಳಿಗೆ ಸಂಬಂಧಪಟ್ಟ ಕೆಲವು ಕೋಶಗಳು ಬಂದಿವೆ: 'ಔಷಧಿ ಕೋಶ, ಕಿಸಂವಾರ್ ಗ್ಲಾಸರಿ, ಪಾರಿಭಾಷಿಕ ಶಬ್ದಕೋಶ, ಮೈಸೂರು ಔಷಧಿ ಗಿಡಗಳು, ವೈದ್ಯ ನಿಘಂಟು, ಸಸ್ಯಗಳ ನಿಘಂಟು, ಇತ್ಯಾದಿ.

ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿದ ವಿದ್ವಾಂಸರು ಆಯಾ ಪಠ್ಯಕ್ಕೆ ಸಂಬಂಧಪಟ್ಟ ಶಬ್ದಾರ್ಥಕೋಶವನ್ನು ತಯಾರಿಸಿ ಜೋಡಿಸುವುದು ಸಂಪ್ರದಾಯ. ಹೀಗಾಗಿ ಪಂಪಭಾರತ ನಿಘಂಟು, ಪಂಪರಾಮಾಯಣ ನಿಘಂಟು ಇತ್ಯಾದಿಗಳು ಪ್ರತ್ಯೇಕ ಕೋಶಗಳಂತೆ ಪ್ರಸಿದ್ಧವಾಗಿವೆ. ಅಯ್ಯಾಶಾಸ್ತ್ರಿಗಳು ತಯಾರಿಸಿದ ಜಗನ್ನಾಥ ವಿಜಯದ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತಿನ ಪಂಡಿತ ಮಂಡಳಿ 12 ಷಟ್ಪದಿ ಕಾವ್ಯಗಳಿಂದ ಶಬ್ದಸಂಗ್ರಹಮಾಡಿ ಬಹುಹಿಂದೆಯೇ ಸಿದ್ಧಪಡಿಸಿದ ಷಟ್ಪದಿ ನಿಘಂಟು ಇನ್ನೂ ಅಚ್ಚಾಗಬೇಕಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇನ್ನೂ ಹಸ್ತಪ್ರತಿಯಾಗಿಯೇ ಉಳಿದಿರುವ ಕೋಶಗಳು ಹಲವಿವೆ.

1) ಕರ್ನಾಟಕ ಶಬ್ದರತ್ನಾಕರ–ಕೊಳನಾಡು ನರಸಿಂಹಶಾಸ್ತ್ರಿ (ಷಟ್ಪದಿಯಲ್ಲಿದೆ)
2) ರುದ್ರಯ್ಯ ನಿಘಂಟು (1918)
3) ಶಾಮಣ್ಣ ನಿಘಂಟು (1920)

4) ಪ್ರಭಣ್ಣನವರ ನಿಘಂಟು (1926) ಪ್ರಭಣ್ಣನವರಿಂದ ಸಂಕಲನಗಳಿಂದ ಆಧಾರಭೂತ ನಿಘಂಟು. ಪ್ರಾಚೀನ ಕಾವ್ಯಗಳಿಂದ ಶಬ್ದ ಸಂಗ್ರಹ ಮಾಡಿ, ಆಧಾರ ಸಮೇತ ತಯಾರಿಸಿರುವ ಅತ್ಯಂತ ಪರಿಶ್ರಮದಿಂದ ಸಿದ್ಧವಾಗಿದೆ ಈ ಕೋಶ.

5) ನಿಘಂಟುಗಳ ನಿಘಂಟು-(1930) ಪ್ರಾಚೀನ ಕನ್ನಡ ನಿಘಂಟುಗಳಿಂದ ಶಬ್ದಾರ್ಥಗಳನ್ನು ಸಂಗ್ರಹಿಸಿ ಕೊಡಲಾಗಿದೆ.

6) ಜಿ ಬಿ ಕುಳ ನಿಘಂಟು (1930) ಜಳ ಕುಳ ಶಬ್ದಗಳನ್ನು ಸೇರಿಸಿ ತಯಾರಿಸಿದೆ.

7) ಜಾನಪದ ಕೋಶ-ಡಾ. ಬಿ. ಎಸ್. ಗದ್ದಗೀಮಠ, ಜಾನಪದ ಸಾಹಿತ್ಯ ದಲ್ಲಿ ಬರುವ ಪದಗಳನ್ನು ಸಂಗ್ರಹಿಸಿ ಅರ್ಥಕೊಟ್ಟಿದೆ.

8) ಶಬ್ದಾರ್ಥಕೋಶ-ಟಿ.ಕೆ. ಅನಂತನಾರಾಯಣ ಅವರು ಬೇರೆ ಬೇರೆ ಕೋಶಗಳಲ್ಲಿ ಬಂದಿರುವ ಶಬ್ದ—ಅರ್ಥಗಳನ್ನೆಲ್ಲಾ ಅಕಾರಾದಿಯಾಗಿ ಸಂಗ್ರಹಿಸಿದ ಏಕವ್ಯಕ್ತಿಯ ಪರಿಶ್ರಮ ಪೂರ್ವಕವಾದ ಬೃಹತ್ ಕೋಶ. (ಈ ಎಲ್ಲ ಕೋಶ ಗಳನ್ನೂ ಈಗ ಕನ್ನಡ-ಕನ್ನಡ ಬೃಹತ್ ಕೋಶದಲ್ಲಿ ಬಳಸಿಕೊಳ್ಳಲಾಗಿದೆ) ಇತ್ಯಾದಿ.

ನಿಘಂಟಿನ ಬೆಳೆ ಇಷ್ಟು ಹುಲುಸಾಗಿದ್ದರೂ ಕನ್ನಡ ಭಾಷೆಯಲ್ಲಿ ಬಳಕೆಯಾಗಿರುವ ಎಲ್ಲ ಶಬ್ದಗಳಿಗೂ ಅವಕ್ಕಿರುವ ಎಲ್ಲ ಅರ್ಥಗಳನ್ನೂ ಹೇಳುವ ಸಪ್ರಮಾಣವಾದ, ಚಾರಿತ್ರಿಕ ನಿರೂಪಣೆಯನ್ನೊಳಗೊಂಡ ಅಧಿಕೃತ ನಿಘಂಟಿನ ಕೊರತೆ ಇದ್ದೇ ಇತ್ತು. ಕಿಟಲ್ ನಿಘಂಟು ಕೂಡ ಅನೇಕ ರೀತಿಯಲ್ಲಿ ಅಪೂರ್ಣ. ಕಿಟಲ್ ಅವರು ಅನೇಕ ಕಾವ್ಯಗಳನ್ನು ನೋಡಿರಲಿಲ್ಲ. ಅವರು ಶಾಸನಗಳಿಂದ ಶಬ್ದ ಸಂಗ್ರಹ ಮಾಡಿರಲಿಲ್ಲ. ಅರ್ಥ ಸ್ಪಷ್ಟವಾಗಿರುವ ಶಬ್ದಗಳನ್ನು ಮಾತ್ರ ಆರಿಸಿಕೊಂಡರು. ಇದಕ್ಕೆ ಕಾರಣ ಸಮಯಾಭಾವ. ಅದು ಎಷ್ಟಾದರೂ ಒಬ್ಬ ವ್ಯಕ್ತಿಯ ಪ್ರಯತ್ನ. ಅವರು ಅದನ್ನು ಆಗು ಮಾಡಿದ್ದೇ ಒಂದು ದೊಡ್ಡ ಸಾಧನೆ. ಹೀಗಾಗಿ ಅವರು ಕನ್ನಡ ಶಬ್ದ ಭಂಡಾರ ವನ್ನು ತೆರೆದಿಡಲು ಅಸಮರ್ಥರಾದರು.

ಇದಲ್ಲದೆ, ಕೆಲವು ಪದಗಳಿಗೆ ಕೋಶಗಳಲ್ಲಿ ಅರ್ಥಗಳು ಸಿಕ್ಕುತ್ತವೆ. ಆದರೆ ಸಮರ್ಥರಾದ ಕವಿಗಳು ಪ್ರಸಿದ್ಧಾರ್ಥಕ್ಕಿಂತ ಭಿನ್ನವಾದ ವಿವಿಧ ಛಾಯಾರ್ಥಗಳಲ್ಲಿ ಬಳಸುತ್ತಾರೆ. ಅಂಥ ಅಪೂರ್ವ ಪ್ರಯೋಗಗಳನ್ನು ಬಿಡದೆ ಉಲ್ಲೇಖಿಸಿ ಸಂದರ್ಭವರಿತು ಅರ್ಥ ಮಾಡಬೇಕು. ಶಬ್ದಗಳಿಗೆ ಹೇಗೆ ಅರ್ಥ ಬೆಳೆದಿದೆ ಎಂಬುದನ್ನು ಸೂಚಿಸಬೇಕು. ಮೂಲವನ್ನು ಕಂಡುಹಿಡಿದು ಅದರ ಬೆಳವಣಿಗೆಯನ್ನು ಗುರುತಿಸಬೇಕು. ಅಂದರೆ ಒಂದು ಶಬ್ದಕ್ಕೆ ಅರ್ಥ ಬರೆಯುವುದೆಂದರೆ ಆ ಶಬ್ದದ

ಸಂಪೂರ್ಣ ಜಾತಕವನ್ನೇ ಬರೆದಂತೆ; ಇದಕ್ಕೆಲ್ಲಾ ಶಬ್ದಾರ್ಥಶಾಸ್ತ್ರಜ್ಞಾನ, ಭಾಷಾಶಾಸ್ತ್ರದ ಅರಿವು ಅಗತ್ಯವೆಂಬುದನ್ನು ಕನ್ನಡ ಭಾಷೆಯ ಹಿತಚಿಂತಕರಾದ ವಿದ್ವಾಂಸರು ಅರಿತರು.

ಹೀಗಾಗಿ ಭಾಷಾಶಾಸ್ತ್ರದ ತತ್ವಕ್ಕೆ ಅನುಸಾರವಾಗಿ, ಚಾರಿತ್ರಿಕ ವಿವರಣೆಗಳಿಂದ ಕೂಡಿದ ಪ್ರಮಾಣಭೂತವಾದ ಕನ್ನಡ–ಕನ್ನಡ ನಿಘಂಟೊಂದರ ಅವಶ್ಯಕತೆಯನ್ನು ನಾಡಿನ ವಿದ್ವಾಂಸರು ಮನಗಂಡರು. ಸಾಹಿತ್ಯ ಸಮ್ಮೇಳನಗಳಲ್ಲಿ ಈ ಬಗ್ಗೆ ಗಮನ ಸೆಳೆಯುವ ಮಾತುಗಳು ಕೇಳಿಬಂದವು, ಠರಾವುಗಳು ಮಂಡಿಸಲ್ಪಟ್ಟವು. ಕನ್ನಡ ಸಾಹಿತ್ಯ ಪರಿಷತ್ತು ಈ ಬಗ್ಗೆ ಒಂದು ಯೋಜನೆಯನ್ನು ಸಿದ್ಧಪಡಿಸಿ, 1943 ರಲ್ಲಿ ಸರ್ಕಾರಕ್ಕೆ ಕಳಿಸಿತು. ಸಂಪಾದಕ ಸಮಿತಿಯೊಂದು ರಚನೆಗೊಂಡು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಡಿ. ಎಲ್. ನರಸಿಂಹಾಚಾರ್. ಕ. ವೆಂ. ರಾಘವಾಚಾರ್ ಅವರು ಸದಸ್ಯರಾಗಿದ್ದರು. ಪ್ರೊ. ತೀ.ನಂ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿದ್ದರು. ನಿಘಂಟಿನ ಪ್ರಥಮ ಘಟ್ಟವಾದ ಶಬ್ದಸಂಗ್ರಹಕಾರ್ಯ ಆರಂಭವಾಯಿತು. ನಿಜವಾಗಿ ನಿಘಂಟು ಕಚೇರಿ ಆರಂಭವಾದುದು 1944ರ ಜನವರಿ 27 ರಂದು. ಸರ್ಕಾರದ ಉದಾರಾಶ್ರಯದಲ್ಲಿ ಪರಿಷತ್ತು ಈ ಕೆಲಸವನ್ನು ಮಾಡುತ್ತಿದ್ದು ಈಗಾಗಲೇ 4 ಸಂಪುಟಗಳು ಅಂದರೆ ಒಟ್ಟು 4,490 ಪುಟಗಳು ಅಚ್ಚಾಗಿವೆ. ಉಳಿದ ಭಾಗ ಇನ್ನೂ ಎರಡು– ಮೂರು ಸಂಪುಟಗಳಲ್ಲಿ ಪೂರ್ಣವಾಗಲಿದ್ದು ಇನ್ನೂ ಒಂದೆರಡು ವರ್ಷಗಳಲ್ಲೇ ಈ ಕಾರ್ಯ ಒಂದು ನಿಲುಗಡೆಗೆ ಬರಲು ಸಾಧ್ಯವೆನಿಸುತ್ತದೆ. ಈ ನಿಘಂಟು ಬೇಗ ಹೊರಗೆ ಬರಲಿಲ್ಲವೆಂಬ ಕಾತರದಲ್ಲಿ 'ಕನ್ನಡ ನಿಘಂಟು ಕನ್ನಡಿಯೊಳಗಣ ಗಂಟು, ಕನಸಿನ ನಂಟು' ಎಂದವರೂ ಉಂಟು. ಇದು ಅನಿವಾರ್ಯವೆಂಬುದನ್ನು ಅದರ ಸ್ವರೂಪವನ್ನು ಗಮನಿಸಿದವರಿಗೆ ಮಂದಟ್ಟಾಗುತ್ತದೆ.

ಈ ಬೃಹತ್ ಕೋಶ ಪೂರ್ಣವಾಗಿ ಬರಲು ಬಹಳ ಕಾಲ ಹಿಡಿಯುವುದೆಂಬುದನ್ನು, ಜನಸಾಮಾನ್ಯರಿಗೆ ಅದು ನಿಲುಕದು ಎಂಬುದನ್ನು ಮನಗಂಡ ಪರಿಷತ್ತು ಬೃಹತ್ ಕೋಶಕ್ಕಾಗಿ ಸಂಕಲನ ಮಾಡಿದ ಸಾಮಗ್ರಿಯಿಂದಲೇ ಸಂಕ್ಷಿಪ್ತ ಕನ್ನಡ ನಿಘಂಟನ್ನು ಸಿದ್ಧಪಡಿಸಿ ಜನತೆಗೆ ನೀಡಿತು. ಅಲ್ಲದೆ ಜೆಮ್ ಡಿಕ್ಷನರಿಯ ಮಾದರಿಯಲ್ಲಿ ಒಂದು ಕಿಸೆ ಕೋಶವನ್ನು 'ರತ್ನಕೋಶ' ವೆಂಬ ಹೆಸರಿನಲ್ಲಿ ಅಚ್ಚಿಸಿ ಅಗ್ಗದ ಬೆಲೆಗೆ ಮಾರಿತು. ಈ ಎರಡೂ ಕೋಶಗಳೂ ತುಂಬಾ ಜನಪ್ರಿಯವಾಗಿವೆ.

ಕನ್ನಡ-ಕನ್ನಡ ಬೃಹತ್ ಕೋಶ ಭರತ ಖಂಡದ ಭಾಷಾಕ್ಷೇತ್ರದಲ್ಲೇ ವಿಶಿಷ್ಟ ರೀತಿಯಲ್ಲಿ ಹೊರಬರುತ್ತಿದ್ದು ಭಾಷಾಭಿಮಾನಿಗಳು ಹೆಮ್ಮೆ ಪಡುವಂತಾಗಿದೆ. ಹೊರನಾಡವರು ಬಂದು ಇದರ ರಚನೆಯನ್ನು ಕಂಡು ಮೆಚ್ಚಿ ಆಡಿದ ಮಾತನ್ನ

ಆಧರಿಸಿ ಈ ಹೇಳಿಕೆ. ಇದು ಹಿಂದಿನ ನಿಘಂಟುಗಳಲ್ಲಿದ್ದ ಲೋಪ ದೋಷಗಳನ್ನು ಹೋಗಲಾಡಿಸಿಕೊಂಡು ಅರೆಕೊರೆಗಳನ್ನು ತುಂಬಿಕೊಂಡು ಕನ್ನಡ ಭಾಷೆಯ ವ್ಯಾಪ್ತಿ-ದೀಪ್ತಿಗಳಿಗೂ, ಕಸುವು-ಶ್ರೀಮಂತಿಕೆಯನ್ನು ಪ್ರತಿನಿಧಿಸುವಂತೆ ತಯಾರಾಗುತ್ತಿರುವುದು ಸಮಾಧಾನದ ಸಂಗತಿ. ನಾಡಿನ ಅಗ್ರಮಾನ್ಯ ಕನ್ನಡ ವಿದ್ವಾಂಸರು ಇದರ ಸಂಪಾದಕ ಸಮಿತಿಯಲ್ಲಿದ್ದುಕೊಂಡು ಸಹಕರಿಸುತ್ತಿರುವುದು ನಾಡಿನ ಭಾಗ್ಯ. ಈ ನಿಘಂಟಿಗೆ ಆಧಾರ ಕಿಟ್ಟಲ್ ಅವರ ಕೋಶ ಮತ್ತು 9 ಲಕ್ಷಕ್ಕೂ ಮಿಕ್ಕ ಪ್ರಯೋಗ ಪಟ್ಟಿಕೆಗಳು. ಅರ್ಥಸ್ಪಷ್ಟತೆಗಾಗಿ ಕೋಶದ ತುಂಬ ಚೆಲ್ಲಿ ಸೂಸಿದಂತಿರುವ ಶಾಸನಗಳ, ಕವಿರಾಜ ಮಾರ್ಗದಿಂದ ಹಿಡಿದು ಇವೊತ್ತಿನ ಗ್ರಂಥಗಳಿಂದ ಆರಿಸಿದ ಪ್ರಯೋಗಗಳು ಅದನ್ನು ಶುಷ್ಕವಾಗಿಸದೆ ಕಾವ್ಯ ರಸಾಯನವೆನ್ನಿಸಿವೆ. ಇದಕ್ಕೆ ಮಾದರಿ ಆಕ್ಸ್‌ಫರ್ಡ್ ನಿಘಂಟು. ಸೋದರಿ ಭಾಷೆಯ ವಿದ್ವಾಂಸರು ನಮ್ಮ ಕೋಶವನ್ನು ಮೆಚ್ಚಿ ಅದನ್ನು ಮಾದರಿಯಾಗಿಟ್ಟುಕೊಂಡು ತಮ್ಮ ಭಾಷೆಯ ನಿಘಂಟಿನ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ ಎಂಬುದು ನಾವು ಅಭಿಮಾನ ಪಡಬೇಕಾದ ವಿಷಯ. 'ಶಬ್ದ ಪಾರಮ್ ಅರ್ಗಂ ಅಶಕ್ಯಂ' (ಶಮದ. 196). ಎಂಬ ಕೇಶಿರಾಜನ ಮುತ್ತಿನಂತಹ ಅನುಭವದ ಮಾತಿನ ಅರಿವು ನಮಗೆ ಇರಬೇಕು.

ಕನ್ನಡ ಭಾಷೆಗಾಗಿ ನಾವು ಮಾಡಬೇಕಾದ ಕೆಲಸ ಬೆಟ್ಟದಷ್ಟಿದೆ. ನಮ್ಮ ಸುದೈವ, ಕನ್ನಡ ವಿಶ್ವಕೋಶ, ಮಕ್ಕಳ ಕಿರಿಯ ವಿಶ್ವಕೋಶ. ಆಡಳಿತ ಶಬ್ದಕೋಶ, ಇಂಗ್ಲಿಷ್-ಕನ್ನಡ ನಿಘಂಟು, ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳನ್ನು ಕುರಿತ ಗ್ರಂಥಗಳು ಬರುತ್ತಿವೆ. ಕನ್ನಡ ನಾಡಿನಲ್ಲಿ ಕನ್ನಡತನವನ್ನು ಉಳಿಸಿ ಬೆಳೆಸಲು, ಇಲ್ಲಿ ಕನ್ನಡ ಭಾಷೆ ಸಾಮ್ರಾಜ್ಞಿಯಾಗಿ ಬಾಳಲು ಇಂಥವು ಎಷ್ಟಿದ್ದರೂ ಬೇಕು.

ನಿಘಂಟು ಕ್ಷೇತ್ರದಲ್ಲಿ ಮುಂದೆ ನಾವು ಕೈಗೆತ್ತಿಕೊಳ್ಳಬಹುದಾದ ಕಾರ್ಯಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ :

1. ಕನ್ನಡ-ಕನ್ನಡ ಬೃಹತ್ ಕೋಶದಲ್ಲಿ ಇಂಗ್ಲಿಷ್ ಲಿಪ್ಯಂತರ ಮತ್ತು ಅರ್ಥವನ್ನು ಕೊಟ್ಟಿದ್ದರೆ ಹಲವು ಭಾರತೀಯ ಭಾಷೆಗಳ ಕೋಶ ರಚನೆಗೆ ಮಾದರಿಯಾಗಿರುವ ನಮ್ಮ ಕೋಶ ವಿಶ್ವಮಾನ್ಯವಾಗುತ್ತಿತ್ತು. ಅದಿಲ್ಲದೆ ಕನ್ನಡನಾಡಿನ ಗಡಿಗೇ ಅದು ಸೀಮಿತವಾಗಿದೆ. ಆದ್ದರಿಂದ ಕನ್ನಡ-ಇಂಗ್ಲಿಷ್-Bilinguial-ದ್ವಿಭಾಷೆಯ ಅಥವಾ ಕನ್ನಡ-ಇಂಗ್ಲಿಷ್-ಹಿಂದಿ-ಹೀಗೆ Trilinguial ಮೂರು ಭಾಷೆಗಳ ನಿಘಂಟು ತಯಾರಾಗಬೇಕು.

2. ಅಚ್ಚಗನ್ನಡ ಶಬ್ದಗಳನ್ನೇ ಹೆಕ್ಕಿ ತೆಗೆದು ಒಂದು ದೇಶ್ಯ ಪದಕೋಶ ರಚಿಸಬೇಕು. ಇದನ್ನು ಎರಡು ಭಾಷೆ ಅಥವಾ ಮೂರು ಭಾಷೆಗಳಲ್ಲಿ ತಯಾರಿಸಿದರೆ ಬಹಳ ಒಳ್ಳಿತು. ದೇಶದ ಒಳ-ಹೊರಗೆ ಇದಕ್ಕೆ ಸಾಕಷ್ಟು ಬೇಡಿಕೆ ಬರುತ್ತದೆ.

3. ಬೃಹತ್ ಕೋಶದಲ್ಲಿ ಸೇರ್ಪಡೆಯಾಗದಿರುವ ಆಡುಮಾತುಗಳ, ಗ್ರಾಮ್ಯ ನುಡಿಗಳದೇ ಒಂದು ಪ್ರತ್ಯೇಕ ನಿಘಂಟಿನ ಆವಶ್ಯಕತೆಯಿದೆ.

4. ಇದಲ್ಲದೆ ನಮ್ಮ ಸೋದರ ಭಾಷೆಗಳೊಡನೆ ಕೊಳು-ಕೊಡಿಕೆ ಸಾಧ್ಯವಾಗುವಂತೆ ಕನ್ನಡ-ತಮಿಳು, ಕನ್ನಡ-ತೆಲುಗು, ಕನ್ನಡ-ಮಲಯಾಳಂ, ಕನ್ನಡ-ಮರಾಠಿ, ಕನ್ನಡ-ಹಿಂದಿ–ಹೀಗೆ ಕೆಲವು ನಿಘಂಟುಗಳು ತಯಾರಾಗಬೇಕು.

5. ನಮ್ಮಲ್ಲಿ ವೃತ್ತಿಪದಕೋಶಗಳು ತಯಾರಾಗಬೇಕು. ಪ್ರತಿ ಕಸುಬಿನವರಿಗೂ ತಮ್ಮದೇ ಆದ ಅನೇಕ ವಿಶಿಷ್ಟ ಪದಗಳಿವೆ. ಬಡಗಿ, ಕಮ್ಮಾರ, ಬೆಸ್ತ, ಕುಂಬಾರ, ಚಮ್ಮಾರ, ಇತ್ಯಾದಿ. ವೃತ್ತಿಪರ ಮಾತುಗಳು ಪ್ರಾದೇಶಿಕವಾಗಿಯೂ ಬೇರೆ ಬೇರೆ ಇದ್ದು ಕ್ರಮೇಣ ಕಣ್ಮರೆಯಾಗುತ್ತಿವೆ. ಸಿಕ್ಕದ ಇಂಥ ಶಬ್ದಗಳಿಗೆ ಸರಿಯಾದ ಅರ್ಥ ಮಾಡುವುದೂ ಕಷ್ಟವಾಗುತ್ತದೆ. ಆದ್ದರಿಂದ ವ್ಯಾಪಕವಾದ ಶಬ್ದ ಸಂಗ್ರಹ ಕಾರ್ಯ (Linguistic Survey) ಸಾಗಬೇಕು. ಕಾಲದ ಮರಳಲ್ಲಿ ಇಂಥ ದೇಶೀಯ ಸೊಗಡಿನ ಪದಗಳು ಹೂತುಹೋಗುವ ಮುಂಚೆಯೇ ಅವನ್ನು ದಾಖಲಿಸಬೇಕು.

6. ಕನ್ನಡ ನಾಡು ಹಲವಾರು ಧರ್ಮಗಳಿಗೆ ಉದಾರಾಶ್ರಯವಿತ್ತಿರುವ ಪುಣ್ಯಭೂಮಿ ಪ್ರತಿಯೊಂದು ಧರ್ಮವೂ ತನ್ನದೇ ಆದ ವಿಶಿಷ್ಟ ಶಬ್ದ ಸಂಪತ್ತನ್ನು ಹೊಂದಿದೆ. ಜೈನ, ಬೌದ್ಧ, ವೈಷ್ಣವ, ವೀರಶೈವ, ವೈದಿಕ ಮೊದಲಾದ ಧರ್ಮಗಳ ಪಾರಿಭಾಷಿಕ ಶಬ್ದಕೋಶಗಳು ಸಿದ್ಧಗೊಳ್ಳಬೇಕು. ಈ ದಿಸೆಯಲ್ಲಿ ಸ್ವಲ್ಪ ಕೆಲಸ ನಡೆದಿದೆ. ಆದರೆ ಅದು ಸಾಲದು. ಅದು ಮತ್ತಷ್ಟು ವ್ಯವಸ್ಥಿತವಾಗಿ, ಶಾಸ್ತ್ರೀಯವಾಗಿ, ಅಧಿಕೃತವಾಗಿ ನಡೆಯಬೇಕು.

ಹೀಗಾದರೆ ನಮ್ಮ ಭಾಷೆಯ ನಿಜವಾದ ಸ್ವರೂಪವನ್ನು ನಾವು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಈ ಕಡೆ ಸರ್ಕಾರ, ವಿಶ್ವವಿದ್ಯಾನಿಲಯಗಳು, ಕನ್ನಡ ಭಾಷಾಭಿಮಾನಿಗಳು ಗಮನ ಕೊಡಲೆಂದು ವಿಜ್ಞಾಪಿಸುತ್ತೇನೆ.

ಅನುಬಂಧ

ಕನ್ನಡದಲ್ಲಿ ಇದುವರೆಗೆ ರಚಿತವಾಗಿರುವ ನಿಘಂಟುಗಳ ಪಟ್ಟಿ

I ಅಚ್ಚಾಗಿರುವ ಹಳಗನ್ನಡ ನಿಘಂಟುಗಳು

(ಕನ್ನಡ-ಕನ್ನಡ ; ಸಂಸ್ಕೃತ-ಕನ್ನಡ)

1 ರನ್ನಕಂದ. ರನ್ನ. 10 ಶತ (45 ಕಂದ ಪದ್ಯಗಳು)
2 ಅಭಿಧಾನ ವಸ್ತುಕೋಶ. II ನಾಗವರ್ಮ. 1145 (ಕಂದ)
ಸಂಸ್ಕೃತ ಶ್ಲೋಕಗಳಿಗೆ ಕನ್ನಡದ ಅರ್ಥ.
3 ಅಭಿಧಾನ ರತ್ನಮಾಲಾ (ಹಲಾಯುಧ ನಿಘಂಟು) II ನಾಗವರ್ಮ. 1145
4 ಶಬ್ದಮಣಿದರ್ಪಣದ ಕನ್ನಡಧಾತುಪಾಠ ಮತ್ತು ಪ್ರಯೋಗಸಾರ
ಕೇಶಿರಾಜ, 1260.
4 ಅಕಾರಾದಿ ವೈದ್ಯ ನಿಘಂಟು, ಅಮೃತನಂದಿ, 1300
6 ಅಭಿನವಾಭಿಧಾನ (ಮಂಗರಾಜ ನಿಘಂಟು), II ಮಂಗರಾಜ. 1398 (ಷಟ್ಪದಿ)
7 ಕರ್ಣಾಟಕ ಶಬ್ದಸಾರ (?) 1400, ಗದ್ಯ. (1416 ಶಬ್ದಗಳಿಗೆ ವಿವರಣೆ ಇದೆ)
8 ಕರ್ಣಾಟಕ ನಿಘಂಟು (?) 1400. (99 ಕಂದ. ವೃತ್ತ.)
9 ಚತುರಾಸ್ಯ ನಿಘಂಟು, ಚತುರಾಸ್ಯ ಬೊಮ್ಮರಸ. 1450 (ಕಂದ)
10 ಕಾಶಕೃತ್ಸ್ನ ಧಾತುವ್ಯಾಖ್ಯಾ-ಚನ್ನವೀರ. 1500; ಸಂಸ್ಕೃತ ಧಾತುಗಳಿಗೆ ಕನ್ನಡದ ವ್ಯಾಖ್ಯೆ.
11 ಧನ್ವಂತರೀ ನಿಘಂಟು (?) 1500 ಸಂಸ್ಕೃತ-ಕನ್ನಡ (ವೈದ್ಯ)
12 ಕಬ್ಬಿಗರ ಕೈಪಿಡಿ, ಲಿಂಗಮಂತ್ರಿ. 1530 ; 101 ಷಟ್ಪದಿ (ಟೀಕುಗಳು ಇವೆ.)
13 ಕರ್ಣಾಟಕ ಶಬ್ದಮಂಜರಿ, ವಿರಕ್ತತೋಂಟದಾರ್ಯ. 1560 (120 ಷಟ್ಪದಿ)
ನಾಲ್ಕು ಟೀಕುಗಳು ಇವೆ.
14 ಭಾರತ ನಿಘಂಟು, ಕುಮಾರವ್ಯಾಸ (?) 1600; ಕಂದ 67.
15 ಕರ್ಣಾಟಕ ಸಂಜೀವನ, ಶೃಂಗಾರ ಕವಿ. 1600 (ಷಟ್ಪದಿ) 35.
16 ಶಬ್ದ ರತ್ನಾಕರ (?) 1600 (ಕಂದ 30).
17 ನಾನಾರ್ಥಕಂದ, ಚೆನ್ನಕವಿ 1600 (ಕಂದ 160) ಟೀಕು ಇದೆ.
18 ನಾನಾರ್ಥ ರತ್ನಾಕರ, ದೇವೋತ್ತಮ. 1600 (ವೃತ್ತ 169) ಟೀಕು ಇದೆ.
19 ಕವಿಕಂಠಹಾರ, ಸೂರ್ಯಕವಿ, (ಕಂದ 231.)
20 ಔಷಧಿಕೋಶ, ಸಂ. ಎ. ವೆಂಕಟರಾವ್. ಜಿ. ಎಚ್. ಶೇಷಅಯ್ಯಂಗಾರ್. 1940
21 ಹಳಗನ್ನಡ ನಿಘಂಟು. ಸು. ಹದಿನೇಳು ಪ್ರಾಚೀನ ನಿಘಂಟುಗಳ ಸಂಕಲನ.
ಸಂ. ಎನ್. ಬಸವಾರಾಧ್ಯ 1976.
22 ಚಾಮುಂಡಿಕಾ ಲಘುನಿಘಂಟು. 1848 ಮುಮ್ಮಡಿ ಕೃಷ್ಣರಾಜ.
23 ಧನಂಜಯ ನಿಘಂಟು, ಧನಂಜಯ. ಸಂಸ್ಕೃತ-ಕನ್ನಡ (?)

II ಅಪ್ರಕಟಿತ ನಿಘಂಟುಗಳು

1 ನಾಚಿರಾಜೀಯ-ನಾಚಿರಾಜ, 1300 ಅಮರಕೋಶದ ವ್ಯಾಖ್ಯಾನ, ಹಸ್ತಪ್ರತಿ, ಮೈಸೂರು ವಿಶ್ವವಿದ್ಯಾಲಯ.
2 ಅಕ್ಷರಾದಿ ನಿಘಂಟು-ಶಾಲ್ಯದ ಕೃಷ್ಣರಾಜ-1748.
3 ಅಕಾರಾದಿ ನಿಘಂಟು. ಲಕ್ಷ್ಮಣ ಪಂಡಿತ, 1775 ಸಂಸ್ಕೃತ-ಕನ್ನಡ
4 ಶಬ್ದಾರ್ಥ ಮಂಜರಿ, 1810 ಚಂದ್ರಸಾಗರವರ್ಣಿ, ಹಸ್ತಪ್ರತಿ, ಮೈಸೂರು ವಿಶ್ವವಿದ್ಯಾಲಯ.
5 ಜಗನ್ನಾಥ ವಿಜಯದ ನಿಘಂಟು, ಅಯ್ಯಾಶಾಸ್ತ್ರಿ, 1900, ಕನ್ನಡ ಸಾಹಿತ್ಯ ಪರಿಷತ್ತು.
6 ರುದ್ರಯ್ಯ ನಿಘಂಟು, ಮಠದ ರುದ್ರಯ್ಯ, 1918 ಕನ್ನಡ ಸಾಹಿತ್ಯ ಪರಿಷತ್ತು
7 ಶ್ಯಾಮಣ್ಣ ನಿಘಂಟು, ತಿರುಮಕೂಡಲು ಶ್ಯಾಮಣ್ಣ, 1920 ಕನ್ನಡ ಸಾಹಿತ್ಯ ಪರಿಷತ್ತು.
8 ಪ್ರಭಣ್ಣನವರ ನಿಘಂಟು, ಪಂಡಿತ ನ್ಯಾಮತಿ ಪ್ರಭಣ್ಣ, 1929 ಕನ್ನಡ ಸಾಹಿತ್ಯ ಪರಿಷತ್ತು.
9 ಷಟ್ಪದಿ ಕಾವ್ಯಗಳ ನಿಘಂಟು, (12 ಷಟ್ಪದಿ ಕಾವ್ಯಗಳಿಂದ ಶಬ್ದಸಂಗ್ರಹ) ಸಂ. ಬೆಳ್ಳಾವೆ ವೆಂಕಟನಾರಣಪ್ಪ, 1930.
10 ನಿಘಂಟುಗಳ ನಿಘಂಟು (ಪ್ರಾಚೀನ ನಿಘಂಟುಗಳಿಂದ ಶಬ್ದ ಸಂಗ್ರಹ) ಸಂ. ಬೆಳ್ಳಾವೆ ವೆಂಕಟನಾರಣಪ್ಪ 1930.
11 ಱಳಕುಳ ನಿಘಂಟು (ಱ ಮತ್ತು ಳ ಸಹಿತವಾದ ಶಬ್ದಗಳ ಕೋಶ) ಸಂ. ಬೆಳ್ಳಾವೆ ವೆಂಕಟನಾರಣಪ್ಪ 1930.
12 ಶಬ್ದಾರ್ಥ ಸಂಗ್ರಹ, ಟಿ. ಕೆ. ಅನಂತನಾರಾಯಣ, 1933. ಸಂ. ಬೆಳ್ಳಾವೆ ವೆಂಕಟನಾರಣಪ್ಪ.
13 ಕರ್ನಾಟಕ ಶಬ್ದ ರತ್ನಾಕರ, ನರಸಿಂಹಶಾಸ್ತ್ರಿ, ಕೊಳನಾಡು, 1950 (ಷಟ್ಪದಿ) ಸಂ. ಬೆಳ್ಳಾವೆ ವೆಂಕಟನಾರಣಪ್ಪ.
14 ಕನ್ನಡ ಜಾನಪದ ಶಬ್ದಕೋಶ, ಡಾ. ಬಿ. ಎಸ್. ಗದ್ದಗಿಮಠ, 1956 ಸಂ. ಬೆಳ್ಳಾವೆ ವೆಂಕಟನಾರಣಪ್ಪ.

III ಕನ್ನಡ–ಇಂಗ್ಲಿಷು ನಿಘಂಟುಗಳು

1 ಕನ್ನಡ-ಇಂಗ್ಲಿಷ್ ನಿಘಂಟು-ರೆ. ರೀವ್, 1832. (ಅಕಾರಾದಿಯಾಗಿ ಬಂದ ಪ್ರಥಮ ಕೋಶ.)
2 ಕನ್ನಡ-ಇಂಗ್ಲಿಷ್ ನಿಘಂಟು ಡ್ಯಾನಿಯಲ್ ಸ್ಯಾಂಡರ್‌ಸನ್, 1858 (ರೀವ್ ಅವರ ವಿಸ್ತೃತ ಹಾಗೂ ಪರಿಷ್ಕೃತ ಕೋಶ.)
3 ಕನ್ನಡ-ಇಂಗ್ಲಿಷ್ ನಿಘಂಟು ಜಾನ್ ಗ್ಯಾರೆಟ್ 1871.
4 ಕಿಸಂವಾರ್ ಗ್ಲಾಸರಿ, ಉಲ್ಲಾಳ ನರಸಿಂಗರಾವ್, 1891.
5 ಕನ್ನಡ-ಇಂಗ್ಲಿಷ್ ನಿಘಂಟು, ರೆ. ಎಫ್. ಕಿಟ್ಟೆಲ್, 1893. (ಶಾಸ್ತ್ರೀಯವಾದ, ಪ್ರಮಾಣ ಭೂತವಾದ ನಿಘಂಟು)
6 ಕನ್ನಡ-ಕನ್ನಡ-ಇಂಗ್ಲಿಷ್ ಕೋಶ. ಆರ್. ಎಸ್. ರಾಮರಾವ್, 1965

IV ಇಂಗ್ಲಿಷ್–ಕನ್ನಡ ನಿಘಂಟುಗಳು

1 ಇಂಗ್ಲಿಷ್-ಕನ್ನಡ ನಿಘಂಟು, ರೆ. ರೀವ್, 1832.
2 ಪಂಡಿತ ನಿಘಂಟು, ಎ. ಡಿ. ಪಂಡಿತ್, 1913
3 ಪಾರಿಭಾಷಿಕ ನಿಘಂಟು, ಕೆ. ಆರ್. ಚಕ್ರವರ್ತಿ, 1923.
4 ಇಂಗ್ಲಿಷ್-ಕನ್ನಡ ನಿಘಂಟು, ಡಿ. ಕೆ. ಭರದ್ವಾಜ, 1944.
5 ಇಂಗ್ಲಿಷ್-ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾಲಯ, 1965.
6 ಪತ್ರಿಕಾ ನಿಘಂಟು, ಸಂ. ಎಲ್. ಗುಂಡಪ್ಪ, 1965.
7 ಆಡಳಿತ ಶಬ್ದಕೋಶ, ಸರ್ಕಾರದ ಪ್ರಕಟಣೆ, 1964.
8 ವೈದ್ಯ ಪದಕೋಶ, ಡಿ. ಎಸ್. ಶಿವಪ್ಪ, 1973.
9 ಸಚಿತ್ರ ಶಾಲಾ ನಿಘಂಟು-ಎನ್. ಬಸವಾರಾಧ್ಯ ಮತ್ತು
ಟಿ. ಆರ್. ಮಹಾದೇವಯ್ಯ, 1974.

ಎಲ್ಲಿದ್ದೆಯೋ ಹುಡುಗಿ ಇಷ್ಟು ದಿವಸ ?

ಜಯಸಿಂಹ

ತೀರದಲ್ಲಿದ್ದರೂ ತೋರದ ಹಾಗೆ
ಸುಳಿದರೂ ಸೆಳೆಯುದ ಹಾಗೆ
ಎಲ್ಲಿದ್ದೆಯೆ ಹುಡುಗಿ ಇಷ್ಟು ದಿವಸ ?

ಬೊಗಸೆ ಬೊಗಸೆ ಮರಳ
ಪರ ಪರನೆ ಬಗೆದರೂ,
ಕೈಬೆರಳುಗಳು ನೊಂದವು
ಆದರೂ ಕೊನೆಗೆ–
ತುಂಬಿ ಬಂದಿತು ನೋಡು ತಿಳಿ ನೀರು

ಸರಿದ ರಾತ್ರಿಗಳ
ಕತ್ತಲೆಯೆಲ್ಲವೂ ನನ್ನೆದೆಯಲ್ಲಿ
ಒತ್ತಿ ಬಂದರೂ
ಕರಗಿಸಬಲ್ಲದು ಕಣೇ
ನಿನ್ನ ಕಣ್ಣಿನ ಬೆಳಕು.

ಹತ್ತಿರಿದ್ದೂ ಕೂಡ
ಎಲ್ಲಿದ್ದೆಯೋ ಹುಡುಗಿ
ಇಷ್ಟು ದಿವಸ ?

ಗುಪ್ತಸಾಮ್ರಾಟರ ನಾಣ್ಯಗಳು

ಎಸ್. ಎನ್. ಶಿವರುದ್ರಸ್ವಾಮಿ

೧

ಭಾರತದ ಇತಿಹಾಸದಲ್ಲಿ ನಾಲ್ಕು-ಐದನೆಯ ಶತಮಾನಗಳು ಅತ್ಯಂತ ವೈಭವ ಪೂರ್ಣವಾದ ಕಾಲ. ಇದೇ ಕಾಲದಲ್ಲಿ ಗುಪ್ತಸಾಮ್ರಾಜ್ಯ ಉದಯವಾಗಿ, ಹಿಂದು ಧರ್ಮದ ಪುನರುಜ್ಜೀವನಕ್ಕೆ ಕಾರಣವಾಯಿತು. ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಕಲೆ, ಸಾಹಿತ್ಯ—ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಹೊಸಯುಗವನ್ನಾರಂಭಿಸಿದವರು ಗುಪ್ತಚಕ್ರವರ್ತಿಗಳು. ಮೂರನೆಯ ಶತಮಾನದ ಕೊನೆಯ ಪಾದದಲ್ಲಿ ಪಾಟಲೀಪುತ್ರದ ಸುತ್ತಮುತ್ತಣ ಪ್ರದೇಶದಲ್ಲಿ ಶ್ರೀಗುಪ್ತ ಮತ್ತು ಘಟೋತ್ಕಚ ಗುಪ್ತರು ಒಂದು ಸಣ್ಣ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದರು. ಈ ರಾಜವಂಶ ಮುಂದೆ ಎರಡು ಶತಮಾನಗಳ ಕಾಲ ಹೆಮ್ಮರವಾಗಿ ಬಾಳಿ ಬೆಳಗಿತು. ಘಟೋತ್ಕಚ ಗುಪ್ತನ ಮಗ ಒಂದನೆಯ ಚಂದ್ರಗುಪ್ತ (ಕ್ರಿ.ಶ. 320–335) ಈ ವಂಶದ ಮೊದಲ ಚಕ್ರವರ್ತಿ. ಇವನು ರಾಜ್ಯವನ್ನು ವ್ಯಾಪಕವಾಗಿ ವಿಸ್ತರಿಸಿದ. ಅವನ ಮಗ ಸಮುದ್ರಗುಪ್ತ ಅತ್ಯಂತ ಪ್ರಬಲನಾಗಿ, ಭಾರತದಾದ್ಯಂತ ಅಸಂಖ್ಯಾತ ಯುದ್ಧ ಗಳನ್ನು ನಡೆಸಿ, ಗಡಿಯಾಚೆ ಅವನ ಕೀರ್ತಿ ಹರಡುವಂತೆ ಮಾಡಿದ. ಇವನು ಅಶ್ವಮೇಧ ಯಾಗವನ್ನೂ ನಡೆಸಿದ್ದುಂಟು. ಅವನ ಮಗ ಎರಡನೆಯ ಚಂದ್ರಗುಪ್ತ ಸಾಮ್ರಾಜ್ಯವನ್ನು ಪಶ್ಚಿಮ ವಲಯದಲ್ಲಿ ಮತ್ತಷ್ಟು ವಿಸ್ತರಿಸಿದ. ಇವನ ಮಗ ಒಂದನೇ ಕುಮಾರಗುಪ್ತ ಅಶ್ವಮೇಧ ಯಾಗಗಳನ್ನು ನಡೆಸಿ ಪುನಃ ಸೌರಾಷ್ಟ್ರ ಮತ್ತು ಗುಜರಾತನ್ನು ಗೆದ್ದ. ಅವನ ಆಳ್ವಿಕೆಯ ಅಂತ್ಯಭಾಗದಲ್ಲಿ ಅನಾಗರಿಕರಾದ ಮಧ್ಯಏಷ್ಯಾದ ಹೂಣರ ಧಾಳಿಗಳನ್ನು ಎದುರಿಸಬೇಕಾಯಿತು. ಇವನ ಉತ್ತರಾಧಿಕಾರಿ ಹಾಗೂ ಇವನ ಮಗ ಸ್ಕಂಧಗುಪ್ತ ಸಾಮ್ರಾಜ್ಯವನ್ನು ಹೂಣರ ಧಾಳಿಗಳಿಂದ ರಕ್ಷಿಸುವಲ್ಲಿ ತನ್ನ ಕಾಲವನ್ನೆಲ್ಲ ಕಳೆದ. ಅನಂತರದ ಕಾಲದಲ್ಲಿ ಗುಪ್ತಸಾಮ್ರಾಜ್ಯ ತನ್ನ ಭದ್ರತೆಯನ್ನು ಕಳೆದುಕೊಳ್ಳಲಾರಂಭಿಸಿತು.

ಜೀವನದ ಎಲ್ಲಾ ರಂಗಗಳಲ್ಲೂ ಉತ್ಕರ್ಷಣೆಯನ್ನು ಕಂಡ ಕಾಲ ಗುಪ್ತರದು. ಸೃಜನಶೀಲತೆ ಮತ್ತು ಕ್ರಿಯಾತ್ಮಕತೆ—ಈ ಪದಗಳು ಪೂರ್ಣ ಅರ್ಥದಲ್ಲಿ ಬೆಳಗಿದುದು ಈ ಕಾಲದಲ್ಲೆ. ಜನಮನವು ಇದಕ್ಕೆ ಅನುಗುಣವಾಗಿ ಸ್ಪಂದಿಸುತ್ತಾ ಹೋಯಿತು.

ಗುಪ್ತರ ಯುಗವನ್ನು ಗ್ರೀಸ್‌ನ ಪೆರಿಕ್ಲಿಸ್‌ನ ಕಾಲದೊಂದಿಗೆ ಹೋಲಿಸುವುದುಂಟು. ಆರ್ಥಿಕ ದೃಷ್ಟಿಯಿಂದ ಇದು, ನಿಜಕ್ಕೂ ಸುವರ್ಣಯುಗವೇ. ಈ ಕಾಲದಲ್ಲಿ 'ಸುವರ್ಣವೃಷ್ಟಿ' ಆಯಿತೆನ್ನುವ ಸಮಕಾಲೀನ ಕವಿಯ ಹೇಳಿಕೆ ನಿಜಕ್ಕೂ ಉತ್ಪ್ರೇಕ್ಷೆಯಲ್ಲದ ವರ್ಣನೆ. ಗುಪ್ತ ಚಕ್ರವರ್ತಿಗಳು ಬಹಳಷ್ಟುಮಟ್ಟಿಗೆ ಚಿನ್ನದ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ಬಿಟ್ಟರು. ರಚನೆ ಮತ್ತು ನಿರೂಪಣೆಯಲ್ಲಿ ಗುಪ್ತರ ನಾಣ್ಯಗಳು ಔನ್ನತ್ಯವನ್ನು ತುಂಬಿಕೊಂಡಿವೆ; ಗುಣಮಟ್ಟ ಮತ್ತು ಕಲಾ ಸೌಂದರ್ಯದಲ್ಲಿ ರಾಷ್ಟ್ರೀಯತೆಯ ಅಂಶವನ್ನು ಒಳಗೊಂಡಿವೆ. ರಚನೆ ಮತ್ತು ನಿರೂಪಣೆಯಲ್ಲಿ ಗ್ರೀಕ್, ಶಕ ಮತ್ತು ಕುಷಾಣರ ನಾಣ್ಯಗಳ ಪ್ರಭಾವಕ್ಕೆ ಒಳಗಾಗಿದ್ದರೂ, ಇವರ ನಾಣ್ಯಗಳು ಭಾರತೀಕರಣದತ್ತ ಹೋದುದನ್ನು ಕಾಣುತ್ತೇವೆ. ಅತಿ ಕ್ಷಿಪ್ರಕಾಲದಲ್ಲಿ ಅವು ಪೂರ್ಣವಾಗಿ ದೇಶೀಯ ನಾಣ್ಯಗಳಾದುವು. ಅವರ ನಾಣ್ಯಗಳ ಭಾರತೀಕರಣ ಅವರ ಕಾಲಾನುಕ್ರಮ ಜೋಡಣೆಗೆ ಸಹಕಾರಿಯಾಗುತ್ತದೆ—ಎನ್ನುವ ಆರ್. ಕೆ. ಮುಖರ್ಜಿಯವರ ಮಾತು ಒಪ್ಪತಕ್ಕದ್ದೆ. ಗುಪ್ತರ ನಾಣ್ಯಗಳ ಆಲೇಖ, ಗುಣಮಟ್ಟ, ತೂಕ ಮತ್ತು ರಚನೆಗಳಲ್ಲಿ ಹಲವಾರು ಮಾದರಿಗಳನ್ನು ಕಾಣಬಹುದು. ಪ್ರತಿಯೊಬ್ಬ ಗುಪ್ತಚಕ್ರವರ್ತಿಯೂ ಹಲವು ಹೊಸ ಮಾದರಿಗಳನ್ನು ಜಾರಿಗೆ ತಂದರು. ಅವರ ನಾಣ್ಯಗಳಲ್ಲಿ ಮೊದಲಿಗೆ ಭಾರತೀಕರಣವನ್ನಾರಂಭಿಸಿದವನು ಸಮುದ್ರಗುಪ್ತ. ವಿನ್ಸೆಂಟ್ ಸ್ಮಿತ್‌ನು ಗುಪ್ತರ ನಾಣ್ಯಗಳಲ್ಲಿ ಸ್ವೋಪಜ್ಞತೆ ಇಲ್ಲವೆಂದೂ, ಅವು ರೋಮನ್ ನಾಣ್ಯಗಳ ತದ್ರೂಪವೆಂದು ಹೇಳುತ್ತಾನೆ. ಆದರೆ ಇದರಲ್ಲಿ ಸತ್ಯಾಂಶ ಇದ್ದಂತೆ ತೋರುವುದಿಲ್ಲ. ಸ್ಮಿತ್‌ನ ಟೀಕೆಯನ್ನು ಅಲೆನ್, ಆಲ್ಟೇಕರ್—ಇನ್ನೂ ಹಲವಾರು ವಿದ್ವಾಂಸರು ಕಟುವಾಗಿ ಟೀಕಿಸುತ್ತಾರೆ. ಅದೇನೆ ಇರಲಿ, ಗುಪ್ತರು ಭಾರತೀಯ ನಾಣ್ಯಶಾಸ್ತ್ರದಲ್ಲಿ ಹೊಸ ಪರಂಪರೆಯನ್ನು ಆರಂಭಿಸಿದರು. ಎಲ್ಲಾ ಮಾನವೀಯ ಕ್ಷೇತ್ರಗಳಲ್ಲೂ ಪುನಶ್ಚೇತನ ಮೂಡಿದಂತೆ ನಾಣ್ಯ ಕ್ಷೇತ್ರದಲ್ಲೂ ಆಯಿತು.

೨

ಗುಪ್ತರ ನಾಣ್ಯಗಳು ಉತ್ತರ ಭಾರತದಲ್ಲಿ ವ್ಯಾಪಕವಾಗಿ ದೊರೆತಿವೆ. ಸುಮಾರು ಇಪ್ಪತ್ನಾಲ್ಕರಷ್ಟು ಗುಪ್ತನಾಣ್ಯಗಳ ನಿಕ್ಷೇಪಗಳು, ಅವರ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಅಸಾಧಾರಣ ಬೆಳಕನ್ನು ಚೆಲ್ಲಿವೆ. 1783ರಲ್ಲಿ ದೊರೆತ ಅವರ ಕಾಲಿಘಾಟ್ ನಾಣ್ಯಸಂಗ್ರಹವೇ ಮೊದಲನೆಯದು. ಗುಪ್ತರ ನಾಣ್ಯಗಳ ಪ್ರಮುಖ ಇಡುಗಂಟುಗಳು ಭರ್ಸಾರ್ (1851), ಜೆಸ್ಸೂರ್ (1852), ಹೂಗ್ಲಿ (1883), ತಂಡ (1885), ಕೊಟವಾ (1885), ಬಸ್ತಿ (1887), ಹಾಜಿಪ್ಪರ್ (1893), ತೆಕ್ರಿದೆಬ್ರ (1910)—ಮುಂತಾದ ಕಡೆಗಳಲ್ಲಿ ದೊರೆತಿವೆ. ಆ ಕಾಲದ ಖ್ಯಾತ ನಾಣ್ಯತಜ್ಞರು ನಡೆಸಿದ ಸಂಶೋಧನೆಗಳನ್ನು ಅಲೆನ್ನರು Catalogue of

the coins of the Gupta Dynasties—ಎಂಬ ಗ್ರಂಥದಲ್ಲಿ ಸಂಪಾದಿಸಿ, 1914 ರಲ್ಲಿ ಪ್ರಕಟಿಸಿದರು. ಅನಂತರ ಕಸರ್ವ (1914), ಮಿತತಾಲ್ (1915), ಸಕೋರಿ (1914), ಕುಮಾರ್‌ಖಾನ್ (1953), ಬಯಾನ (1946)—ಇನ್ನೂ ಹಲವಾರು ಸ್ಥಳಗಳಲ್ಲಿ ಗುಪ್ತರ ನಾಣ್ಯಗಳ ಇಡುಗಂಟುಗಳು ದೊರಕಿ ಬಂದವು. ಇವುಗಳಲ್ಲೆಲ್ಲ 1821ಕ್ಕೂ ಹೆಚ್ಚು ನಾಣ್ಯಗಳಿರುವ ಬಯಾನ ನಾಣ್ಯ ನಿಕ್ಷೇಪವೇ ಅತ್ಯಂತ ದೊಡ್ಡದು. ಈ ಇಡುಗಂಟಿನ ಮೇಲೆ ಸಂಶೋಧನೆ ನಡೆಸಿ ಅಲ್ಟೇಕರರು 1954 ರಲ್ಲಿ ಉದ್ಗ್ರಂಥವೊಂದನ್ನು ಪ್ರಕಟಿಸಿದರು. ಜೆ. ಅಲೆನ್, ಸಿ. ಜೆ. ರ್ಯಾಪ್ಸನ್, ಕನ್ನಿಂಗ್‌ಹ್ಯಾಂ, ವಿ. ಎ. ಸ್ಮಿತ್, ಸರ್. ಇ. ಸಿ. ಬಯ್ಲ್ಲೆ. ಎಸ್. ಕೆ. ಭಟ್ಟಸಾಲಿ, ಪರಮೇಶ್ವರಿಲಾಲ್ ಗುಪ್ತ. ಆರ್. ಕೆ. ಮುಖರ್ಜಿ, ಎ. ಕೆ. ನಾರಾಯಣ, ಎಸ್. ಕೆ. ಸರಸ್ವತಿ—ಇನ್ನೂ ಹಲವಾರು ವಿದ್ವಾಂಸರು ಗುಪ್ತನಾಣ್ಯಕ್ಷೇತ್ರದಲ್ಲಿ ದುಡಿದು ಹೆಸರು ಸಂಪಾದಿಸಿದರು.

ಆರಂಭದ ಗುಪ್ತಚಕ್ರವರ್ತಿಗಳ ನಾಣ್ಯಗಳು ಈಗಿನ ಉತ್ತರ ಪ್ರದೇಶದಲ್ಲಿ ಹೆಚ್ಚು ದೊರೆತಿವೆ. ಇದರಿಂದ ಈ ಪ್ರದೇಶದಲ್ಲಿ ಅವರು ಹೆಚ್ಚು ನಿಕಟ ಸಂಪರ್ಕವನ್ನಿಟ್ಟುಕೊಂಡಂತೆ ತೋರುತ್ತದೆ. ಅವರ ನಾಣ್ಯಸಂಗ್ರಹಗಳು ಭಾರತದ ಪೂರ್ವ ವಲಯಕ್ಕಿಂತ ಪಶ್ಚಿಮ ವಲಯದಲ್ಲೇ ಹೆಚ್ಚು ದೊರೆತಿರುವುದು ಗಮನಿಸಬಹುದಾದ ಮತ್ತೊಂದು ಸಂಗತಿ. ಅವರ ಸಂಪರ್ಕ ಪಶ್ಚಿಮ ವಲಯದಲ್ಲಿ ಹೆಚ್ಚಿರಬಹುದು. ಅವರ ಶಾಸನಗಳು ಈ ಮಾತಿಗೆ ಇಂಬುಕೊಡುತ್ತವೆ. ಈ ಕೆಳಗಿನ ಅಂಕಿ ಅಂಶಗಳನ್ನು ಗಮನಿಸಬಹುದು:

ನಾಣ್ಯಗಳು ದೊರೆತ ಪ್ರದೇಶ	ಸಂಗ್ರಹಗಳ ಹೆಸರುಗಳು
ಉತ್ತರ ಪ್ರದೇಶ	ಭರ್ಸಾರ್ (ವಾರಣಾಸಿ), ತಾಂಡ (ಫೈಜಾಬಾದ್) ಕೋಟವ (ಗೋರಖಪುರ್), ಅಲಹಾಬಾದ್, ಬಸ್ತಿ, ಕಸರ್ವ (ಬಲ್ಲಿಯ), ತೆಕ್ರಿದೆಬ್ರ (ಮಿರ್ಜಾಪುರ್), ಮದನಕೋಲ (ಜಾನ್‌ಪುರ್), ಗೋಪಾಲಪುರ್ (ಗೋರಖಪುರ್), ಝುಸಿ (ಅಲಹಬಾದ್), ಜಾನ್‌ಪುರ್, ರಷ್ತಿ, ದೇವತ್ತಾ (ಬಲ್ಲಿಯ), ಕುಸಂಭಿ,
ಬಿಹಾರ	ಹಾಜಿಪುರ, ಬಂಕಾ (ಬಾಗಲ್‌ಪುರ)
ಬಂಗಾಳ	ಕಾಲಿಘಾಟ್, ಹೂಗ್ಲಿ,
ಪಂಜಾಬ್	ಮಿತತಾಲ್ (ಹಿಸ್ಸಾರ್)
ರಾಜಸ್ಥಾನ	ಬಯಾನ
ಮಧ್ಯಪ್ರದೇಶ	ಪಟ್ಟನ್, ಸಕೋರಿ, ಬಮ್ನಾಲ
ಗುಜರಾತ್	ಕುಮಾರ್‌ಖಾನ್

ಗುಪ್ತರು ತಮ್ಮ ಕಾಲದಲ್ಲಿ ನಡೆದ ಪ್ರಮುಖ ರಾಜಕೀಯ ಘಟನೆಗಳನ್ನು ತಮ್ಮ ನಾಣ್ಯಗಳಲ್ಲಿ ತೋರಿಸಿದ್ದುಂಟು. ಧಾರ್ಮಿಕ ಭಾವನೆಗಳು, ಅರಸನ ವಿವಿಧ ಅಭಿರುಚಿಗಳು, ಆಸ್ಥಾನದ ಸಂಪ್ರದಾಯ — ಇವೆಲ್ಲವೂ ಅವರ ನಾಣ್ಯಗಳಿಂದಲೇ ತಿಳಿಯುತ್ತದೆ. ಸಮುದ್ರಗುಪ್ತನು ಟಂಕಿಸಿದ ನಾಣ್ಯಗಳಿಂದ ಅಸಾಧಾರಣ ಯುದ್ಧ ಚಟುವಟಿಕೆಗಳನ್ನು ಕಾಣಬಹುದು. ಗುಪ್ತರ ಆಸ್ಥಾನದ ಸನ್ನಿವೇಶ ಎರಡನೆಯ ಚಂದ್ರಗುಪ್ತನ ಕಾಲಕ್ಕೆ ಬಹಳಷ್ಟು ನಯ-ನಾಜೂಕಿನಿಂದ ಕೂಡಿದ್ದನ್ನು ಅವನ ನಾಣ್ಯಗಳಿಂದ ತಿಳಿಯಬಹುದು. ಅರಸನನ್ನು ವಿವಿಧ ಭಾವ–ಭಂಗಿಗಳಲ್ಲಿ ಚಿತ್ರಿಸಲಾಗುತ್ತಿತ್ತು. ಆರಂಭದ ಅರಸರ ನಾಣ್ಯಗಳಲ್ಲಿ, ಅವನು ಉದ್ದವಾದ ಅಂಗಿಯನ್ನೂ, ಇಜಾರವನ್ನೂ ಧರಿಸಿರುತ್ತಿದ್ದ. ಇದರಲ್ಲಿ ಕುಷಾಣರ ಪ್ರಭಾವ ವನ್ನು ಕಾಣಬಹುದು. ಅನಂತರದ ನಾಣ್ಯಗಳ ಮೇಲೆ ಅವನು ಭಾರತೀಯ ಉಡುಪಾದ ಧೋತಿಯನ್ನು ಧರಿಸಲಾರಂಭಿಸಿದ. ಕೆಲವೊಮ್ಮೆ ಬರಿಯ ಸೊಂಟ ಬಟ್ಟೆಯನ್ನು ಧರಿಸಿರುವುದನ್ನು ಕಾಣಬಹುದು. ನಾಣ್ಯಗಳ ಮೇಲೆ ಗರುಡ ಧ್ವಜವೂ ಕಾಣಸಿಗುತ್ತದೆ. ಅವರ ನಾಣ್ಯಗಳ ಮೇಲೆ ಬಿಲ್ಲನ್ನು ಹಿಡಿದಿರುವ ಅರಸನ ಚಿತ್ರ ತೀರ ಸಾಮಾನ್ಯವಾದುದು. ಅವನು ಕತ್ತಿ, ಬರ್ಜಿ, ಗಂಡುಗೊಡಲಿ —ಇನ್ನೂ ಹಲವಾರು ಆಯುಧಗಳನ್ನು ಹಿಡಿದಿರುವುದುಂಟು. ಸಮುದ್ರಗುಪ್ತ ಮತ್ತು ಒಂದನೇ ಕುಮಾರ ಗುಪ್ತರ ನಾಣ್ಯಗಳ ಮೇಲೆ ಅರಸ ವೀಣೆನುಡಿಸುತ್ತಿರುವು ದನ್ನು ಕಾಣಬಹುದು. ಅವನು ಪದ್ಮಾಸನದಲ್ಲಿ ಕುಳಿತು, ಭಾರತೀಯ ವಸ್ತ್ರ ಗಳನ್ನೂ ಹಾಕಿಕೊಂಡಿದ್ದಾನೆ. ಗುಪ್ತರ ನಾಣ್ಯಗಳು 'ಶಿಕಾರಿ' ಮತ್ತು 'ಸವಾರಿ' ಗಳ ಮೇಲೂ ಬೆಳಕು ಚೆಲ್ಲುತ್ತವೆ. ಸಮುದ್ರಗುಪ್ತ ಹುಲಿಯನ್ನು ಕೊಲ್ಲುತ್ತಿರು ವಂತೆ, ಅವನ ಮಗ ಚಂದ್ರಗುಪ್ತ ಸಿಂಹವನ್ನೂ ಕೊಲ್ಲುತ್ತಿರುವಂತೆ ಚಿತ್ರಿಸಲಾಗಿದೆ. ಎರಡನೇ ಚಂದ್ರಗುಪ್ತ ಮತ್ತು ಅವನ ಮಗ ಕುಮಾರ ಗುಪ್ತರ ನಾಣ್ಯಗಳ ಮೇಲೆ ಅರಸ ಅಶ್ವರೋಹಿಯಾಗಿದ್ದರೆ, ಇನ್ನುಳಿದ ಕೆಲ ಅರಸರ ನಾಣ್ಯಗಳ ಮೇಲೆ ಗಜಾರೋಹಿಯಾಗಿರುವುದು ಕಂಡುಬರುತ್ತದೆ. ಕೆಲ ನಾಣ್ಯಗಳ ಮೇಲೆ ಕುಳ್ಳನೊಬ್ಬ ಅರಸನೊಂದಿಗೆ ಆತಪತ್ರವನ್ನು ಹಿಡಿದ್ದಾನೆ. ಸಮುದ್ರಗುಪ್ತ ಮತ್ತು ಒಂದನೇ ಕುಮಾರ ಗುಪ್ತರು ದಕ್ಷಿಣೆ ನೀಡುವುದಕ್ಕಾಗಿಯೇ ನಾಣ್ಯಗಳನ್ನು ಚಲಾವಣೆಗೆ ತಂದರು. ಇವುಗಳ ಮೇಲೆ ಯಜ್ಞಾಶ್ವವನ್ನು ಯೂಪದ ಬಳಿ ನಿಲ್ಲಿಸಿರುವಂತೆ ಚಿತ್ರಿಸಲಾಗಿದೆ. ನಾಣ್ಯಗಳ ಹಿಮ್ಮುಖದಲ್ಲಿ ಸಾಮಾನ್ಯವಾಗಿ ಹಿಂದೂ ದೇವ–ದೇವಿಯರನ್ನು ಚಿತ್ರಿಸಲಾಗಿದೆ. ಲಕ್ಷ್ಮಿ, ಸಿಂಹದ ಮೇಲಿರುವ ದುರ್ಗಿ, ಮಕರದ ಮೇಲಿರುವ ಗಂಗೆ, ಕಾರ್ತಿಕೇಯ, ಗರುಡ—ಇನ್ನೂ ಹಲವಾರು ದೇವತಾ ಚಿತ್ರಗಳು ಅವರ ನಾಣ್ಯಗಳ ಮೇಲೆ ಕಾಣ ಸಿಗುತ್ತವೆ. ಅವರ ನಾಣ್ಯಗಳು ಅರಸ–ಅರಸಿಯರ ಚಿತ್ರಗಳನ್ನೂ ಹೊಂದಿವೆ. ಒಂದನೇ ಚಂದ್ರಗುಪ್ತ,

ಒಂದನೇ ಕುಮಾರಗುಪ್ತ ಮತ್ತು ಸ್ಕಂದ ಗುಪ್ತರ ಅಂತಹ ನಾಣ್ಯಗಳನ್ನು ಚಲಾವಣೆಗೆ ತಂದರು. ಗುಪ್ತರ ಶಿಲ್ಪಕಲೆಯ ಉತ್ತಮ ನಮೂನೆಗಳಾಗಿವೆ.

ಗುಪ್ತರ ನಾಣ್ಯಗಳು ಅನೇಕ ಚಿಹ್ನೆಗಳನ್ನು ಎಡಭಾಗದಲ್ಲಿ ಹೊಂದಿವೆ. ಇಂದಿಗೂ ಅವುಗಳ ಪ್ರಾಮುಖ್ಯ ಹಾಗೂ ಅರ್ಥವನ್ನು ನಿಕರವಾಗಿ ಅರಿಯಲು ಸಾಧ್ಯವಾಗಿಲ್ಲ. ಈ ಚಿಹ್ನೆಗಳು ಗುಪ್ತರ ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳ ಮೇಲಿಲ್ಲದಿರುವುದು ಗಮನಾರ್ಹವಾದ ಅಂಶ. ಇವು ಬ್ಯಾಕ್ಟ್ರೊ ಮತ್ತು ಭಾರತೀಯ ಗ್ರೀಕರ, ಕುಷಾಣರ, ಸಿಥಿಯನ್ನರ ಹಾಗೂ ಪಾರ್ಥಿಯನ್ನರ ಪ್ರಭಾವದಿಂದ ಒತ್ತಲಾಗಿದೆ. ಇವು 'ಕ, ಶಿ, ತಿ, ಮಿ, ಖ' —ಮುಂತಾದ ಖರೋಷ್ಠಿ ಕೂಡಕ್ಷರಗಳೊಂದಿಗೆ ಸೇರಿವೆ.

ಅವರ ನಾಣ್ಯಗಳ ಮೇಲೆ ಚಕ್ರವರ್ತಿಗಳನ್ನು ಬಹಳಷ್ಟು ಮಟ್ಟಿಗೆ 'ಪರಾಕ್ರಮ', 'ಪರಮ ಭಾಗವತ', 'ವಿಕ್ರಮ', 'ಮಹೇಂದ್ರ'—ಮುಂತಾದ ಬಿರುದುಗಳೊಂದಿಗೆ ಪರಿಚಯಿಸಲಾಗಿದೆ. ಅದರ ಕೆಲವೊಮ್ಮೆ ಪೂರ್ಣ ಹೆಸರುಗಳೊಂದಿಗೆ ಮುದ್ರಿಸಲಾಗಿದೆ.

ಗುಪ್ತರು ತಮ್ಮ ನಾಣ್ಯಗಳ ತಯಾರಿಕೆಯಲ್ಲಿ ಉನ್ನತ ಹಾಗೂ ಕೀಳು ಲೋಹಗಳೆರಡನ್ನೂ ಉಪಯೋಗಿಸಿದರು. ಆರಂಭದ ಚಕ್ರವರ್ತಿಗಳು ಚಿನ್ನ ಹಾಗೂ ತಾಮ್ರದಲ್ಲಿ ಟಂಕಿಸಿದರು. ಚಂದ್ರಗುಪ್ತ ಬೆಳ್ಳಿಯಲ್ಲೂ ಟಂಕಿಸಿದ. ಪ್ರಾಚೀನ ಕಾಲದಲ್ಲಿ ನಾಣ್ಯ ತಯಾರಕರು ನಿಕರವಾದ ತೂಕಕ್ಕೆ ಗಮನಕೊಟ್ಟಂತೆ ಕಂಡು ಬರುವುದಿಲ್ಲ. ಈ ಪದ್ಧತಿಯನ್ನು ರೋಮನ್ನರ ಕಾಲದಿಂದಲೂ ಕಾಣಬಹುದು. ಕುಷಾಣರ ನಾಣ್ಯಗಳಲ್ಲೂ ಅಷ್ಟೆ. ಗುಪ್ತರ ನಾಣ್ಯಗಳಲ್ಲೂ ಈ ಕೊರತೆ ಎದ್ದು ಕಾಣುತ್ತದೆ. ಅವರ ನಾಣ್ಯಗಳು 1 ರಿಂದ 5 ಗ್ರೈನುಗಳವರೆಗೂ ವ್ಯತ್ಯಾಸ ಹೊಂದುತ್ತವೆ. ಗುಪ್ತರ ಸಾಮಾನ್ಯ ಮಟ್ಟದ ನಾಣ್ಯಗಳು ಸರಾಸರಿ 140 ಗ್ರೈನ್ ತೂಗುತ್ತವೆ.

ರಚನೆ ಹಾಗೂ ವಿನ್ಯಾಸಗಳಲ್ಲಿ ಗುಪ್ತರ ನಾಣ್ಯಗಳು ತೀರ ಉತ್ತಮವೆನಿಸಿವೆ. ಅನಂತರದ ಕಾಲದಲ್ಲಿ ರಾಜಕೀಯ ಅಭದ್ರತೆ ಉಂಟಾದಂತೆ ನಾಣ್ಯಗಳ ರಚನೆ ಹಾಗೂ ವಿನ್ಯಾಸದಲ್ಲಿ ಕೆಡುತ್ತಾ ಹೋಯಿತು. ಒಂದನೇ ಕುಮಾರಗುಪ್ತನ ಉತ್ತರಾಧಿಕಾರಿಗಳ ಕಾಲದಲ್ಲಿ ಕಲಾತ್ಮಕ ನಿರೂಪಣೆಯಲ್ಲಿ ಚ್ಯುತಿಯುಂಟಾದುದನ್ನು ಕಾಣುತ್ತೇವೆ. ಅನಂತರದ ಕಾಲದಲ್ಲಿ ಗುಪ್ತರ ನಾಣ್ಯಗಳಲ್ಲಿ ಕೀಳು ಲೋಹಗಳು ಹೆಚ್ಚಿನ ಅಂಶದಲ್ಲಿ ಸೇರ್ಪಡೆಯಾಗಿರುವುದು ಕಂಡು ಬರುತ್ತದೆ. ಇದು ಪ್ರತಿ ತಲೆಮಾರಿನಲ್ಲೂ ಹೆಚ್ಚುತ್ತಾ ಹೋಯಿತು. ಒಂದನೆಯ ಚಂದ್ರಗುಪ್ತನ ಕಾಲದಲ್ಲಿ ಅನ್ಯಲೋಹದ ಸೇರ್ಪಡೆ 9% ಇದ್ದರೆ, ಸಮುದ್ರಗುಪ್ತನ ಕಾಲದಲ್ಲಿ ಇದು 10% ನಿಂದ 15%

ನವರೆವಿಗೂ ಹೆಚ್ಚಿತು. ಒಂದನೆ ಕುಮಾರಗುಪ್ತ, ಸ್ಕಂದಗುಪ್ತ, ಬುಧಗುಪ್ತ, ವಿನಯಗುಪ್ತ, ಮುಂತಾದವರ ಕಾಲದಲ್ಲಿ ಅನ್ಯಲೋಹಗಳು 20% ರಿಂದ 30% ನವರೆವಿಗೆ ಬೆರೆತಿರುವುದು ಕಂಡು ಬರುತ್ತದೆ. ನರಸಿಂಹಗುಪ್ತನ ಕಾಲದಲ್ಲಿ ಇದು 46%ಗೆ ಹೆಚ್ಚಿತು. ಗುಪ್ತರ ಕೊನೆಯ ಚಕ್ರವರ್ತಿ ವಿಷ್ಣುಗುಪ್ತನ ಕಾಲದಲ್ಲಿ ಇದು ಮತ್ತೊಷ್ಟು ಹೆಚ್ಚಾಯಿತು. ಅವನ ನಾಣ್ಯಗಳಲ್ಲಿ ಕೇವಲ 43% ಮಾತ್ರ ಚಿನ್ನವಿದೆ. ಕೀಳು ಲೋಹ ಬೆರೆತ ಚಿನ್ನದ ನಾಣ್ಯಗಳು ಸಾಮಾನ್ಯವಾಗಿ ಅನಂತರದ ಕಾಲದವು.

೨

ಗುಪ್ತವಂಶದ ಮೊದಲ ಚಕ್ರವರ್ತಿಯಾದ ಒಂದನೆಯ ಚಂದ್ರಗುಪ್ತನು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದ. ಈ ನಾಣ್ಯಗಳ ಮೇಲೆ ಚಂದ್ರಗುಪ್ತ ಮತ್ತು ಅವನ ಪಟ್ಟಮಹಿಷಿಯ ಚಿತ್ರಗಳೂ, ಹೆಸರುಗಳೂ ಇವೆ. ಅದರ ಮಾದರಿಯನ್ನಿಲ್ಲಿ ಕೊಟ್ಟಿದೆ.

ಚಂದ್ರಗುಪ್ತ-ಕುಮಾರದೇವಿ ಮಾದರಿ :—

ಮುಮ್ಮುಖ : ಅರಸ-ಅರಸಿಯರು ಮುಖಾಮುಖಿಯಾಗಿ ನಿಂತಿದ್ದಾರೆ. ಆಲೇಖ : "ಶ್ರೀ ಕುಮಾರದೇವಿ" ಎಡಭಾಗದಲ್ಲಿದೆ ; "ಚಂದ್ರ ಗುಪ್ತ" ಅರಸನ ಬಲ ತೋಳಿನ ಕೆಳಗಿದೆ.

ಹಿಮ್ಮುಖ : ಸಿಂಹದ ಮೇಲಿರುವ ದೇವತೆಯ ಎಡಗೈಲಿ ಅಕ್ಷಯ ಪಾತ್ರೆ ಇದೆ ; ಬಲಗೈಲಿ ಪಾಶವಿದೆ.

ಆಲೇಖ :

ಕೇವಲ ಸ್ಥಳೀಯ ಅರಸರಾಗಿದ್ದ ಗುಪ್ತರು, ಒಂದನೆಯ ಚಂದ್ರಗುಪ್ತನ ಕಾಲದಲ್ಲಿ ಅತ್ಯಂತ ಪ್ರಬಲರಾಗಿದ್ದ ಲಿಚ್ಛವಿ ವಂಶಸ್ಥರೊಂದಿಗೆ ವೈವಾಹಿಕ ಸಂಬಂಧ ನಡೆಸಿ ಪ್ರಬುದ್ಧಮಾನಕ್ಕೆ ಬಂದರು. ಈ ಸನ್ನಿವೇಶದ ಸ್ಮರಣಾರ್ಥವಾಗಿ ಚಂದ್ರಗುಪ್ತ ಮೇಲಿನ ಮಾದರಿಯನ್ನು ಚಲಾವಣೆಗೆ ತಂದ—ಎಂಬುದು ಬಹು ಜನ ವಿದ್ವಾಂಸರ ತರ್ಕ. ಹಲವರು ಸಮುದ್ರಗುಪ್ತನೇ ತನ್ನ ತಂದೆತಾಯಿಯರ ನೆನಪಿಗೆ ಈ ನಾಣ್ಯಗಳನ್ನು ಟಂಕಿಸಿದನೆಂದು ತಿಳಿಯುತ್ತಾರೆ. ಈ ವಾದ ಇನ್ನೂ ಮುಂದು ವರೆಯುತ್ತಿದೆ.

'ಚಂದ್ರಗುಪ್ತ–ಕುಮಾರದೇವಿ' ನಾಣ್ಯ ಮಾದರಿ ನಮ್ಮ ಆಸಕ್ತಿಯನ್ನು ಕೆರಳಿಸುವಂತದ್ದು. ಇದು ಕೆಲ ಹೊಸ ಅಂಶಗಳನ್ನು ಒಳಗೊಂಡು, ಉಳಿದೆಲ್ಲ ಗುಪ್ತ ನಾಣ್ಯಗಳ ಮಾದರಿಗಳಿಗಿಂತ ತೀರ ಭಿನ್ನವಾಗಿದೆ. ಇದು ಸೀಮಿತ ಪ್ರದೇಶ

ದಲ್ಲಿ ಮಾತ್ರ ದೊರಕಿವೆ, ಜೊತೆಗೆ ಕುಷಾಣರ ಅಥವಾ ಇನ್ನಿತರ ಅರಸರ ನಾಣ್ಯಗಳ ಪ್ರಭಾವ ಇದರಲ್ಲಿಲ್ಲ. ಇದರನಂತರ ಚಲಾವಣೆಗೆ ಬಂದ ಸಮುದ್ರ ಗುಪ್ತನ ಧ್ವಜ ಮಾದರಿ ನಾಣ್ಯವು ವ್ಯಾಪಕವಾಗಿ ದೊರೆತಿದೆ, ಹಾಗೂ ಕುಷಾಣನ ಪ್ರಭಾವಕ್ಕೆ ಗುರಿಯಾಗಿದೆ. ಇದು ಗಮನಿಸಬಹುದಾದ ಅಂಶ. ಗುಪ್ತ ಸಾಮ್ರಾಜ್ಯದ ಆರಂಭದ ಕಾಲದಲ್ಲಿ ಒಂದನೆಯ ಚಂದ್ರಗುಪ್ತ ಅಥವಾ ಸಮುದ್ರಗುಪ್ತ ಚಿನ್ನದ ನಾಣ್ಯಗಳನ್ನು ಟಂಕಿಸಲು ಪ್ರಾರಂಭಿಸಿದುದು ಸಹಜವೇ. ಸ್ಥಳೀಯ ಕಲಾಕಾರರಿಗೆ ನಾಣ್ಯ ಟಂಕಿಸುವ ಅನುಭವವಿರಲಿಲ್ಲ. ಅವರಿಗೆ ಕುಷಾಣ ಪರಂಪರೆಯ ಪರಿಚಯವಂತೂ ಇರಲಿಲ್ಲ. ಆದ್ದರಿಂದ ಕುಷಾಣರ ಬರಿಯ ಪ್ರಭಾವವನ್ನು ಈ ಮಾದರಿಯಲ್ಲಿ ಕಾಣಲಾಗದು ಹಾಗೂ ಇದು ಬರಿಯೇ ಸ್ಥಳೀಯ ನಾಣ್ಯವಾಗಿದೆ. ಸಮುದ್ರ ಗುಪ್ತನ ಕಾಲದಲ್ಲಿ ಸಾಮ್ರಾಜ್ಯ ವಿಸ್ತಾರಗೊಂಡಂತೆ, ವಾಯುವ್ಯ ಭಾಗದಲ್ಲಿದ್ದ ನಾಣ್ಯ ತಯಾರಕರನ್ನು ಆಹ್ವಾನಿಸಿದ. ಈ ಮಾದರಿಯ ನಂತರದ ನಾಣ್ಯಗಳಲ್ಲಿ ಕುಷಾಣರ ಪ್ರಭಾವ ಕಾಣಿಸಲು ಇದೇ ಕಾರಣವಿರಲೂಬಹುದು. ಒಟ್ಟಿನಲ್ಲಿ ಇದು ಸಮುದ್ರಗುಪ್ತನ ಧ್ವಜ ಮಾದರಿಗಿಂತ ಹಿಂದಿನದು– ಎನ್ನುವುದರಲ್ಲಿ ಸಂಶಯವಿಲ್ಲ.

ಈ ಮಾದರಿಯ ಕರ್ತೃವಿನ ಬಗ್ಗೆ ವಾದ ಏನೇ ಇರಲಿ, ಇದನ್ನು ಚಲಾವಣೆಗೆ ತಂದವನು ಸಮುದ್ರಗುಪ್ತನೆಂದು ಹೇಳಬಹುದು. ಇದು ಬಹುಜನ ವಿದ್ವಾಂಸರ ತರ್ಕ. ದ್ವ್ಯಾಮುಷ್ಯಾಣನಾದ ಇವನು ತನಗೆ ಪ್ರತಿಸ್ಪರ್ಧಿಗಳಿದ್ದ ಸೋದರರ ನಡುವೆ, ಅತಿಬಲನಾಗಿ ಸಿಂಹಾಸನವನ್ನು ಭದ್ರಪಡಿಸಿಕೊಳ್ಳಲು ಈ ನಾಣ್ಯವನ್ನು ಚಲಾವಣೆಗೆ ತಂದಿರಬಹುದು.

೪

ಒಂದನೆಯ ಚಂದ್ರಗುಪ್ತ-ಕುಮಾರ ದೇವಿಯರ ಮಗನಾದ ಸಮುದ್ರಗುಪ್ತ, ತನ್ನ ತಂದೆಯನಂತರ ಕ್ರಿ.ಶ. 335ರ ಸುಮಾರಿಗೆ ಅಧಿಕಾರಕ್ಕೆ ಬಂದ. ಹರಿಷೇಣನ ಅಲಹಬಾದ್ ಪ್ರಶಸ್ತಿ ಅವನ ದೀರ್ಘ ಸಾಧನೆಗಳ ಬಗ್ಗೆ ಸುವಿವರವಾದ ಮಾಹಿತಿಯನ್ನು ನೀಡುತ್ತದೆ. ಭಾರತದ ಇತಿಹಾಸದಲ್ಲಿ ಹೊಸ ಮನ್ವಂತರವನ್ನು ಆರಂಭಿಸಿದವನು ಇವನು. ಅವನ ಜೀವನ, ಆಳ್ವಿಕೆಯ ಬಗ್ಗೆ ಅವನ ಚಿನ್ನದ ನಾಣ್ಯಗಳು ಹೊಸ ಸಂಗತಿಗಳನ್ನು ನೀಡುತ್ತವೆ. ಅವನ ನಾಣ್ಯಗಳು ಸಾಮ್ರಾಜ್ಯದ ಪ್ರಚ್ಛನ್ನ ಶಕ್ತಿ, ಐಶ್ವರ್ಯ, ವೈಭವಗಳ ಬಗ್ಗೆ ಮಾಹಿತಿಯನ್ನು ಕೊಡುವುದಲ್ಲದೆ, ಭೌತಿಕ ರೂಪ, ಮತ್ತು ಉನ್ನತ ವ್ಯಕ್ತಿತ್ವದ ಬಗ್ಗೆಯೂ ವಿವರಣೆಯನ್ನು ಕೊಡುತ್ತದೆ. ಅವನ ಮೂರು ನಾಣ್ಯಗಳ ಮಾದರಿಗಳಲ್ಲಿ ಅವನನ್ನು ಸೈನಿಕ ಪೋಷಾಕಿನಲ್ಲಿ ಚಿತ್ರಿಸಲಾಗಿದೆ. ಕೆಲವು ನಾಣ್ಯಗಳ ಮೇಲೆ ಬಿಲ್ಲು-ಬಾಣಗಳನ್ನು ಹಿಡಿದಿರುವಂತೆ ಚಿತ್ರಿಸಿರುವುದರ ಜೊತೆಗೆ, 'ಅಜಯನಾಗಿ ಭೂಲೋಕವನ್ನು ಗೆದ್ದು ಸತ್ಕಾರ್ಯಗಳಿಂದ

ಸ್ವರ್ಗವನ್ನು ಗೆಲ್ಲುತ್ತಾ'ನೆಂದು ವರ್ಣಿಸಲಾಗಿದೆ. ಒಂದೆಡೆ ಹುಲಿಯನ್ನು ಕೊಲ್ಲುತ್ತಿದ್ದರೆ, ಮತ್ತೊಂದೆಡೆ ವೀಣೆಯನ್ನು ನುಡಿಸುತ್ತಿದ್ದಾನೆ. ಇವೆಲ್ಲವು ಅವನ ನಿಜ ಜೀವನದಿಂದ ರೂಪಿಸಿದ ಚಿತ್ರಗಳು. ಸಮುದ್ರಗುಪ್ತ ಅಶ್ವಮೇಧ ಯಾಗ ಮಾಡಿ ಅಖಂಡ ಭಾರತವನ್ನೇ ಗೆದ್ದದ್ದುಂಟು. ಇದನ್ನು ಅವನ ಅಶ್ವಮೇಧ ಮಾದರಿಯ ನಾಣ್ಯಗಳು ಸೂಚಿಸದಿರಲಾರದು.

ಸಮುದ್ರಗುಪ್ತ ತನ್ನೆಲ್ಲಾ ಮಾದರಿಗಳನ್ನು ಶುದ್ಧ ಚಿನ್ನದಲ್ಲಿ ಟಂಕಿಸಿದ. ಅವನು ಅಸಂಖ್ಯಾತ ವಿಜಯಗಳಿಂದ ದೊರೆತ ಚಿನ್ನವನ್ನು ನಾಣ್ಯಗಳ ತಯಾರಿಕೆಯಲ್ಲಿ ಉಪಯೋಗಿಸಿದ. ನಾಣ್ಯ ತಯಾರಿಕೆಯ ತಂತ್ರದಲ್ಲಿ ಕುಷಾಣರ ನಾಣ್ಯಗಳನ್ನು ಅನುಸರಿಸಲಾಯಿತು. ಅವನ ಆರಂಭದ ನಾಣ್ಯಗಳು ನಿಜಕ್ಕೂ ಕುಷಾಣರ ನಾಣ್ಯಗಳ ಅನುಕರಣೆಯೇ ಆಗಿವೆ. ಗುಪ್ತರ ನಾಣ್ಯಗಳ ಮೇಲೆ ವಿದೇಶಿ ಪ್ರಭಾವ ಕ್ರಮೇಣ ಕಡಮೆಯಾಗಿ, ಅನಂತರದ ಕಾಲದಲ್ಲಿ ಸ್ವಚ್ಛ ದೇಶೀಯ ನಾಣ್ಯಗಳಾದವು. ಭಾರತೀಯ ಹಾಗೂ ಗುಪ್ತ ನಾಣ್ಯ ಪರಂಪರೆಯಲ್ಲಿ ಮೊದಲ ಭಾರಿಗೆ ಭಾರತೀಕರಣವನ್ನಾರಂಭಿಸಿದವನು, ಅವನೇ. ರೋಮನ್ ನಾಣ್ಯವಾದ ಡಿನೆರಿಯಸ್‌ನ ಆಧಾರದ ಮೇಲೆ ಕುಷಾಣರ ನಾಣ್ಯವನ್ನು ದೀನಾರ—ಎಂದು ಕರೆಯಲಾಯಿತು. ಈ ಹೆಸರೇ ಗುಪ್ತರ ಕಾಲದಲ್ಲೂ ಮುಂದುವರೆಯಿತು. ಇವುಗಳನ್ನು ಭಾರತೀಯ ಹೆಸರಾದ 'ಸುವರ್ಣ'—ಎಂದೂ ಕರೆಯಲಾಗುತ್ತಿತ್ತು. ಸಮುದ್ರಗುಪ್ತನ ನಾಣ್ಯಗಳ ಕೆಲಮಾದರಿಗಳನ್ನು ಈ ಕೆಳಗೆ ಕೊಡಲಾಗಿದೆ.

I ಧ್ವಜ ಮಾದರಿ : ಇದು ಸಮುದ್ರಗುಪ್ತನ ಆರಂಭದ ಹಾಗೂ ಹೆಚ್ಚು ವ್ಯಾಪಕತೆಯನ್ನು ಪಡೆದ ನಾಣ್ಯ. ಇದು ಕುಷಾಣ ನಾಣ್ಯಗಳ ತದ್ರೂಪವಾಗಿದೆ.

ಮುಮ್ಮುಖ : ಅರಸ ಎಡಭಾಗಕ್ಕೆ ಮುಖ ತಿರುಗಿಸಿದ್ದಾನೆ. ಅವನ ತಲೆಯ ಹಿಂಭಾಗದಲ್ಲಿ ತೇಜೋವಲಯವಿದೆ. ತಲೆಯ ಸುತ್ತ ಬಿಗಿಯಾದ ತೋಪಿಯನ್ನೂ, ಅಂಗಿ-ಇಜಾರವನ್ನೂ ಧರಿಸಿದ್ದಾನೆ; ಕರ್ಣಕುಂಡಲ, ಮತ್ತು ಕಂಠಾಭರಣಗಳನ್ನು ಧರಿಸಿದ್ದಾನೆ. ಅಲಂಕೃತವಾದ ಧ್ವಜವನ್ನು ಎಡಗೈಲಿ ಹಿಡಿದಿದ್ದಾನೆ. ಯಜ್ಞ ಕುಂಡದಲ್ಲಿ ಹವಿಸ್ಸನ್ನು ಹಾಕುತ್ತಿದ್ದಾನೆ. ಎಡಭಾಗದಲ್ಲಿ, ಯಜ್ಞ ವೇದಿಕೆಯ ಹಿಂಭಾಗದಲ್ಲಿ ಮತ್ತೊಂದು ಅಲಂಕೃತವಾದ ಗರುಡ ಧ್ವಜವಿದೆ. ಅರಸ ಎಡತೋಳಿನ ಕೆಳಗೆ 'ಸಮುದ್ರ' ಅಥವಾ 'ಸಮುದ್ರಗುಪ್ತಾ'—ಎಂದು ಬರೆಯಲಾಗಿದೆ.

ಆಲೇಖ : "ಸಮರ ಶತವಿತತ ವಿಜಯೋ ಜಿತರಿಪುರಾಜಿತೋ ದಿವಂ ಜಯತಿ ।"

(ಅನು : 'ಅಸಂಖ್ಯಾತ ಸಮರಗಳಲ್ಲಿ ವಿಜಯವನ್ನು ಪಡೆದ ಶತ್ರುಗಳನ್ನು ಗೆದ್ದು ಪ್ರಕಾಶ ಹೊಂದಿರುವವನು ದೇವಲೋಕವನ್ನು ಗೆಲ್ಲುತ್ತಾನೆ.')

ಹಿಮ್ಮುಖ : ತೇಜೋವಲಯದಿಂದ ಆವೃತಳಾದ (ಲಕ್ಷ್ಮೀ) ದೇವಿಯು ಸಮ್ಮುಖ ಮುಖಮಾಡಿ ಸಿಂಹಾಸನದ ಮೇಲೆ ಕುಳಿತಿದ್ದಾಳೆ. ಸಡಿಲವಾದ ಉಡಪನ್ನು ಧರಿಸಿದ್ದಾಳೆ. ತೋಳ್ಬಂದಿ-ಮುಂತಾದ ಆಭರಣವನ್ನು ತೊಟ್ಟಿದ್ದಾಳೆ. ಹೊರಚಾಚಿದ ಬಲಗೈಲಿ ಪಾಶವಿದೆ ; ಎಡಗೈಲಿ ಅಕ್ಷಯ ಪಾತ್ರೆ ಇದೆ. ಅವಳ ಕಾಲು ಗಳು ಕಮಲದ ಹೂಗಳ ಮೇಲಿದೆ.

ಆಲೇಖ : "ಪರಾಕ್ರಮಃ"

ಈ ಮಾದರಿಯ ನಾಣ್ಯಗಳ ಮೇಲೆ ಗುಪ್ತ ಅರಸರು ಉಡುಗೆ ತೊಟ್ಟಿರುವುದ ರಲ್ಲಿ, ಹೆಸರನ್ನು ಮೇಲಿಂದ ಕೆಳಕ್ಕೆ ಬರೆಯುವಲ್ಲಿ, ಧ್ವಜಕ್ಕೆ ದಾರದ ಪಟ್ಟಿಕೆಯನ್ನು ಕಟ್ಟಿರುವುದರಲ್ಲಿ, ಯಜ್ಞಕುಂಡದ ಮೇಲೆ ಹವಿಸ್ಸು ಹಾಕುವಲ್ಲಿ, ಅರಸನ ಶಿರದ ಹಿಂದಿನ ತೇಜೋವಲಯ – ಇವುಗಳ ಚಿತ್ರಣದಲ್ಲಿ ಕುಷಾಣರ ಪ್ರಭಾವವನ್ನು ಕಾಣ ಬಹುದು. ಇಷ್ಟಾದರೂ ಕೆಲ ಅಂಶಗಳ ನಿರೂಪಣೆಯಲ್ಲಿ ಗುಪ್ತರು ಕುಷಾಣರ ಪರಂಪರೆಯಿಂದ ಪ್ರತ್ಯೇಕ ದಾರಿಯಲ್ಲಿ ನಡೆದುದುಂಟು. ಕುಷಾಣ ಅರಸರು ಕೋನಾ ಕೃತಿಯ ಟೊಪ್ಪಿಗೆಯನ್ನು ಧರಿಸಿದ್ದರೆ, ಈ ಮಾದರಿಯಲ್ಲಿ ಗುಪ್ತ ಚಕ್ರವರ್ತಿಗಳು ಬಿಗಿಯಾದ ಕುಲಾವಿಯನ್ನು ಧರಿಸಿದ್ದಾರೆ ; ಕುಷಾಣರ ತ್ರಿಶೂಲದ ಬದಲು ಇಲ್ಲಿ ಗಂಡಧ್ವಜವಿದೆ. ಇವರು ಭಾರತೀಯ ಆಭರಣಗಳನ್ನು ಧರಿಸಿದ್ದಾರೆ. ಕೆಲ ಚಿಹ್ನೆಗಳ ನಿರೂಪಣೆಯಲ್ಲಿ ಗುಪ್ತರು ಪೂರ್ಣವಾಗಿ ಕುಷಾಣರ ನೇರ ಪ್ರಭಾವಕ್ಕೆ ಒಳಗಾದರು.

II 'ಬಿಲ್ಲಾಳು' ಮಾದರಿ :

ಮುಮ್ಮುಖ : ಪ್ರಭಾವಲಯದಿಂದ ಕೂಡಿದ ಅರಸ ಎಡಕ್ಕೆ ನಿಂತಿದ್ದಾನೆ. ಉಡುಗೆ-ತೊಡುಗೆ ಧ್ವಜಮಾದರಿಯಲ್ಲಿರುವಂತೆ ಇದೆ. ಎಡಗೈಲಿ ಬಿಲ್ಲಿದೆ ; ಬಲಗೈಲಿ ಬಾಣವಿದೆ. ಬಾಣದ ತಲೆ ಭೂಮಿಯ ಮೇಲಿದೆ. ಎಡಭಾಗದಲ್ಲಿ ಗರುಡ ಧ್ವಜವಿದೆ. ಎಡ ತೋಳಿನ ಕೆಳಗೆ 'ಸಮುಂದ್ರ'–ಎಂದು ಬರೆಯಲಾಗಿದೆ.

ಆ ಲೇಖ : "ಅಪ್ರತಿರಥೋ ವಿಜಿತ್ಯಕ್ಷಿತೀಂ ಸುಚರಿತೈರ್ದಿವಂ ಜಯತಿ"

(ಅನು : "ಪ್ರತಿರಥರಿಲ್ಲದವನಾಗಿ ಕ್ಷಿತಿಯನ್ನು ಜಯಿಸಿ ಸುಚರಿತಗಳಿಂದ ಸ್ವರ್ಗವನ್ನು ಗೆಲ್ಲುತ್ತಾನೆ.")

ಹಿಮ್ಮುಖ : ಧ್ವಜ ಮಾದರಿಯಲ್ಲಿರುವಂತೆ ಲಕ್ಷ್ಮೀದೇವಿ ಆಸೀನಳಾಗಿದ್ದಾಳೆ.

ಆ ಲೇಖ : "ಅಪ್ರತಿರಥಃ"

III 'ಗಂಡು ಗೊಡಲಿ' ಮಾದರಿ :

ಮುಮ್ಮುಖ : ಎಡಕ್ಕೆ ಮುಖಮಾಡಿ ನಿಂತಿರುವ ಅರಸ, ಪ್ರಭಾವಲಯದಿಂದ ಕೂಡಿದ್ದಾನೆ. ಬಿಗಿಯಾದ ಕುಲಾಯಿಯನ್ನೂ, ಅಂಗಿ ಹಾಗೂ ಇಜಾರನ್ನೂ ಧರಿಸಿದ್ದಾನೆ. ಸೊಂಟದಲ್ಲಿ ಕತ್ತಿ ಇದೆ. ಕರ್ಣ ಕುಂಡಲ ಹಾಗೂ ಕಂಠಾಭರಣಗಳನ್ನು ಧರಿಸಿದ್ದಾನೆ. ಎಡಗೈಲಿ ಗಂಡುಗೊಡಲಿ ಇದೆ; ಬಲಗೈ ಸೊಂಟದ ಮೇಲಿದೆ. ಬಲ ಭಾಗದಲ್ಲಿ ಕುಬ್ಜನೊಬ್ಬನಿದ್ದಾನೆ ತುದಿಯಲ್ಲಿ ಅರ್ಧಚಂದ್ರಾಕೃತಿ ಹೊಂದಿರುವ ಧ್ವಜವಿದೆ. ಎಡ ತೋಳಿನ ಕೆಳಗೆ 'ಸಮುದ್ರ' ಅಥವಾ ಸಮುದ್ರಗುಪ್ತ—ಎಂದು ಬರೆಯಲಾಗಿದೆ.

ಆಲೇಖ : "ಕೃತಾನ್ತ ಪರಶುರ್ಜಯತ್ಯಜಿತರಾಜ ಜೇತಾಜಿತಃ"

(ಅನು : ಯಮ ಸದೃಶವಾದ ಕೊಡಲಿಯನ್ನು ಪಡೆದು ಯಾರಿಂದಲೂ ಪರಾಜಯ ಹೊಂದದವರನ್ನೂ ಜಯಿಸಿಯೂ ಮತ್ತೆ ಸ್ವಯಂ ಯಾರಿಂದಲೂ ಪರಾಜಯ ಹೊಂದದೆಯೂ ಇವನು ಜಯ ಶೀಲನಾಗುತ್ತಾನೆ)

ಹಿಮ್ಮುಖ : ಲಕ್ಷ್ಮೀ ತೇಜೋವಲಯ ಕೂಡಿ ಸಿಂಹಾಸನದ ಮೇಲೆ ಕುಳಿತಿದ್ದಾಳೆ. ಅವಳ ಕಾಲುಗಳು ಕಮಲಾಕಾರದ ಕಾಲುಮಣೆಯ ಮೇಲಿವೆ.

ಆಲೇಖ ; "ಕೃತಾನ್ತ ಪರಶಃ"

(ಅನು : 'ಮೃತ್ಯು ಸದೃಶವಾದ ಕೊಡಲಿಯುಳ್ಳವನು).

ಕೆಲ ನಾಣ್ಯಗಳ ಮೇಲೆ ಅರಸ ಖಡ್ಗವನ್ನು ಹಿಡಿದಿಲ್ಲ, ಹಾಗೂ ದೇವತೆಯು ಸಿಂಹಾಸನ ರೂಢಳಾಗಿರದೆ ಕಮಲದ ಹೂವಿನ ಮೇಲೆ ಕುಳಿತಿದ್ದಾಳೆ. ಇವು ನಿಜಕ್ಕೂ ಭಾರತೀಯತೆಯನ್ನು ಒಳಗೊಂಡ ಅಂಶಗಳು. ಇನ್ನೂ ಹಲವು ನಾಣ್ಯ ಗಳ ಮೇಲೆ ಕುಬ್ಜನೊಬ್ಬ ಛತ್ರಿಯನ್ನು ಹಿಡಿದಿದ್ದಾನೆ. ಪರಂಪರಾನುಗತವಾಗಿ ಬಂದ ಪದ್ಧತಿಯಂತೆ ಅರಸು ಸೇವಕರನ್ನು ಗೌಣವಾಗಿ ತೋರಿಸಲಾಗಿದೆ. ಮುಖ್ಯ

ವಾಗಿ ಗುಪ್ತರ ನಾಣ್ಯಗಳು ಭಾರತೀಕರಣದತ್ತ ಮುನ್ನಡೆದುದನ್ನು 'ಬಿಲ್ಲಾಳು' ಹಾಗೂ 'ಗಂಡುಗೊಡಲಿ'-ಮಾದರಿಗಳು ತಿಳಿಸುತ್ತವೆ. ಅರ್ಥವಿಲ್ಲದ ಧ್ವಜವನ್ನು ಟಂಕಿಸುವುದರಲ್ಲಿ ಗುಪ್ತರು ಕೊನೆಯ ಕುಷಾಣ ಅರಸರುಗಳನ್ನು ಅನುಸರಿಸಿದರು. ಆದರೆ ಅನಂತರದ ಕಾಲದಲ್ಲಿ ಇದರ ಸ್ಥಾನವನ್ನು ಬಾಣ ಅಥವಾ ಗಂಡುಗೊಡಲಿಗಳು ಆಕ್ರಮಿಸಿದವು. ಸಮುದ್ರಗುಪ್ತನು ವಿವಿಧ ಪ್ರದೇಶಗಳನ್ನು ಗೆದ್ದುದರ ಸಲುವಾಗಿ 'ಗಂಡುಗೊಡಲಿ' ಮಾದರಿಯನ್ನು ಚಲಾವಣೆಗೆ ತಂದಿರಬೇಕು. ಆದುದರಿಂದ ಈ ಮಾದರಿಯು ಅವನ ಆಳ್ವಿಕೆಯ ಅನಂತರದ ಕಾಲದ್ದು.

IV 'ಕಾಚ' ಮಾದರಿ :

ಮುಮ್ಮುಖಿ : ಅರಸ ಎಡಕ್ಕೆ ಮುಖಮಾಡಿ, ಯಜ್ಞವೇದಿಕೆಯ ಬಳಿ ನಿಂತಿದ್ದಾನೆ. ಎಡಗೈಲಿ ಚಕ್ರಧ್ವಜವಿದೆ. ಮೇಲಿಂದ ಕೆಳಕ್ಕೆ 'ಕಾಚ' –ಎಂದು ಬರೆದಿದೆ.

ಆಲೇಖ : "ಕಾಚೋಗಾಮವಜಿತ್ಯ ದಿವಂ ಕರ್ಮಭಿರುತ್ತಮೈರ್ಜಯತಿ"।

(ಅನು : "ಭೂ ಲೋಕವನ್ನು ಗೆದ್ದು ಉತ್ತಮ ಕರ್ಮಗಳಿಂದ ಸ್ವರ್ಗವನ್ನು ಗೆಲ್ಲುತ್ತಾನೆ.")

ಹಿಮ್ಮುಖಿ : (ಲಕ್ಷ್ಮೀ) ದೇವತೆಯು ಎಡಕ್ಕೆ ಮುಖಮಾಡಿ ನಿಂತು ಸಡಿಲವಾದ ಉಡುಪನ್ನು ಧರಿಸಿದ್ದಾಳೆ. ಬಲಗೈಲಿ ಹೂವನ್ನೂ ಎಡಗೈಲಿ ಅಕ್ಷಯ ಪಾತ್ರೆಯನ್ನೂ ಹಿಡಿದಿದ್ದಾಳೆ.

ಆಲೇಖ : "ಸರ್ವ ರಾಜೋಚ್ಛೇತ್ತಾ"

(ಅನು : 'ಸಮಸ್ತ ರಾಜರನ್ನೂ ಮರ್ದಿಸುತ್ತಿರುವವನು')

ಕಾಚನ ಅಸ್ತಿತ್ವದ ಬಗ್ಗೆ ಹಲವಾರು ವಾದ-ವಿವಾದಗಳು, ಊಹಾಪೋಹಗಳು ಇವೆ. ಒಂದನೇ ಚಂದ್ರಗುಪ್ತ ತನ್ನ ಮುಂದಿನ ಉತ್ತರಾಧಿಕಾರಿಯನ್ನಾಗಿ ಸಮುದ್ರಗುಪ್ತನನ್ನು ನೇಮಿಸಿದ. ಇದು ಸಹಜವಾಗಿಯೇ ಸಿಂಹಾಸನದ ಕಣ್ಣಿಟ್ಟಿದ್ದ ಅವನ ವಿರೋಧಿ ಸೋದರರ ದುರಾಶೆಯನ್ನು ಕೆರಳಿಸಿರಬೇಕು. ಸಮುದ್ರಗುಪ್ತ ಅಧಿಕಾರಕ್ಕೆ ಬಂದಾಗ ಅವರ ಪ್ರಬಲ ಪ್ರತಿರೋಧವನ್ನು ಎದುರಿಸಬೇಕಾಯಿತು. ಇಂತಹ ಹೋರಾಟದ ನಾಯಕತ್ವವನ್ನು ವಹಿಸಿದವನು ಸಮುದ್ರಗುಪ್ತನ ಹಿರಿಯ ಸೋದರ ಕಾಚನೆಂದು ಕೆಲ ವಿದ್ವಾಂಸರ ಅಭಿಮತ. ಆದರೆ ಇದರಲ್ಲಿ ಸತ್ಯಾಂಶವಿದ್ದಂತೆ ಕಂಡುಬರುವುದಿಲ್ಲ. ಕಾಚನ ನಾಣ್ಯಗಳು ರಚನೆ ಹಾಗೂ ನಿರೂಪಣೆಯಲ್ಲಿ ಸಮುದ್ರಗುಪ್ತನ ನಾಣ್ಯಗಳನ್ನು ಸಂಪೂರ್ಣವಾಗಿ ಹೋಲುತ್ತದೆ. ಸಮುದ್ರ

ಗುಪ್ತನ ಪೂರ್ವದ ಹೆಸರು ಕಾಚನಿರಬೇಕೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

V 'ವ್ಯಾಘ್ರ' ಮಾದರಿ :

ಮುಮ್ಮುಖ : ಅರಸ ಎಡಕ್ಕೆ ಮುಖ ತಿರುಗಿಸಿ ನಿಂತಿದ್ದಾನೆ. ಪೇಟವನ್ನೂ, ಸೊಂಟ ಬಟ್ಟೆಯನ್ನೂ ಧರಿಸಿದ್ದಾನೆ. ಕಂಠಾಭರಣ, ಕರ್ಣಾಭರಣ, ತೋಳ್ಬಂದಿಯನ್ನು ಹಾಕಿಕೊಂಡಿದ್ದಾನೆ. ಅರಸ ಬಿಲ್ಲಿನಿಂದ ಹುಲಿಯನ್ನು ಹೊಡೆಯುತ್ತಿದ್ದಾನೆ. ಎಡಗೈಲಿ ಬಿಲ್ಲಿನ ಹೆದೆ ಯನ್ನು ಕಿವಿಯವರೆವಿಗೂ ಎಳೆದಿದ್ದಾನೆ. ಹುಲಿ ಹಿಮ್ಮುಖ ವಾಗಿ ಬಿದ್ದಿದೆ. ಹುಲಿಯ ಹಿಂದೆ ಅರ್ಧಚಂದ್ರಾಕೃತಿ ಇರುವ ಧ್ವಜವಿದೆ.

ಆಲೇಖ : "ವ್ಯಾಘ್ರ ಪರಾಕ್ರಮಃ"

ಹಿಮ್ಮುಖ : (ಗಂಗಾ) ದೇವತೆಯು ಮಕರದ ಮೇಲೆ ನಿಂತಿದ್ದಾಳೆ. ಕಂಠಾ ಭರಣ, ಕರ್ಣಾಭರಣ, ಕಾಲುಬಳೆ, ತೋಳ್ಬಂದಿಗಳನ್ನು ಧರಿ ಸಿದ್ದಾಳೆ. ಅಲಂಕೃತವಾದ ಅರ್ಧಚಂದ್ರಾಕೃತಿಯುಳ್ಳ ಧ್ವಜವಿದೆ.

ಆಲೇಖ : "ರಾಜಾ ಸಮುದ್ರಗುಪ್ತಃ"

ಇದು ಅಪೂರ್ವವಾದ ಮಾದರಿಗಳಲ್ಲೊಂದು. ಗಂಗಾಮಾತೆಯನ್ನು ರೂಪಿ ಸಿರುವುದು ಗಂಗಾನದಿ ಬಯಲಿನ ಪ್ರದೇಶ ಹಾಗೂ ಬಂಗಾಳದ ಮೇಲೆ ಅವನು ಸಾಧಿಸಿದ ವಿಜಯವನ್ನು ಸೂಚಿಸುತ್ತದೆ. ಹುಲಿ ಶಿಕಾರಿಯಲ್ಲಿ ಅವನಿಗಿರುವ ಆಸಕ್ತಿ ಯನ್ನು ಈ ಮಾದರಿಯಲ್ಲಿ ಕಾಣಬಹುದು.

V "ವೈಣಿಕ" ಮಾದರಿ :–

ಮುಮ್ಮುಖ : ಪ್ರಭಾವಲಯದಿಂದ ಕೂಡಿದ ಅರಸ ಬಿರುಗುಮಂಚದ ಮೇಲೆ ಕುಳಿತು ಬಲಗಾಲನ್ನು ಇಳಿಬಿಟ್ಟಿದ್ದಾನೆ. ಸೊಂಟಬಟ್ಟೆಯನ್ನು, ಬಿಗಿಯಾದ ಕುಲಾವಿಯನ್ನೂ ಧರಿಸಿದ್ದಾನೆ. ಕಂಠಾಭರಣ, ಕರ್ಣಾಭರಣ, ತೋಳ್ಬಂದಿಗಳನ್ನು ಹಾಕಿಕೊಂಡಿದ್ದಾನೆ. ವೀಣೆ ಯನ್ನು ತೊಡೆಯ ಮೇಲೆ ಇಟ್ಟುಕೊಂಡು ನುಡಿಸುತ್ತಿದ್ದಾನೆ. ಮಂಚದ ಕೆಳಗೆ ಕಾಲುಮಣೆ ಇದೆ. ಅದರ ಮೇಲೆ 'ಸಿ'– ಎಂದು ಕೆತ್ತಲಾಗಿದೆ.

ಆಲೇಖ : "ಮಹಾರಾಜಾಧಿರಾಜ–ಶ್ರೀ–ಸಮುದ್ರಗುಪ್ತಃ"

ಹಿಮ್ಮುಖ : ಪ್ರಭಾವಲಯದಿಂದ ಕೂಡಿ, ಮಣೆಯ ಮೇಲೆ ಕುಳಿತಿರುವ ದೇವತೆಯು ಉತ್ತರೀಯ ಹಾಗೂ ಬಿಗಿಯಾದ ಕುಲಾವಿಯನ್ನು ಧರಿಸಿದ್ದಾಳೆ. ನಾನಾ ಆಭರಣವನ್ನು ಹಾಕಿಕೊಂಡಿದ್ದಾಳೆ. ಹೊರ ಚಾಚಿದ ಬಲಗೈಲಿ ಪಾಶವನ್ನೂ, ಎಡಗೈಲಿ ಅಕ್ಷಯ ಪಾತ್ರೆಯನ್ನೂ ಹಿಡಿದಿದ್ದಾಳೆ.

ಆಲೇಖ : "ಸಮುದ್ರಗುಪ್ತಃ"

ವ್ಯಾಘ್ರ ಹಾಗೂ ವೈಣಿಕ ಮಾದರಿಗಳು ಭಾರತೀಯ ಅಂಶಗಳನ್ನು ಒಳ ಗೊಂಡಿವೆ. ಅರಸನ ಭಾವಾಭಿನಯದಲ್ಲಿ ಹಾಗೂ ಉಡುಪಿನಲ್ಲಿ ಭಾರತೀಯತನ ಎದ್ದು ಕಾಣುತ್ತದೆ. ಮತ್ತು ಕುಷಾಣರ ಪ್ರಭಾವದಿಂದ ಮುಕ್ತವಾಗಿವೆ. ವೈಣಿಕ ಮಾದರಿಯ ಮೇಲೆ ಇರುವ ದೇವತೆಯನ್ನು ಸರಸ್ವತಿ (ವೀಣಾಪಾಣಿ) —ಎಂದು ಪರಿಗಣಿಸಲಾಗಿದೆ. ಕಾಲು ಮಣೆಯ ಮೇಲಿನ 'ಸಿ' ಅಕ್ಷರ ಸಿದ್ಧಮ್—ಎಂಬುದರ ಪ್ರತಿಮಾ ರೂಪಾಂತರವಾಗಿರಬಹುದು.

VI "ಅಶ್ವಮೇಧ" ಮಾದರಿ :–

ಮುಮ್ಮುಖ : ಎಡಭಾಗಕ್ಕೆ ಯಜ್ಞಯೂಪದ ಮುಂದೆ ಕುದುರೆ ನಿಂತಿದೆ. ಕುದುರೆಯ ಬೆನ್ನ ಮೇಲೆ ಪತಾಕೆ ಇದೆ. ಕುದುರೆಯ ಕೆಳಗೆ 'ಸಿ' ಆಲೇಖವಿದೆ.

ಆಲೇಖ : "ರಾಜಾಧಿರಾಜಃ ಪೃಥಿವೀಮವಿತ್ವಾಂ ದಿವಂ ಜಯತ್ಯ ಪ್ರತಿವಾರ್ಯವೀರ್ಯಃ"

(ಅನು : ರಾಜಾಧಿರಾಜನು ಎದುರಿಸಲುಸಾಧ್ಯವಾದ ವೀರ್ಯ ವುಳ್ಳವನಾಗಿ ಪೃಥ್ವಿಯನ್ನು ಗೆದ್ದು ಸ್ವರ್ಗವನ್ನು ಜಯಿಸುತ್ತಾನೆ.

ಹಿಮ್ಮುಖ : ಎಡಕ್ಕೆ ಮುಖತಿರುಗಿಸಿರುವ ಮಹಿಷಿ, ಆಭರಣಭೂಷಿತಳಾಗಿ ಉತ್ತರೀಯವನ್ನು ಹೊದ್ದಿದ್ದಾಳೆ. ಬಲಗೈಲಿ ಬಲಹೆಗಲ ಮೇಲೆ ಚೌರಿಯನ್ನು ಹಿಡಿದಿದ್ದಾಳೆ. ಹಗ್ಗ ಕಟ್ಟಿರುವ ಬರ್ಜಿಯನ್ನು ಬಲಭಾಗದಲ್ಲಿ ನಿಲ್ಲಿಸಿದೆ. ಅವಳ ಪಾದದ ಸುತ್ತ ಸರಪಳಿ(?) ಇದೆ.

ಆಲೇಖ : "ಅಶ್ವಮೇಧ ಪರಾಕ್ರಮಃ"

ಇಲ್ಲಿ ಚಿತ್ರಿಸಿರುವ ಮಹಿಷಿಯು ಸಮುದ್ರಗುಪ್ತನ ರಾಣಿಯೂ ಮತ್ತು ಎರಡನೆಯ ಚಂದ್ರಗುಪ್ತನ ತಾಯಿಯೂ ಆದ ದತ್ತದೇವಿಯಾಗಿರಬೇಕು.

ಪ್ರಸಂಗೋಚಿತವಾದ ಅಂಶಗಳನ್ನೂ, ಚಿಹ್ನೆಗಳನ್ನೂ ತನ್ನ ನಾಣ್ಯಗಳಲ್ಲಿ ಅಳವಡಿಸುವುದರ ಮೂಲಕ ಸಮುದ್ರಗುಪ್ತನು ಭಾರತೀಕರಣವನ್ನಾರಂಭಿಸಿದನು. ಪ್ರತಿಯೊಂದು ಮಾದರಿಯಲ್ಲಿ ಹೊಸ ಅಂಶಗಳನ್ನು ಕಾಣಬಹುದು. ಧ್ವಜ ಮಾದರಿಯ ಮುಮ್ಮುಖದಲ್ಲಿ ಗರುಡನನ್ನು ಚಿತ್ರಿಸಿ ಕುಷಾಣರ ಪರಂಪರೆಯಿಂದ ಭಿನ್ನದಾರಿಯಲ್ಲಿ ನಡೆದ. ಇದರ ಹಿಮ್ಮುಖದಲ್ಲಿನ ದೇವತೆಯು ಲಕ್ಷ್ಮೀ—ಎಂದು ಧಾರಾಳವಾಗಿ ಹೇಳಬಹುದು. ಅವನು ವೈಷ್ಣವ ಧರ್ಮಾಭಿಮಾನಿ—ಎಂಬುದು ಇದರಿಂದ ತಿಳಿಯುವ ಅಂಶ. ಆಲೇಖಗಳು ತಿಳಿಸುವಂತೆ ಅವನು ನೂರಾರು ಯುದ್ಧಗಳಲ್ಲಿ ಜಯಗಳಿಸಿದ ವೀರನೆಂದು ತಿಳಿಯುತ್ತದೆ. ಶಾಸನಗಳು ಈ ಅಂಶವನ್ನು ದೃಢೀಕರಿಸುತ್ತವೆ. ಯಜ್ಞದಲ್ಲಿ ಸಮಾವೇಶಗೊಂಡಿದ್ದ ಬ್ರಾಹ್ಮಣರಿಗೆ ದಕ್ಷಿಣೆ ಕೊಡುವ ಸಲುವಾಗಿ ಅಶ್ವಮೇಧ ಮಾದರಿ ನಾಣ್ಯಗಳನ್ನು ಹೊರಡಿಸಿದ. ಅವನ ನಾಣ್ಯಗಳು ನಾಡಿನ ಸುಖ-ಸಮೃದ್ಧಿಯನ್ನು ಸೂಚಿಸುತ್ತವೆ.

೫

ಸಮುದ್ರಗುಪ್ತನು ಬರಿಯೇ ಚಿನ್ನದ ನಾಣ್ಯಗಳನ್ನು ಟಂಕಿಸಿದರೆ ಅವನ ಮಗ ಇಮ್ಮಡಿ ಚಂದ್ರಗುಪ್ತನು (375–414) ಚಿನ್ನದ ನಾಣ್ಯಗಳ ಜೊತೆಗೆ ಬೆಳ್ಳಿ, ತಾಮ್ರದ ನಾಣ್ಯಗಳನ್ನು ಹೊರಡಿಸಿದ ಇವನ ಬೆಳ್ಳಿಯ ನಾಣ್ಯಗಳು ಪಡುವಣ ಕ್ಷತ್ರಪರ ಬೆಳ್ಳಿಯ ನಾಣ್ಯಗಳನ್ನು ಹೋಲುತ್ತವೆ. ಅಥವಾ ಅನುಕರಿಸಿವೆ. ಅವರ ಕಾಥೇವಾಡ ಮತ್ತು ಗುಜರಾತ ರಾಜ್ಯಗಳನ್ನು ಗೆದ್ದುದರಿಂದ ಆ ಪ್ರದೇಶದಲ್ಲಿ ಬೆಳ್ಳಿಯ ನಾಣ್ಯಗಳ ಚಲಾವಣೆ ಅಗತ್ಯವಾಯಿತು. ಈ ನಾಣ್ಯಗಳ ಹಿಮ್ಮುಖದಲ್ಲಿ ಅವರ ಚೈತ್ಯ ಚಿಹ್ನೆಯ ಬದಲು ವಿಷ್ಣುವಿನ ವಾಹನವಾದ ಗರುಡನನ್ನು ಅಚ್ಚು ಹಾಕಲಾಯಿತು. ತಾಮ್ರದಲ್ಲೂ ಹಲವಾರು ಮಾದರಿಯ ನಾಣ್ಯಗಳನ್ನು ಟಂಕಿಸಿದ. ಅವನ ಚಿನ್ನದ ನಾಣ್ಯಗಳು ಹಲವಾರು ಮಾದರಿಗಳನ್ನು ಪರಿಶೀಲಿಸೋಣ:-

1. "ಬಿಲ್ಲಾಳು" ಮಾದರಿ :—

ಸಾಮ್ರಾಜ್ಯಾದ್ಯಂತ ವ್ಯಾಪಕವಾಗಿ ಚಲಾವಣೆಗೆ ಬಿಟ್ಟ ಮಾದರಿ, ಇದು. ಇದರಲ್ಲೂ ಹಲವಾರು ನಮೂನೆಗಳನ್ನು ಕಾಣಬಹುದು.

(ಅ) ಮುಮ್ಮುಖ : ಎಡಕ್ಕೆ ಮುಖಮಾಡಿ ನಿಂತ ಅರಸ ತೇಜೋವಲಯದಿಂದ ಕೂಡಿ, ಎಡಗೈಲಿ ಬಿಲ್ಲನ್ನೂ, ಬಲಗೈಲಿ ಬಾಣವನ್ನೂ ಹಿಡಿದಿದ್ದಾನೆ. ಎಡಭಾಗದಲ್ಲಿ ಗರುಡ ಧ್ವಜವಿದ್ದು, 'ಚಂದ್ರ'—ಎಂದು ಬರೆದಿದೆ.

ಆಲೇಖ: "ದೇವ-ಶ್ರೀ-ಮಹಾರಾಜಾಧಿರಾಜ ಶ್ರೀ ಚಂದ್ರಗುಪ್ತಃ"

ಹಿಮ್ಮುಖ : ತೇಜೋವಲಯದಿಂದ ಕೂಡಿದ ಲಕ್ಷ್ಮೀ ಸಿಂಹಾಸನಾರೂಢಳಾಗಿದ್ದಾಳೆ. ಎಡಗೈಲಿ ಅಕ್ಷಯಪಾತ್ರೆ ಇದೆ. ಬಲಗೈಲಿ ಪಾಶವಿದೆ. ಕಾಲುಗಳು ಪದ್ಮದ ಮೇಲಿವೆ.

ಆಲೇಖ: 'ಶ್ರೀ-ವಿಕ್ರಮಃ'

(ಆ) ಮುಮ್ಮುಖ : ಅರಸ ಬತ್ತಳಿಕೆಯಿಂದ ಬಾಣವನ್ನು ಎಳೆಯುತ್ತಿದ್ದಾನೆ. ಮೇಲಿರುವ ಅಂಶಗಳೆಲ್ಲ ಇವೆ.

ಹಿಮ್ಮುಖ : ತೇಜೋವಲಯದಿಂದ ಕೂಡಿದ ದೇವಿಯು ಹೊರ ಚಾಚಿದ ಬಲಗೈಲಿ ಪಾಶವನ್ನೂ, ಎಡಗೈಲಿ ಕಮಲವನ್ನೂ ಹಿಡಿದಿದ್ದಾಳೆ.

II. "ಮಂಚದ ಮೇಲೆ ಕುಳಿತಿರುವ ಅರಸನ" ಮಾದರಿ :

ಮುಮ್ಮುಖ : ಸೊಂಟಬಟ್ಟೆಯನ್ನೂ, ಆಭರಣಗಳನ್ನೂ ಧರಿಸಿದ ಅರಸ ಎತ್ತರವಾದ ಮಂಚದ ಮೇಲೆ ಕುಳಿತಿದ್ದಾನೆ. ಬಲಗೈಲಿ ಹೂವನ್ನು ಹಿಡಿದಿದ್ದಾನೆ. ಎಡಗೈ ಮಂಚದ ಮೇಲಿದೆ.

ಆಲೇಖ : "ದೇವ-ಶ್ರೀ-ಮಹಾರಾಜಾಧಿರಾಜ-ಶ್ರೀ-ಚಂದ್ರಗುಪ್ತಸ್ಯ"

ಹಿಮ್ಮುಖ : (ಲಕ್ಷ್ಮೀ) ದೇವತೆ ನಮ್ಮತ್ತ ಮುಖವಾಗಿ ಸಿಂಹಾಸನದ ಮೇಲೆ ಕುಳಿತಿದ್ದಾಳೆ. ಎಡಗೈಲಿ ಹೂವಿದೆ; ಬಲಗೈ ಹೊರ ಚಾಚಿದೆ.

ಆಲೇಖ: "ಶ್ರೀ ವಿಕ್ರಮಃ"

ಈ ಮಾದರಿಯ ನಾಣ್ಯಗಳು ದೊರೆತಿರುವುದು ಅತ್ಯಲ್ಪವೇ. ಇವುಗಳನ್ನು ಅರಸನ ಆರಂಭದ ಆಳ್ವಿಕೆಯ ಕಾಲದಲ್ಲಿ ಟಂಕಿಸಿರಬೇಕು.

III. 'ಛತ್ರ' ಮಾದರಿ:

ಮುಮ್ಮುಖ : ಎಡಕ್ಕೆ ಮುಖ ತಿರುಗಿಸಿರುವ ಅರಸ ತೇಜೋವಲಯದಿಂದ ಆವೃತನಾಗಿದ್ದಾನೆ. ಯಜ್ಞವೇದಿಕೆಯ ಮೇಲೆ ಬಲಗೈಲಿ ಹವಿಸ್ಸನ್ನು ಹಾಕುತ್ತಿದ್ದಾನೆ. ಎಡಗೈ ಖಡ್ಗದ ಹಿಡಿಯ ಮೇಲಿದೆ. ಅರಸನ ಹಿಂದೆ ಕುಬ್ಜನೊಬ್ಬ ಛತ್ರಿಯನ್ನು ಹಿಡಿದಿದ್ದಾನೆ.

ಆಲೇಖ: "ಮಹಾರಾಜಾಧಿರಾಜ-ಶ್ರೀ-ಚಂದ್ರಗುಪ್ತಃ"

ಈ ಮಾದರಿಯ ಕೆಲನಾಣ್ಯಗಳ ಮೇಲೆ ಇನ್ನಿತರ ಆಲೇಖ ಕಾಣುತ್ತದೆ:
"ಕ್ಷಿತೀಮ್ ಅವಜಿತ್ಯ ಸುಚರಿತೈರ್ದಿವಂ ಜಯತಿ ವಿಕ್ರಮಾದಿತ್ಯಃ" (ಅನು : "ವಿಕ್ರಮಾದಿತ್ಯನು ಕ್ಷಿತಿಯನ್ನು ಜಯಿಸಿ ಸುಚರಿತಗಳಿಂದ ಸ್ವರ್ಗವನ್ನು ಜಯಿಸುತ್ತಾನೆ.")

ಹಿಮ್ಮುಖ : (ಲಕ್ಷ್ಮೀ) ದೇವತೆಯು ತೇಜೋವಲಯದಿಂದ ಆವೃತಳಾಗಿ ಪದ್ಮದ ಮೇಲೆ ನಿಂತಿದ್ದಾಳೆ. ಪಾಶವನ್ನು ಬಲಗೈಲಿ ಹಿಡಿದಿದ್ದಾಳೆ. ಎಡಗೈಲಿ ಕಮಲದ ಹೂವಿದೆ.

ಆಲೇಖ : "ವಿಕ್ರಮಾದಿತ್ಯಃ"

ಈ ಮಾದರಿಯ ಚಿತ್ರ—ಅದೃಷ್ಟದೇವತೆಯ ಒಲವಿನಿಂದ ಪಡೆದ ಸೂಚಕವಾಗಿದೆ.

IV "ಸಿಂಹಮರ್ದನ" ಮಾದರಿ :—

ಈ ಮಾದರಿಯು ವಿವಿಧ ಉಪಮಾದರಿಗಳಲ್ಲಿ ದೊರೆಯುತ್ತದೆ. ಮುಮ್ಮುಖದಲ್ಲಿ ಅರಸ ವಿವಿಧ ಭಂಗಿಗಳಲ್ಲಿ ಸಿಂಹದೊಂದಿಗೆ ಹೋರಾಡುತಿದ್ದಾನೆ. ಹಿಮ್ಮುಖದಲ್ಲಿ ದುರ್ಗೆಯು ವಿವಿಧ ಭಂಗಿಗಳಲ್ಲಿ ಸಿಂಹದ ಮೇಲೆ ಕುಳಿತಿದ್ದಾಳೆ. ಒಂದು ಉಪಮಾದರಿ ವಿವರಣೆಯನ್ನಿಲ್ಲಿ ಕೊಟ್ಟಿದೆ :

ಮುಮ್ಮುಖ : ಸೊಂಟ ಬಟ್ಟೆಯಲ್ಲಿ ಧರಿಸಿರುವ ಅರಸ ಎಡಕ್ಕೆ ಮುಖ ಮಾಡಿದ್ದಾನೆ. ನಡುವಿನ ಅಲಂಕಾರಿಕ ಬಟ್ಟೆ ಹಿಂಭಾಗದಲ್ಲಿ ಹಾರಾಡುತ್ತಿದೆ; ಅಲಂಕೃತವಾದ ಪೇಟವನ್ನು ಧರಿಸಿದ್ದಾನೆ. ಬಾಣವನ್ನು ಹೂಡಿ ಸಿಂಹವನ್ನು ಹೊಡೆಯುತ್ತಿದ್ದಾನೆ. ಅದು ಹಿಂದೆ ಬೀಳುತ್ತಿದೆ.

ಆಲೇಖ : "ನರೇನ್ದ್ರ ಚನ್ದ್ರಃ ಪಥಿತಕ್ರಿಯಾ ದಿವಂ ಜಯತ್ಯಜೇಯೋ ಭುವಿ ಸಿಂಹ ವಿಕ್ರಮಃ।"

(ಅನು : ರಾಜರಲ್ಲಿ ಚಂದ್ರನೆನಿಸಿದ ಸಿಂಹ ವಿಕ್ರಮನು ಭೂಲೋಕದಲ್ಲಿ ಅಜೇಯನಾಗಿ ಕಲ್ಯಾಣಗುಣದಿಂದ ಸ್ವರ್ಗವನ್ನು ಜಯಿಸುತ್ತಾನೆ.)

ಹಿಮ್ಮುಖ : ನಮ್ಮತ್ತ ಮುಖಮಾಡಿರುವ (ದುರ್ಗ)ದೇವತೆ, ತೇಜೋವಲಯದಿಂದ ಆವೃತಳಾಗಿ ಸಿಂಹದ ಮೇಲೆ ಕುಳಿತಿದ್ದಾಳೆ. ಹೊರಚಾಚಿದ

ಬಲಗೈಲಿ ಪಾಶವಿದೆ. ಎಡಗೈಲಿ ಅಕ್ಷಯ ಪಾತ್ರೆ ಅಥವಾ ಕಮಲದ ಹೂವನ್ನು ಹಿಡಿದಿದ್ದಾಳೆ.

ಆಲೇಖ : "ಶ್ರೀ-ಸಿಂಹ ವಿಕ್ರಮಃ"

ಈ ಮಾದರಿಯಲ್ಲಿ ನಾಣ್ಯ ತಯಾರಕರ ಚಾತುರ್ಯವನ್ನು ಕಾಣಬಹುದು. ಇದು ಅರಸನಿಗೆ ಸಿಂಹ ಶಿಕಾರಿಯಲ್ಲಿರುವ ಅಭಿಲಾಷೆಯನ್ನು ತಿಳಿಸುತ್ತದೆ. ಅವನ ತಂದೆ ವ್ಯಾಘ್ರಬೇಟೆಯಲ್ಲಿ ಆಸಕ್ತನಾಗಿದ್ದರೆ, ಮಗ ಇನ್ನೂ ಮುಂದುವರೆದು ಸಿಂಹ ಶಿಕಾರಿಯಲ್ಲಿ ಇಚ್ಛೆಯುಳ್ಳವನಾಗಿದ್ದ, ಜೊತೆಗೆ ಸಮುದ್ರಗುಪ್ತನ ವ್ಯಾಘ್ರ ಮಾದರಿಯ ನಾಣ್ಯಗಳು ಅವನ ಗಂಗಾನದಿ ಬಯಲಿನ ಪ್ರದೇಶದ ವಿಜಯದ ಬಗ್ಗೆ ತಿಳಿಸಿದರೆ, ಚಂದ್ರಗುಪ್ತನ ಸಿಂಹಮರ್ದನ ಮಾದರಿಯು ಮಾಳವ-ಸೌರಾಷ್ಟ್ರಗಳ ಮೇಲಿನ ವಿಜಯದ ಬಗ್ಗೆ ತಿಳಿಸುತ್ತದೆ. ಇಂದಿಗೂ ಈ ಪ್ರದೇಶ ಸಿಂಹಗಳ ವಾಸ ಸ್ಥಾನವಾಗಿದೆ. ಹಿಮ್ಮುಖದಲ್ಲಿ ಶಕ್ತಿ ಸ್ವರೂಪಿಣಿಯಾದ ದುರ್ಗೆಯು ಸವಾರಿ ಮಾಡುತ್ತಿರುವುದು ಸೌರಾಷ್ಟ್ರದ ಶಕ ಸತ್ರಪರನ್ನು ಪರಾಜಯಗಳಿಸಿದ್ದರ ಬಗ್ಗೆ ಸೂಚ್ಯವಾಗಿ ತಿಳಿಸುತ್ತದೆ. ಇದೇ ಮಾದರಿಯ ಕೆಲನಾಣ್ಯಗಳು ಚಂದ್ರಗುಪ್ತನನ್ನು 'ಪರಮ ಭಾಗವತ', 'ಭಾಗವತ'-ಎಂದೆಲ್ಲ ವರ್ಣಿಸಿರುವುದುಂಟು. ಇದರಿಂದ ಇವನು ವಿಷ್ಣುವಿನ ಪರಮ ಭಕ್ತನಾಗಿದ್ದನೆಂದು ತಿಳಿಯಬಹುದು.

ಎರಡನೆಯ ಚಂದ್ರಗುಪ್ತನು ಪಡುವಣ ಕ್ಷತ್ರಪರನ್ನು ಗೆದ್ದಮೇಲೆ ಅವರ ಬೆಳ್ಳಿ ನಾಣ್ಯಗಳ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ. ಈ ನಾಣ್ಯಗಳ ಮುಮ್ಮುಖದಲ್ಲಿ ಎದೆವರೆಗಿನ ಚಿತ್ರವನ್ನೂ ಕ್ಷತ್ರಪರ ನಾಣ್ಯಗಳ ಮೇಲಿದ್ದಂತೆ ಗ್ರೀಕ್ ಅಕ್ಷರಗಳ ಪ್ರಭಾವವನ್ನೂ ಕಾಣಬಹುದು. ಚಿನ್ನದ ನಾಣ್ಯಗಳಲ್ಲಿರುವ ಅಂಶ ಗಳಲ್ಲೂ ಸಾಮಾನ್ಯವಾಗಿ ಇಲ್ಲೂ ಕಾಣಬಹುದು. ತಾಮ್ರದ ನಾಣ್ಯಗಳನ್ನು ಟಂಕಿಸಿದವರಲ್ಲಿ ಚಂದ್ರಗುಪ್ತನೇ ಮೊದಲಿಗ. ಚಿನ್ನದ ನಾಣ್ಯಗಳಲ್ಲಿದ್ದಂತೆ ಇದರಲ್ಲೂ ಹಲವಾರು ಮಾದರಿಗಳಿವೆ.

ವೈಭವದಲ್ಲಿ, ಪ್ರಕರತೆಯಲ್ಲಿ ಚಂದ್ರಗುಪ್ತನ ನಾಣ್ಯಗಳು ಅವನ ತಂದೆಯ ನಾಣ್ಯಗಳನ್ನು ಮೀರಿಸಿವೆ. ಹಾಗೂ ಅವನ ನಾಣ್ಯಗಳು ಅವನ ಚಕ್ರವರ್ತಿ ಪದದ ಬಗ್ಗೆ, ಅವನ ವೈಯಕ್ತಿಕ ಜೀವನದ ಬಗ್ಗೆ ಹೊಸ ವಿಷಯಗಳನ್ನು ನೀಡುತ್ತವೆ. ಅವನು ತನ್ನ ನಾಣ್ಯಗಳಲ್ಲಿ ಮಾಡಿದ ಬದಲಾವಣೆಗಳೆಲ್ಲವೂ ಅರ್ಥಪೂರ್ಣವಾಗಿವೆ. 'ಸಿಂಹಮರ್ದನ ಮಾದರಿ', ಮತ್ತು 'ಮಂಚಾರೂಢಮಾದರಿ'–ಇನ್ನೂ ಮುಂತಾ ದುವು ತಮ್ಮವೇ ಆದ ಅರ್ಥಗಳಿಂದ ಕೂಡಿವೆ.

೬

ಎರಡನೆಯ ಚಂದ್ರಗುಪ್ತನ ಮರಣಾನಂತರ, ಅವನ ಪಟ್ಟಮಹಿಷಿ ಧ್ರುವ ದೇವಿಯ ಉದರದಲ್ಲಿ ಜನಿಸಿದ ಅವನ ಮಗ ಕುಮಾರಗುಪ್ತ (ಕ್ರಿ. ಶ. 415-455) ಪಟ್ಟವೇರಿದ. ಇವನನ್ನು ಮಹೇಂದ್ರಾದಿತ್ಯನೆಂದೂ ಕರೆಯಲಾಗಿದೆ. ಇವನು ಕಾರ್ತಿಕೇಯನ ಭಕ್ತನಾಗಿದ್ದ. ಗುಪ್ತವಂಶದ ಪ್ರಖ್ಯಾತ ಚಕ್ರವರ್ತಿಗಳಲ್ಲಿ ಇವನೂ ಒಬ್ಬ. ಇವನು ಹಲವಾರು ಬಗೆಯ ನಾಣ್ಯಗಳ ಮಾದರಿಗಳನ್ನೂ ಹೊರಡಿಸಿದ. ಅವುಗಳಲ್ಲಿ ಕೆಲವನ್ನಿಲ್ಲಿ ಕೊಡಲಾಗಿದೆ :

I 'ಬಿಲ್ಲಾಳು' ಮಾದರಿ :

ಮುಮ್ಮುಖ : ದೊರೆ ಎಡಕ್ಕೆ ಮುಖ ತಿರುಗಿಸಿ, ನಿಂತು, ಧೋತಿಯನ್ನೂ ಶಿರ ಸ್ತ್ರಾಣವನ್ನೂ ತೊಟ್ಟಿದ್ದಾನೆ. ಎಡಗೈಲಿ ಬಿಲ್ಲನ್ನೂ, ಬಲಗೈಲಿ ಬಾಣವನ್ನೂ ಹಿಡಿದಿದ್ದಾನೆ. ಅರ್ಧಚಂದ್ರಾಕೃತಿ ಇರುವ ಗರುಡ ಧ್ವಜವಿದೆ.

ಆಲೇಖ : "ಪರಮ ರಾಜಾಧಿರಾಜ ಶ್ರೀಕುಮಾರ ಗುಪ್ತಃ"

ಹಿಮ್ಮುಖ : (ಲಕ್ಷ್ಮಿ) ದೇವತೆಯು ಕಮಲದ ಹೂಮೇಲೆ ಕುಳಿತು, ಹೊರಚಾಚಿದ ಬಲಗೈಲಿ ಪಾಶವನ್ನು ಹಿಡಿದಿದ್ದಾಳೆ; ಎಡಗೈಲಿ ಕಮಲದ ಹೂವಿದೆ.
ಆಲೇಖ : "ಶ್ರೀಮಹೇನ್ದ್ರ"

II "ಖಡ್ಗದಾರಿ" ಮಾದರಿ :–

ಮುಮ್ಮುಖ : ತೇಜೋವಲಯದಿಂದ ಆವೃತನಾದ ಅರಸ ಸೊಂಟಬಟ್ಟೆಯನ್ನು ಧರಿಸಿ, ಆಭರಣ ಭೂಷಿತನಾಗಿ, ಬಲಗೈಯಿಂದ ಯಜ್ಞಕುಂಡದಲ್ಲಿ ಹವಿಸ್ಸನ್ನು ಅರ್ಪಿಸುತ್ತಿದ್ದಾನೆ. ಎಡಗೈ ಖಡ್ಗದ ಹಿಡಿಯ ಮೇಲಿದೆ. ಎಡಭಾಗದಲ್ಲಿ ಗರುಡಧ್ವಜವಿದೆ.

ಆಲೇಖ : "ಗಾಮವಜಿತ್ಯ ಸುಚಿರಿತೈಃ ಕುಮಾರ ಗುಪ್ತಃ ದಿವಂ ಜಯತಿ"

(ಅನು ; "ಕುಮಾರಗುಪ್ತನು ಭೂಲೋಕವನ್ನು ಜಯಿಸಿ ಸಂಚರಿತ ಗಳಿಂದ ಸ್ವರ್ಗವನ್ನು ಜಯಿಸುತ್ತಾನೆ."

III "ಅಶ್ವಮೇಧ" ಮಾದರಿ :–

ಮುಮ್ಮುಖ : ಜೀನು ಹಾಕಿದ ಕುದುರೆಯನ್ನು ಯಜ್ಞಯೂಪದ ಮುಂದೆ ನಿಲ್ಲಿಸ ಲಾಗಿದೆ. ಈ ಅಂಶವು ಸಮುದ್ರಗುಪ್ತನ ಅಶ್ವಮೇಧ ಮಾದರಿ ಯಲ್ಲಿಲ್ಲ.

ಆಲೇಖ : "ಜಯತಿ ದಿವಂ ಕುಮಾರಃ"

ಕುದುರೆಯ ಕಾಲುಗಳ ನಡುವೆ "(ಅ)ಶ್ವಮೇಧ" – ಎಂದು ಬರೆಯಲಾಗಿದೆ.

ಹಿಮ್ಮುಖ : ತೇಜೋವಲಯದಿಂದ ಕೂಡಿದ ರಾಣಿ (ಮಹಿಷಿ ಅನಂತದೇವಿ ?) ಎಡಕ್ಕೆ ಮುಖ ತಿರುಗಿಸಿದ್ದಾಳೆ. ಬಲಹೆಗಲ ಮೇಲೆ ಚೌರಿಯನ್ನು, ಎಡಗೈಲಿ ಅವ್ಯಕ್ತವಸ್ತುವೊಂದನ್ನೂ ಹಿಡಿದಿದ್ದಾಳೆ. ಓಲೆ, ಕಂಠಾಭರಣ, ತೋಳ್ಬಂದಿ ಮತ್ತು ಕಾಲುಬಳೆಗಳನ್ನು ಧರಿಸಿದ್ದಾಳೆ. ಹಗ್ಗಸುತ್ತಿದ ಬರ್ಜಿ ಇದೆ.

ಆಲೇಖ : "ಶ್ರೀ ಅಶ್ವಮೇಧ ಮಹೇಂದ್ರ"

IV "ಅಶ್ವರೂಢ" ಮಾದರಿ :–

ಈ ಮಾದರಿಯನ್ನು ಹಲವಾರು ನಮೂನೆಗಳಲ್ಲಿ ಟಂಕಿಸಲಾಗಿದೆ.

ಮುಮ್ಮುಖ : ಸರ್ವಾಭರಣ ಭೂಷಿತವಾದ ಕುದುರೆಯ ಮೇಲೆ, ಅರಸನು ಸವಾರಿ ಮಾಡುತ್ತಿದ್ದಾನೆ. ಇದು ವಿವಿಧ ಆಲೇಖಗಳನ್ನು ಹೊಂದಿದೆ.

(ಅ) "ಪೃಥಿವೀತಲಂ ದಿವಂ ಜಯತ್ಯಜಿತಃ"

(ಅನು : ಸೋಲಿಲ್ಲದ ಇವನು ಭೂಮಿಯನ್ನೂ ಹಾಗೂ ಸ್ವರ್ಗವನ್ನೂ ಜಯಿಸುತ್ತಾನೆ.)

(ಆ) "ಕ್ಷಿತಿಪತಿರಜಿತೋ ವಿಜಯೀ ಮಹೇನ್ದ್ರ ಸಿಂಹೋ ದಿವಂ ಜಯತಿ."

(ಅನು : ಎಲ್ಲಿಯೂ ಸೋಲಿಲ್ಲದ ವಿಜಯಶಾಲಿಯಾದ ಭೂಪತಿ ಮಹೇನ್ದ್ರಸಿಂಹನು ಸ್ವರ್ಗವನ್ನು ಜಯಿಸುತ್ತಾನೆ.)

(ಇ) "ಗುಪ್ತಕುಲವ್ಯೋಮಶಶೀ ಜಯತ್ಯಜೇಯಾಜಿತೋ ಮಹೇನ್ದ್ರಃ".

(ಅನು : ಗುಪ್ತಕುಲಾಕಾಶದಲ್ಲಿ ಚಂದ್ರನಂತಿರುವ ಮಹೇನ್ದ್ರನು ಅಜಿತನೂ ಮತ್ತೆ ಯಾರಿಂದಲೂ ಜಯಿಸಲಾಗದವನೂ ಆಗಿರುವನು.)

ಹಿಮ್ಮುಖ : ಮಣೆಯ ಮೇಲೆ ಕುಳಿತಿರುವ (ಲಕ್ಷ್ಮಿ)ದೇವಿಯು ಹೊರ ಚಾಚಿದ ಬಲಗೈಲಿ ಕಮಲದ ಹೂವನ್ನೂ, ಎಡಗೈಲಿ ಪಾಶವನ್ನೂ ಹಿಡಿದಿದ್ದಾಳೆ.

ಆಲೇಖ "ಅಜಿತ ಮಹೇಂದ್ರಃ"

V "ಸಿಂಹಮರ್ದನ" ಮಾದರಿ :–

ಮುಮ್ಮುಖ : ಸೊಂಟಬಟ್ಟೆಯನ್ನು ಧರಿಸಿದ ಅರಸ ನಿಂತಿದ್ದಾನೆ. ಆಭರಣಗಳನ್ನು ಧರಿಸಿದ್ದಾನೆ. ಅವನ ಹಿಂದೆ ಅಲಂಕಾರಿಕ ಪಟ್ಟಿ ಹಾರಾಡುತ್ತಿದೆ. ಸಿಂಹವನ್ನು ಹೊಡೆಯುತ್ತಿದ್ದಾನೆ. ಅದು ಹಿಂದೆ ಬೀಳುತ್ತಿದೆ.
ಆಲೇಖ : "ಕುಮಾರ ಗುಪ್ತೊ ವಿಜಯೀ ಸಿಂಹಮಂಹೇನ್ದ್ರೋ ದಿವಂ ಜಯತಿ".

ಹಿಮ್ಮುಖ : ಸಿಂಹ ಪೀಠದ ಮೇಲೆ, ತೇಜೋವಲಯದಿಂದ ಆವೃತಳಾಗಿ ದೇವತೆಯು ಕುಳಿತಿದ್ದಾಳೆ. ಹೊರಚಾಚಿದ ಬಲಗೈಲಿ ಕಮಲದ ಹೂವನ್ನೂ, ಎಡಗೈಲಿ ಪಾಶವನ್ನೂ ಹಿಡಿದಿದ್ದಾಳೆ.
ಆಲೇಖ : "ಶ್ರೀ ಮಹೇನ್ದ್ರ ಸಿಂಹಃ"

VI "ವ್ಯಾಘ್ರಮರ್ದನ" ಮಾದರಿ :–

ಮುಮ್ಮುಖ : ನಮ್ಮತ್ತ ಮುಖಮಾಡಿರುವ ಅರಸ, ಬಲಗೈಲಿ ಬಾಣವನ್ನು ಹಿಡಿದು ಹುಲಿಯನ್ನು ಹೊಡೆಯುತ್ತಿದ್ದಾನೆ. ಅದು ಹಿಂದೆ ಬೀಳುತ್ತಿದೆ. ಎಡಭಾಗದಲ್ಲಿ ಅರ್ಧಚಂದ್ರಾಕೃತಿಯ ಧ್ವಜವಿದೆ.
ಆಲೇಖ : "ಶ್ರೀಮಾನ್ ವ್ಯಾಘ್ರಬಲ ಪರಾಕ್ರಮಃ"

ಹಿಮ್ಮುಖ : ದೇವಿಯೊಬ್ಬಳು ಕಮಲದ ಹೂಮೇಲೆ ನಿಂತು, ಕಮಲದ ಹೂವನ್ನು ಎಡಗೈಲಿ ಹಿಡಿದು, ಬಲಗೈಲಿ ಹಣ್ಣುಗಳನ್ನು ನವಿಲಿಗೆ ತಿನ್ನಿಸುತ್ತಿದ್ದಾಳೆ.
ಆಲೇಖ : "ಕುಮಾರಗುಪ್ತರಾಜ"

ನವಿಲಿಗೆ ಹಣ್ಣುಗಳನ್ನು ನೀಡುತ್ತಿರುವ ದೇವಿಯನ್ನು ದುರ್ಗೆಯೆಂದು ಭಾವಿಸಲಾಗಿದೆ. ನವಿಲನ್ನು ಮೊದಲಿಗೆ ನಾಣ್ಯಗಳ ಮೇಲೆ ಅಳವಡಿಸಿದವನು ಕುಮಾರಗುಪ್ತ.

VII "ಮಯೂರ" ಮಾದರಿ :–

ಮುಮ್ಮುಖ : ತೇಜೋವಲಯದಿಂದ ಆವೃತನಾದ ಅರಸ ನಿಂತು, ಬಲಗೈಲಿ ನವಿಲಿಗೆ ಹಣ್ಣಿನ ಗೊಂಚಲನ್ನು ತಿನ್ನಿಸುತ್ತಿದ್ದಾನೆ ; ಸೊಂಟಬಟ್ಟೆಯನ್ನೂ, ಅಲಂಕಾರಿಕ ಬಟ್ಟೆಯನ್ನೂ, ಹಾಗೂ ಆಭರಣಗಳನ್ನೂ ಧರಿಸಿದ್ದಾನೆ. ಎಡಗೈ ಹಿಂಭಾಗದಲ್ಲಿದೆ.
ಆಲೇಖ : "ಜಯತಿ ಸ್ವಭೂಮೌ ಗುಣರಾಶೀ."

(ಅನು : ಗುಣರಾಶಿಯಾದ ಇವನು ತನ್ನ ಭೂಮಿಯಲ್ಲಿ ಜಯಶೀಲನಾಗುತ್ತಾನೆ.)

ಹಿಮ್ಮುಖ : ತೇಜೋವಲಯದಿಂದ ಕೂಡಿದ ಕಾರ್ತಿಕೇಯ ಮಯೂರದ ಮೇಲೆ ಕುಳಿತು, ಎಡಗೈಲಿ ಬರ್ಜಿಯನ್ನು ಹಿಡಿದು, ಬಲಗೈಲಿ ಪವಿಸ್ಸನ್ನು ಯಜ್ಞಕುಂಡದಲ್ಲಿ ಹಾಕುತ್ತಿದ್ದಾನೆ.

ಆಲೇಖ : "ಮಹೇಂದ್ರ ಕುಮಾರಃ"

VII "ಪ್ರತಾಪ" ಮಾದರಿ :–

ಮುಮ್ಮುಖ : ಸಡಿಲ ಉಡುಪನ್ನು ಧರಿಸಿದವನೊಬ್ಬ ಜ್ಞಾನಮುದ್ರಾ ಭಂಗಿಯಲ್ಲಿ ಸಮ್ಮುತ್ತ ನೋಡುತ್ತಾ ನಿಂತಿದ್ದಾನೆ. ಅವನ ಎಡಭಾಗದಲ್ಲಿ ಸ್ತ್ರೀಯೊಬ್ಬಳು ಸಡಿಲ ಉಡುಪನ್ನೂ, ಶಿರಸ್ತ್ರಾಣವನ್ನೂ ಧರಿಸಿದ್ದಾಳೆ. ಗರುಡ ಧ್ವಜವಿದೆ.

ಆಲೇಖ : "ಕುಮಾರಗುಪ್ತಃ"

ಹಿಮ್ಮುಖ : ದೇವಿಯೊಬ್ಬಳು ಕಮಲದ ಹೂಮೇಲೆ ಕುಳಿತು, ಕಮಲದ ಹೂವನ್ನು ಹಿಡಿದಿದ್ದಾಳೆ.

ಆಲೇಖ : "ಶ್ರೀ-ಪ್ರತಾಪಃ"

IX 'ಗಜರೂಢವಮಾದರಿ :–

ಮುಮ್ಮುಖ : ಅಂಕುಶವನ್ನು ಹಿಡಿದ ಅರಸ ಆನೆಯಮೇಲೆ ಸವಾರಿ ಮಾಡುತ್ತಿದ್ದಾನೆ. ಅವನ ಹಿಂದೆ ಕುಳಿತ ಸೇವಕ ಆತಪತ್ರವನ್ನು ಹಿಡಿದಿದ್ದಾನೆ.

ಆಲೇಖ : "ಕ್ಷತರಿಪುಃ ಕುಮಾರಗುಪ್ತೋ ರಾಜಾ ಜಯತಿ ರಿಪೂನ್".

(ಅನು : ಅಪಾಯವನ್ನು ಪರಿಹರಿಸುವ ರಾಜಕುಮಾರ ಗುಪ್ತನು ಶತ್ರುಗಳನ್ನು ಜಯಿಸುತ್ತಾನೆ).

ಹಿಮ್ಮುಖ : ಕಮಲದ ಹೂಮೇಲೆ ಕುಳಿತ ಲಕ್ಷ್ಮಿ, ಅದೇ ಹೂವನ್ನು ಹಿಡಿದ್ದಾಳೆ.

ಆಲೇಖ : "ಶ್ರೀ ಮಹೇಂದ್ರ ಗಜಃ"

ಕುಮಾರಗುಪ್ತ ಬೆಳ್ಳಿ ಹಾಗೂ ತಾಮ್ರದಲ್ಲೂ ನಾಣ್ಯಗಳನ್ನು ಟಂಕಿಸಿದ. ಭಾರತದ ಪಡುವಣ ಪ್ರದೇಶದ ಕ್ಷತ್ರಪರ ಪರಂಪರೆಯನ್ನು ಮುಂದುವರಿಸಿ ಬೆಳ್ಳಿಯ

ನಾಣ್ಯಗಳನ್ನು ತನ್ನ ತಂದೆಯಂತೆಯೇ ಮುದ್ರಿಸಿದ. ಅವನ ಬೆಳ್ಳಿಯ ನಾಣ್ಯಗಳಲ್ಲಿ ಹಲವಾರು ಮಾದರಿಗಳನ್ನು ಕಾಣಬಹುದು. ಅವುಗಳ ಮೇಲೆ ಗ್ರೀಕರ ಪ್ರಭಾವ ಎದ್ದುಕಾಣುತ್ತದೆ. ಇವನ ಕೆಲವೇ ತಾಮ್ರದ ನಾಣ್ಯಗಳು ದೊರೆತಿವೆ. ಈ ನಾಣ್ಯಗಳ ಮೇಲೆ "ಕುಮಾರಗುಪ್ತಃ" ಮತ್ತು "ಶ್ರೀಕು"—ಎಂದು ಬರೆಯಲಾಗಿದೆ.

೭

ವಯೋವೃದ್ಧನಾದ ಕುಮಾರಗುಪ್ತ ಮೃತನಾದಾಗ, ಅವನ ಮಗ ಸ್ಕಂದ ಗುಪ್ತ ವಿಕ್ರಮಾದಿತ್ಯ ಚಕ್ರವರ್ತಿ ಪಟ್ಟಕ್ಕೇರಿದ (ಕ್ರಿ. ಶ. 455-6). ಇವನೂ ಕೂಡ ತನ್ನ ಪೂರ್ವಿಕರಂತೆ ಬಲಶಾಲಿಯಾದ ಅರಸ. ಇವನು ಅಧಿಕಾರವಹಿಸಿಕೊಂಡ ಮೇಲೆ ಸಾಮ್ರಾಜ್ಯದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದವು. ಹೂಣರು ಅಧಿಕವಾಗಿ ಭಾರತದೊಳಕ್ಕೆ ನುಗ್ಗಿದರು. ಇವರನ್ನು ಜಯಪ್ರದವಾಗಿ ತಡೆದ. ಆಂತರಿಕ ಕ್ಷೋಭೆ, ಹಾಗೂ ಹೊರಗಣ ಧಾಳಿಗಳಿಂದ ಆರ್ಥಿಕ ಕ್ಷೇತ್ರದ ಮೇಲೆ ಮಹತ್ತರವಾದ ಪೆಟ್ಟು ಬಿತ್ತು. ಅವನ ನಾಣ್ಯಗಳಲ್ಲಿ ಕೀಳು ಲೋಹಗಳ ಸೇರ್ಪಡೆ ಅನಿವಾರ್ಯವಾಯಿತು. ಅವನ ಚಿನ್ನದ ನಾಣ್ಯಗಳಲ್ಲೂ ಕಲಬೆರಕೆ ಅಧಿಕವಾಯಿತು. ಗುಪ್ತ ಸಾಮ್ರಾಜ್ಯದ ವೈಭವ ಮಸುಕಾದುದನ್ನು ಕಾಣಬಹುದು. ಈ ಪರಿಸ್ಥಿತಿ ಮುಂದಣ ಅರಸರ ಕಾಲದಲ್ಲಿ ಮತ್ತಷ್ಟು ಉಲ್ಬಣಗೊಂಡು ಮುಂದುವರೆಯಿತು.

ಸ್ಕಂದಗುಪ್ತ ತನ್ನ ಹಿಂದಿನ ಚಕ್ರವರ್ತಿಗಳಂತೆ ಚಿನ್ನದ ನಾಣ್ಯಗಳನ್ನು ಹೆಚ್ಚಿನ ಮಾದರಿಗಳಲ್ಲಿ ಟಂಕಿಸಿರಲಿಲ್ಲ. ಅವನು ಕೇವಲ ಮೂರು ಮಾದರಿಗಳಲ್ಲಿ–'ಬಿಲ್ಲಾಳು', 'ಅರಸಿ - ಅರಸಿ' ಮತ್ತು 'ಅಶ್ವರೂಢ' ಮಾದರಿಗಳಲ್ಲಿ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದ. "ಜಯತಿ ಮಹೀತಲಮ್", "ಜಯತಿ ದಿವಂ ಶ್ರೀಕ್ರಮಾಧಿತ್ಯ", "ಸುಧನ್ವೀ"—ಇವೇ ಮೊದಲಾದ ಆಲೇಖಗಳು ಸ್ಕಂಧಗುಪ್ತನ ನಾಣ್ಯಗಳ ಮೇಲೆ ಕಾಣಸಿಗುತ್ತವೆ.

ಇವನು ಸಾಮ್ರಾಜ್ಯದ ಪಡುವಣ ಹಾಗೂ ನಡುವಣ ಪ್ರದೇಶಗಳಲ್ಲಿ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದ. ಆದ್ದರಿಂದ ಸಹಜವಾಗಿಯೇ ಎರಡು ಮಾದರಿಗಳನ್ನು ಕಾಣಬಹುದು. 'ನಂದಿ' ಮತ್ತು 'ಯಜ್ಞವೇದಿಕೆ' ಮಾದರಿಗಳನ್ನು ಅವನು ಹೊಸದಾಗಿ ಚಲಾವಣೆಗೆ ತಂದ.

ಗುಪ್ತರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಇತಿಹಾಸಗಳ ನಿರೂಪಣೆಯಲ್ಲಿ ಅವರ ನಾಣ್ಯಗಳ ಪಾತ್ರ ಹಿರಿದಾದುದು. ಅಷ್ಟೇಕೆ, ಶಾಸನ ಸಾಹಿತ್ಯಾಧಾರಗಳಷ್ಟೇ ಸರಿಸಮವಾಗಿ ಅವರ ಇತಿಹಾಸಿಕ ಬೆಳವಣಿಗೆಗೆ ತಮ್ಮದೇ ಆದ ಕಾಣಿಕೆಗಳನ್ನು ನೀಡುತ್ತವೆ, ಅವರ ನಾಣ್ಯಗಳು ಗುಪ್ತ ಚಕ್ರವರ್ತಿಗಳ ಧಾರ್ಮಿಕ ಹಾಗೂ ವೈಯಕ್ತಿಕ

ಅಭಿರುಚಿಗಳ ಬಗ್ಗೆ ಹೊಸಬೆಳಕನ್ನು ಚೆಲ್ಲುತ್ತವೆ; ಗುಪ್ತ ಸಾಮ್ರಾಜ್ಯದ ವಿಸ್ತೀರ್ಣ ಹಾಗೂ ಅವರ ಪ್ರಭಾವವಲಯದ ಬಗ್ಗೆ ಹೊಸಮಾಹಿತಿಯನ್ನು ನೀಡುತ್ತವೆ. ಒಟ್ಟಿನಲ್ಲಿ ಗುಪ್ತರ ಸಮಗ್ರ ಇತಿಹಾಸದ ರಚನೆಯಲ್ಲಿ ಅವರ ನಾಣ್ಯಗಳು ಬಹಳಷ್ಟು ಸಹಕಾರಿಯಾಗಿವೆ.

ಗ್ರಂಥಋಣ :

Altekar, A. S. — The Bayana Hoard of Gold Coins.
Goyal, R. S. — A History of the Imperial Guptas.
Gupta, P. L. — Coins.
Mookerji, R. K. — The Gupta Empire
Majumdar, R. C. — The Classical Age.

ಅಭಿವೃದ್ಧಿ ಅಥವಾ ಆಯುಧಗಳು, ಯಾವುದು ಬೇಕು ?

ಟಿ. ಎನ್. ವಿಜಯಪ್ಪ

ಪ್ರಪಂಚದ ಪ್ರಸ್ತುತ ಪರಿಸ್ಥಿತಿ :

ಎರಡನೆಯ ವಿಶ್ವಯುದ್ಧಾನಂತರ ಪ್ರಪಂಚದ ರಾಷ್ಟ್ರಗಳು ರಾಜಕೀಯ ಭಾವನೆಗಳಲ್ಲಿದ್ದ ಭಿನ್ನತೆಗಳ ಆಧಾರದ ಮೇಲೆ ''ಪೂರ್ವ'' ಮತ್ತು ''ಪಶ್ಚಿಮ'' ಎಂಬ ಎರಡು ಗುಂಪುಗಳಾದವು. ಇವು ಮುಖ್ಯವಾಗಿ ಎರಡು ಶಕ್ತಿ ಬಣಗಳಾಗಿದ್ದ ವೆಂದು ಹೇಳಬಹುದು. ಏಕೆಂದರೆ, ಅವುಗಳ ಮುಖ್ಯ ಉದ್ದೇಶ ಕೈಗಾರಿಕಾ ಶಕ್ತಿ ಹಾಗು ಮಿಲಿಟರಿ ಬಲಗಳ ಪ್ರದರ್ಶನವೇ ಆಗಿತ್ತು. ಪಾಶ್ಚಾತ್ಯ ದೇಶಗಳ ಗುಂಪಿನಲ್ಲಿ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್ ಮುಖ್ಯವಾದ ರಾಷ್ಟ್ರಗಳಾಗಿದ್ದವು. ರಷ್ಯಾ, ಚೀನ, ಮತ್ತಿತರ ಕೆಲವು ಕಮ್ಯುನಿಸ್ಟ್ ದೇಶಗಳು ಪ್ರಾಚ್ಯ ರಾಷ್ಟ್ರಗಳ ಗುಂಪಿಗೆ ಸೇರಿದ್ದವು. ಈ ಎರಡು ಶಕ್ತಿ ಬಣಗಳಿಗೂ ಸೇರದ ಮೂರನೆಯ ಗುಂಪಿನಲ್ಲಿದ್ದ ಅನೇಕ ದೇಶಗಳು ''ತಟಸ್ಥ ರಾಷ್ಟ್ರ''ಗಳೆಂದು ಹೇಳಿಕೊಳ್ಳುತ್ತಿದ್ದವು. ಹೀಗೆ ವಿಶ್ವದ ರಾಷ್ಟ್ರಗಳು ಮೂರು ಪಂಗಡಗಳಾಗಿ ವಿಭಾಗವಾಗಿ ಹೋಗಿದ್ದವು. ಈ ಮೂರು ಪಂಗಡಗಳ ಮಧ್ಯೆಯಿದ್ದ ಸಂಬಂಧಗಳಲ್ಲಿ ಒಂದು ಮುಖ್ಯವಾದ ಅಂಶ ಕಂಡುಬರುತ್ತಿತ್ತು. ಪಾಶ್ಚಾತ್ಯ ಮತ್ತು ಪ್ರಾಚ್ಯ ದೇಶಗಳ ಗುಂಪುಗಳು, ಮೂರನೆಯ ಗುಂಪಿನಲ್ಲಿದ್ದ ತಟಸ್ಥ ರಾಷ್ಟ್ರಗಳನ್ನು ತಮ್ಮ ತಮ್ಮ ಶಕ್ತಿಬಣಗಳ ಪ್ರಭಾವಕ್ಕೆ ಒಳಗಾಗುವಂತಹ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದುದೇ ಆ ಮುಖ್ಯವಾದ ಅಂಶವಾಗಿತ್ತು. ಇಂತಹ ಪ್ರಯತ್ನಗಳಿಂದಾಗಿ ಈ ಎರಡು ಶಕ್ತಿಬಣಗಳ ಗುಂಪಿನಲ್ಲಿದ್ದ ದೇಶಗಳ ನಡುವೆ ತಿಕ್ಕಾಟ, ಚಕಮಕಿ, ಶೀತಲ ಯುದ್ಧ ಮೊದಲಾದವು ಆಗಾಗ್ಗೆ ನಡೆಯುತ್ತಿದ್ದವು. ಶಕ್ತಿ ಬಣಗಳ ಆಧಾರದ ಮೇಲೆ ವಿಶ್ವದ ರಾಷ್ಟ್ರಗಳ ಇಂತಹ ವಿಭಜನೆಗಳು ಮುಖ್ಯವಾಗಿ 1950 ರ ಮತ್ತು 1960 ರ ದಶಕಗಳಲ್ಲಿ ಕಂಡು ಬರುತ್ತಿತ್ತು. ಆದರೆ 1970 ರ ದಶಕದಲ್ಲಿ ಮತ್ತು ಅನಂತರ, ಪ್ರಪಂಚದ ದೇಶಗಳ ಈ ಮೂರು ಪಂಗಡಗಳ ನಡುವೆಯಿದ್ದ ಸಂಬಂಧಗಳಲ್ಲಿ ರಾಜಕೀಯ ಭಾವನೆ ಹಾಗು ಶಕ್ತಿಬಣಗಳಲ್ಲಿದ್ದ ಭಿನ್ನತೆಗಳ ಪ್ರಾಮುಖ್ಯ ಕಡಿಮೆಯಾಗುತ್ತಾ ಬಂದು, ಅವುಗಳ ಜಾಗದಲ್ಲಿ ಆರ್ಥಿಕ ಅಂಶಗಳಲ್ಲಿದ್ದ ಅಂತರಗಳ ಪ್ರಾಮುಖ್ಯ ಹೆಚ್ಚಾಗುತ್ತಾ ಬಂದಿತು. ಈ ಬದಲಾವಣೆಯಾದರೂ ವಿಶ್ವವು ಪುನಃ ಮೂರು ಪ್ರಪಂಚಗಳಾಗಿ ವಿಭಾಗವಾಗಿ ಹೋಯಿತು.

ರಾಜಕೀಯ ಮತ್ತು ಆರ್ಥಿಕ ಅಂಶಗಳ ಆಧಾರದ ಮೇಲೆ ವಿಶ್ವವು ಇಂದು ಮುಖ್ಯವಾಗಿ ಮೂರು ಪ್ರಪಂಚಗಳಾಗಿ ವಿಭಾಗವಾಗಿದೆ. ಅಮೆರಿಕ, ಬ್ರಿಟನ್, ಫ್ರಾನ್ಸ್, ಪಶ್ಚಿಮ ಜರ್ಮನಿ, ಜಪಾನ್ ಮೊದಲಾದವು "ಮೊದಲನೆಯ ಪ್ರಪಂಚ"ಕ್ಕೆ ಸೇರಿರುವ ರಾಷ್ಟ್ರಗಳಾಗಿವೆ. ಇವುಗಳಲ್ಲಿನ ಕೈಗಾರಿಕೆಗಳು ಅಮೋಘವಾಗಿ ಮುಂದುವರಿದಿವೆ. ಆದ್ದರಿಂದಲೇ ಅವುಗಳನ್ನು ಕೈಗಾರಿಕಾ ರಾಷ್ಟ್ರಗಳೆಂದು ಕರೆಯುತ್ತಾರೆ. ಈ ದೇಶಗಳ ಅರ್ಥವ್ಯವಸ್ಥೆಗಳು ಮುಖ್ಯವಾಗಿ ಬಂಡವಾಳ ಪ್ರಭುತ್ವ ರೀತಿಯದ್ದಾಗಿವೆ. ಅವುಗಳ ಒಟ್ಟು ರಾಷ್ಟ್ರೀಯ ಉತ್ಪನ್ನಗಳು ತುಂಬ ಹೆಚ್ಚಿನ ಮಟ್ಟದಲ್ಲಿವೆ. ಇದರಿಂದಾಗಿ ಅಲ್ಲಿನ ಜನರ ಜೀವನ ಮಟ್ಟಗಳು ಅತಿ ಉತ್ತಮವಾಗಿವೆ. ಅವುಗಳು ಸಾಧಿಸಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಎಲ್ಲರೂ ಶ್ಲಾಘಿಸುತ್ತಾರೆ. ಅಲ್ಲದೆ ಅವುಗಳ ರಾಜಕೀಯ ವರ್ಚಸ್ಸು ಇತರ ದೇಶಗಳ ಮೇಲೆ ಅಧಿಕ ಪ್ರಭಾವಯುತವಾದದ್ದಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಅವು ವಿಶ್ವದಲ್ಲೇ ಅಗ್ರಗಣ್ಯ ಶ್ರೀಮಂತ ರಾಷ್ಟ್ರಗಳಾಗಿವೆ.

ಇನ್ನು "ಎರಡನೆಯ ಪ್ರಪಂಚ" ದಲ್ಲಿರುವ ರಾಷ್ಟ್ರಗಳು ಯಾವುವೆಂದರೆ, ಸೋವಿಯಟ್ ರಷ್ಯಾ, ಪೋಲೆಂಡ್, ಹಂಗೆರಿ, ಜೆಕೋಸ್ಲೋವೇಕಿಯ, ಯುಗೋಸ್ಲಾವಿಯ ಮೊದಲಾದ ಕಮ್ಯುನಿಸ್ಟ್ ದೇಶಗಳು. ಇವುಗಳ ಅರ್ಥವ್ಯವಸ್ಥೆಗಳು ಮುಖ್ಯವಾಗಿ ಪ್ರಜಾಸ್ವಾಮ್ಯವಾದ ಪದ್ಧತಿಯ ಆಧಾರದ ಮೇಲೆ ನಡೆಯುತ್ತಿವೆ. ಇಂತಹ ಅರ್ಥವ್ಯವಸ್ಥೆಗಳಲ್ಲಿ ಸಾಮಾನ್ಯವಾಗಿ ಒಟ್ಟು ಉತ್ಪಾದನೆ ಮತ್ತು ವಿತರಣೆಗಳ ಮೇಲೆ ಸಮಾಜದ ಅಥವಾ ಸರಕಾರದ ಕಟ್ಟುನಿಟ್ಟಾದ ಹತೋಟಿಗಳು ಇರುತ್ತವೆ. ಆದ್ದರಿಂದ ಖಾಸಗಿ ಉದ್ಯಮಕ್ಷೇತ್ರಗಳ ಕಾರ್ಯಚಟುವಟಿಕೆಗಳು ಅಲ್ಲಿ ತುಂಬ ಮಿತವಾಗಿರುತ್ತವೆ. ಈ ಕಮ್ಯುನಿಸ್ಟ್ ದೇಶಗಳ ಅರ್ಥವ್ಯವಸ್ಥೆಗಳು ಬಂಡವಾಳಪ್ರಭುತ್ವ ರಾಷ್ಟ್ರಗಳ ಅರ್ಥವ್ಯವಸ್ಥೆಗಳಿಗಿಂತ ತೀರ ಭಿನ್ನವಾಗಿದ್ದರೂ, ಗಮನಾರ್ಹವಾದ ಆರ್ಥಿಕಾಭಿವೃದ್ಧಿಯನ್ನು ಅವು ಸಾಧಿಸಿವೆ. ಕೈಗಾರಿಕೆ ಮತ್ತು ಮಿಲಿಟರಿ ಬಲಗಳ ದೃಷ್ಟಿಯಿಂದಲೂ ಈ ಕಮ್ಯುನಿಸ್ಟ್ ರಾಷ್ಟ್ರಗಳು ಹೆಚ್ಚು ಬಲಾಢ್ಯವಾದವುಗಳಾಗಿವೆ. ಮೇಲಾಗಿ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಪ್ರಗತಿ ಈ ದೇಶಗಳಲ್ಲಿ ಗಣನೀಯವಾಗಿ ಮುಂದುವರಿದಿದೆ. ಈ ಎಲ್ಲ ಕಾರಣಗಳಿಂದಾಗಿ ಅಲ್ಲಿನ ಜನರ ಮುಖ್ಯ ಆವಶ್ಯಕತೆಗಳನ್ನು ಪೂರೈಸಿ, ಅವರು ತೃಪ್ತಿಕರವಾದ ಜೀವನಮಟ್ಟವನ್ನು ಅನುಭವಿಸುವಂತೆ ಮಾಡುವುದು ಆ ದೇಶಗಳಿಗೆ ಸಾಧ್ಯವಾಗಿದೆ. ಶ್ರೀಮಂತ ರಾಷ್ಟ್ರಗಳ ಜನಜೀವನದಲ್ಲಿ ಕಾಣುವ ಅತಿಯಾದ ಭೋಗ ವಿಲಾಸಗಳನ್ನು ಈ ದೇಶಗಳಲ್ಲಿ ಕಾಣದೆ ಇರಬಹುದು. ಆದರೆ ಈ ಎಲ್ಲ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿರುವ ಜನರ ಜೀವನಮಟ್ಟ ಸಾಕಷ್ಟು ಉತ್ತಮವಾಗಿದೆಯೆಂಬ ಅಂಶವನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಕಮ್ಯುನಿಸ್ಟ್

ರಾಷ್ಟ್ರಗಳು ತಮ್ಮವೇ ಆದ ರಾಜಕೀಯ ಪ್ರಭಾವವನ್ನು ಇತರ ಹಲವಾರು ದೇಶಗಳ ಮೇಲೆ ಬೀರಿವೆಯೆಂಬ ಅಂಶವನ್ನು ಇಂದಿನ ಪ್ರಪಂಚದ ಪರಿಸ್ಥಿತಿಯಲ್ಲಿ ಮರೆಯುವಂತಿಲ್ಲ.

ಕೊನೆಯದಾಗಿ, ''ಮೂರನೆಯ ಪ್ರಪಂಚ''ದ ಗುಂಪಿಗೆ ಏಷ್ಯಾ, ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡಗಳ ಅನೇಕ ದೇಶಗಳು ಸೇರಿವೆ. ಇವುಗಳ ಸಂಖ್ಯೆ ನೂರಕ್ಕೂ ಮಿಗಿಲಾಗಿದೆ. ಆದರೆ ಅವುಗಳ ಮಧ್ಯೆ ನಾನಾ ರೀತಿಯ ಅಂತರಗಳಿವೆ. ವಿಸ್ತೀರ್ಣದಲ್ಲಿ ಭಾರತ, ಬ್ರೆಜಿಲ್, ಚೀನ ಮೊದಲಾದವು ದೊಡ್ಡ ರಾಷ್ಟ್ರಗಳಾಗಿದ್ದರೆ, ಶ್ರೀಲಂಕ, ಪಾಕಿಸ್ತಾನ, ಬರ್ಮ, ಬಾಂಗ್ಲದೇಶ್, ಘಾನ, ಸೆನೆಗಲ್, ಚಿಲಿ, ಸೂರಿನಾಮ್ ಮೊದಲಾದವು ಅತಿ ಸಣ್ಣ ದೇಶಗಳಾಗಿವೆ. ಇದೇ ರೀತಿ ಜನಸಂಖ್ಯೆಯಲ್ಲಿ ವಿಶ್ವದಲ್ಲೇ ಕ್ರಮವಾಗಿ ಮೊದಲನೆಯ ಮತ್ತು ಎರಡನೆಯ ಸ್ಥಾನಗಳನ್ನು ಚೀನ ಮತ್ತು ಭಾರತಗಳು ಹೊಂದಿದ್ದರೆ, ಆಫ್ರಿಕ ಹಾಗು ದಕ್ಷಿಣ ಅಮೆರಿಕ ಖಂಡಗಳ ಹಲವು ದೇಶಗಳು ಅತಿ ಕಡಿಮೆಯಾದ ಜನ ನಿಬಿಡತೆಯಿಂದ ಕೂಡಿವೆ. ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದ ಭಾರತ, ಈಜಿಪ್ಟ್ ಚೀನ, ಬ್ರೆಜಿಲ್, ಚಿಲಿ, ಅರ್ಜೆಂಟಿನ ಮೊದಲಾದವು ಇದೇ ಗುಂಪಿನಲ್ಲಿರುವ ಇತರ ದೇಶಗಳಿಗಿಂತಲೂ ಸಾಕಷ್ಟು ಮುಂದುವರಿದಿವೆ. ರಾಜಕೀಯವಾಗಿ ಈ ಗುಂಪಿ ನಲ್ಲಿರುವ ಬಹುತೇಕ ರಾಷ್ಟ್ರಗಳು ಯಾವ ಶಕ್ತಿಬಣಕ್ಕೂ ಸೇರದೆ ತಟಸ್ಥ ನೀತಿಯನ್ನು ಅನುಸರಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿವೆ. ಆದರೆ ವಾಸ್ತವವಾಗಿ ಈ ಅಲಿಪ್ತ ದೇಶಗಳ ರಾಜ್ಯನೀತಿಗಳ ಮೇಲೆ, "ಮೊದಲನೆ" ಮತ್ತು ''ಎರಡನೆ ಪ್ರಪಂಚ''ಗಳ ಗುಂಪುಗಳಲ್ಲಿರುವ ರಾಷ್ಟ್ರಗಳು ಅನುಸರಿಸುತ್ತಿರುದ ರಾಜ್ಯನೀತಿಗಳ ಪ್ರಭಾವ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇರುವುದನ್ನು ಅಲ್ಲಗಳೆಯುವಂತಿಲ್ಲ. ಇನ್ನು ಆರ್ಥಿಕವಾಗಿ ''ಮೂರನೆಯ ಪ್ರಪಂಚ''ದ ಗುಂಪಿನಲ್ಲಿರುವ ಎಲ್ಲ ದೇಶಗಳೂ ಸಾಮಾನ್ಯವಾಗಿ ತುಂಬ ಹಿಂದುಳಿದಿವೆ. ಅನ್ನ, ಬಟ್ಟೆ, ವಸತಿ ಸೌಕರ್ಯಗಳ ಕೊರತೆ, ಅನಾರೋಗ್ಯ, ವಿದ್ಯಾಹೀನತೆ, ದಾರಿದ್ರ್ಯ, ನಿರುದ್ಯೋಗ, ಕೊಳಕು, ಜನಸಂಖ್ಯೆಯ ಅತಿಯಾದ ಬೆಳವಣಿಗೆ ಮೊದಲಾದ ಅನೇಕ ಪೀಡೆಗಳು ಈ ದೇಶ ಗಳನ್ನು ಬಾಧಿಸುತ್ತಿವೆ. ಆದ್ದರಿಂದ ಈ ರಾಷ್ಟ್ರಗಳನ್ನು ಬಡದೇಶಗಳೆಂದು ಪರಿಗಣಿಸಲಾಗಿದೆ.

ಮೇಲೆ ವಿವರಿಸಿದ ''ಮೂರು ಪ್ರಪಂಚಗಳ'' ವಿಭಜನೆಯಲ್ಲದೆ, ವಿಶ್ವದ ರಾಷ್ಟ್ರಗಳನ್ನು ''ಉತ್ತರ ಮತ್ತು ದಕ್ಷಿಣ'' ಎಂಬ ಎರಡು ಗುಂಪುಗಳನ್ನಾಗಿ ಮಾಡಲಾಗಿದೆ. ಇಂತಹ ವಿಭಜನೆಗೆ ಮುಖ್ಯ ಆಧಾರವೇನೆಂದರೆ, "ಮೊದಲನೆಯ ಪ್ರಪಂಚ''ದಲ್ಲಿರುವ ಎಲ್ಲ ಶ್ರೀಮಂತ ರಾಷ್ಟ್ರಗಳು ಸ್ವಲ್ಪ ಹೆಚ್ಚು ಕಡಿಮೆ ಭೂಮಿಯ ಉತ್ತರಾರ್ಧಗೋಳದಲ್ಲೂ, ''ಮೂರನೆಯ ಪ್ರಪಂಚ''ದಲ್ಲಿರುವ ಬಹುತೇಕ ಬಡ

ದೇಶಗಳು ಭೂಮಿಯ ದಕ್ಷಿಣಾರ್ಧಗೋಳದಲ್ಲಿ ಇರುವುದೇ ಆಗಿದೆ. ಅಂದರೆ "ಉತ್ತರ"ದ ಗುಂಪಿನಲ್ಲಿರುವ ರಾಷ್ಟ್ರಗಳು ಹೆಚ್ಚಿನ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿರುವ ಮುಂದುವರಿದ ದೇಶಗಳಾಗಿವೆ. ಆದರೆ 'ದಕ್ಷಿಣ'ದ ಗುಂಪಿನಲ್ಲಿರುವ ರಾಷ್ಟ್ರಗಳು ಸಾಕಷ್ಟು ಆರ್ಥಿಕಾಭಿವೃದ್ಧಿಯನ್ನು ಸಾಧಿಸದ ಹಿಂದುಳಿದಿರುವ ದೇಶಗಳಾಗಿವೆ. ಇದಲ್ಲದೆ, "ಮೂರನೆಯ ಪ್ರಪಂಚ" ಅಥವಾ "ದಕ್ಷಿಣ"ದ ಪಂಗಡದಲ್ಲಿರುವ ರಾಷ್ಟ್ರಗಳನ್ನು "77ರ ಗುಂಪು" ಎಂದೂ ಕರೆಯುತ್ತಾರೆ. ಆದರೆ ವಾಸ್ತವವಾಗಿ ಈ ಗುಂಪಿನಲ್ಲಿ 77ಕ್ಕೂ ಮಿಗಿಲಾಗಿ ಆರ್ಥಿಕವಾಗಿ ಹಿಂದುಳಿದ ದೇಶಗಳಿವೆ.

ಒಟ್ಟಿನಲ್ಲಿ ಪ್ರಸ್ತುತ ಪ್ರಪಂಚದಲ್ಲಿ ಕೇವಲ ಹತ್ತು-ಹನ್ನೆರಡು ರಾಷ್ಟ್ರಗಳು ಆರ್ಥಿಕವಾಗಿ ತುಂಬ ಮುಂದುವರಿದಿವೆ. ಇನ್ನು ಸುಮಾರು ಇಪ್ಪತ್ತು ದೇಶಗಳು ಸಾಕಷ್ಟು ಪ್ರಮಾಣದಲ್ಲಿ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿ ಮಧ್ಯಮ ಶ್ರೇಣಿಯಲ್ಲಿವೆ. ಕೊನೆಯದಾಗಿ ಉಳಿದ ನೂರಿಪ್ಪತ್ತಕ್ಕೂ ಮಿಗಿಲಾದ ದೇಶಗಳು ಆರ್ಥಿಕವಾಗಿ ತುಂಬ ಹಿಂದುಳಿದಿವೆ. ಆರ್ಥಿಕ ದೃಷ್ಟಿಯಿಂದ ಈ ಮೂರು ಗುಂಪುಗಳ ರಾಷ್ಟ್ರಗಳ ನಡುವೆ ಭರ್ತಿಮಾಡಲಾಗದಂತಹ ಅಂತರಗಳಿವೆ. ಉದಾಹರಣೆಗೆ, ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇಕಡ 30ರಷ್ಟು ಜನರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ವಾಸಿಸುತ್ತಿದ್ದಾರೆ. ಉಳಿದ ಶೇಕಡ 70ರಷ್ಟು ಜನರು ಅಭಿವೃದ್ಧಿಶೀಲ ದೇಶಗಳಲ್ಲಿದ್ದಾರೆ. ಆದರೆ ವಿಶ್ವದ ಒಟ್ಟು ವರಮಾನದಲ್ಲಿ ಅಭಿವೃದ್ಧಿಹೊಂದಿದ ರಾಷ್ಟ್ರಗಳು ಶೇಕಡ 85ರಷ್ಟನ್ನು, ಅಭಿವೃದ್ಧಿಶೀಲ ದೇಶಗಳು ಕೇವಲ ಶೇಕಡ 15ರಷ್ಟನ್ನು ಪಡೆಯುತ್ತಿವೆ. ಅಲ್ಲದೆ ಮುಂದುವರಿದ ರಾಷ್ಟ್ರಗಳಲ್ಲಿ ಆರ್ಥಿಕ ಬೆಳವಣಿಗೆಯ ಪ್ರಮಾಣ ವಾರ್ಷಿಕವಾಗಿ ಶೇಕಡ ನಾಲ್ಕರಿಂದ ಐದರಷ್ಟು ಇದ್ದರೆ, ಹಿಂದುಳಿದ ದೇಶಗಳಲ್ಲಿ ಅದು ಶೇಕಡ ಒಂದರಿಂದ ಎರಡರಷ್ಟು ಮಾತ್ರ ಇದೆ. ಆದರೆ ಬಡದೇಶಗಳಲ್ಲಿನ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಮಾತ್ರ ವಾರ್ಷಿಕವಾಗಿ ಸರಾಸರಿ ಶೇಕಡ ಎರಡರಷ್ಟಕ್ಕೂ ಮಿಗಿಲಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಶ್ರೀಮಂತ ಮತ್ತು ಬಡ ದೇಶಗಳ ತಲಾ ವರಮಾನಗಳಲ್ಲಿನ ಅಂತರ ಪ್ರಸ್ತುತ ಒಂದರಿಂದ ಇಪ್ಪತ್ತರಷ್ಟು ಇದ್ದರೆ, ಅದು ಆಶ್ಚರ್ಯದ ಸಂಗತಿಯೇನಲ್ಲ. ಮೇಲಾಗಿ ಈ ಎರಡು ಗುಂಪುಗಳ ದೇಶಗಳಲ್ಲಿರುವ ಜನರ ಜೀವನಮಟ್ಟಗಳಲ್ಲಿರುವ ಅಂತರ, ವರ್ಷದಿಂದ ವರ್ಷಕ್ಕೆ, ದಶಕದಿಂದ ದಶಕಕ್ಕೆ, ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಾ ಹೋಗುತ್ತಿರುವುದು ವಿಶ್ವಶಾಂತಿಗೇ ಧಕ್ಕೆಯುಂಟು ಮಾಡಬಹುದೆಂದು ಅನೇಕರ ಅಭಿಪ್ರಾಯವಾಗಿದೆ. ಪ್ರಸ್ತುತ ಪ್ರಪಂಚದ ಇಂತಹ ಪರಿಸ್ಥಿತಿಯಲ್ಲಿ, ರಾಷ್ಟ್ರರಾಷ್ಟ್ರಗಳ ಮಿಲಿಟರಿ ಕಾರ್ಯಾಚರಣೆಗಳು, "ಮೂರನೆಯ ಪ್ರಪಂಚ"ದ ದೇಶಗಳ ಅರ್ಥ ವ್ಯವಸ್ಥೆಗಳ ಮೇಲೆ,

ವಿಶ್ವದ ಶಾಂತಿ, ರಾಜಕೀಯ ವ್ಯವಹಾರಗಳು ಹಾಗೂ ಸ್ಥಿರತೆಗಳ ಮೇಲೆ ಎಂತಹ ಪರಿಣಾಮಗಳನ್ನುಂಟು ಮಾಡಬಲ್ಲವು ಎಂಬುದನ್ನು ಸ್ಥೂಲವಾಗಿ ವಿವೇಚಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಆಧುನಿಕ ಮಾರಕಾಸ್ತ್ರಗಳ ಸ್ವರೂಪ

ರಾಜಕೀಯ ಭಿನ್ನಭಾವನೆಗಳು, ಶಕ್ತಿಬಣಗಳ ಹಿರಿಮೆಯ ಪ್ರದರ್ಶನ ಹಾಗು ಆರ್ಥಿಕ ಅಂಶಗಳಲ್ಲಿನ ಅಂತರಗಳು, ಹೇಗೆ ಎರಡನೆಯ ವಿಶ್ವ ಯುದ್ಧಾನಂತರ ಪ್ರಪಂಚದ ರಾಷ್ಟ್ರಗಳು ನಾನಾ ಗುಂಪುಗಳಾಗಿ ವಿಭಾಗವಾಗುವಂತೆ ಮಾಡಿದವು ಎಂಬುದು ಮೇಲಿನ ವಿವರಣೆಯಿಂದ ತಿಳಿದುಬರುತ್ತದೆ. ಈ ಗುಂಪುಗಳ ನಡುವೆ ಸಂಶಯ, ಮಿಥ್ಯಾರೋಪ, ಭಯ ಮೊದಲಾದವು ಒಂದೇ ಸಮನಾಗಿ ಮುಂದುವರಿಯುತ್ತಾ ಬಂದವು. ಇದರಿಂದಾಗಿ ಪ್ರತಿಯೊಂದು ದೇಶವೂ ತನ್ನ ರಕ್ಷಣೆಗಾಗಿ ಹೆಚ್ಚು ಹೆಚ್ಚು ಸಂಪತ್ಸಾಧನಗಳನ್ನು ಮಿಲಿಟರಿ ಕಾರ್ಯಾಚರಣೆಗಳಿಗಾಗಿ ವಿನಿಯೋಗಿಸ ತೊಡಗಿತು. ಹೀಗೆ ಆಧುನಿಕ ಆಯುಧಗಳ ಸಂಗ್ರಹಣ ಸ್ಪರ್ಧೆ ಪ್ರಾರಂಭವಾಯಿತು. ಇದರ ಫಲವಾಗಿ ಇಂದಿನ ಜಗತ್ತು ತನ್ನ ಮಿತವಾದ ಸಾಧನ ಸಂಪತ್ತುಗಳ ಹೆಚ್ಚು ಹೆಚ್ಚು ಭಾಗವನ್ನು ವಿಧ್ವಂಸಕಾರಿ ಶಸ್ತ್ರಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಿರುವುದು ನಿಜಕ್ಕೂ ಒಂದು ದೌರ್ಭಾಗ್ಯದ ವಿಷಯವೆಂದೇ ಹೇಳಬೇಕು.

ಇತ್ತೀಚಿನ ದಶಕಗಳಲ್ಲಿ ತಯಾರಿಸುತ್ತಿರುವ ಯುದ್ಧ ಶಸ್ತ್ರಗಳು ತುಂಬ ಮಾರಕವಾದವುಗಳಾಗಿವೆ. ಈ ಆಯುಧಗಳ ಧ್ವಂಸ ಶಕ್ತಿ ಅಪಾರವಾದುದಾಗಿದೆ. ಅದನ್ನು ಕೇಳಿದರೆ ಸಾಕು ಮೈನಡುಕ ಬರಿಸುತ್ತದೆ. ಮಾನವನ ವಿಧ್ವಂಸಕ ಚಟುವಟಿಕೆಗಳು ಈಗ ಎಂತಹ ಮಟ್ಟವನ್ನು ಮುಟ್ಟಿವೆಯೆಂಬುದನ್ನು ಮನಗೊಂಡಾಗ ತಲೆಸುತ್ತಿಬಂದಂತಾಗುತ್ತದೆ. ಎರಡನೆಯ ವಿಶ್ವಯುದ್ಧದಲ್ಲಿ ಬಳಸಲಾದ ಶಸ್ತ್ರಗಳೊಡನೆ ಹೋಲಿಸಿದಾಗ ಈ ಆಧುನಿಕ ಆಯುಧಗಳು ಬಹಳ ವಿನಾಶಕಾರಿ ಸ್ವರೂಪವನ್ನು ಹೊಂದಿವೆ. ಪುರಾಣ ಮತ್ತು ಕಾಲ್ಪನಿಕ ಕಥೆಗಳಲ್ಲಿ ಕಂಡುಬರುವ ಅಗ್ನಿ, ವರುಣ, ವಾಯು ಮುಂತಾದ ಶಸ್ತ್ರಗಳನ್ನೂ ಇವು ಮೀರಿಸಿವೆ. ಇಡೀ ನಗರಗಳನ್ನು ಹಾಗೂ ವಿಸ್ತಾರವಾದ ಭೂಪ್ರದೇಶಗಳನ್ನು ಕ್ಷಣಾರ್ಧದಲ್ಲಿ ನಾಶ ಮಾಡುವ ಶಕ್ತಿಯನ್ನು ಈ ಆಧುನಿಕ ಶಸ್ತ್ರಗಳು ಪಡೆದಿವೆ. ಇದೇ ರೀತಿ ನದಿ ಹಾಗೂ ಸರೋವರಗಳ ನೀರನ್ನು ವಿಷಪೂರಿತವನ್ನಾಗಿ ಅವು ಮಾಡಬಲ್ಲವು. ಕಾಡು ಮೇಡುಗಳನ್ನು ಮರುಭೂಮಿಗಳನ್ನಾಗಿ ಈ ಶಸ್ತ್ರಗಳು ಮಾಡಬಲ್ಲವು, ಒಟ್ಟಿನಲ್ಲಿ ಈ ಆಧುನಿಕ ಯುದ್ಧ ಶಸ್ತ್ರಗಳ ಸ್ವರೂಪ ಎಂತಹದಾಗಿದೆಯೆಂದರೆ, ಇಂದಿನ ಯುದ್ಧದಲ್ಲಿ ಅವುಗಳ ಬಳಕೆಯಿಂದ ವಿಜಯ ಮತ್ತು ಅಪಜಯ ಹೊಂದಿದ ದೇಶಗಳ ನಡುವೆ ಹೆಚ್ಚಿನ ವ್ಯತ್ಯಾಸವೇನೂ ಇರಲಾರದು. ಎರಡೂ ದೇಶಗಳು ಯುದ್ಧದಿಂದ

ಸಾಕಷ್ಟು ನಷ್ಟಗಳನ್ನು ಅನುಭವಿಸುವ ಸಂಭವವೇ ಹೆಚ್ಚು. ಆದ್ದರಿಂದ ಇಂದಿನ ಜಗತ್ತಿನಲ್ಲಿ ಇಷ್ಟು ಅಪಾರವಾದ ಪ್ರಾಣ ಹಾಗೂ ಆಸ್ತಿ ಪಾಸ್ತಿಗಳ ಹಾನಿಯನ್ನುಂಟು ಮಾಡುವಂತಹ ಯುದ್ಧದಲ್ಲಿ ದೇಶವಿದೇಶಗಳು ತೊಡಗುವುದು ಖಂಡಿತವಾಗಿಯೂ ಹುಚ್ಚುತನವೆನ್ನಿಸಿಕೊಳ್ಳುವುದು.

ಮಿಲಿಟರಿ ಕಾರ್ಯಾಚರಣೆಗಳ ಭಾರಿ ವೆಚ್ಚ :

ಇಂದಿನ ಜಗತ್ತು ಮಿಲಿಟರಿ ಕಾರ್ಯಾಚರಣೆಗಳ ದೃಷ್ಟಿಯಿಂದ ಯುದ್ಧ ಶಸ್ತ್ರಗಳ ತಯಾರಿಕೆ ಮತ್ತು ವ್ಯಾಪಾರಗಳಲ್ಲಿ ಮಾಡುತ್ತಿರುವ ವೆಚ್ಚಗಳನ್ನು ವಿವರವಾಗಿ ಅರಿಯುವುದು ಆವಶ್ಯಕವೂ, ಅನಿವಾರ್ಯವೂ ಆಗಿದೆ. ಏಕೆಂದರೆ, ಇದರಿಂದ ಅನೇಕ ದುಷ್ಪರಿಣಾಮಗಳು ಉಂಟಾಗುತ್ತಿವೆ. ಮೊದಲು ಇಂತಹ ವೆಚ್ಚಗಳ ಪ್ರಮಾಣಗಳನ್ನು ಅರಿತುಕೊಂಡು ಅನಂತರ ಅವುಗಳಿಂದಾಗುತ್ತಿರುವ ಪರಿಣಾಮಗಳನ್ನು ತಿಳಿಯೋಣ.

ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮವು 1980 ರಲ್ಲಿ ಪ್ರಕಟಿಸಿದ "ವಿಶ್ವ ಪರಿಸರ ಸ್ಥಿತಿ" ಎಂಬ ವರದಿಯ ಪ್ರಕಾರ ಇಂದಿನ ಜಗತ್ತು ಪ್ರತಿ ವರ್ಷವೂ 400,000 ಕೋಟಿ ರೂಪಾಯಿಗಳಿಗಿಂತಲೂ ಮಿಗಿಲಾದ ಮೊತ್ತವನ್ನು ಮಿಲಿಟರಿ ಕಾರ್ಯಾಚರಣೆಗಳಿಗಾಗಿ ಖರ್ಚು ಮಾಡುತ್ತಿದೆ. ಅಂದರೆ ಪ್ರತಿಯೊಂದು ನಿಮಿಷಕ್ಕೂ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದೆ. ಎಂದಂತಾಯಿತು. ಇಷ್ಟು ಅಗಾಧವಾದ ವೆಚ್ಚವೂ ಸಾಲದೆಂದು ಕಾಣುತ್ತಿದೆ ಏಕೆಂದರೆ, ಈ ವೆಚ್ಚವು ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಲೇ ಇದೆ. ಈ ಅಂಕಿ ಸಂಖ್ಯೆಗಳನ್ನು ಇನ್ನೂ ಮನದಟ್ಟಾಗುವಂತೆ ಬಿಡಿಸಿ ಹೇಳಬಹುದು. ವಿಶ್ವದ ಎಲ್ಲ ದೇಶಗಳು ಒಂದು ವರ್ಷದಲ್ಲಿ ಮಿಲಿಟರಿ ಕಾರ್ಯಾಚರಣೆಗಳಿಗಾಗಿ ವೆಚ್ಚ ಮಾಡುತ್ತಿರುವ ಒಟ್ಟು ಹಣದ ಮೊತ್ತದ ಶೇಕಡ ಒಂದರ ಕೇವಲ ಅರ್ಧದಷ್ಟು ಮೊತ್ತವನ್ನು, ಕೃಷಿಯ ಸಲಕರಣೆಗಳ ತಯಾರಿಕೆಯಲ್ಲಿ ವಿನಿಯೋಗಿಸಿದರೆ, ಅದರಿಂದ 1990 ರ ವೇಳೆಗೆ ಆಹಾರದ ಕೊರತೆಯನ್ನು ಅನುಭವಿಸುತ್ತಿರುವ ರಾಷ್ಟ್ರಗಳು ಸ್ವಾವಲಂಬಿಗಳಾಗುವುದು ಸಾಧ್ಯವೆಂದು ಕೆಲವರು ಹೇಳುತ್ತಿದ್ದಾರೆ. ಆಧುನಿಕ ಯುದ್ಧದಲ್ಲಿ ಸಾಮಾನ್ಯವಾಗಿ ಬಳಸುವ ಟ್ಯಾಂಕೊಂದರ ತಯಾರಿಕೆಗೆ ತಗಲುವ ಖರ್ಚಿನಲ್ಲಿ, 30,000 ಮಕ್ಕಳು ಕುಳಿತುಕೊಳ್ಳುವಂತಹ 1000 ಶಾಲಾ ಕೊಠಡಿಗಳನ್ನು ನಿರ್ಮಿಸಬಹುದಂತೆ. ಆದರೆ ದುರದೃಷ್ಟವಶಾತ್ ಇಂದಿನ ಜಗತ್ತು ವಿನಾಶಕಾರಿ ಮಿಲಿಟರಿ ಕಾರ್ಯಗಳಲ್ಲಿ ಇಷ್ಟು ಮೊತ್ತವನ್ನು ಕೇವಲ ಒಂದು ನಿಮಿಷದಲ್ಲಿ ಖರ್ಚು ಮಾಡುತ್ತಿದೆ. ಒಂದು ಯುದ್ಧ ವಿಮಾನದ ತಯಾರಿಕೆಗೆ ತಗಲುವ ವೆಚ್ಚದಲ್ಲಿ ಸುಮಾರು 40,000 ಗ್ರಾಮೀಣ ಔಷಧ ವಿನಿಯೋಗ ಕೇಂದ್ರಗಳನ್ನು ಸ್ಥಾಪಿಸ

ಬಹುದಂತೆ. ಒಂದು ಆಧುನಿಕ ಟಾರ್ಪಿಡೊನಾಶಕ ಯುದ್ಧ ನೌಕೆಯನ್ನು ಕೊಳ್ಳಲು ತಗಲುವ ವೆಚ್ಚದಲ್ಲಿ, ಹತ್ತು ಲಕ್ಷದಷ್ಟು ಜನಸಂಖ್ಯೆಯಿರುವ 13 ಪಟ್ಟಣಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದೆಂದು ಹೇಳುತ್ತಾರೆ. ಇಂತಹ ಹಲವು ಅಂಕಿ ಸಂಖ್ಯೆಗಳು ಜಗತ್ತಿನ ಮಿಲಿಟರಿ ಕಾರ್ಯಾಚರಣೆಗಳ ಮೇಲೆ ಎಷ್ಟುಪಷ್ಟು ಒಳ್ಳೆಯ ಪರಿಣಾಮಗಳನ್ನು ಮಾಡಿಲ್ಲವೆಂದು ಕಾಣುತ್ತದೆ. ಏಕೆಂದರೆ, ರಕ್ಷಣೆ ಮತ್ತು ಆಕ್ರಮಣವನ್ನು ತಡೆಯುವ ನೆಪದಿಂದ ಎಲ್ಲ ದೇಶಗಳೂ ಯುದ್ಧ ಶಸ್ತ್ರಗಳ ಸಂಗ್ರಹದ ಪ್ರಮಾಣವನ್ನು ಪೈಪೋಟಿಯ ಆಧಾರದ ಮೇಲೆ ದಿನೇ ದಿನೇ ಹೆಚ್ಚಿಸಿ ಕೊಂಡು ಬರುತ್ತಿವೆ.

ಮಿಲಿಟರಿ ಕಾರ್ಯಾಚರಣೆಗಳಿಗಾಗಿ ತಯಾರಿಸುತ್ತಿರುವ ಯುದ್ಧಶಸ್ತ್ರಗಳಿಗಾಗಿ ಜಗತ್ತಿನಲ್ಲಿ ಅತಿ ವಿರಳವಾಗಿ ದೊರಕುತ್ತಿರುವ ಸಾಧನ ಸಂಪತ್ತುಗಳ ವಿನಿಯೋಗ ಅಧಿಕವಾಗುತ್ತಿದೆ. ಇದಕ್ಕೆ ನಿದರ್ಶನಗಳಾಗಿ ಈ ಕೆಳಗಿನವುಗಳನ್ನು ಕೊಡಲಾಗಿದೆ. ವಿಶ್ವವು ಪ್ರತಿ ವರ್ಷವೂ ಮಿಲಿಟರಿ ಕಾರ್ಯಗಳಿಗಾಗಿ ಬಳಸುತ್ತಿರುವ ಪೆಟ್ರೋಲಿಯಂ ಎಣ್ಣೆಯ ಪರಿಮಾಣವು, ಇಡೀ ಆಫ್ರಿಕ ಖಂಡವು ಅದೇ ಅವಧಿಯಲ್ಲಿ ಉಪಯೋಗಿ ಸುತ್ತಿರುವ ಎಣ್ಣೆಯ ಪರಿಮಾಣದ ಎರಡರಷ್ಟು ಆಗಿದೆ. ಇದರಲ್ಲಿ ಅಮೆರಿಕದ ಮಿಲಿಟರಿಯ ಎಣ್ಣೆಯ ಬಳಕೆಯೇ ಒಂದು ವರ್ಷದಲ್ಲಿ ಸುಮಾರು 27 ಕೋಟಿ ಬ್ಯಾರಲ್ಲುಗಳಷ್ಟು ಇದೆ. ಈ ಪರಿಮಾಣವು ಇಡೀ ಆಫ್ರಿಕ ಖಂಡ ಅಥವಾ ದಕ್ಷಿಣ ಏಷ್ಯಾ ದೇಶಗಳು ಬಳಸುವ ಎಣ್ಣೆಯ ಪರಿಮಾಣದ 2/3 ರಷ್ಟು ಇದೆಯಂತೆ. ಅಮೆರಿಕವು ಬಳಸುತ್ತಿರುವ ಅಲ್ಯುಮಿನಿಯಂ, ತಾಮ್ರ, ಸೀಸ, ಸತವು, ತವರ, ನಿಕಲ್, ಕಬ್ಬಿಣ ಮುಂತಾದ ಅತ್ಯಮೂಲ್ಯವಾದ ಲೋಹಗಳಲ್ಲಿ ಶೇಕಡ 10 ರಷ್ಟನ್ನು ಮಿಲಿಟರಿ ಕಾರ್ಯಗಳಿಗಾಗಿ ಉಪಯೋಗಿಸಲಾಗುತ್ತಿದೆ. ಮಿಲಿಟರಿ ಕಾರ್ಯಗಳಿ ಗಾಗಿ ವಿಶ್ವದಲ್ಲೇ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿರುವ ದೇಶವೆಂದರೆ ಅಮೆರಿಕ. ಪ್ರಸ್ತುತ ಅದು ವರ್ಷವೊಂದಕ್ಕೆ ಸುಮಾರು 100,000 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚ ಮಾಡುತ್ತಿದೆ. ಇಷ್ಟು ಸಾಲದೆಂಬಂತೆ 1985ರ ವೇಳೆಗೆ ಇದರ ಎರಡರಷ್ಟು ಮೊತ್ತವನ್ನು ಮಿಲಿಟರಿ ಕಾರ್ಯಗಳಿಗಾಗಿ ಖರ್ಚು ಮಾಡುವ ಕಾರ್ಯಕ್ರಮವನ್ನು ಅಮೆರಿಕವು ಹಾಕಿಕೊಂಡಿದೆ.

ಇಷ್ಟೇ ಅಲ್ಲದೆ ಮಿಲಿಟರಿ ಕಾರ್ಯಾಚರಣೆಗಳಲ್ಲಿ ಅಪಾರವಾದ ಮಾನವ ಶ್ರಮವನ್ನು ವಿನಿಯೋಗಿಸಲಾಗುತ್ತಿದೆ. ಉದಾಹರಣೆಗೆ, ಇಡೀ ವಿಶ್ವದಲ್ಲಿ ಸುಮಾರು 6 ಕೋಟಿ ಜನರು ಮಿಲಿಟರಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಸಂಖ್ಯೆ ರಷ್ಯಾ ದೇಶವನ್ನು ಬಿಟ್ಟು ಯುರೋಪ್ ಖಂಡದ ತಯಾರಿಕಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಇಡೀ ಕಾರ್ಮಿಕ ಸಂಖ್ಯೆಗೆ ಸಮನಾಗಿದೆ. ಇದಲ್ಲದೆ, ಇಂದಿನ ಜಗತ್ತಿನಲ್ಲಿ ಮಿಲಿಟರಿ ಸಂಶೋಧನೆ ಮತ್ತು

ಅಭಿವೃದ್ಧಿ ಕಾರ್ಯಗಳಲ್ಲಿ ಸುಮಾರು 4 ಲಕ್ಷ ತುಂಬ ತರಪೇತು ಪಡೆದ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ. ಇಡೀ ವಿಶ್ವದಲ್ಲಿರುವ ಒಟ್ಟು ಸಂಶೋಧನಾ ವಿಜ್ಞಾನಿಗಳ ಸಂಖ್ಯೆಯಲ್ಲಿ ಇದು ಶೇಕಡ 40ರಷ್ಟು ಆಗಿದೆ. ಪ್ರಪಂಚದಲ್ಲಿ ನಡೆಯುತ್ತಿರುವ ಎಲ್ಲ ಸಂಶೋಧನೆ ಮತ್ತು ಅಭಿವೃದ್ಧಿ ವೆಚ್ಚದ 2/5ರಷ್ಟು, ಅಂದರೆ ಸುಮಾರು 200 ಶತಕೋಟಿ ರೂಪಾಯಿಗಳು, ಮಿಲಿಟರಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿನಿಯೋಗವಾಗುತ್ತಿವೆ.

ಮೇಲೆ ವಿವರಿಸಿದ ಕೆಲವು ಅಂಕಿ ಅಂಶಗಳು ವಿಶ್ವಸಂಸ್ಥೆಯು ಇತ್ತೀಚೆಗೆ ಪ್ರಕಟಿಸಿರುವ "ವಿಶ್ವ ಪರಿಸರ ಸ್ಥಿತಿ" ಎಂಬ ವರದಿಯಿಂದ ಬೆಳಕಿಗೆ ಬಂದಿವೆ. ಇಷ್ಟು ಸಾಲದೆಂಬಂತೆ ಯುದ್ಧ ಶಸ್ತ್ರಗಳ ಸಂಗ್ರಹದ ಸ್ಪರ್ಧೆ ಈಗ "ಮೂರನೆಯ ಪ್ರಪಂಚ"ದ ರಾಷ್ಟ್ರಗಳಿಗೆ ತೀವ್ರವಾಗಿ ಹರಡುತ್ತಿದೆ. ಇದು ಇನ್ನೊಂದು ದೌರ್ಭಾಗ್ಯದ ಸಂಗತಿಯಾಗಿದೆ. ಏಕೆಂದರೆ, ಕಳೆದ 20 ವರ್ಷಗಳಲ್ಲಿ ಈ ದೇಶಗಳ ಮಿಲಿಟರಿ ವೆಚ್ಚ ನಾಲ್ಕು ಪಟ್ಟು ಹೆಚ್ಚಾಗಿದೆ. ಸ್ವೀಡನ್ನಿನ ಅಂತರ ರಾಷ್ಟ್ರೀಯ ಶಾಂತಿ ಸಂಶೋಧನಾ ಸಂಸ್ಥೆಯ ಅಂದಾಜಿನ ಪ್ರಕಾರ, ಮಾರಾಟವಾಗುತ್ತಿರುವ ಮುಖ್ಯ ಯುದ್ಧ ಶಸ್ತ್ರಗಳಲ್ಲಿ ಶೇಕಡ 70 ರಷ್ಟು "ಮೂರನೆಯ ಪ್ರಪಂಚ"ಕ್ಕೆ ಹೋಗುತ್ತಿವೆ. ಈ ದೇಶಗಳ ಯುದ್ಧಾಸ್ತ್ರಗಳ ವ್ಯಾಪಾರದ ಪ್ರಮಾಣ 1963 ರಿಂದ 1975 ರ ವೇಳೆಗೆ ಶೇಕಡ 50 ರಿಂದ 75 ಕ್ಕೆ ಹೆಚ್ಚಾಯಿತು. ಈ ದೇಶಗಳು ಮುಖ್ಯ ಯುದ್ಧಾಸ್ತ್ರಗಳಿಗಾಗಿ ಮಾಡಿದ ವೆಚ್ಚ 1970 ರಲ್ಲಿ ಕೇವಲ 24 ಶತಕೋಟಿ ರೂಪಾಯಿಗಳಷ್ಟು ಇದ್ದುದು, 1978 ರಲ್ಲಿ 112 ಶತಕೋಟಿ ರೂಪಾಯಿಗಳಷ್ಟಾಗಿತ್ತು. ಅಲ್ಲದೆ ಈಗ "ಮೂರನೆಯ ಪ್ರಪಂಚ"ದಲ್ಲಿರುವ ಕೆಲವು ದೇಶಗಳು ಯುದ್ಧಶಸ್ತ್ರಗಳನ್ನು ಸರಬರಾಜು ಮಾಡುವ ಸ್ಥಿತಿಯಲ್ಲಿವೆಯೆಂದು ಸ್ವೀಡನ್ನಿನ ಸಂಸ್ಥೆ ತಿಳಿಸಿದೆ. ಮೇಲಾಗಿ ಅಮೆರಿಕದಿಂದ ರಫ್ತಾಗುತ್ತಿರುವ ಯುದ್ಧ ಶಸ್ತ್ರಗಳ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಅದು 1980 ರಲ್ಲಿ 11,600 ಕೋಟಿ ರೂಪಾಯಿಗಳಷ್ಟನ್ನು ಮುಟ್ಟಬಹುದೆಂದು ಅಂದಾಜು ಮಾಡಲಾಗಿತ್ತು. ಈ ಯುದ್ಧ ಶಸ್ತ್ರಗಳ ಬಹುಪಾಲು "ಮೂರನೆಯ ಪ್ರಪಂಚ"ದ ರಾಷ್ಟ್ರಗಳ ಕೈ ಸೇರುತ್ತವೆ. ಇದರಿಂದ ತುಂಬ ವಿನಾಶಕಾರಿ ಶಸ್ತ್ರಗಳು ಈ ದೇಶಗಳ ಸಂಗ್ರಹದೊಳಗೆ ಬಂದು ಸೇರುತ್ತಿವೆ. ಈ ಪ್ರವೃತ್ತಿಯಿಂದ ರಾಷ್ಟ್ರ ರಾಷ್ಟ್ರಗಳ ನಡುವೆ ಸಂಶಯ, ಭಯ, ಆಕ್ರಮಣ ಮನೋಭಾವ ಮೊದಲಾದವು ಹೆಚ್ಚುವುವೇ ವಿನಹ ಕಡಿಮೆಯಾಗುವುದಿಲ್ಲ.

ಭೀಕರ ಪರಿಣಾಮಗಳು :

ಆಧುನಿಕ ಯುದ್ಧ ಶಸ್ತ್ರಗಳ ತಯಾರಿಕೆ, ವ್ಯಾಪಾರ ಮತ್ತು ಬಳಕೆಗಳಿಂದ ತುಂಬ ಭೀಕರ ಪರಿಣಾಮಗಳಾಗುತ್ತಿವೆ. ಈ ಪರಿಣಾಮಗಳು ಮಾನವನ ಪರಿಸರ

ಸ್ಥಿತಿಯ ಮಾಲಿನ್ಯ, ಭಾರಿ ಲೋಹ ಬಳಕೆಯಿಂದಾಗುವ ಅಪಾಯ, ಇಂಗಾಲದ ಡೈಆಕ್ಸೈಡ್‌ನಿಂದಾಗುವ ವಾಯು ಮಾಲಿನ್ಯ, ಮಕ್ಕಳಿಗಾಗುವ ಅಪಾಯ ಮೊದಲಾದ ರೂಪಗಳಲ್ಲಿವೆ. ಮಾನವ ಮತ್ತು ಅವನ ಪರಿಸರದ ಮೇಲೆ ಆಗು ತ್ತಿರುವ ಪರಿಣಾಮಗಳನ್ನು ಮೊದಲು ತಿಳಿಯೋಣ. ಕಳೆದ 35 ವರ್ಷಗಳಲ್ಲಿ ಸುಮಾರು 200 ರಷ್ಟು ಸಣ್ಣಪುಟ್ಟ ಕದನಗಳು ಜಗತ್ತಿನಲ್ಲಿ ಜರುಗಿವೆಯಂತೆ. ಇವುಗಳಲ್ಲಿ ಸುಮಾರು 130 ರಷ್ಟು ಕಾದಾಟಗಳು "ಮೂರನೆಯ ಪ್ರಪಂಚ"ದ ದೇಶಗಳಲ್ಲಿ ಸಂಭವಿಸಿವೆಯಂತೆ. ಈ ಕಾಳಗಗಳಲ್ಲಿ ಮೂರು ಕೋಟಿಗೂ ಮಿಗಿಲಾಗಿ ಜನರು ಸತ್ತಿದ್ದಾರೆ. ಎರಡನೆಯ ವಿಶ್ವಯುದ್ಧದಲ್ಲಿ ಸತ್ತ ಜನರ ಸಂಖ್ಯೆಗಿಂತ ಇದು ಅಧಿಕವಾಗಿದೆಯೆಂದು ಹೇಳಲಾಗಿದೆ. ಇನ್ನು ಈ ಹೋರಾಟಗಳಲ್ಲಿ ಗಾಯ ಗೊಂಡವರ ಸಂಖ್ಯೆ ಇದಕ್ಕೂ ಹೆಚ್ಚಾಗಿದೆ. ಈ ಎಲ್ಲ ಜಗಳಗಳ ಇನ್ನೊಂದು ಮುಖ್ಯ ಪರಿಣಾಮವೆಂದರೆ, ಲಕ್ಷಾಂತರ ಜನರು ನಿರಾಶ್ರಿತರಾಗಿ ಒಂದು ಪ್ರದೇಶ ದಿಂದ ಇತರ ಸ್ಥಳಗಳಿಗೆ ವಲಸೆ ಹೋದುದಾಗಿದೆ. ಇವರೆಲ್ಲರೂ ಆರ್ಥಿಕ ನಷ್ಟ ಹಾಗು ಸಾಮಾಜಿಕ ಹಾನಿಗಳಿಗೆ ಒಳಗಾದರು. ಇದರಿಂದ ಎಷ್ಟೋ ದೇಶಗಳ ಅರ್ಥ ವ್ಯವಸ್ಥೆಗಳು ಹೆಚ್ಚಿನ ಒತ್ತಡಗಳನ್ನು ಅನುಭವಿಸಿದವು.

ಈ ಯುದ್ಧಗಳು ಲಕ್ಷಾಂತರ ಎಕರೆ ಸಾಗುವಳಿ ಜಮೀನು ಹಾಗು ಕಾಡು ಮೇಡುಗಳನ್ನು ಪಾಳು ಮಾಡಿ, ನೇರ್ಪಡಿಸಲಾಗದ ನಿಸ್ಸಾರ ಮರುಭೂಮಿಗಳ ನ್ನಾಗಿ ಮಾಡಿವೆ. ಈ ಕದನಗಳಲ್ಲಿ ಬಳಸಿದ ರಾಸಾಯನಿಕ ವಸ್ತುಗಳು ವಿಶಾಲ ಭೂಪ್ರದೇಶಗಳ ಸಸ್ಯಜೀವನವನ್ನು ನಾಶಗೊಳಿಸಿವೆ. ಇಂತಹ ಹಾನಿಗಳಿಂದ ಭೂ ಪ್ರದೇಶಗಳು ಪುನಃ ಫಲವತ್ತಾಗಬೇಕಾದರೆ ಕೆಲವು ಶತಮಾನಗಳೇ ಬೇಕಾಗುತ್ತದೆ ಯೆಂದು ವಿಜ್ಞಾನಿಗಳು ಹೇಳುತ್ತಾರೆ. ಇದಲ್ಲದೆ ಪರಮಾಣು ಯುದ್ಧಾಸ್ತ್ರಗಳ ಪ್ರಯೋಗಗಳಿಂದ ನಮ್ಮ ವಾಯುಮಂಡಲ ಹೆಚ್ಚು ಹೆಚ್ಚು ಕಲುಷಿತವಾಗುತ್ತಿದೆ. ನದಿ ಮತ್ತು ಸರೋವರಗಳಿಂದ ದೊರೆಯುತ್ತಿರುವ ಕುಡಿಯುವ ನೀರು ರಾಸಾಯನಿಕ ಕಶ್ಮಲಗಳ ಬೆರಕೆಯಿಂದಾಗಿ ಅಶುದ್ಧವಾಗುತ್ತಿದೆ. ಆಧುನಿಕ ಯುದ್ಧಾಸ್ತ್ರಗಳ ತಯಾರಿಕಾ ಕೈಗಾರಿಕೆಗಳು ಭಾರಿ ಲೋಹಗಳನ್ನು ಅಧಿಕವಾಗಿ ಬಳಸುತ್ತಿವೆ. ಇವುಗಳ ಸಣ್ಣ ಕಣಗಳು ಗಾಳಿ, ನೀರು ಮತ್ತು ಆಹಾರಗಳ ಮೂಲಕ ನಮ್ಮ ದೇಹವನ್ನು ಸೇರುತ್ತವೆ. ಇದರಿಂದ ಕ್ಯಾನ್ಸರ್ ಮೊದಲಾದ ಮಾರಕ ಬಾಯಿಲೆಗಳು ಬರುತ್ತ ವೆಂದು ಹೇಳುತ್ತಾರೆ. ಮೇಲಾಗಿ ಸಾಗಣೆ ವಾಹನಗಳಿಂದ ಕಪ್ಪು ಹೊಗೆಯಾಗಿ ಹೊರಹೊಮ್ಮುವ ಇಂಗಾಲದ ಡೈಆಕ್ಸೈಡ್‌ನ ಪ್ರಮಾಣ ಕಳೆದ 20 ವರ್ಷಗಳಿಂದ ಒಂದೇ ಸಮನಾಗಿ ಹೆಚ್ಚುತ್ತಿದ್ದು, ಅದರಿಂದ ವಾಯು ಮಾಲಿನ್ಯ ತುಂಬ ಅಧಿಕ ವಾಗುತ್ತಿದೆ. ಇವೆಲ್ಲವುಗಳ ಪರಿಣಾಮಗಳು ಮುಖ್ಯವಾಗಿ ಎಳೆಯ ವಯಸ್ಸಿನ ಮಕ್ಕಳ ಆರೋಗ್ಯಕ್ಕೆ ಬಹಳ ಅಪಾಯಕಾರಿಯಾಗಿವೆ ಎಂದು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಸಮೀಕ್ಷೆಯು ತನ್ನ ಇತ್ತೀಚಿನ ವರದಿಯೊಂದರಲ್ಲಿ ತಿಳಿಸಿದೆ.

ಮಿಲಿಟರಿ ಕಾರ್ಯಾಚರಣೆಗಳು, ಯುದ್ಧಾಸ್ತ್ರಗಳ ತಯಾರಿಕೆ, ವ್ಯಾಪಾರ ಹಾಗು ಬಳಕೆಗಳಿಂದ ವಿಶ್ವದ ಆರ್ಥಿಕಾಭಿವೃದ್ಧಿಯು ವಿಪತ್ತಿಗೊಳಗಾಗಿರುವುದು, ಅವುಗಳಿಂದಾಗುತ್ತಿರುವ ಇನ್ನೊಂದು ದುಷ್ಪರಿಣಾಮವಾಗಿದೆ. ಈ ಪರಿಣಾಮವು ಹೆಚ್ಚಾಗಿ "ಮೂರನೆಯ ಪ್ರಪಂಚ"ದ ರಾಷ್ಟ್ರಗಳ ಅರ್ಥವ್ಯವಸ್ಥೆಗಳ ಮೇಲೆ ಆಗುತ್ತಿದೆ. ಏಕೆಂದರೆ, ಶ್ರೀಮಂತ ರಾಷ್ಟ್ರಗಳ ಅಧಿಕ ಮಿಲಿಟರಿ ವೆಚ್ಚಗಳಿಂದಾಗಿ, ಬಡದೇಶಗಳಿಗೆ ಅವು ನೀಡುತ್ತಿರುವ ಅಭಿವೃದ್ಧಿ ನೆರವು ಕಡಿಮೆಯಾಗುತ್ತಿದೆ. ಈ ಅಂಶವನ್ನು "ಮಿಲಿಟರಿ ವೆಚ್ಚಗಳು ಮತ್ತು ಯುದ್ಧಾಸ್ತ್ರಗಳ ಸ್ಪರ್ಧೆಯ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳು" ಎಂಬ ವಿಶ್ವಸಂಸ್ಥೆಯ ಇತ್ತೀಚಿನ ವರದಿಯಲ್ಲಿ ಕಾಣಬಹುದು. ಮುಂದುವರಿದ ಕೈಗಾರಿಕಾ ದೇಶಗಳು ವಿದ್ಯಾಭ್ಯಾಸ, ಆರೋಗ್ಯ, ಮತ್ತಿತರ ಸಮಾಜಸೇವೆಗಳಿಗಾಗಿ ಮಾಡುತ್ತಿರುವ ಖರ್ಚುಗಳನ್ನು ರಾಜಕೀಯ ದೃಷ್ಟಿಯಿಂದ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವು ತಮ್ಮ ಅಗಾಧವಾದ ಮಿಲಿಟರಿ ವೆಚ್ಚಗಳನ್ನು ಕಡಿಮೆ ಮಾಡಿದರೆ, ಆಗ ಅವುಗಳಿಂದ ಹರಿದು ಬರುತ್ತಿರುವ ಅಭಿವೃದ್ಧಿ ನೆರವು ಹೆಚ್ಚಾಗಿ ಹಿಂದುಳಿದಿರುವ ದೇಶಗಳಿಗೆ ದೊರಕುವುದು ಸಾಧ್ಯವೆಂದು ಅದೇ ವರದಿಯು ತಿಳಿಸುತ್ತದೆ. ಪ್ರಸ್ತುತ ಶ್ರೀಮಂತ ರಾಷ್ಟ್ರಗಳು ವರ್ಷವೊಂದಕ್ಕೆ ಸುಮಾರು 20,000 ಕೋಟಿ ರೂಪಾಯಿಗಳಷ್ಟು ವಿದೇಶ ಆರ್ಥಿಕ ನೆರವನ್ನು ನೀಡುತ್ತಿವೆ. ಆದರೆ ವಿಶ್ವದ ಒಂದು ವರ್ಷದ ಮಿಲಿಟರಿ ವೆಚ್ಚದೊಂದಿಗೆ ಇದನ್ನು ಹೋಲಿಸಿದರೆ, ಅದು $\frac{1}{20}$ ಕ್ಕಿಂತ ಕಡಿಮೆಯಾಗಿರುವುದು ಕಂಡುಬರುತ್ತದೆ. ಅಮೆರಿಕವು ಪ್ರತಿವರ್ಷವೂ ಸುಮಾರು 4,000 ಕೋಟಿ ರೂಪಾಯಿಗಳಷ್ಟು ವಿದೇಶಿ ನೆರವನ್ನು ನಾನಾ ದೇಶಗಳಿಗೆ ಕೊಡುತ್ತದೆ. ಈ ಮೊತ್ತವೂ ಸಹ ಆ ದೇಶದ ಒಂದು ವರ್ಷದ ಮಿಲಿಟರಿ ವೆಚ್ಚದ ಕೇವಲ $\frac{1}{25}$ ರಷ್ಟು ಆಗಿದೆ. ವಿದೇಶಿ ನೆರವಿನ ವಿಷಯದಲ್ಲಿ "ಎರಡನೆಯ ಪ್ರಪಂಚ"ಕ್ಕೆ ಸೇರಿದ ದೇಶಗಳ ಕೊಡುಗೆಗಳು, ಅಮೆರಿಕಕ್ಕಿಂತ ಹೆಚ್ಚು ಉತ್ಸಾಹದಾಯಕವಾಗೇನೂ ಇಲ್ಲ.

ವಿಶ್ವದ ಅಪಾರ ಮಿಲಿಟರಿ ವೆಚ್ಚದಿಂದ "ಮೂರನೆಯ ಪ್ರಪಂಚ"ದ ರಾಷ್ಟ್ರಗಳಿಗೆ ಹೆಚ್ಚಿನ ಹಾನಿಯುಂಟಾಗುತ್ತಿದೆಯೇ ವಿನಹ ಪ್ರಯೋಜನಗಳಿಲ್ಲ. ಮೇಲೆ ತಿಳಿಸಿದ ವಿದೇಶಿ ನೆರವು ಇದರಿಂದ ಕುಂಠಿತಗೊಳ್ಳುತ್ತಿದೆ. ಅಲ್ಲದೆ ಈ ಬಡ ದೇಶಗಳು ತುಂಬ ಉಪಯುಕ್ತವಾದ ಕಚ್ಚಾ ಪದಾರ್ಥಗಳನ್ನು ಶ್ರೀಮಂತ ರಾಷ್ಟ್ರಗಳಿಗೆ ರಫ್ತು ಮಾಡುತ್ತಿವೆ. ಇವುಗಳಲ್ಲಿ ಸಾಕಷ್ಟು ಪ್ರಮಾಣವನ್ನು ಆ ಸಿರಿವಂತ ದೇಶಗಳು ಮಿಲಿಟರಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿವೆ. ಇಂತಹ ರಫ್ತುಗಳಿಂದ ಹಿಂದುಳಿದ ದೇಶಗಳು ವಿದೇಶಿ ವಿನಿಮಯವನ್ನು ಗಳಿಸಬಹುದು. ಆದರೆ ಈ ದೇಶಗಳ ದೀರ್ಘಕಾಲಿಕ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಇದು ಸರಿಯಲ್ಲ.

ಕಚ್ಚಾ ಪದಾರ್ಥಗಳನ್ನು ಬಳಸಿಕೊಂಡು ಸಿದ್ಧ ವಸ್ತುಗಳನ್ನು ತಯಾರಿಸಿ ಅವುಗಳನ್ನು ರಫ್ತು ಮಾಡುವುದರ ಮೂಲಕ ಈ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳಬಹುದು. ಇದಲ್ಲದೇ, ಈ ಬಡದೇಶಗಳು ಪೈಪೋಟಿಯ ಆಧಾರದ ಮೇಲೆ ಮಿಲಿಟರಿ ವೆಚ್ಚಗಳು ಹಾಗು ಯುದ್ಧಾಸ್ತ್ರಗಳ ಸಂಗ್ರಹಗಳನ್ನು ಹೆಚ್ಚಿಸುತ್ತಿರುವ ಕ್ರಮಗಳು, ಅವುಗಳ ಅರ್ಥವ್ಯವಸ್ಥೆಗಳ ಅಸ್ಥಿರತೆಯನ್ನು ಅಧಿಕಗೊಳಿಸುತ್ತವೆ ಎಂಬ ಮುಖ್ಯ ಸತ್ಯಾಂಶವನ್ನು ಅವು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು.

ಇವೆಲ್ಲಕ್ಕೂ ಮಿಗಿಲಾಗಿ ಇಂದಿನ ವಿಶ್ವದ ಮಿಲಿಟರಿ ಕಾರ್ಯಾಚರಣೆಗಳು ಕೆಲವು ದೇಶಗಳಲ್ಲಿದ್ದ ರಾಜಕೀಯ ವ್ಯವಸ್ಥೆಗಳನ್ನೇ ಬುಡಮೇಲು ಮಾಡಿವೆ. ಈ ದೆಸೆಯಲ್ಲೂ "ಮೂರನೆಯ ಪ್ರಪಂಚ"ದ ರಾಷ್ಟ್ರಗಳಿಗೇ ಹೆಚ್ಚಿನ ಪೆಟ್ಟು ಬಿದ್ದಿದೆ. ಆತ್ಮರಕ್ಷಣೆ, ಆಕ್ರಮಣ ತಡೆಯುವಿಕೆ, ಇತರರಲ್ಲಿ ಭಯ ಹುಟ್ಟಿಸುವುದು, ಸ್ಥಾನಮಾನದ ಹಿರಿಮೆ, ಮುಂತಾದ ಹಲವು ಕಾರಣಗಳನ್ನು ಮುಂದೊಡ್ಡಿ ಈ ಬಡರಾಷ್ಟ್ರಗಳು ಹೆಚ್ಚು ಹೆಚ್ಚು ಆಧುನಿಕ ಯುದ್ಧಶಸ್ತ್ರಗಳನ್ನು ಕೊಂಡುಕೊಳ್ಳುತ್ತಿವೆ. ಇಂತಹ ಪ್ರವೃತ್ತಿಯನ್ನು ಪ್ರಬಲ ರಾಷ್ಟ್ರಗಳು ತಮ್ಮ ಸ್ವಂತ ಹಿತಾಸಕ್ತಿಗಳ ದೃಷ್ಟಿಯಿಂದಲೂ ಪ್ರೋತ್ಸಾಹಿಸುತ್ತಿವೆ. ಅಲ್ಲದೆ ಎರಡು ಶಕ್ತಿಬಣಗಳ ರಾಷ್ಟ್ರಗಳು, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಇತರ ದೇಶಗಳ ವ್ಯವಹಾರಗಳಲ್ಲಿ ತಮ್ಮ ಹಸ್ತಕ್ಷೇಪವನ್ನು ಮಾಡುತ್ತಿವೆ. ಕೊರಿಯ ಯುದ್ಧ, ಇಂಡೋಚೀನ ಕದನ, ಪೋಲೇಂಡ್, ಹಂಗೇರಿ, ಆಫ್‌ಘಾನಿಸ್ತಾನಗಳ ಆಕ್ರಮಣ, ಇಸ್ರೇಲ್–ಅರಬ್ ರಾಷ್ಟ್ರಗಳ ಕಾಳಗ, ಭಾರತ-ಚೀನ ಯುದ್ಧ, ಭಾರತ-ಪಾಕಿಸ್ತಾನ ಜಗಳಗಳು, ಇರಾನ್-ಇರಾಕ್ ಹೋರಾಟ ಮುಂತಾದ ಅನೇಕವನ್ನು ಇದಕ್ಕೆ ಉದಾಹರಿಸಬಹುದು. ಈ ಎಲ್ಲ ತಿಕ್ಕಾಟಗಳಲ್ಲೂ ಬಲಾಢ್ಯ ದೇಶಗಳಿಂದ ಸರಬರಾಜಾದ ಶಸ್ತ್ರಗಳು ವಿಪುಲವಾಗಿ ಬಳಸಲ್ಪಟ್ಟಿವೆ. ಮೇಲಾಗಿ "ಮೂರನೆಯ ಪ್ರಪಂಚ"ಕ್ಕೆ ಸೇರಿದ ಕೆಲವು ರಾಷ್ಟ್ರಗಳಲ್ಲಿ ಮಿಲಿಟರಿ ಆಡಳಿತಗಳು ಅಸ್ತಿತ್ವದಲ್ಲಿವೆ. ಇವು ಸ್ವಾಭಾವಿಕವಾಗಿ ಮಿಲಿಟರಿ ಕಾರ್ಯಾಚರಣೆಗಳಿಗೆ ಆದ್ಯತೆ ಕೊಡುತ್ತಿವೆ. ಇವುಗಳು ಮುಂದುವರಿದುಕೊಂಡು ಬರುವುದಕ್ಕೂ ದೊಡ್ಡ ರಾಷ್ಟ್ರಗಳ ಕೃಪೆ ಅವಶ್ಯವಾಗಿ ಬೇಕಾಗಿದೆ. ಇದೂ ಅಲ್ಲದೆ, ಅಮೆರಿಕ ಮತ್ತು ರಷ್ಯಾ ದೇಶಗಳು ಪ್ರಪಂಚದ ನಾನಾ ಭಾಗಗಳಲ್ಲಿ ತಮ್ಮ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿಕೊಂಡಿವೆ. ಇವು ಇತರ ದೇಶಗಳಲ್ಲಿ ಭಯವನ್ನುಂಟುಮಾಡಿ ಅವುಗಳ ಮಿಲಿಟರಿ ವೆಚ್ಚಗಳನ್ನು ಹೆಚ್ಚಿಸಿವೆ. ಈ ರೀತಿಯ ಭಯ ಮತ್ತು ಸಂಶಯಗಳು ವಿಷಚಕ್ರಗಳನ್ನು ರಚಿಸುತ್ತಿವೆ. ಉದಾಹರಣೆಗೆ, ಆಫ್‌ಘಾನಿಸ್ತಾನದಲ್ಲಿ ರಷ್ಯಾದ ಸೇನೆಯಿರುವುದರಿಂದ ಪಾಕಿಸ್ತಾನಕ್ಕೆ ಹೆದರಿಕೆಯುಂಟಾಗಿದೆ. ಆದ್ದರಿಂದ ಹೆಚ್ಚು ಶಸ್ತ್ರಗಳನ್ನು ಕೊಡುವಂತೆ ಅಮೆರಿಕಕ್ಕೆ ಅದು ಮೊರೆಯಿಟ್ಟಿದೆ. ಪಾಕಿಸ್ತಾನದ

ಈ ಕ್ರಮವು ಭಾರತದ ಭಯವನ್ನು ಹೆಚ್ಚಿಸಿದೆ. ಇದರಿಂದ ಭಾರತದ ಶಸ್ತ್ರಗಳ ಖರೀದಿ ಹೆಚ್ಚಾಗುತ್ತಿದೆ. ಇದೇ ರೀತಿ ಹಿಂದೂ ಮಹಾಸಾಗರದಲ್ಲಿ ಅಮೆರಿಕದ ಮಿಲಿಟರಿ ನೆಲೆಯಿರುವುದು, ಅದರ ಸುತ್ತಮುತ್ತಲ ದೇಶಗಳ ಮಿಲಿಟರಿ ವೆಚ್ಚಗಳನ್ನು ಅನಿವಾರ್ಯವಾಗಿ ಹೆಚ್ಚುವಂತೆ ಮಾಡಿದೆ.

ಮೇಲಿನ ಎಲ್ಲ ಕಾರಣಗಳಿಂದಾಗಿ "ಮೂರನೆಯ ಪ್ರಪಂಚ"ದ ರಾಷ್ಟ್ರಗಳು ಒಂದು ಹುಚ್ಚು ಆವೇಶಕ್ಕೆ ಒಳಗಾಗಿ ತಮ್ಮ ಮಿತವಾದ ಸಾಧನ ಸಂಪತ್ತುಗಳಲ್ಲಿನ ಭಾಗವೊಂದನ್ನು ಮಿಲಿಟರಿ ಕಾರ್ಯಗಳಿಗಾಗಿ ವಿನಿಯೋಗಿಸುತ್ತಿವೆ. ಇಂತಹ ಕಾರ್ಯವನ್ನು ಶ್ರೀಮಂತ ರಾಷ್ಟ್ರಗಳು ಮಾಡುತ್ತಿರಬಹುದು. ಆದರೆ ಜಗತ್ತಿನ ಬಡದೇಶಗಳು ಈ ರೀತಿ ಮಾಡುತ್ತಿರುವುದು ಒಂದು ಅಣಕವಾಗಿದೆಯೆಂದು ಹೇಳಬಹುದು. ಏಕೆಂದರೆ, ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ವರದಿಯ ಪ್ರಕಾರ ಜಗತ್ತಿನ ಶೇಕಡ 40ರಷ್ಟು ಜನಸಂಖ್ಯೆಗೆ ಪರಿಣಾಮಕಾರಿಯಾದ ವೈದ್ಯಕೀಯ ಸೇವೆಗಳು ದೊರೆಯುತ್ತಿಲ್ಲ. ಸುಮಾರು 300 ಕೋಟಿ ಜನರಿಗೆ ಶುದ್ಧವಾದ ನೀರಿನ ಸೌಕರ್ಯಗಳಿಲ್ಲ ಮತ್ತು ಮಲಿನ ನೀರಿನಿಂದುಂಟಾಗುವ ಕಾಯಿಲೆಗಳು ಪ್ರತಿ ತಿಂಗಳೂ ಸುಮಾರು 7½ಲಕ್ಷ ಜನರನ್ನು ಕೊಲ್ಲುತ್ತಿವೆ. ಇವೆಲ್ಲವೂ ಹೆಚ್ಚಾಗಿ "ಮೂರನೆಯ ಪ್ರಪಂಚ"ದ ದೇಶಗಳಿಗೆ ಅನ್ವಯಿಸುತ್ತವೆ. ಅಲ್ಲದೆ, ರೋಗ ನಿರೋಧಕ ಲಸಿಕೆಗಳ ಅಭಾವದಿಂದ ಈ ಬಡದೇಶಗಳಲ್ಲಿ ಪ್ರತಿವರ್ಷವೂ 1½ ಕೋಟಿ ಮಕ್ಕಳು ಸಾಯುತ್ತಿವೆ. ಪೋಷಕ ಆಹಾರದ ಕೊರತೆಯು ಈ ದೇಶಗಳಲ್ಲಿ ಇನ್ನೊಂದು ದೊಡ್ಡ ಮಾರಕವಾಗಿದೆ. ಕೋಟ್ಯಂತರ ಮಕ್ಕಳ ಹಾಗು ದೊಡ್ಡವರ ಅಪ್ರಾಪ್ತ ಸಾವುಗಳಿಗೆ ಇದು ಮುಖ್ಯ ಕಾರಣವಾಗಿದೆಯೆಂದು ಅದೇ ವರದಿಯು ಹೇಳುತ್ತದೆ. ಅಲ್ಲದೆ ಈ ಹಿಂದುಳಿದ ರಾಷ್ಟ್ರಗಳಲ್ಲಿ ಅನಕ್ಷರತೆಯು ತುಂಬ ವ್ಯಾಪಕ ವಾಗಿದೆ. ಮೇಲಾಗಿ ನಿರುದ್ಯೋಗ ಮತ್ತು ಅಪೂರ್ಣ ಉದ್ಯೋಗದ ಸಮಸ್ಯೆಗಳು ಈ ಗುಂಪಿನಲ್ಲಿರುವ ಅನೇಕ ದೇಶಗಳನ್ನು ಕಾಡುತ್ತಿವೆ. ಇಂತಹ ಹಲವು ಕ್ಲೇಶ ಗಳನ್ನು ಎದುರಿಸುತ್ತಿರುವ "ಮೂರನೆಯ ಪ್ರಪಂಚ"ದ ರಾಷ್ಟ್ರಗಳು ಅಪಾರವಾದ ಮಿಲಿಟರಿ ವೆಚ್ಚಗಳ ಭಾರವನ್ನು ಹೊರುವುದಕ್ಕೆ ನಿಜವಾಗಿಯೂ ಶಕ್ತವಾಗಿಲ್ಲ. ಹೀಗೆ ವಿಶ್ವದ ಮಿಲಿಟರಿ ಕಾರ್ಯಾಚರಣೆಗಳ ಪರಿಣಾಮಗಳು ಹಿಂದುಳಿದ ದೇಶಗಳ ಕ್ಷೇಮಾಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯವುಗಳಾಗಿಲ್ಲವೆಂದು ಹೇಳಬಹುದು. ಒಟ್ಟಿನಲ್ಲಿ ಹೇಳುವುದಾದರೆ, ಜಗತ್ತಿನ ಮಿಲಿಟರಿ ವೆಚ್ಚಗಳ ಪರಿಣಾಮಗಳು ಯಾವ ದೆಸೆಯಿಂದ ನೋಡಿದರೂ ತುಂಬ ಭೀಕರವಾಗಿ ಕಾಣುತ್ತಿವೆ. ಇವು ವಿಶ್ವಶಾಂತಿ ಯನ್ನು ಆಗಾಗ್ಗೆ ಕಲಕುತ್ತಲೇ ಇವೆ.

ಯಾವುದು ಬೇಕು ?

ಇಂದಿನ ವಿಶ್ವವು "ಅಭಿವೃದ್ಧಿ ಅಥವಾ ಆಯುಧಗಳು", "ಮಾನವ ಅಥವಾ ಮಾರಕಾಸ್ತ್ರಗಳು", "ಪರಿಸರದ ರಕ್ಷಣೆ ಅಥವಾ ಮಾಲಿನ್ಯ" ಎಂಬ ವಿಕಲ್ಪಗಳ

ಉಭಯಸಂಕಟದಲ್ಲಿ ಹೇಗೆ ಸಿಲುಕಿಕೊಂಡಿದೆ ಎಂಬ ಅಂಶ ಮೇಲಿನ ವಿಶ್ಲೇಷಣೆಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ವಾಸ್ತವವಾಗಿ ಇವುಗಳಲ್ಲಿ ಯಾವುದು ಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆರ್ಥಿಕ ಅಭಿವೃದ್ಧಿ, ಮಾನವ ಕುಲದ ಕಲ್ಯಾಣ, ಪ್ರಕೃತಿ ಪರಿಸರ ಸ್ಥಿತಿಯ ರಕ್ಷಣೆ ಮೊದಲಾದ ಕಾರ್ಯಗಳನ್ನು ಎಲ್ಲರೂ ಅನುಮೋದಿಸುತ್ತಾರೆ. ಆಯುಧಗಳು, ಮಾರಕಾಸ್ತ್ರಗಳು ಪರಿಸರ ಮಾಲಿನ್ಯ ಮುಂತಾದವುಗಳಿಂದ ಆಗುತ್ತಿರುವ ಕೆಟ್ಟ ಪರಿಣಾಮಗಳು ಯಾರಿಗೂ ಬೇಡವಾಗಿವೆ. ಇಷ್ಟಾದರೂ ವಿಶ್ವದ ರಾಷ್ಟ್ರಗಳು ಕೋಟ್ಯಂತರ ರೂಪಾಯಿಗಳನ್ನು ಮಿಲಿಟರಿ ಕಾರ್ಯಗಳಿಗಾಗಿ ಏಕೆ ಖರ್ಚು ಮಾಡುತ್ತಿವೆ? ಆಯುಧಗಳು ಮತ್ತು ಮಾರಕಾಸ್ತ್ರಗಳನ್ನು ಏಕೆ ತಯಾರು ಮಾಡುತ್ತಿವೆ ? ಅವುಗಳನ್ನು ಸಂಗ್ರಹಿಸುತ್ತಿವೆ ಹಾಗು ಬಳಸುತ್ತಿವೆ, ಏಕೆ ?

ಈ ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ತುಂಬ ಸುಲಭ. ಮಾನವನು ಜಲಚರ ಪ್ರಾಣಿಗಳಂತೆ ಈಜುವುದನ್ನು ಕಲಿತ, ಆಕಾಶದಲ್ಲಿ ಪಕ್ಷಿಗಳಂತೆ ಹಾರಾಡುವುದನ್ನೂ ಕಲಿತ. ಅವನು ಚಂದ್ರಲೋಕಕ್ಕೂ ಹೋಗಿಬಂದಿದ್ದಾನೆ. ಅವನ ಜ್ಞಾನ, ವಿಜ್ಞಾನ ಮತ್ತು ತಾಂತ್ರಿಕಶಕ್ತಿ ಅಪಾರವಾಗಿ ಬೆಳೆದಿವೆ. ಇಷ್ಟೆಲ್ಲ ಪ್ರಗತಿಯಾಗಿದ್ದರೂ ಅವನು ಕೇವಲ "ಮಾನವ"ನಾಗಿ ನೆಮ್ಮದಿ ಹಾಗು ಸುಖ ಶಾಂತಿಗಳಿಂದ ಸಹಬಾಳ್ವೆ ನಡೆಸುವುದನ್ನು ಇನ್ನೂ ಕಲಿತಿಲ್ಲ ಎಂದು ತಿಳಿದವರು ಹೇಳುತ್ತಾರೆ. ಜಗತ್ತಿನ ರಾಷ್ಟ್ರರಾಷ್ಟ್ರಗಳ, ಜನಾಂಗ ಜನಾಂಗಗಳ ನಡುವೆಯಿರುವ ದ್ವೇಷ, ಅಸೂಯೆ, ಸಂಶಯ, ಭಯ ಮೊದಲಾದುವನ್ನು ನೋಡಿದಾಗ ಈ ಮಾತು ನಿಜವೆಂದು ಕಾಣುತ್ತದೆ. ಹೀಗಲ್ಲದಿದ್ದರೆ, ಪ್ರಪಂಚದ ದೇಶಗಳು ಇಂತಹ ವಿನಾಶಕಾರಿ ಹಾಗು ಹುಚ್ಚುತನದಿಂದ ಕೂಡಿದ ಅಗಾಧವಾದ ಮಿಲಿಟರಿ ವೆಚ್ಚಗಳನ್ನು ಕೈಗೊಳ್ಳುತ್ತಿರುವುದನ್ನು ಇನ್ನಾವ ರೀತಿಯಿಂದಲೂ ಸಮರ್ಥಿಸುವುದು ಕಷ್ಟಸಾಧ್ಯ.

ಆಧುನಿಕ ಆಯುಧಗಳ ಸಂಗ್ರಹಗಳನ್ನು "ಮೂರನೆಯ ಪ್ರಪಂಚ"ದ ರಾಷ್ಟ್ರಗಳು ಪೈಪೋಟಿಯಿಂದ ಹೆಚ್ಚಿಸುತ್ತಿರುವುದು ಇನ್ನೊಂದು ಶೋಚನೀಯ ಸಂಗತಿಯಾಗಿದೆ. ಏಕೆಂದರೆ, ಮೊದಲನೆಯದಾಗಿ ಆಧುನಿಕ ರೀತಿಯ ಯುದ್ಧವೊಂದನ್ನು ದೀರ್ಘಕಾಲದವರೆಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅಗತ್ಯವಾದ ಶಕ್ತಿ ಸಾಮರ್ಥ್ಯಗಳು ಈ ದೇಶಗಳಿಗಿಲ್ಲ. ಎರಡನೆಯದಾಗಿ, ಹಣದುಬ್ಬರ, ನಿರುದ್ಯೋಗ, ಉತ್ಪನ್ನದ ಮಂದಗತಿಯ ಬೆಳವಣಿಗೆ, ಜನಸಂಖ್ಯೆಯ ಅಧಿಕ ಬೆಳವಣಿಗೆ ಮೊದಲಾದ ಪೀಡೆಗಳು ಹಿಂದುಳಿದ ರಾಷ್ಟ್ರಗಳನ್ನು ಬಾಧಿಸುತ್ತಿವೆ. ಮೂರನೆಯದಾಗಿ, ಈ ಗುಂಪಿನಲ್ಲಿರುವ ಅನೇಕ ದೇಶಗಳ ರಾಜಕೀಯ ವ್ಯವಸ್ಥೆಗಳು ಅಷ್ಟು ಭದ್ರವಾಗಿಲ್ಲ. ಕೊನೆಯದಾಗಿ, ಈ ಎಲ್ಲ ರಾಷ್ಟ್ರಗಳ ಸಾಮಾಜಿಕ ಪರಿಸ್ಥಿತಿಗಳಲ್ಲಿ ಇನ್ನೂ ಸಾಕಷ್ಟು ಸುಧಾರಣೆಗಳು ಆಗಬೇಕಾಗಿವೆ. ಈ ಎಲ್ಲ ಕಾರಣಗಳಿಂದಾಗಿ

ಹಿಂದುಳಿದ ಬಡದೇಶಗಳು ತಮ್ಮ ಮಿಲಿಟರಿ ವೆಚ್ಚಗಳನ್ನು ಗಣನೀಯವಾಗಿ ಕಡಿಮೆ ಮಾಡುವುದು ಅತ್ಯವಶ್ಯಕವಾಗಿದೆ. ಇದೇ ಸಾಧನ ಸಂಪತ್ತುಗಳನ್ನು ಮಕ್ಕಳ ಸಾವು, ಪೋಷಕ ಆಹಾರದ ಕೊರತೆ, ಕಶ್ಮಲ ಕುಡಿಯುವ ನೀರು, ವಿದ್ಯಾಹೀನತೆ ಮುಂತಾದವನ್ನು ಹೋಗಲಾಡಿಸಲು ಉಪಯೋಗಿಸುವುದು ಸತ್ಯಕ್ಕೂ ಸ್ತುತ್ಯ ಕಾರ್ಯ.

ಇಂದಿನ ಜಗತ್ತಿನ ಶ್ರೀಮಂತ ಮತ್ತು ಬಡದೇಶಗಳ ನಡುವಿನ ಆರ್ಥಿಕ ಅಂತರ ಗಳು ಅಗತ್ಯವಾಗಿ ಕಡಿಮೆಯಾಗಬೇಕು. ಇದರಿಂದ ಅವುಗಳ ಮಧ್ಯೆಯಿರುವ ಎಷ್ಟೋ ಬಿಗುವುಗಳು ಸಡಿಲವಾಗುತ್ತವೆ. ಇದನ್ನು ಸುಲಭವಾಗಿ ಸಾಧಿಸಲು "ಮೊದಲನೆಯ" ಮತ್ತು "ಎರಡನೆಯ ಪ್ರಪಂಚ''ಗಳ ರಾಷ್ಟ್ರಗಳು ನೆರವಾಗ ಬಹುದು. ಅವು ತಮ್ಮ ಮಿಲಿಟರಿ ವೆಚ್ಚಗಳನ್ನು ಕಡಿಮೆಮಾಡಿ, ಅದರಿಂದ ದೊರೆ ಯುವ ಸಾಧನ ಸಂಪತ್ತುಗಳನ್ನು ಹೆಚ್ಚಿನ ಆರ್ಥಿಕ ನೆರವಿನ ರೂಪದಲ್ಲಿ ಹಿಂದುಳಿದ ದೇಶಗಳಿಗೆ ಕೊಡುವ ಕಾರ್ಯಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಅನೇಕರು ಒತ್ತಾಯಿಸುತ್ತಿದ್ದಾರೆ. ಈ ಕ್ರಮಗಳು ''ಉತ್ತರ'' ಮತ್ತು ''ದಕ್ಷಿಣ''ಗಳ ನಡು ವಿನ ಸಾಮರಸ್ಯವನ್ನು ವೃದ್ಧಿಗೊಳಿಸುತ್ತವೆ. ವಿಶ್ವ ಶಾಂತಿಗೆ ಇದು ಉತ್ತಮ ರಕ್ಷಣೆಯಾಗಬಲ್ಲದೆಂದು ಹಲವರ ಅಭಿಪ್ರಾಯವಾಗಿದೆ.

ಅಭಿವೃದ್ಧಿ ಬೇಕು, ಆಯುಧಗಳು ಬೇಡ ಎಂಬ ಆಧುನಿಕ ಮಾನವನ ಹೋರಾಟ ನಿರಂತರವಾಗಿ ವಿಶ್ವದ ''ಮೂರು ಪ್ರಪಂಚ''ಗಳಲ್ಲೂ ನಡೆಯ ಬೇಕಾ ಗಿದೆ, ಈ ಬೇಡಿಕೆ ಉಗ್ರ ಚಳವಳಿಯ ಸ್ವರೂಪವನ್ನು ತಳೆಯಬೇಕು. ವಿಶ್ವದಾ ದ್ಯಂತ ಇಂತಹ ಚಳವಳಿಯಲ್ಲಿ ವಿಚಾರ ಶೀಲರು, ಬುದ್ಧಿಜೀವಿಗಳು, ವಿಜ್ಞಾನಿಗಳು, ವಿದ್ವಾಂಸರು, ಸಮಾಜ ಸುಧಾರಕರು, ರಾಜ ತಂತ್ರಜ್ಞರು, ತತ್ವಜ್ಞಾನಿಗಳು, ಧಾರ್ಮಿಕ ಮುಖಂಡರು ಮುಂತಾದ ಗಣ್ಯರು ಸಕ್ರಿಯಾತ್ಮಕವಾಗಿ ಭಾಗವಹಿಸ ಬೇಕು. ಇವರೆಲ್ಲರ ಕರೆ ಅರಣ್ಯರೋದನವಾಗಬಾರದು. ಏಕೆಂದರೆ, ಇಂದಿನ ಜಗತ್ತಿನ ಯುದ್ಧ ಶಸ್ತ್ರಗಳ ಸಂಗ್ರಹವು ದೈತ್ಯ ಭಸ್ಮಾಸುರನ ಹಾಗೆ ಬೆಳೆದು, ಇಡೀ ಮಾನವನ ಕುಲವನ್ನು ಕ್ಷಣ ಮಾತ್ರದಲ್ಲಿ ನಾಶಗೊಳಿಸುವಂತಹ ಅಪಾರ ಧ್ವಂಸ ಶಕ್ತಿ ಯನ್ನು ಪಡೆದಿದೆ. ಆದ್ದರಿಂದ ಆಯುಧಗಳು ಬೇಡ, ಅಭಿವೃದ್ಧಿ ಬೇಕು ಎಂಬುದು ಇಂದಿನ ಮಾನವನ ಮುಖ್ಯ ಹೋರಾಟಗಳಲ್ಲಿ ಒಂದಾಗಿದೆ. ಈ ಹೋರಾಟದಲ್ಲಿ ಮಾನವನು ಸೋತರೆ ಅವನ ಕುಲದ ಅಳಿವು, ಗೆದ್ದರೆ ಉಳಿವು.

ನಾನು–ಕುಂಡಲಿ–ಅಪ್ಪ

ಜಯಶ್ರೀ ಬಾಚ್ಚ

ಇಪ್ಪತ್ತರ ಮೇಲೆ ಮೂರು ವಸಂತಗಳು
ಉರುಳುತ್ತಿರುವಾಗ
ಅಪ್ಪ ಚಡಪಡಿಸುತ್ತಾನೆ
ಕಣ್ಣ ಸುತ್ತಲಿನ ಕಪ್ಪು ನಿಟ್ಟಿಸುತ್ತ
ಅವ್ವ ಕಳವಳಿಸುತ್ತಾಳೆ
ಸಾವಿಗೆ ಸಮೀಪನಾದೆನೆಂದಲ್ಲ
ಬದುಕಿಗೆ ಹತ್ತಿರವಾಗುತ್ತಿರುವೆನೆಂದು
ನಾ ಸಂತೋಷಿಸುತ್ತೇನೆ

ಹದಿಹರಯದ ಉಕ್ಕುವ ರೋಷಾವೇಶ
ಬೆದೆಯ ಬೆಂಬತ್ತಿ
ಕಂಡಕಂಡದ್ದಕ್ಕೆಲ್ಲ ಡಿಕ್ಕಿ ಹೊಡೆಯುವ ಪೋರಿ
ಹಾದಿಗೆ ಅಡ್ಡ ಬಂದದ್ದನ್ನೆಲ್ಲ ಕೊಚ್ಚಿ ಹಾಕುವ ಛಲ
ಚಿಗುರೊಡೆವ ಆಶೆ-ಆದರ್ಶ-ಕನಸು-ಗೊಂದಲಗಳು
ಪ್ರೇಮ ವಿರಹ ರಂಗುರಂಗಿನ ಅಯಸ್ಕಾಂತ
ಯಾರು ಯಾರದೊ ಬದುಕು ಆಕರ್ಷಣೀಯ.

ಇಪ್ಪತ್ತರಿಂದ ಇಪ್ಪತ್ತೈದು
ನಿಂತು ಹೊರಡುವ ಪ್ರಜ್ಞೆ
ಹೊಗೆಯ ಮುಸುಕಿನೊಳಗಿನ ಕಿಚ್ಚು
ಫಕ್ಕನೆ ಉರಿದು
ಬೂದಿಯಾಗಬಾರದಲ್ಲಾ ?

ಈಗೀಗ
ನಾನೆಷ್ಟು ಬೆಳೆದಿಲ್ಲ ?
ಕಂದರ ಜೋಡಿಸಿ ಗಿರಿಹತ್ತಿ
ನಕ್ಷತ್ರ ಮೂಡಿಸುವ ಹುಚ್ಚು ಆದರ್ಶ

ಕೊಚ್ಚಿ ಕೊಚ್ಚಿ ಕಡಲನೀರಾಗಿ
ಗಟ್ಟಿ ನೆಲದ ಮೇಲೆ ಕಾಲೂರುವ
ಯತ್ನ ನಡೆಸಿರುವುದು;
ನಾವು ಪ್ರಬುದ್ಧರಾಗುತ್ತೇವೆನ್ನುವಾಗ
ಸಹನಾತೀತರ ಕ್ರೌರ್ಯವನ್ನು ಸಹಿಸುವ
ತಾಳ್ಮೆ ತಂದುಕೊಂಡದ್ದು;
ನಮ್ಮ ದಾರಿಗೆ ಅಡ್ಡಗಲ್ಲಿಸಿದವರೆಲ್ಲಾ
ಅವರವರ ದೃಷ್ಟಿ ಹಿನ್ನೆಲೆಯಲ್ಲಿ
ಅರ್ಥಪೂರ್ಣರಾದದ್ದು............
ಅನುಭವಗಳು ಒತ್ತಿ ಒತ್ತಿ ಹಣ್ಣಾಗಿಸಿದ್ದೆಷ್ಟು!
ನಾ ಮಾಗಲಿಲ್ಲವೆ ?
ಬದುಕು ಮಾಗಿಸಿಲ್ಲವೆ ?
ಹುಟ್ಟಿದ ತಾರೀಖು ಮುಂದೂಡಿ ಮುಂದೂಡಿ
ಕುಂಡಲಿಯಲ್ಲಿ
ಅಪ್ಪ ನನ್ನನ್ನು ಚಿಕ್ಕವಳನ್ನಾಗಿ ಮಾಡಿದರೆ
ಹೆಚ್ಚುತ್ತಿರುವ ವಯಸ್ಸನ್ನು
ನಾ ಪ್ರೀತಿಸುತ್ತಿದ್ದೇನೆ

ಸ್ವ. ಚುರಮುರಿ ಶೇಷಗಿರಿರಾಯರು ಕಂಡ 'ಕನ್ನಡ ಭಾಷೆ'

ಪ್ರಲ್ಹಾದ ಮುದಗಲ್ಲ

ಕಳೆದ ಶತಮಾನದಲ್ಲಿ ಕನ್ನಡ ಮತ್ತು ಮರಾಠೀ ಸಾಹಿತ್ಯದಲ್ಲಿ ಕೃಷಿಮಾಡಿದ ಕರ್ನಾಟಕದ ಮಹನೀಯರಲ್ಲಿ ಸ್ವ.ಚುರಮುರಿ ಶೇಷಗಿರಿರಾಯರು, ಹೆಸರು ಪಡೆದ ಕನ್ನಡ ಅಭಿಮಾನಿಗಳು. ವೃತ್ತಿಯಲ್ಲಿ ಸಿವ್ಹಿಲ್ ಇಂಜನೀಯರರು. ಅವರ ಸಂಬಂಧ ಕಾಲುವೆ, ಸೇತುವೆ ಕಟ್ಟುವುದೂ, ಭೂ ವಿಸ್ತಾರ (reclaimation)ಮಾಡುವುದೂ, ಇತ್ಯಾದಿ ಕೆಲಸಗಳಲ್ಲಿ ತೊಡಗಿದ್ದರೂ, ಅವರ ಆಂತರಿಕಶಕ್ತಿ ನಾಟಕ, ಭಾಷಾಶಾಸ್ತ್ರ, ಕವಿತೆಗಳನ್ನು ಅಧ್ಯಯನಮಾಡಿ ಆಯಾ ಭಾಗಗಳಲ್ಲಿ ಪಾಂಡಿತ್ಯವನ್ನು ತೋರಿಸಲು ಹುರಿದುಂಬಿಸುತ್ತಿತ್ತು. ಕಲ್ಲು ಮಣ್ಣುಗಳೊಡನೆ ಉದರ ನಿರ್ವಾಹ ಕೆಲಸವನ್ನು ಮಾಡುತ್ತಿದ್ದ ಇವರು ಅದರಲ್ಲೂ ಪ್ರತಿಭೆ ಕಂಡರು. ಆ ಪ್ರತಿಭೆಯೇ ಸಾಹಿತ್ಯದ ಮುಖಾಂತರ ಹೊರಬಂದಿದೆ.

ಕನ್ನಡ ಸಾಹಿತ್ಯದಲ್ಲಿ ಮಹಾಕವಿ ಕಾಲಿದಾಸನ 'ಅಭಿಜ್ಞಾನ ಶಾಕುಂತಲಂ' ನಾಟಕವನ್ನು ಕ್ರಿ. ಶ. 1830ರಲ್ಲಿ ತಮ್ಮ ಸ್ವತಂತ್ರ ಪ್ರತಿಭೆ, ಕವಿತ್ವಶಕ್ತಿ, ನಾಟ್ಯ ತಂತ್ರಗಳನ್ನು ಬಳಸಿ ಅನುವಾದಿಸಿದ ಕನ್ನಡಿಗರಲ್ಲಿ ಇವರೇ ಮೊತ್ತಮೊದಲಿಗರು. ನಾಟ್ಯಾಚಾರ್ಯ ಅಣ್ಣಾಸಾಹೇಬ ಕಿರ್ಲೋಸ್ಕರರು ಮರಾಠಿ ರಂಗಭೂಮಿಯ ಪಿತಾಮಹರು. ಚುರಮುರಿಯವರ ಕನ್ನಡ ಶಾಕುಂತಲ ನಾಟಕದ ಪ್ರಭಾವ ಅಣ್ಣಾ ಸಾಹೇಬರ ಮೇಲೆ ಉಂಟಾದುದು ಅರಿತ ಸಂಗತಿ. ಶಾಕುಂತಲ ನಾಟಕವನ್ನು ಕನ್ನಡ ಭಾಷೆಯಲ್ಲಿ ಚುರಮುರಿಯವರ ನಂತರ ಪಂಡಿತ ಬಸವಪ್ಪಶಾಸ್ತ್ರಿಗಳು, ಮತ್ತು ಶ್ರೀ ಬಿ. ಕೃಷ್ಣಪ್ಪನವರು ಅನುವಾದಿಸಿದರು. 'ಮೃಚ್ಛಕಟಿಕ' ನಾಟಕವನ್ನು 1882ರಲ್ಲಿ ಚುರಮುರಿಯವರು ಗದ್ಯದಲ್ಲಿ ಅನುವಾದಿಸಿದರು.

ಕನ್ನಡ ಭಾಷಾಶಾಸ್ತ್ರವನ್ನು ಆಳವಾಗಿ ಅಧ್ಯಯನಮಾಡಿ, ಅದರ ಪ್ರಚಾರವನ್ನು ತುಲನಾತ್ಮಕವಾಗಿ, ಉದಾಹರಣೆಗಳ ಸಹಿತ, ಮರಾಠಿ ಭಾಷೆಯಲ್ಲಿ ಪ್ರಚಾರ ಮಾಡಿದ ಕನ್ನಡ ಪಂಡಿತರಲ್ಲಿ ಇವರು ಮೊದಲಿಗರಾಗಿ ತೋರುತ್ತಾರೆ. ಹೋದ ಶತಮಾನದಲ್ಲಿ ಮರಾಠಿ ಭಾಷೆಯಲ್ಲಿ ಹೆಸರು ಪಡೆದ 'ವಿವಿಧ ಜ್ಞಾನವಿಸ್ತಾರ' ಮಾಸ ಪತ್ರಿಕೆಯಲ್ಲಿ ಲೇಖ, ಕವಿತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಕಾನಡೀ ಭಾಷಾ' ಎಂಬ ಲೇಖ "ಬಹಿರ್ಲಾಪಿಕಾ" (ತೋಡಿ–ಸ್ಫುಟವಿಷಯ) ಕವಿತಾ ಸಂಗ್ರಹ, 'ಜೈಮಿನಿ ಭಾರತದ ಪೀಠಿಕಾ ಸಂಧಿ' ಮರಾಠೀ ಅನುವಾದ ಇತ್ಯಾದಿ

ಇವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ. 'ಕಾನಡೀ ಭಾಷಾ' ಎಂಬ ಇವರ ಲೇಖ ಇಂದಿನವರೆಗೆ ಕನ್ನಡ ಸಾಹಿತಿಗಳಿಗೆ ಗೊತ್ತಿದ್ದುದು ಕಾಣುವುದಿಲ್ಲ. ಕನ್ನಡ ಸಾಹಿತ್ಯದ ಇತಿಹಾಸದ ಬಗ್ಗೆ ಸಂಶೋಧನೆ ಮಾಡಿದ ಕನ್ನಡ ಸಾಹಿತಿಗಳು ಚುರಮುರಿಯವರ ಉಲ್ಲೇಖ ಮಾಡುವಾಗ್ಗೆ, ಕೇವಲ ಅವರು 'ಜೈಮಿನಿ ಭಾರತ' ಪೀಠಿಕಾ ಸಂಧಿಯನ್ನು ಮರಾಠೀ ಭಾಷೆಯಲ್ಲಿ ಅನುವಾದಿಸಿದ ಬಗ್ಗೆ ಮತ್ತೆ ಮತ್ತೆ ಹೇಳಿದ್ದಾರೆ. ಆದರೆ 'ಜೈಮಿನಿ ಭಾರತ' ಮರಾಠಿ ಅನುವಾದದ ಪ್ರಸ್ತಾವನೆಯಲ್ಲಿ ಚುರಮುರಿಯವರು, ಒಂದು ಭಾಷೆಯಲ್ಲಿಯ ಕವಿಯ ಕೃತಿಯನ್ನು ಬೇರೊಂದು ಭಾಷೆಯಲ್ಲಿ ಅನುವಾದಿಸುವಾಗ್ಗೆ ಬರುವ, ಪ್ರಾಸ, ಮಾತ್ರಾಗಣ, ಚರಣ, ವೃತ್ತ ಇತ್ಯಾದಿಗಳ ಮೂಲರೂಪಗಳನ್ನು ಕಾಯ್ದುಕೊಳ್ಳುವಾಗ್ಗೆ ಉಂಟಾಗುವ ಅಸಂಭವವನ್ನು ಬಹಳೇ ವಿಶದವಾಗಿ ನಿರೂಪಿಸಿದ್ದಾರೆ. ಈ ಸತ್ಯ ಸಂಗತಿಯನ್ನು ಸಂಶೋಧಕರು ಲಕ್ಷಿಸಿದಂತೆ ಕಾಣುವುದಿಲ್ಲ. ನನ್ನ ಈ ಲೇಖದಲ್ಲಿ ಮರಾಠಿ ಭಾಷೆಯಲ್ಲಿ ಬರೆದ 'ಕಾನಡೀ ಭಾಷಾ' ಮತ್ತು 'ಜೈಮಿನಿ ಭಾರತ' ಪೀಠಿಕಾ ಸಂಧಿಗಳನ್ನು ಕುರಿತು, ಅವರ ವಿಚಾರಗಳನ್ನೇ ತೋರಿಸಲು ಯತ್ನಿಸಿರುವೆನು.

ಸ್ವ. ಶೇಷೋ. ರಾಮಚಂದ್ರ. ಚುರಮುರಿ ಇವರ ಜನ್ಮ ಕ್ರಿ. ಶ. 1827ರಲ್ಲಿ ಧಾರವಾಡದಲ್ಲಿ ಆಯಿತು. ತಂದೆ ರಾಮಚಂದ್ರರಾಯರು ಪೋಲಿಸ ಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ನ್ಯಾಯನಿಷ್ಠುರರಾದ ಇವರಿಗೆ ವರಿಷ್ಠ ಅಧಿಕಾರಿಯೊಡನೆ ಭಿನ್ನಾಭಿಪ್ರಾಯ ಉಂಟಾದುದರಿಂದ ಆ ಕೆಲಸವನ್ನು ಬಿಟ್ಟುಕೊಟ್ಟು, ವಿರಕ್ತಿ ಪಡೆದು, ಕೀರ್ತನೆ, ಪುರಾಣ ಹೇಳತೊಡಗಿದರು. ಇವರು ಶೀಘ್ರ ಕವಿಗಳಿದ್ದರು ಎಂದೂ ತಿಳಿದು ಬರುತ್ತದೆ. ರಾಮಚಂದ್ರರಾಯರ ಸಂಗೀತ ಪಾಂಡಿತ್ಯಕ್ಕೆ ಮಾರುಹೋದ ಮಿತ್ರರು 'ಗವಯಿ'ರಾಮಚಂದ್ರ ಎಂದು ಕರೆಯುತ್ತಿದ್ದರು.

ಚುರಮುರಿ ಇವರ ಮೂಲ ಮನೆತನ ರಾಮದುರ್ಗದ ಪಕ್ಕದಲ್ಲಿರುವ ಮುದಕವಿ ಗ್ರಾಮ ; ಮಾತ್ರವಲ್ಲ ಇವರ ಅಡ್ಡಹೆಸರು 'ಮುದಕವಿ' ಎಂದಿತ್ತು. ಆದರೆ ಇವರ ಪೂರ್ವಜರು ರಾಮದುರ್ಗದಿಂದ ಧಾರವಾಡಕ್ಕೆ ವಲಸೆಬಂದು ಉದರ ನಿರ್ವಾಹಕ್ಕಾಗಿ ಚುರಮುರಿ ಎಂಬ ಪ್ರಸಿದ್ಧ ವೀರಶೈವ ವ್ಯಾಪಾರಿಯ ಮುಖ್ಯ ಗುಮಾಸ್ತರಾಗಿ ಕೆಲಸ ಮಾಡತೊಡಗಿದರು. ಕಾಲಾಂತರದಿಂದ 'ಮುದಕವಿ' ಎಂದುದನ್ನು ಮರೆತು ಜನರು 'ಚುರಮುರಿ' ಎಂದೇ ಇವರ ಪೂರ್ವಜರಿಗೆ ಕರೆಯತೊಡಗಿದರು. ಈ ಮನೆತನಕ್ಕೆ ಸಂಬಂಧಿಸಿದ ಕೆಲವರು ಸರಾಫೀ ಕೆಲಸ ಮಾಡುತ್ತಿದ್ದರು. ಅವರನ್ನು 'ನಾಯಿಕ' ಎಂದು ಕರೆಯುತ್ತಾರೆ. ಕೆಲವು 'ನಾಯಿಕ' ಮನೆತನ, ರಾಮದುರ್ಗದಲ್ಲಿ ಇಂದಿನವರೆಗೂ ಇರುವವು.

ಶೇಷಗಿರಿರಾಯರಿಗೆ ಬಾಲ್ಯದಲ್ಲಿ ದೊರೆತ ಸಂಸ್ಕೃತಿಯೇ ಅವರ ಜೀವನವನ್ನು ರೂಪಗೊಳಿಸಿತು. ತಂದೆ ರಾಮಚಂದ್ರರಾಯರ ಮಾರ್ಗದರ್ಶನದಲ್ಲಿ, ಸಂಸ್ಕೃತ,

ಮರಾಠಿ, ಕನ್ನಡ ಭಾಷೆಗಳಲ್ಲಿ ಪ್ರಾವೀಣ್ಯ ಪಡೆದರು. ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ', ರಾಮಚಂದ್ರರಾಯರ ಸಂಗೀತ ಜಲಸೆ, ಸಂಗೀತ ಕಲೆಯಲ್ಲಿ ಪ್ರಾವೀಣ್ಯ ಪಡೆಯಲು ಇವರಿಗೆ ಅನುವಾಯಿಂತು.

ಉಚ್ಚ ಶಿಕ್ಷಣಕ್ಕಾಗಿ ಪುಣೆ ಪಟ್ಟಣಕ್ಕೆ ತೆರಳಿದ ಶೇಷಗಿರಿ ಸಿವ್ಹಿಲ್ ಇಂಜಿನೀಯ ನಾಗಿ ಪೀ. ಡಬ್ಲ್ಯು. ಡೀ. ಖಾತೆಯಲ್ಲಿ ಓವ್ಹರಸೀಯರನೆಂಬ ಜವಾಬ್ದಾರಿ ವಹಿಸಿದ ರಲ್ಲದೇ ಕ್ರಿ.ಶ. 1869ರಲ್ಲಿ ಇವರಿಗೆ ಸೆಕೆಂಡಗ್ರೇಡ್ ಓವ್ಹರಸೀಯರ ಎಂದು ಬಡತಿ ದೊರಕಿತ್ತು. ಶೇಷಗಿರಿರಾಯರ ಸಮಕಾಲೀನ ಶಿಕ್ಷಣತಜ್ಞ ಶ್ರೀ ಚೆನ್ನಬಸಪ್ಪ ಧಾರವಾಡ ಎಂಬುವವರು ಡೆಪ್ಯೂಟೀ ಎಜುಕೇಶನ್ ಇನ್ಸ್‌ಪೆಕ್ಟರರಾಗಿದ್ದರಲ್ಲದೆ ಶೇಷಗಿರಿಯ ಸಾಹಿತ್ಯ ಗುರುಗಳು. ಶ್ರೀ ಚೆನ್ನಬಸಪ್ಪ ಮತ್ತು ಶೇಷಗಿರಿರಾಯರು 'ವಿವಿಧ ಜ್ಞಾನ ವಿಸ್ತಾರ' ಪತ್ರಿಕೆಯ ಚಂದಾದಾರರಾಗಿದ್ದರೆಂಬುದು, ಆ ಪತ್ರಿಕೆಯ ಚಂದಾದಾರರ ಪಟ್ಟಿಯಿಂದ ತಿಳಿದುಬರುತ್ತದೆ. ಶ್ರೀ ಚೆನ್ನಬಸಪ್ಪನವರು ಕನ್ನಡ ಅಭಿಮಾನಿಗಳು. ಆದಾಗ್ಯೂ ಮರಾಠೀ ಭಾಷೆಯಲ್ಲಿ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಎರಡು ಪುಸ್ತಕಗಳನ್ನು ರಚಿಸಿದ್ದಾರೆ. ನಮಗೆ ಅವರು ಬರೆದ 'ಸಮೀಕರಣ ಸಂಗ್ರಹ' 'ಸಮೀಕರಣ ಆಣಿ ಸಿದ್ಧಾಂತ ಸಂಗ್ರಹ–ಭಾಗ–2' ನೋಡಲು ದೊರೆಯುತ್ತವೆ.

ಶೇಷಗಿರಿರಾಯರಿಗೆ ಗಂಡು ಸಂತತಿ ಇರಲಿಲ್ಲ. ಕೇವಲ ಎರಡು ಹೆಣ್ಣು ಮಕ್ಕಳು ಇದ್ದರು. ಮುಂಬೈಯಲ್ಲಿದ್ದ ಸಮಯ ಶೇಷಗಿರಿರಾಯರ ಧರ್ಮಪತ್ನಿ ಭೀಮಾಬಾಯಿ ಸ್ವರ್ಗಸ್ಥರಾದರು. ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಉಳಿದ ಜವಾಬುದಾರಿಯನ್ನು ಶೇಷಗಿರಿರಾಯರ ಕಕ್ಕನವರು ವಹಿಸಿದರು, ಕ್ರಿ.ಶ. 1875ರಲ್ಲಿ ಶೇಷಗಿರಿರಾಯರು ಸಿಂಧ ಪ್ರಾಂತದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಲು ಕರಾಚಿಯಲ್ಲಿ ಜರುಗಿದ ಒಂದು ಸಮ್ಮೇಲನದಲ್ಲಿ 'ಸ್ನೇಹಾ ವಿಷಯೀ ನಿಬಂಧ' ಎಂಬ ವರದಿ ಸಾಕ್ಷಿಯಾಗಿದೆ.

ಮುಂಬೈಯ ವಾಸ್ತವ್ಯ ಕಾಲದಲ್ಲಿ ಶೇಷಗಿರಿರಾಯರು ಬರೆದ ಮರಾಠಿ, ಲೇಖ, ಕವಿತೆಗಳನ್ನು ಪರಿಶೀಲಿಸಿದ ಡೆಪ್ಯೂಟಿ ಚೆನ್ನಬಸಪ್ಪನವರು ಇವರಿಗೆ ಕನ್ನಡ ಸಾಹಿತ್ಯ ದಲ್ಲಿ ಅಳಿಸದೇ ಉಳಿಸುವಂತಹ ಕೆಲಸ ಮಾಡಲು ಹುರಿದುಂಬಿಸಿದರು.

ಕ್ರಿ.ಶ. 1867–68ರಲ್ಲಿ ಚೆನ್ನಬಸಪ್ಪನವರು ಬೆಳಗಾಂವಿಯಲ್ಲಿ ಇರುತ್ತಿದ್ದರು. ಇದರ ಪರಿಣಾಮವೋ ಏನೋ ಮರುವರ್ಷವೇ 'ಕನ್ನಡ ಶಾಕುಂತಲ'ವನ್ನು ರಚಿಸಿ ಮುಂಬೈ ಎಜುಕೇಶನ್ ಸೋಸಾಯಿಟಿಯಲ್ಲಿ ಮುದ್ರಿಸಿ ಪ್ರಕಾಶಿಸಿದರು. ಈ ನಾಟಕದ ಸೂಚನೆ (ಮುನ್ನುಡಿ) ಪದ್ಯದಲ್ಲಿ ಆತ್ಮವಿಶ್ವಾಸದಿಂದ ತಮ್ಮ ಕೃತಿಯ ಬಗ್ಗೆ ಕೆಳಗಿನಂತೆ ಹೇಳಿದ್ದಾರೆ :–

ಕವಿಜನರೆಲ್ಲಿ ನೋಡಬಹುದೆನ್ನಯ ಕೃತ್ಯವ ನನ್ನದೇಶದೊಳ್ ।
ವಿವಿಧ ಜನರ್ಕಳಿಂ ವಿವಿಧ ಭಾಷೆಯೊಳಂತರಿಸಿರ್ಪವಂಗಳಂ ॥
ಸವಿಯೊಳು ಹಚ್ಚಿ ನೋಡಲೊರೆಕನ್ನಡಿನೆನದು ಹೆಚ್ಚದಿರ್ದೊಡೆ ।
ಕವಿತೆಯಗಂಡುಮೆಟ್ಟುಕರನಾಟಕಬಿಟ್ಟು ತೆರಳ್ದು ಪೋಗುವೆಂ ॥

ನಿವೃತ್ತರಾದ ಶೇಷಗಿರಿರಾಯರು ಧಾರವಾಡದಲ್ಲಿ ವಾಸಿಸತೊಡಗಿದರು. ಅಧ್ಯಯನ, ಸಂಶೋಧನೆ ಸಾಗಿಯೇ ಇತ್ತು. 2-6-1882ರಂದು ಕಾಜಂ ಕರಗಿಸುವ ಪ್ರಯೋಗ ಮಾಡುವಾಗ್ಗೆ ವಿಷಾರಿ ವಾಯು ಹೊಟ್ಟೆಯಲ್ಲಿ ಹೋದದ್ದರಿಂದ ಆಕಸ್ಮಿಕ ನಿಧನವಾಯಿತು. ಇವರ ಖಾಸಗೀ ವಾಚನಾಲಯದ ಪುಸ್ತಕಗಳ ಸಂಗ್ರಹದ ಬೆಲೆ ಆ ಕಾಲದಲ್ಲಿ ಮೂರುಸಾವಿರ ರೂಪಾಯಿ ಇತ್ತೆಂದು ತಿಳಿದು ಬರುತ್ತದೆ.

'ಕಾನಡೀ ಭಾಷಾ' ಎಂಬ ಲೇಖನವನ್ನು ಬರೆದ ಕಾಲವೆಂದರೆ ಅದೇ ತಾನೇ ಹತ್ತು ವರುಷ ಮೊದಲು ಕಂಪನೀ ಸರಕಾರದ ವಿರುದ್ಧ ಹಿಂದುಸ್ಥಾನದವರು ಕೈಕೊಂಡ ಕೊನೆಯ ಸ್ವಾತಂತ್ರ್ಯ ಸಂಗ್ರಾಮ. ಆದಾಗ್ಯೂ ತಮ್ಮ ಈ ಲೇಖದಲ್ಲಿ ಯಾರಿಗೂ ಬೆದರದೆ ಅವರು ವ್ಯಕ್ತಪಡಿಸಿದ ವಿಚಾರಗಳನ್ನು ಅಳವಡಿಸಿದರೆ, ಶೇಷಗಿರಿರಾಯರು ಹೆಚ್ಚಿನ ಧೈರ್ಯವಂತರೇ ಸರಿ ಎಂಬುದು ಕಾಣುತ್ತದೆ. ಯೂರೋಪ ಖಂಡದ ಪಂಡಿತರು ಕೈಕೊಂಡ ಶೋಧಗಳ ಬಗ್ಗೆ, ಪ್ರತಿ ಸಂಶೋಧನೆ ಮಾಡುವ ಅವಶ್ಯಕತೆಯಿಲ್ಲ ಎಂದು ಹೇಳುವುದು ಹುಚ್ಚುತನವೇ ಸರಿ ಎಂದು ಹೇಳಿದ್ದಾರೆ. ಇವರು ವ್ಯಕ್ತಿ ಪೂಜಕರಲ್ಲ, ನ್ಯಾಯ ನಿಷ್ಠುರರು, ಯಾರಿಗೂ ಬೆದರಿದವರಲ್ಲ. ಅಷ್ಟೇ ಅಧ್ಯಯನ ಮಾಡಿದ ಪಂಡಿತರು ಎಂದು ಹೇಳಲು ಬರುತ್ತದೆ. ಜರ್ಮನ್ ದೇಶದ ಬೆನ್ಫೀ ಮತ್ತು ಮ್ಯಾಕ್ಸಮುಲ್ಲರರು ಹಿಂದುಸ್ಥಾನದ ಭಾಷೆಗಳ ಮೇಲೆ ತಮ್ಮ ತಮ್ಮ ಮತ ಪ್ರದರ್ಶನ ಮಾಡಿದ್ದಾರೆ. ಅವರ ವಿಚಾರಗಳನ್ನು ಸಾಧಾರ, ಸಪ್ರಮಾಣದೊಡನೆ ತೊಡೆದಟ್ಟಿದ ಕನ್ನಡ ಪಂಡಿತರು ಶೇಷಗಿರಿರಾಯರು. ಓರ್ವ ಪಂಡಿತನಿಗೆ ಒಂದು ವಿಷಯದಲ್ಲಿ ಸಾಕಷ್ಟು ಜ್ಞಾನವಿಲ್ಲ. ಅಂತಹನು ಆ ವಿಷಯದಲ್ಲಿ ಅಜ್ಞಾನಿಯೇ ಸರಿ ಎಂದು ಹೇಳಿದ ಶೇಷಗಿರಿರಾಯರು ಸಾಹಿತ್ಯ, ಭಾಷಾಶಾಸ್ತ್ರವನ್ನು ಹೋದ ಶತಮಾನದಲ್ಲಿ ಎಷ್ಟು ಆಳವಾಗಿ ಅಧ್ಯಯನ ಮಾಡಿದ್ದರೆಂಬುದು ತಿಳಿಯುವುದು. ಇವರಿಗೆ ಲ್ಯಾಟಿನ್ ಭಾಷೆಯ ಮೇಲೆ ಪ್ರಭುತ್ವ ಇದ್ದಿತು. ಕನ್ನಡ ಶಬ್ದಗಳೊಡನೆ ಲ್ಯಾಟಿನ್ ಭಾಷೆಯಲ್ಲಿ ಶಬ್ದಗಳ ಬಾಂಧವ್ಯವನ್ನು ಎತ್ತಿ ತೋರಿಸಿದ್ದಾರೆ. ಇವರ ಈ ಲೇಖವು ಭಾಷಾಶಾಸ್ತ್ರಜ್ಞರಿಗೆ, ಮತ್ತು ಸಂಶೋಧಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರೆ ಒಂದು ನೂರು ವರುಷಗಳ ಹಿಂದೆ ಕಾಲದ ಒಡಲಲ್ಲಿ ಸೇರಿದ ಶೇಷಗಿರಿರಾಯರ ಆತ್ಮಕ್ಕೆ ಶಾಂತಿ ದೊರೆತಂತಾಗುವುದು.

ಕನ್ನಡ ಭಾಷೆ

ಮೂಲ ಮರಾಠೀ ಲೇಖಕರು :— ಸ್ವ. ಶೇಷೋ. ರಾಮಚಂದ್ರ
ಚುರಮುರಿ.

ಪ್ರಕಾಶಕರು :— 'ವಿವಿಧ ಜ್ಞಾನ ವಿಸ್ತಾರ' ಮಾಸಪತ್ರಿಕೆ
ಅಂಕು-೬-ಪುಸ್ತಕ – ೧
ಡಿಶೆಂಬರ - ೧೮೬೭
ಪುಟ ನಂಬರ - ೮೫ ರಿಂದ ೮೯

ಕನ್ನಡ ಅನುವಾದಕರು :— ಪ್ರಲ್ಹಾದ, ಮುದಗಲ್ಲ
ಮುಂಬೈ – ೭೬

ನಮ್ಮ ದೇಶದಲ್ಲಿ ಬ್ರಿಟಿಶ್ ಸರಕಾರದ ರಾಜ್ಯ ಸ್ಥಾಪನೆಯಾದಂದಿನಿಂದ ವಿದ್ಯಾ ಸಂಪಾದನೆಯಲ್ಲಿ ಸುಧಾರಣೆ ಉಂಟಾಗಿದೆ. ಹೊಸ ಹೊಸ ಶೋಧಗಳೂ ಸಾಗಿವೆ. ಆಂಗ್ಲರು ಕೈಕೊಳ್ಳುವ ಶೋಧಗಳು ಪ್ರಶಂಸನೀಯುವಾಗಿರುತ್ತವೆ. ಅವರಿಗೆ ಈ ಕಾರ್ಯದಲ್ಲಿ ರಾಜ್ಯಾಧಿಕಾರಿಗಳ ಬೆಂಬಲವಿದ್ದು, ಅವರು ಕೈಕೊಂಡ ಶೋಧಗಳು ಆಧಾರಯುಕ್ತವಾಗಿರುತ್ತವೆ. ಈ ಬಗ್ಗೆ ಸಂಶಯವಿಲ್ಲ. ಹೀಗಿದ್ದರೂ ಪಾಶ್ಚಿಮಾತ್ಯರು ಕೈಕೊಂಡ ಎಲ್ಲ ಶೋಧಗಳು ಸಮಂಜಸವಾಗಿರುತ್ತವೆ ಎಂದು ತಿಳಿಯುವದೂ ಮತ್ತು ಆ ಶೋಧಗಳ ಬಗ್ಗೆ ಮತ್ತಷ್ಟು ಸಂಶೋಧನೆ ಕೈಕೊಳ್ಳುವುದು ಅವಶ್ಯವಿಲ್ಲ ಎಂದು ಕಲ್ಪಿಸುವುದೂ ಹುಚ್ಚುತನದ್ದಾಗಿದೆ. ಭರತಖಂಡದ ಬಗ್ಗೆ ಆಂಗ್ಲರು ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ ; ಮಾತ್ರವಲ್ಲ ಅವೆಲ್ಲವೂ ನಮ್ಮ ದೇಶದ ಪಂಡಿತರ ವಿಚಾರಗಳಿಗೆ ಸರಿಸಮಾನವಾಗಿರುತ್ತವೆ. ಓರ್ವ ಯುರೋಪ ಖಂಡದ ವಿದ್ವಾಸ, ಹಿಂದುಸ್ಥಾನದ ವಾಸ್ತವ್ಯ ಕಾಲದಲ್ಲಿ ತನಗೆ ಅರಿವಾದ ಸತ್ಯಾಸತ್ಯದ ವಿಚಾರಗಳನ್ನು ತನ್ನ ಮಾತೃಭೂಮಿಗೆ ಮರಳಿದ ಬಳಿಕ ವ್ಯಕ್ತಪಡಿಸುತ್ತಾನೆ. ಅದನ್ನೇ ಆಧಾರವಾಗಿ, ಆತನ ದೇಶದ ಪಂಡಿತರು ತಮ್ಮ ಕಲ್ಪನೆಯ ಹಿನ್ನೆಲೆಯಲ್ಲಿ ಬೇರೊಂದು ಗ್ರಂಥವನ್ನು ರಚಿಸುತ್ತಾರೆ. ಒಂದು ವೇಳೆ, ಮೂಲ ಲೇಖಕನು, ಪ್ರಸಿದ್ಧ ಪುರುಷನಾಗಿದ್ದಲ್ಲಿ, ಆತನು ಹೇಳಿದುದೆಲ್ಲ ಬೇರೂರಿಬಿಡುವುದು. ಪರಿಣಾಮ, ಕಲ್ಪನೆಯ ಮೇಲೆ ಕಲ್ಪನೆ ರಚಿಸಲಾಗುವುದು. ಯಾವುದರ ಬಗ್ಗೆ ಹಿಂದುಸ್ಥಾನದಲ್ಲಿ ವಾಸ್ತವಿಕವಾಗಿ ಮಾನ್ಯವಿದೆಯೋ, ಸಿದ್ಧಗೊಳಿಸಲು ಯಾವ ತೊಂದರೆ ಇರುವದಿಲ್ಲವೋ, ಅದು ಹಾಗಿಲ್ಲ, ತದ್ವಿರುದ್ಧವಾಗಿದೆ ಎಂಬ ವಿಚಾರಗಳು ಅವರ ಪಾಂಡಿತ್ಯದ ಪ್ರಭಾವದಿಂದ ಜನುಮ ಪಡೆಯುವದು. ತದ್ವಿರುದ್ಧ ವಿಚಾರಗಳು ಮಾನ್ಯವಾದ ಬಳಿಕ ಹಿಂದುಸ್ಥಾನದಲ್ಲಿ, ಮೂಲದಲ್ಲಿದ್ದ ವಿಚಾರಗಳೆಲ್ಲವೂ ಅಸತ್ಯ

ವಾಗಿ ತೋರುವವು. ಆಂಗ್ಲರು ತಾವು ನಿಶ್ಚಯಿಸಿದುದೇ ಸತ್ಯ ಎಂಬುದನ್ನು ಹಿಂದೂಸ್ಥಾನದ ಜನರಿಗೆ ಉಪದೇಶಿಸಲು ಪ್ರಾರಂಭಿಸುತ್ತಾರೆ. ಉದಾಹರಣೆಗಾಗಿ, ಸದಾಕಾಲ ಬಳಕೆಯಲ್ಲಿದ್ದ 'ಹಿಮಾಲಯ' ಈ ಶಬ್ದದ ಉಚ್ಚರಣೆ 'ಹಿಮಲೇಯಾ' ಎಂದು ಮಾಡಬೇಕು ಎಂದು ಉಪದೇಶ ಮಾಡುವ ಈ ಪರದೇಶದ ಪಂಡಿತರು ಅನೇಕರಿದ್ದಾರೆ. ಜರ್ಮನ್ ಪಂಡಿತ ಬೇನ್ಫೀ ಈತನಿಗೆ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿರುವೆನೆಂಬ ಗರ್ವವಿದೆ. "'ಟ, ಠ, ಡ, ಢ, ಣ' ಇವುಗಳ ಉಚ್ಚರಣೆ ಹಲ್ಲುಗಳ ಮೇಲಿನ ತಾಲವ್ಯದ ಭಾಗವಾಗಿದೆ, ನಾಲಗೆಯನ್ನು ಮೇಲ್ಬಾಗಕ್ಕೆ ಒತ್ತಿ ಹಿಂದೂ ಜನರು ಉಚ್ಚರಿಸುವರು" ಎಂದು ಬೇನ್ಫೀ ವ್ಯಕ್ತಪಡಿಸಿದ್ದಾನೆ. ಸಂಸ್ಕೃತ ಭಾಷೆಯಲ್ಲಿಯೂ ತ ಧ ದ ಥ ನ ಇವುಗಳಿಗೆ ಅನುಕ್ರಮವಾಗಿ ರಕಾರವನ್ನು ಜೋಡಿಸಿದರೆ ತ್ರ ಧ್ರ ದ್ರ ಥ್ರ ನ್ರ ಹೀಗೆ ಉಚ್ಚಾರವಾಗುವದು; ಎಂದು ಬೇನ್ಫೀಯು ವಿಚಾರವಾಗಿರಬಹುದು. ಆದರೆ ಇವು ಪ್ರಾಥಮಿಕ ಉಚ್ಚರಣೆಗಳಾಗಿರುವದಿಲ್ಲ. ಜೋಡಾಕ್ಷರಗಳಂತೆ ಸಂಯುಕ್ತವಾಗಿರಲುಬಹುದು. ಬೇನ್ಫೀಯು ಸಮಕಾಲೀನ ಮ್ಯಾಕ್ಸಮುಲ್ಲರ "ಸಂಸ್ಕೃತ ಭಾಷೆಯ ದೇವನಾಗರಿ ಲಿಪಿ ಭರತಖಂಡದಲ್ಲಿ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಬಂದಿದೆ ಎಂಬುದು ಅಸಂಭವನೀಯ" ಎಂದು ಹೇಳುತ್ತಾನೆ. ಅವನು ಪ್ರಾಚೀನ ಕಾಲದಲ್ಲಿ ದೊರೆತ ಕೆಲವು ತಾಮ್ರಪಟಗಳನ್ನು ಇದೆಲ್ಲಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದಾನೆ. ದೊರೆತ ಕೆಲವು ತಾಮ್ರಪಟಗಳಲ್ಲಿ ಒಂದೆರಡು ಸಂಸ್ಕೃತ ಭಾಷೆಯಲ್ಲಿವೆ. ಬೇರೆ ತಾಮ್ರಪಟಗಳಲ್ಲಿ ಯವನರ ಲಿಪಿಯಂತೆ ಇರುವದಲ್ಲದೆ, ಆ ಲಿಪಿ ಬಲದಿಂದ ಪ್ರಾರಂಭವಾಗಿ ಎಡಗಡೆಗೆ ಮುಕ್ತಾಯವಾಗುತ್ತದೆ. ಆದುದರಿಂದ ದೇವನಾಗರಿ ಲಿಪಿಯೂ ಸಹ ಇದೇ ಲಿಪಿಯಿಂದ ಜನುಮಪಡೆದಿರಬಹುದು. ಇದೆಲ್ಲಕ್ಕೆ ವಿಶೇಷ ಆಧಾರವಾಗಿ, ದೇವನಾಗರಿ ಲಿಪಿಯಲ್ಲಿ ಊಕಾರ, ಡಕಾರ ಇತ್ಯಾದಿ ಕೆಲವು ಅಕ್ಷರಗಳ ವಲವು ಎಡಭಾಗಕ್ಕೆ ಇರುವದು. ಮೂಲ ಲಿಪಿಯಿಂದ ಬೇರೊಂದು ಲಿಪಿಯು ಹೊರಬರುವಾಗ್ಗೆ ಅದರ ರೂಪವು ಯಾವ ಯಾವ ರೀತಿಯಿಂದ ಕ್ರಮಶಃ ಪರಿವರ್ತನೆ ಹೊಂದುತ್ತ ಸಾಗಿತು ಎಂಬುದರ ಬಗ್ಗೆ ಇನ್ನೂವರೆಗೆ ಸಂಶೋಧನೆ ಉಂಟಾಗಿಲ್ಲ ಎಂಬ ಸಂಗತಿಯನ್ನು ಮ್ಯಾಕ್ಸಮುಲ್ಲರ ಒಪ್ಪಿಕೊಳ್ಳುತ್ತಾನೆ. ಮ್ಯಾಕ್ಸಮುಲ್ಲರ ತನ್ನ ವಿಚಾರಗಳಿಗೆ ನೀಡಿದ ಆಧಾರಗಳ ಮೇಲಿಂದ, ಆತ ನಿಶ್ಚಯಿಸಿದುದನ್ನು ನೋಡಿ ನಗೆಬರುವದು. ಆಶ್ಚರ್ಯದ ಸಂಗತಿಯೆಂದರೆ ಮ್ಯಾಕ್ಸಮುಲ್ಲರನ ವಿಚಾರಗಳನ್ನು ಆತನ ಸಮಕಾಲೀನ ಅನುಯಾಯಿ ಪಂಡಿತರು ತಮ್ಮಯ ಅಭಿಪ್ರಾಯವನ್ನೂ ಅದೇ ತಳಹದಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ "ಜಗತ್ತಿನಲ್ಲಿಯ ಓರ್ವ ಪಂಡಿತನಿಗೆ ಒಂದು ವಿಷಯದಲ್ಲಿ ವಿಶೇಷ ಪ್ರಾವಿಣ್ಯ ಪ್ರಾಪ್ತಿಯಾಗಿಲ್ಲ ಎಂದು ಕಲ್ಪಿಸೋಣ. ಅಂತಹನು ಆ ವಿಷಯದ ಮಟ್ಟಿಗೆ ಅಜ್ಞಾನಿಯೇ ಸರಿ" ಎಂದು ಹೇಳುವುದರಲ್ಲಿ ಆ ಪಂಡಿತನ ಅಪಮಾನ ಕೈಕೊಂಡಂತೆ ಆಗುವದಿಲ್ಲ ಎಂಬ ವಿಚಾರವೂ ಬರುತ್ತದೆ.

ಮೇಲೆ ಉಲ್ಲೇಖಿಸಿದ ಪ್ರಮೇಯಕ್ಕೆ ಕಾರಣಗಳೂ ಇವೆ. ಯುರೋಪ ಖಂಡದ ಭಾಷಾಪಂಡಿತರು ದಕ್ಷಿಣ ದೇಶದ ಕನ್ನಡ, ತಮಿಲ, ತೆಲಗು ಇತ್ಯಾದಿ ಭಾಷೆಗಳ ಮೂಲ ಸಂಬಂಧ, ಸಂಸ್ಕೃತ ಮತ್ತು ಆರ್ಯಭಾಷೆಗಳೊಡನೆ ಇರದೇ ಬೇರೊಂದು ಬೀಜದಿಂದ ಉತ್ಪನ್ನವಾಗಿವೆ. ಅವುಗಳ ನಿಕಟ ಸಂಬಂಧ ಚೀನಿ (ಮಂಗೋಲಿಯನ್) ಭಾಷೆಯೊಡನೆ ಇರುವದು, ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಧ್ಯ ತಮಿಲ, ತೆಲಗು ಭಾಷೆಗಳ ಬಗ್ಗೆ ವಿಚಾರ ಮಾಡದೇ, ಕೇವಲ ಕನ್ನಡ ಭಾಷೆಯ ಬಗ್ಗೆ ವಿಚಾರ ಕೈಕೊಳ್ಳಲಾಗಿದೆ. ಈ ವಿಚಾರದಲ್ಲಿ ಕನ್ನಡ ಭಾಷೆಯ ಸಂಬಂಧ ಆರ್ಯಭಾಷೆಯೊಡನೆ ಸಾಕಷ್ಟು ಇದೆ ಎಂಬುದು ಕಂಡು ಬರುವದು.

ಯುರೋಪ ಖಂಡದ ಭಾಷಾ ಪಂಡಿತರು, ಕನ್ನಡ ಭಾಷೆಯಲ್ಲಿ ಬಳಸಲಾದ ಸಂಸ್ಕೃತ ಶಬ್ದಗಳು ಹಿಂದುಗಡೆ ಸೇರಿಕೊಂಡಿವೆ. ಅದಕ್ಕೂ ಮೊದಲು ಕನ್ನಡ ಭಾಷೆಯ ಸ್ವರೂಪ ಬೇರೆಯಾಗಿತ್ತು ಎಂಬ ವಿಚಾರದವರಾಗಿದ್ದಾರೆ. ಹಾಗಾದರೆ ಅವರ ಈ ವಿಚಾರ ಉತ್ತರದ ಮರಾಠೀ, ಹಿಂದೀ, ಬಂಗಾಲೀ ಇತ್ಯಾದಿ ಭಾಷೆಗಳಿಗೂ ಅನ್ವಯಿಸುವದು; ಇದರಲ್ಲಿ ಸಂಶಯವಿಲ್ಲ. ಸಂಸ್ಕೃತ ಭಾಷೆಯಿಂದ ಅಪಭ್ರಂಶವಾಗಿ ಬಾಲಭಾಷೆ ಹೊರ ಬಂದಿತು. ಈ ಸಮಯ ಇತ್ತೀಚಿನ ಮರಾಠೀ ಮತ್ತು ಬೇರೆ ಭಾಷೆಗಳಲ್ಲಿ ಸಾಕಷ್ಟು ಸಂಸ್ಕೃತ ಶಬ್ದಗಳು ಪ್ರಚಾರದಲ್ಲಿದ್ದವು. ಆದರೆ ಕನ್ನಡ ಭಾಷೆಯ ಪರಿಸ್ಥಿತಿ ಈ ರೀತಿಯದಾಗಿದ್ದಿಲ್ಲ. ಬಾಲ ಭಾಷೆಯಲ್ಲಿಯ ಎಲ್ಲ ಶಬ್ದಗಳು ಸಂಸ್ಕೃತ ಭಾಷೆಯ ದೃಷ್ಟಿಕೋನದಲ್ಲಿ ಅಶುದ್ಧ ಮತ್ತು ತೊದಲು ಆಗಿರುತ್ತವೆ. ಕಾಲಾಂತರದಿಂದ ಬಾಲಭಾಷೆಯಲ್ಲಿಯ ಶಬ್ದಗಳು ಶುದ್ಧ ಸಂಸ್ಕೃತರೂಪಗಳೊಡನೆ ಬೆರೆತುಕೊಂಡು ಇಂದಿನ ಮರಾಠೀ ಭಾಷೆ ನಿರ್ಮಾಣವಾಗಿದೆ. ಇದೇ ಸಂಗತಿ ಕನ್ನಡ ಭಾಷೆಗೂ ಅನ್ವಯಿಸುವದು. ಕೆಲವು ಸಮಯದವರೆಗೆ ಕನ್ನಡ ಭಾಷೆಯಲ್ಲಿ ಬೆರೆತುಕೊಂಡ ಸಂಸ್ಕೃತ ಶಬ್ದಗಳನ್ನು ಬದಿಗಿಟ್ಟರೆ, ಇನ್ನುಳಿದ ಶಬ್ದಗಳು ಬಾಲ ಭಾಷೆಯ ಮಾದರಿಯವೇ ಆಗಿರುತ್ತವೆ ಎಂಬುದು ಕಂಡುಬರುತ್ತದೆ. ನಮಗೆ ಬಾಲಭಾಷೆಯ ಶಬ್ದಗಳಂತೆ, ಇಲ್ಲಿ ಸಹ ದ್ವಿತ್ವ ಅಕ್ಷರಗಳು ಸೇರಿಕೊಂಡುದುದು ಕಾಣುವುದು, ಮಾತ್ರವಲ್ಲ ಸಾಕಷ್ಟು ಶಬ್ದ ಮತ್ತು ಪ್ರತ್ಯಯಗಳು ಬಾಲ ಭಾಷೆಯಲ್ಲಿಯ ಶಬ್ದ ಮತ್ತು ಪ್ರತ್ಯಯಗಳೊಡನೆ ಒಂದುಗೂಡುತ್ತವೆ. ಉದಾ:-

ಕನ್ನಡ	**ಬಾಲಭಾಷೆ**	**ಮರಾಠಿ**
ಬಣ	ಬಣ್ಣೊ	ವರ್ಣ (ರಂಗ)
ಅಯ್ಯ, ಅಜ್ಜ	ಅಜ್ಜೋ	ಆರ್ಯ, ಆಜಾ
ಬಳ್ಳಿ	ಬಲ್ಲೀ	ಬೇಲ
ಬಮ್ಹ	ಬಹ್ಮ	ಬ್ರಹ್ಮಾ

ಬಗ್ಗ	ವಾಗ್ದೊ	ವಾಘ
ಅಶ್ಚರ್ಯ	ಅಶ್ಚಿರ್ಯ	ಆಶ್ಚರ್ಯ
ಮೊಗ	—	ಮುಖ
ಶೆಟ್ಟಿ	—	ಶ್ರೇಷ್ಠಿ (ಶೇಠ)
ಬೀದಿ	—	ಬೀಥಿ (ಬೀದಿ-ಮಾರ್ಗ) ಮಾರ್ಗ
ಓಣಿ	—	ಆಳಿ
ತೆಂಕಣ	—	ದಕ್ಷಿಣ
ಅಗ್ಗ	ಅಗ್ಘೊ	ಅರ್ಘ (ಸ್ವಸ್ತಿಕಿವ್ಮ್ಯತ್)
ಬಸವ	ಬಸಹೊ	ವೃಷಭ
ಬೇಸಿಗೆ	—	ವೈಶಾಖ
ಪರುಶ	—	ಸ್ಪರ್ಶ (ಪರೀಸ)
ಹೋಳಿಗಿ	—	ಪೋಲಿಕಾ (ಪೋಳೀ)
ಹಕ್ಕಿ	—	ಪಕ್ಷಿ
ಹಣ	—	ಪಣ (ದ್ರವ್ಯ)
ಉಂಗುರ	ಅಂಗುಳಿ	ಅಂಗರೀ
ಬಗ್ಗು	—	ಬಾಗ (ವಾಂಕ.)
ಅಚ್ಚು	—	ಅಕ್ಷ (ಅಂಸ)
ಹಾವು	ಸಪ್ಪೊ	ಸರ್ಪ

ಇತ್ಯಾದಿ–ಇತ್ಯಾದಿ

ಈ ವಿವೇಚನೆಯು ಮೇಲಿಂದ ಕನ್ನಡ ಲಿಪಿ ದೇವನಾಗರಿ ಲಿಪಿಯಿಂದ ಅಸ್ತಿತ್ವದಲ್ಲಿ ಬಂದಿದೆ ಎಂಬುದು ನಿಶ್ಚಿತವಾಗುತ್ತದೆ.

ಬಾಲ ಭಾಷೆಯಲ್ಲಿಯ ಶಬ್ದಗಳು ಇತ್ತೀಚಿಗೆ ಕನ್ನಡ ಭಾಷೆಯಲ್ಲಿ ಸೇರಿಕೊಂಡಿರಬಹುದು, ಎಂದು ಯಾರಾದರೂ ಆಕ್ಷೇಪ ವ್ಯಕ್ತಪಡಿಸಬಹುದು. ಅವರ ಈ ವಿಚಾರಕ್ಕೆ ಬೇರೊಂದು ಸಮರ್ಥನೆಯೂ ಇದೆ. ಕನ್ನಡ ಭಾಷೆಯಲ್ಲಿ ಸಾಕಷ್ಟು ಪುರಾತನ ಶಬ್ದಗಳಿವೆ. ಅವು ಸದ್ಯ ಹೆಚ್ಚಾಗಿ ಬಳಕೆಯಲ್ಲಿ ಇರುವುದಿಲ್ಲ. ಅವುಗಳಿಗೆ ಹಳೆಗನ್ನಡವೆಂದೂ ಕರೆಯುತ್ತಾರೆ. ಆ ಶಬ್ದಗಳು, ಲ್ಯಾಟಿನ್ ಭಾಷೆಯಲ್ಲಿಯ ಶಬ್ದಗಳ ಉಚ್ಚಾರಕ್ಕೂ, ಅರ್ಥಕ್ಕೂ ಒಳಪಟ್ಟಿರುತ್ತವೆ. ಲ್ಯಾಟಿನ್ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವಂತೂ ಅರಿತ ವಿಷಯ. ಕನ್ನಡ ಭಾಷೆ ಆರ್ಯ ಕುಟುಂಬದ್ದಾಗಿದೆ ಅಥವಾ ಇಲ್ಲವೆಂಬ ವಿಚಾರ ಇದರ ಮೇಲಿಂದ ನಿಶ್ಚಯಿಸಬಹುದು.

ಕನ್ನಡ	ಮರಾಠೀ ಅರ್ಥ	ಲ್ಯಾಟಿನ್ ಶಬ್ದ	ಅರ್ಥ
ಬೇಲೀ	ಕಿಮ್ಮತ್	ಅಬೇಲಿನೋ	ವಿಕಣೆ
ಓರಟೀ	ಹಟ್ಟೀ (ಮುಲಗಾ)	ಅಬೋಟ್ರೋ	ಭಲತೀಕಡೆ ಜಾಣೆ
ಬಿರಿ	ಆವೋಆಪ ಪೊಣಣೆ ಆವೋ ಆಸ ಫುಲಣೆ	ಅಬ್ರೇರೀ	ಫುಟಣೆ
ಕರಿ	ಬೋಲಾವಣೆ	ಅಕ್ಸೇರೀ	ಬೋಲಾವಣೆ
ಕಿಸಿ	ಬಾಸಣೆ	ಅಕ್ಸೈಸಸ್	ಥಾಟಲೇಲಾ
ಕೆಡವು	ಪಾಡಣೆ	ಅಕ್ಸೈಡೊ	ಪಾಡಣೆ
ಆಟ	ಖೇಳ	ಆಕ್ಟಮ್	ನಾಟಕಾಚಾ ಅಂಕ
ಆಮಾ (ತಮಿಲ)	ಹೋಯ	ಐವೋ	ಹೋಯ
ಆದರ	ಆದರ	ಆದೋರೋ	ಮಾನದೇಣೆ
ಅರಿ	ಫೋಟಣೆ	ಅಫ್ರಿಯೋ	ಫೂಡಕರಣೆ
ಅಗ್ಗ	ಸವಂಗ	ಅಗ್ಗೀರೋ	ರಾಸಕರಣೆ
ಅಲ್ಲಿ	ತೇಥೇ	ಅಲಿಯೊ	ಅನ್ಯತ್ರ
ಕೊಂಚ (ತೆಲುಗು)	ಥೋಡೆ	ಅಲಿತಾಂಟೊ	ಥೋಡೆಸೆ
ಗಂಟು	ಗಾಠ	ಅಲಿಗೇಟೂರಾ	ಗಾಂಠ
ಅಳತಿ	ಮಾಪ	ಅಲ್‌ಟಿ	ಉಂಚ
ಇಡು	ಠೇವಣೆ	ಅಲ್ಪೈಡೊ	ಆಪಟಣೆ
ಹೊಳ್ಳು	ಪೋಕಳ	ಹ್ಯಾಲೋ (ಇಂಗ್ಲೀಷು)	ಪೋಕಳ
ಬಯಿಸು	ಇಚ್ಛಿಣೆ	ಅಂಬಿಶಿಯೋ	ಮೋಠಾಲೋಭ
ಸೂಳೀ	ಶಿನಳ	ಅನ್ಸಿಲಾ	ದಾಸೀ
ಎಲ್ಲ	ಸರ್ವ	ಆಲ (ಇಂಗ್ಲೀಷು)	ಸರ್ವ
ಏನೋ	ಕೋಣ ಜಾಣೆ	ಆನ	ಕೋಣಜಾಣೆ
ನೋಟ	ದೃಷ್ಟಿ	ಅನೋಟೋ	ಪಾಹಣೆ
ಪಿರಿ, ಹಿರಿ	ಓಢಣೆ ಜೋರಾನೆ, ಬಾಹೇರ ಕಾಢಣೆ	ಅಪಿರಿಯೊ	ಉಗಡೀಸ ಆಣನೇ
ಅಂಡಿಗಿ	ಮಾಪ (ಸೋಳಾ ಪಾಯಲೀಚೆ)	ಅಡ್ಯಾಗಿರಿ	ರಾಸಕರಣೆ
ಪೇಳು	ಸಾಂಗ	ಅಪೇಲೊ	ಮ್ಹಣನೆ, ಸಾಂಗಣೆ
ರೆಂಟೆ	ನಾಂಗರ	ಅರೆಟಿಓ	ನಾಂಗರಣೆ
ಅಡ್ರಾಸು	ಘಾರಚ ಆಶಾ ಕರೂನರಾಹಣೆ	ಅಡ್ರಾರ್ಸಮ್	ಉತ್ಸುಕ ದೋಸೆ ಆಶೀಸಯೇಣೆ
ಅರಹಾಕು	ವಾಳತಟಾಕಣೆ	ಅರಿಪಶ್ಯಾರ್ರ್ಯೊ	ವಾಳವಿಣೆ
ಅರಸು	ರಾಜಾ	ಆರ್ತಸ್	ರಾಜಾ-ಮುಖ್ಯ ಅಧಿಕಾರಿ

ಆರು	ವಾಳಣೆ	ಆರಿಓ	ವಾಳಣೆ
ಇರಿ	ಟಕ್ಕರ ಮಾರಣೆ	ಅರ್ಥ್ಬೈವೆ	ಪಾಡಾವಕರಣೆ
ತಾಳು	ಧಾರಣಕರಣೆ	ಅತ್ತೋಲೊ	ಉಚಲಣೆ
	ಸಹನಕರಣೆ		
ಅವ್ವ	ಆಯೀ	ಅವ್ವಾಯಾ	ಆಜೀ
ಹೀರು	ಆಕರ್ಷಣಕರಣೆ	ಫೀರೋ	ಫೇವೂನ ಜಾಣೆ

ಮೇಲಿನ ವಿವೇಚನೆಯಿಂದ ಲ್ಯಾಟಿನ್ ಭಾಷೆ ಮತ್ತು ಸಂಸ್ಕೃತ ಭಾಷೆಗಳಲ್ಲಿಯ ಪರಸ್ಪರ ಸಂಬಂಧ ಸಾವಿರಾರು ವರುಷಗಳ ಹಿಂದಿನ ಕಾಲದ್ದಾಗಿದೆ ಎಂಬುದು ಕಂಡು ಬರುವದು. ಕನ್ನಡದಲ್ಲಿಯ ವಿಭಕ್ತಿಗಳ ರೂಪ ಸಂಸ್ಕೃತದ ಆಧಾರದ ಮೇಲಿಂದ, ಬಾಲಭಾಷೆಯು ಮುಖಾಂತರ ರೂಪಗೊಂಡಿದೆ ಎಂಬುದೂ ಸ್ಪಷ್ಟವಾಗುತ್ತದೆ. ನಮಗೆ ಮರಾಠೀ ಭಾಷೆಯು, ಕನ್ನಡ ಭಾಷೆಗಿಂತ, ಸಂಸ್ಕೃತ ಭಾಷೆಯ ತೀರ ಸಮೀಪ ಇದೆ ಎಂಬುದೂ ಕಂಡುಬರುವದು. ಕನ್ನಡ ಭಾಷೆಯ ಪರಿಸ್ಥಿತಿ ಈ ಸಂದರ್ಭದಲ್ಲಿ ಮರಾಠೀ ಭಾಷೆಗಿಂತ ಕನಿಷ್ಠವಾಗಿದೆ. ಮರಾಠೀ ಭಾಷೆ ಬಾಲ ಭಾಷೆಯಿಂದ ಹೊರಬಂದು, ಪುನರಪಿ ಸಮಾಗಮದಿಂದ ಬಾಲಭಾಷೆಗಿಂತಲೂ ಮೇಲ್ ತರಗತಿಗೆ ಹೋಗಿದೆ. ಕನ್ನಡ ಭಾಷೆಯ ಬಗ್ಗೆ ಹೇಳುವುದಾದಲ್ಲಿ ಅದು ಬಾಲಭಾಷೆಗಿಂತ ಕೊನೆಯ ಸ್ತರಕ್ಕೆ ತಲುಪಿ ಅದರಲ್ಲಿಯ ಒತ್ತ ಅಕ್ಷರಗಳ ಉಚ್ಚಾರ ಸಾಕಷ್ಟು ಉಂಟಾಗಿ, ಸಂಸ್ಕೃತದ ಸಂಬಂಧ ದಿನದಿನಕ್ಕೆ ಕಡಿಮೆಯಾಗತೊಡಗಿತು. ಇಂತಹ ಒಂದು ಸ್ಥಿತಿಯಲ್ಲಿ ಸಾಕಷ್ಟು ಕಾಲದವರೆಗೆ ಅದು ಉಳಿದ ಬಳಿಕ, ಪುನರಪಿ ಶುದ್ಧ ಸಂಸ್ಕೃತ ಶಬ್ದಗಳು ಸೇರಿಕೊಳ್ಳಲಾಗಿ, ಪುರಾತನ ಶಬ್ದಗಳು ಬೇರೆಯಾಗಿ ಕಾಣತೊಡಗಿದವು. ಇಂದಿನ ವರೆಗೆ, ಸಾವಿರಾರು ಕನ್ನಡ ಶಬ್ದಗಳು ಬೇರೊಂದು ಭಾಷೆಯಿಂದ ಉಗಮವಾಗಿವೆ ಎಂಬ ಕಲ್ಪನೆ ಅಸ್ತಿತ್ವದಲ್ಲಿ ಇತ್ತು. ಅದರಲ್ಲೂ ಹೆಚ್ಚಾಗಿ ಆರ್ಯನ್ ಕುಟುಂಬದಲ್ಲಿಯ ಭಾಷೆಯೊಡನೆ ಇರುವುದು ಎಂಬುದು ಸ್ಪಷ್ಟ ವಾಗುತ್ತದೆ. ಇದಲ್ಲದೆ ಸಾಕಷ್ಟು ಕನ್ನಡ ಶಬ್ದಗಳ ಉಗಮ ಸಂಸ್ಕೃತದಿಂದಲೇ ಉಂಟಾಗಿರಬಹುದು. ಈ ಸಂಗತಿ ವಾದವಿವಾದದ್ದಾಗಿದೆ. ನಮ್ಮ ದೇಶದ ಭಾಷಾ ಪಂಡಿತರು ಈ ವಿಷಯದಲ್ಲಿ ಆಸ್ಥೆ ವಹಿಸಿದರೆ, ಕಾಲಾಂತರದಿಂದ ಭಾಷೆಯಲ್ಲಿ ಅಡಗಿದ ತತ್ವಗಳು ಹೊರಬರಬಹುದು.

ಕಾನಡೀ ಭಾಷಾ,

ಆಮುಚ್ಯಾ ದೇಶಾಮಧ್ಯೆ ಇಂಗ್ರಜೀ ರಾಜ್ಯ ಜಾಹಲ್ಯಾ ಪಾಸೂನ ವಿಧ್ಯೆಚ್ಯಾ ಕಾಮಾಮಧ್ಯೆ ಸಂಧಾರಣಾ ವ ನವೀನ ನವೀನ ಶೋಧ ವಾಢತಜಾಲತೆ ಆಹೇತ;

ಹೇ ಸರ್ವಲೋಕ ಕಬೂಲ ಕರಿತಾತ. ಪಶ್ಚಿಮ ದೇಶೀಯ ಲೋಕಾಂಚೇ ಶೋಧಕ ಪಣಂ ವಿಶೇಷ ಆಹೆ, ವ ತ್ಯಾಂಚ್ಯಾ ಶೋಧಾನಾ ರಾಜ್ಯಾಧಿಕಾರ್ಯಾಂಚೆ ಸಾಹಾಯ್ಯ ಅಸಲ್ಲ್ಯಾ ಮುಳೆ ತೆ ಪುಷ್ಕಳ ಅಂಶೀ ಆಧಾರಯುಕ್ತ ಅಸತಾತ ಯಾಂತ ಸಂಶಯ ನಾಹೀ. ತಥಾಪಿ ಸರ್ವಚ ಗೋಷ್ಟೀಮಧ್ಯೆ ತ್ಯಾಂಚೆ ಶೋಧ ಖರೆ ಅಸತಾತ ಅಸೆ ಮಾನಣೆ, ವ ತ್ಯಾಂಚ್ಯಾ ಶೋಧಾವರ ವಿಶೇಷ ಶೋಧ ತರಣ್ಯಾಸ ಜಾಗಾರಾಹಿಲೀ ನಾಹೀ ಮ್ಹಣಣೆ ಹೇ ವೇಢೆಪಣ ಆಹೆ. ಅಶಾ ಪ್ರಕಾರಚ್ಯಾ ಇತರ ಗೋಷ್ಟೀ ಮಧ್ಯೆ ಮುಖ್ಯತ್ವೆಕರೂನ ಆ ಮಚ್ಯಾದೇಶಾಸಂಬಂಧೀ ಜೆ ತ್ಯಾ ಲೋಕಾಂನೀ ಆಪತಿ ವಿಚಾರ ಲಿಹಿತೆ ಆಹೇತ ತೆ ಬಹುಂದಾ ಆಮಚ್ಯಾ ಲೋಕಾಂಚ್ಯಾ ವಿಚಾರಾಲಾ ಪಾತ್ರ ಅಸತಾತ. ಕಾರಣ ಏಖಾದಾ ಪ್ರಸಿದ್ಧೀಸ ಆಲೇಲಾ ತದ್ದೇಶೀಯ ವಿದ್ವಾನ ಇಕಡೆ ಏವೂನ ಆಪಲ್ಯಾ ಮನಾವರ ಜಾಹಲೇಲಾ ಗ್ರಹ ಖರಾ ಖೋಟಾ ಅಸೇಲ ತ್ಯಾಪ್ರಮಾಣೆ, ತಿಕಡೆ ಗೇಲ್ಲಾವರ ಯಾ ದೇಶಾವಿಷಯೀಂಚೆ ಆಪಲೇ ವಿಚಾರ ಪ್ರಕಟ ಕರಿತೋ. ನಂತರ ತಿಕಡೀಲ ವಿದ್ವಾನತ್ಯಾ ಗ್ರಂಥಾವರ ಆಪಲೀ ಕಾಂಹೀ ಕಲ್ಪಿನಾ ಚಾಲವೂನ ದೂಸರೆ ಗ್ರಂಥ ರಚತಾತ. ಏಖಾದೇ ವೇಳೀ ಪ್ರಥಮಚಾ ಗ್ರಂಥಕಾರ ಪ್ರತಿಷ್ಠಿತ ಅಸಲಾ ತರ ತ್ಯಾಣೆ ಜೇ ಮಟಲೇ ತೇ ಕಾಯಮ ಹೋವೂನ ಜಾತೆ, ಕಿಂವಾ ಏಖಾದೇ ವೇಳೀ ಕಲ್ಪನೇವರ ಕಲ್ಪನಾ ವಾಢತಾ ವಾಢತಾ ಶೇವಟೀ ತಿಚಾ ಅಸಾ ಪರಿಣಾಮ ಹೋತೋ ಕೀ ಜೀ ಗೋಷ್ಟ ಹಿಂದುಸ್ಥಾನ ಮಧ್ಯೆ ವಾಸ್ತ ವಿಕ ಮಾನ್ಯ ಆಹೆ ವ ಜೀ ಸಿದ್ಧ ಕರಣ್ಯಾಸ ಹಿಂದುಸ್ಥಾನಚ್ಯಾ ಲೋಕಾಂಸ ಕಾಂಹೀ ಅಡಚಣ ಪಢತ ನಾಹೀ, ತೀ ಗೋಷ್ಟ ತಶೀ ನಾಹೀ, ತಿಚ್ಯಾ ಉಲಟ ಆಹೇ ಅಸೆ ತ್ಯಾಂಚ್ಯಾ ಪಾಂಡಿತ್ಯಾಮಧ್ಯೆ ಠರತೆ. ವ ತಸೆಠರಲೆ ಮ್ಹಣಜೆ ಹಿಂದುಸ್ಥಾನಾ ಮಧ್ಯೆ ಜೇ ಮೂಳಚೀ ಗೋಷ್ಟ ಆಹೆ ತೀ ಖೋಟಿ ಆಹೆ, ವ ತೀ ತ್ಯಾಂಣೀಠರವಿಲ್ಯಾ ಪ್ರಮಾಣೆ ಅಸಾವೀ ಅಸೆ ತೇ ಪರತ ಹಿಂದುಸ್ಥಾನಚ್ಯಾಲೋಕಾಂಸ ಶಿಕವೂ ಲಾಗ ತಾತ. ಉದಾಹರಣಾರ್ಥ ಆಮಚ್ಯಾ ನೆಹಮೀಚ್ಯಾ ಪ್ರಚಾರಾತಲ್ಯಾ 'ಹಿಮಾಲಯ' ಯಾ ಶಬ್ದಾಚಾ ಉಚ್ಚಾರ 'ಹಿಮಲೇಯಾ' ಅಸಾಕರಾವಾ, ಅಸೆಶಿಕವಿಣಾರೆ ಕಿತ್ಯೇಕ ಆಹೇತ. ತಸೇಚ ಸಂಸ್ಕೃತ ಭಾಷೇಚ್ಯಾ ಜ್ಞಾನಾವಿಷಯೀಂಗರ್ವ ಬಾಳಿಗಣಾರೆ ಜರ್ಮನ್ ಪಂಡಿತ ಬೇನ್ಫೇ ಮ್ಹಣತಾತ ಕೀ "ಟಠಡಢಣ" ಯಾಂಚಾ ಉಚ್ಚಾರ ದಾಂತಾಚ್ಯಾ ವರಜೀ ತಾಲವ್ಯಾಚಾ ಭಾಗ ಆಹೆ ತೇಥೆ ಜಿವ್ಹಾ ದಾಬೂನ ಹಿಂದೂ ಲೋಕ ಕರಿತಾತ. ಪರಂತು ಸಂಸ್ಕೃತಾಮಧ್ಯೆ ಮುಳೀ ತಥದಧನ ಯಾಂಸ ಅನು ಕ್ರಮೆ ರಕಾರ ಲಾಗಲ್ಯಾನೆ ಜೆ ತ್ರಥ್ರದ್ರಧ್ರನ ಅಸೆ ಉಚ್ಚಾರ ಹೋತಾತ ತಸಾ ತ್ಯಾಂಚಾ ಉಚ್ಚಾರ ಅಸಾವಾ ತೇ ಪ್ರಾಥಮಿಕ ಉಚ್ಚಾರ ನಷ್ವೆತ. ತರ ಜೋಡಾ ಕ್ಷರಾ ಸೌರಖೆ ಸಂಯುಕ್ತ ಅಸಾವೆ ಇತ್ಯಾದಿ ತಸೇಚ ತ್ಯಾಂಚೆ ಬಂಧು ಶರ್ಮಣ್ಣ ದೇಶೋತ್ಪನ್ನ ಭಟ್ಟ ಮೋಕ್ಷಮುಲ್ಲರ ಕಿಂವಾ ಮ್ಯಾಕ್ಸಮೂಲರ ಮ್ಹಣತಾತರೇ. "ಸಂಸ್ಕೃತ ಭಾಷೇಚೀ ಜೇ ದೇವನಾಗರೀ ಲಿಪೀ, ಹೀ ಭರತಖಂಡಾ ಮಧ್ಯೆ ಸ್ವತಂತ್ರ

ತೇನೆ ಉದ್ಧವಲೀ ಹೇ ಮ್ಹಣನೆ ಅಗದೀ ಅಸಂಭವನೀಯ ಆಹೆ" ಯಾ ವಾಕ್ಯಾಸ ಆಧಾರ ಅಸಾ ಪ್ರಾಚೀನ ಕಾಳಚೆಜೇ ರೆತ್ಯೇಕ ತಾಮ್ರಪಟ ಮಿಳಾಲೆ ಆಹೇತ, ತ್ಯಾತೀಲ ಏಕದೋನ ತಾಮ್ರಪಟ ಸಂಸ್ಕೃತ ಭಾಷೇತ ಅಸೂನ, ಯುವನೀ ಲಿಪೀ ಸೌರಖ್ಯಾ ದುಸರ್ಯಾ ಏಕಾ ಪ್ರಾಚೀನ ಲಿಪೇನೆತೇ ಉಜವೀ ಕಡೂನ ಡಾವೀಕಡೆ ಲಿಹಿಲೇಲೆ ಆಹೇತ. ತಸ್ಮಾತ್ ದೇವನಾಗರೀ ಲಿಪೀ ತ್ಯಾಲಿಪೀಪಾಸೂನ ಉತ್ಪನ್ರ್ಝಾಲೀ ಆಹೆ ಯಾಂತಸಂಶಯ ನಾಹೀ. ಯಾಸ ವಿಶೇಷ ಪುರಾವಾಹಾಕೀ. ದೇವನಾಗರೀ ಲಿಪೀತೀಲ ಉಕಾರ, ಡಕಾರ ಇತ್ಯಾದಿ ತಾಂಹೀ ಅಕ್ಷರಾಂಚಾ ರೆಘಾಂಕ ಡಾವ್ಯಾ ಬಾಜೂಸ ಆಹೆ. ಯಾವರೂನತೀ ಉಜವೀಕಡೂನ ಡಾವೀಕಡೆ ಲಿಹಿಣ್ಯಾಚ್ಯಾ ಲಿಪೇ ಪಾಸೂನ ನಿಘಾಲೀ ಆಹೆ ಹೇ ಸತ್ಯ ! ! ತ್ಯಾಲಿಪೀ ಪಾಸೂನ ಹಿ ಲಿಪೇ ಹೋತಾನಾ ತಿಚೀ ರೂಪೇ ಕಸಡಶಿ ಕೋಣಕೋಣತ್ಯಾ ಪಾಯರೀನೆ ಬಂದಂತೆ ಗೇಲೀ ; ಯಾಚಾ ಅದ್ಯಾಪಿ ರೋಧ ಲಾಗಲಾ ನಾಹೀ, ಅಸೆ ಆಸಣಚ ತಬೂಲ ಕರಿತೊ ; ಆಣಿ ಅಸಾ ಮೋಠಾ ದಾಂಡಗಾ ಠರಾವಹೀ ಹಸೂ ವಿಣ್ಯಾಜ್ಯೋಗ್ಯಾ ಪುರಾವ್ಯಾವರೂನ ಆಪಣಚ ಗ್ರಹಿತ ಕರಿತೋ ! ಯಾ ಮತಾಲಾ ತ್ಯಾಚೆ ದೂಸರೆ ಹೀ ರೆತ್ಯೇಕ ಸೋಬತೀ ಆಹೇತ.

ಅಸೊ, ಯಾಪ್ರಮಾಣೆ ಕೋಣೀ ಮೋಠಾ ವಿದ್ವಾನ್ ಆಹೆ, ಆಣಿತ್ಯಾಸ ಜರತಾಹೀ ಏತಾಘ್ಲಾ ಗೋಷ್ಟೀಚೀ ಪುರತೀ ಮಾಹಿತೀ ನಾಹೀ ತರ ತೇವಢ್ಯಾ ಪುರತಾ ತೋ ಅಜ್ಞಾನೀ ಆಹೆ, ಅಸೆ ಮ್ಹಟಲೆ ಅಸತಾಂ ತ್ಯಾಚಾ ಅಪಮಾನ ಕೇಲಾ ಅಸೆ ಹೋತ ನಾಹೀ.

ಹಾ ವರೀಲ ಮಂಜತೂರ ಲಿಹಿಣ್ಯಾಚೆ ಕಾರಣ ಅಸೆಕೀ, ದಕ್ಷಿಣ ದೇಶಾ, ತೀಲ ಕಾನಡೀ, ತಾಮೀಳ, ತೆಲಗೂ ಇತ್ಯಾದಿ ಭಾಷಾಚಾ ಮೂಲಸಂಬಂಧ ಸಂಸ್ಕೃತಾದಿ ಆರ್ಯಭಾಷಾಕಡೆ ನಸೂನ, ತ್ಯಾ ವೇಶಳ್ಯಾ ಬೀಜಾ ಪಾಸೂನ ಉತ್ಪನ್ನ ಜಾಹಲೇಲ್ಯಾ ಆಹೇತ, ಪತ್ಯಾಂಚಾ ಸಂಬಂಧ ಚೀನೀ ಇತ್ಯಾದಿಕ (ಮಂಗೋಲಿಯನ್) ಭಾಷಂಶೀ ಆಹೇ, ಅಸೆ ಯುರೋಪಿಯನ್ ಭಾಷಾವೇತ್ತೆ ಮ್ಹಣತಾತ, ಪರಂತು ತಾಮೀಳ, ತೆಲಗೂ ಯಾ ಭಾಷಾಕಡೆ ತೂರ್ತ ಲಕ್ಷನ ದೇತಾ ಫಕ್ತ ಕಾನಡೀ ವಿಷಯೀ ಪಾಹಿಲೆ ತರತಿಚಾ ಆರ್ಯಭಾಷಾನೇ ಫಾರ ಸಮೀಪಚಾ ಸಂಬಂಧ ಆಹೆ ಅಸೆ ದಿಸಣ್ಯಾತ ಏತೆ.

ಸಾಂಪ್ರತ ಭಾಷಾವೇತ್ತೆ ಮ್ಹಣತಾತ ಕೀ ಕಾನಡೀತ ಜೆ ಸಂಸ್ಕೃತ ಶಬ್ದ ಆಹೇತ ತೇ ಮಾಗಾಹೂನ ಮಿಸಳಲೆ ಆಹೇತ ; ಪ್ರಥಮತಃ ತೇ ಭಾಷಾ ಅಗದೀ ವೇಗಳೀ ಹೋತೀ, ಪರಂತು ಹೇ ಭಾಷಣ ಉತ್ತರೆ ಕಡೀಲ ಭಾಷಾನಾ ಮ್ಹಣಜೆ ದುರಾಠೀ, ಹಿಂದೀ, ಬಂಗಾಲೀ ಇತ್ಯಾದಿಕಾಂಸ ಜೀತಕೆವಾಗೂ ಆಹೆ, ತಿತಕೇಚ

ತಾನಡೀಸ ಹೀ ಲಾಗೂ ಆಹೆ. ಕಾರಣ ಸಂಸ್ಕೃತಾ ಪಾಸೂನ ಅಪಭ್ರಂಸ ಪಾವೂನ ಜ್ಯಾವೇಳೀ ಭಾಲಬಾಷಾ ಜಾಹಲೀ, ತ್ಯಾವೇಳೀ ಆತಾಚ್ಯಾ ಮರಾಠೀ ಇತ್ಯಾದಿ ಭಾಷಾಂತ ಜಸೆ ಪುಷ್ಕಳ ಶುದ್ಧ ಸಂಸ್ಕೃತ ಶಬ್ದ ಆಡಳತಾತ ತಸೆ ತಿಜ ಮಧ್ಯೆ ನವ್ಹತೆ. ಬಾಲ ಭಾಷೆ ಮಧ್ಯೆ ಸರ್ವ ಶಬ್ಧ ಸಂಸ್ಕೃತಾಚ್ಯಾ ದೃಷ್ಟೀನೆ ಅಶುದ್ಧ ವ ಬೊಬಡೆ ಅಸತಂ ನಂತರ ಕಾಲಾಂತರಾನೆ ಬಾಲಭಾಷೆತೀಲ ಶಬ್ದಾ ಮಧ್ಯೇಚ ಶುದ್ಧ ಸಂಸ್ಕೃತ ರೂಪೇ ಮಿಸಳತ ಜಾವೂನ ಆತಾಚೀ ಮರಾಠೀಭಾಷಾ ಸಿದ್ಧ ಜಾಹಲೀ ಆಹೆ. ಆತಾ ಹೀಚ ಗೋಷ್ಟ ಕಾನಡೀ ಭಾಷೆಲಾ ಕಾಶೀಲಾಗತೆ ತೀ ಪಾಹೂ ತಿಜಮಧ್ಯೆ ಜೇ ಸಂಸ್ಕೃತ ಸಬ್ದ ಮಿಸಳತೆ ಆಹೇತ, ತೆ ಕ್ಷಣಭರ ವಜಾ ಕೇಲೇ, ತರ ಶೇಷ ರಾಹಿಲೇಲೇ ಶಬ್ದ ನಿಖಾಲಸ ಬಾಲಭಾಷೆಚ್ಯಾ ತೋಂಡೀಚೆ ಉತರತಾತ. ಬಾಲಭಾಷೆತೀಲ ಶಬ್ದಾ ಪ್ರಮಾಣೆ ತೀತ ಹಿತ್ತ ಅಕ್ಷರಾಂಚಾ ಭರಣಾ ಘಾರದಿಸತೂಹೇ ತರ ಕಾಮ, ಪರಂತು ಪುಷ್ಕಳ ಶಬ್ದ ವ ಪ್ರತ್ಸಯ ಹೇ ಬಾಲಭಾಷೆತಾರೆ ಶಬ್ದ ವ ಪ್ರತ್ಯಯಾಂಶೀ ಬರೋಬರ ಜಮತಾತ ಉದಾಹರಣಾರ್ಥ :—

ಕಾನಡೀ	ಬಾಲಭಾಷಾ	ಮರಾಠೀ
ಬಣ್ಣ	ಬಣ್ಣೊ	ವರ್ಣ (ರಂಗ)
ಅಯ್ಯ, ಅಜ್ಜ	ಅಜ್ಜೋ	ಆರ್ಯ, ಆಜಾ
ಬಳ್ಳಿ	ಬಲ್ಲೀ	ಬೇಲ
ಬಮ್ಹ	ಬಹ್ಮ	ಬ್ರಹ್ಮಾ
ಬಗ್ಗ	ವಾಗ್ಗೊ	ವಾಘ
ಕಾನಡೀ	ಬಾಲಭಾಷೆ	ಮರಾಠೀ
ಅಶ್ಚರ್ಯ	ಅಶ್ಚಿರ್ಯ	ಆಶ್ಚರ್ಯ
ಮೊಗ	—	ಮುಖ
ಶೆಟ್ಟ	—	ಶ್ರೇಷ್ಠಿ (ಶೇಠ)
ಬೀದಿ	—	ಬೀಥಿ (ಬೀದ – ಮಾರ್ಗ)
ಓಣಿ	—	ಆಳಿ
ತೆಂಕಣ	—	ದಕ್ಷಿಣ
ಅಗ್ಗ	ಅಗ್ಗೊ	ಅರ್ಘ (ಸ್ವಸ್ಥ ತಿಮ್ಮತ್)
ಬಸವ	ಬಸಹೊ	ವೃಷಭ
ಬೇಸಿಗೆ	—	ವೈಶಾಖ
ಪರುಶ	—	ಸ್ಪರ್ಶ (ಪರೀಸ)
ಹೋಳಿಗೆ	—	ಪೊಲಿಕಾ (ಪೋಳೀ)
ಹಕ್ಕಿ	—	ಪಕ್ಷಿ
ಹಣ	—	ಪಣ (ದ್ರವ್ಯ)
ಉಂಗೂರ	ಅಂಗೂಳಿ	ಅಂಗಠೀ
ಬಗ್ಗು	—	ಬಾಗ (ವಾಂಕ)
ಅಚ್ಚು	—	ಅಕ್ಷ (ಅಂಸ)
ಹಾವು	ಸಪ್ಪೊ	ಸರ್ಪ

ಇತ್ಯಾದಿ – ಇತ್ಯಾದಿ.

ಕಾನಡೀಚೀ ಲಿಪೀ ತರ ದೇವನಾಗರೀ ಲಿಪೀವರೂನ ಜಾಹಲೇಲೀ ಆಹೆ ಯಾ ವಿಷಯೀಂ ಪಾಹತಾಂಚ ಖಾತ್ರೀ ಹೋತೇ.

ಕದಾಚಿತ್ ಕೋಣೀ ಮ್ಹಣೇಲ ಕೀ ಹೇ ಬಾಲಭಾಷೇತೀಲ ಶಬ್ದ ಆಲೀಕಡೆ ಕಾನಡೀ ಮಧ್ಯೆ ಮಿಸಳಲೆ ಅಸತೀಲ. ತರ ಯಾಂಚ್ಯಾ ಪಲೀಕಡೀಲ ದುಸರಾ ಪುರಾವಾ ಅಸಾ ಆಹೆ. ಕಾನಡೀ ಭಾಷೆತೀಲ ಕಿತ್ಯೇಕ ಜುನೆ ಶಬ್ದ ಜೆ ಸಾಂಪ್ರತ್ ವ್ಯವಹಾರಾತ ನಾಹೀತ, ತ್ಯಾಂಸ ಹಳೆಗನ್ನಡ ಮ್ಹಣಜೆ ಜುನೆ ಕಾನಡೀ ಶಬ್ದ ಮ್ಹಣತಾತ ತ್ಯಾತೀಲ ಕಿತ್ಯೇಕ ಶಬ್ದ ಲಾಟೀನ ಭಾಷೇತೀಲ ಶಬ್ದಾಂಚ್ಯಾ ಉಚ್ಚಾರಾಂಸ ವ ಅರ್ಥಾಂಸ ಜಮತಾತ. ಲಾಟೀನ ವ ಸಂಸ್ಕೃತ ಯಾಂಚಾ ಸಂಬಂಧ ತರ ಪ್ರಸಿದ್ಧ ಜಾಹಲೇಲಾ ಆಹೆ; ತೆವ್ಹಾ ಯಾವರೂನ ಕಾನಡೀ ಭಾಷಾ ಆರ್ಯ ಕುಟುಂಬಾತೀಲ ಆಹೆ ಕಿಂವಾ ನಾಹೀ ಹೇ ಸ್ಪಷ್ಟ ಹೋಯೀಲ.

ಕಾನಡೀ	ಮರಾಠೀ ಅರ್ಥ	ಲ್ಯಾಟಿನ್ ಶಬ್ದ	ಅರ್ಥ
ಬೇಲಿ	ಕಿಮ್ಮತ	ಅಬೆಲಿನೊ	ವಿತಣೆ
ಓರಟೇ	ಹಟ್ಟಿ (ಮುಲಗಾ)	ಅಬೋಟ್ರೋ	ಭಲತೀಕಡಜಾಣೆ
ಬರಿ	ಅಪೋಆಪಘಟಣೆ ಅಪೋಟಸ ಘುಲಣೆ	ಅಬ್ರೇರೀ	ಘೂಟಣೆ
ತರಿ	ಬೋಲಾವಣೆ	ಅಕ್ಸೇರೀ	ಬೋಲಾವಣೆ
ಕಿಸಿ	ಬಾಸಣೆ	ಅಕ್ಸೈಸಸ್	ಭಾಟತೀಲಾ
ಕಿಡವು	ಪಾಡಣೆ	ಅಕ್ಸೈಡೊ	ಪಾಡಣೆ
ಆಟ	ಖೇಳ	ಅಕ್ಟಮ್	ನಾಟಕಾಚಾ ಅಂತ
ಆಮಾ (ತಮಿಲ)	ಹೋಯ	ಐಮೋ	ಹೋಯ
ಆದರ	ಆದರ	ಆದೋರೋ	ಮಾನದೇಣೆ
ಆರಿ	ಘೋಟಣೆ	ಅಫ್ರಿಯೋ	ಪೂಡತರಣೆ
ಅಗ್ಗ	ಸವಂಗ	ಅಗ್ಗೀರೋ	ರಾಸತರಣೆ
ಅಲ್ಲಿ	ತೇಥೇ	ಅಲಿಯೊ	ಅನ್ಯತ್ರ
ಕೊಂಚ (ತೆಲಗು)	ಥೋಡೆ	ಅಲಿತಾಂಟೊ	ಥೋಡೇನೆ
ಗಂಟು	ಗಾಂಟ	ಅಲಿಗೇಟೂರಾ	ಗಾಂಠ
ಅಳತಿ	ಮಾಪ	ಅಲ್ಟ	ಉಂಚ
ಇಡು	ಠೇವಣೆ	ಅಕ್ವಿಡೊ	ಆವಟಣೆ
ಹೊಳ್ಳು	ಪೋಕಳ	ಹ್ಯಾಲೋ (ಇಂಗ್ಲಿಷ)	ಪೋತಳ
ಬಯಿಸು	ಇಚ್ಛಿಣೆ	ಅಂಬಿಶಿಯೋ	ಮೋಠಾಲೋಭ
ಸೂಳೀ	ಶಿನಳ	ಅನ್ಸಿಲಾ	ದಾಸೀ
ಎಲ್ಲ	ಸರ್ವ	ಅಲ (ಇಂಗ್ಲಿಷ)	ಸರ್ವ
ಏನೋ	ಕೋಣಜಾಣೆ	ಅನ	ಕೋಣಜಾಣೆ

ನೋಟ	ದೃಷ್ಟಿ	ಅನೋಟೋ	ಪಾಹಣೆ
ಐರಿ, ಓರಿ	ಓಢಣೆ ಜೋರಾನೆ, ಬಾಹೇರ ಕಾಢಣೆ	ಅಪಿರಿಯೊ	ಉಗಡಿಸ ಆಣನೇ
ಅಂಡಿಗಿ	ಮಾವ (ಸೋಳಾ ಪಾಯಲೀಚಿ)	ಅಡ್ಯಾಗಿರಿ	ರಾಸಕರಣೆ
ಪೇಳು	ಸಾಂಗ	ಅಪೇಲೊ	ಮ್ಹಣನೆ, ಸಾಂಗಣೆ
ರೆಂಟೆ	ನಾಂಗರ	ಅರಿಟಓ	ನಾಂಗರಣೆ
ಅಡ್ರಾಸು	ಘಾರಚ ಆತಾತರೂನ ರಾಪಣೆ	ಅಡ್ರಾಸ್ಟರ್ಮ್	ಉತ್ಸುತಹೋಣೆ ಅಶೀಶಯೋಣೆ
ಆರಹಾಕು	ವಾತಳ ಟಾಕಣೆ	ಅವರಿವಶ್ಯಾಶ್ಕೋ	ವಾಳವಿಣೆ
ಅರಸು	ರಾಜ	ಅರ್ಕಸ್	ರಾಜಾ ಮುಖ್ಯ ಅಧಿಕಾರಿ
ಆರು	ವಾಳಣೆ	ಅರಿಓ	ವಾಳಣೆ
ಇರಿ	ಟಕ್ಕರಮಾರಣೆ	ಆಗೆವ್ವೈಲ	ಪಾಡವತರಣೆ
ತಾಕು	ಸಾಗಣೆ, ಸ್ಪರ್ಶ	ಅಟ್ಯಾಕ್ಟಸ್	ಸ್ಪರ್ಶ
ತಾಳು	ಧಾರಣಕರಣೆ ಸಹನಕರಣೆ	ಅಪ್ರೋಲೊ	ಉಚಲಣೆ
ಅವ್ವ	ಆಯಿ	ಅವ್ವಾಯಾ	ಆಜೀ
ಹೀರು	ಆಕರ್ಷಣಕರಣೆ	ಫೀರೋ	ಫೇವ್ಹೂನಜಾಣೆ

ಲ್ಯಾಟಿನ್ ಭಾಷಾ ಆಣಿ ಸಂಸ್ಕೃತ ಭಾಷಾ ಯಾಂಚಾ ಪರಸ್ಪರ ಸಂಬಂಧ ಹಜಾರೋ ವರ್ಷಾಂಚ್ಯಾ ಮಾಶಚಾ ಆಹೆ. ಆಣಿ ತ್ಯಾ ವೇಳೆಪಾಸೂನ ಕಾನಡೀ ಭಾಷೇಚಾ ಲ್ಯಾಟಿನ್ ಭಾಷೇಚ್ಯಾ ದ್ವಾರೆ ಸಂಸ್ಕೃತಾಶೀ ಸಂಬಂಧ ಆಹೆ, ಅಸೆ ವರೀಲ ಉದಾಹರಣಾವರೂನ ದಿಸತೆ, ಯಾಶಿವಾಯ ಕಾನಡೀತೀಲ ವಿಭಕ್ತಿಪ್ರತ್ಯಯಾಂಚೀರೂಪೇ ಸಂಸ್ಕೃತಾಚ್ಯಾ ಆಧಾರಾನೆ ಬಾಲ ಭಾಷೇಚ್ಯಾದ್ವಾರೀ ಸೌಧಲೀ ಆಹೇತ ಹೀಗೋಷ್ಟ ಸ್ಪಷ್ಟ ಆಹೆ. ಆತಾ ಮರಾಠೀಚ್ಯಾ ಆಣಿ ಕಾನಡೀಚ್ಯಾ ಸ್ವರೂಪಾಮಧ್ಯೆ ಅಸಾ ಭೇದ ದಿಸತೋ ಕೀ, ಮರಾಠೀ ಶೀ ಸಂಸ್ಕೃತಾಚೆ ಸಾನ್ನಿಧ್ಯ ಪುಷ್ಕಳ ಆಣೆ. ಆಣಿ ಕಾನಡೀಚಿ ತಿಜಹೂನ ಕನಿಷ್ಠ ಪಾಯರೀ ಆಣೆ. ಮ್ಹಣಜೆ ಮರಾಠೀ ಭಾಷಾ ಜರೀ ಬಾಲಭಾಷೆ ಪಾಸೂನ ಜಾಹತೀಲಿ ಆಹೆ. ತಥಾಪೀ ತೀ ಪುನಃ ಸಮಾಗಮಾನೆ ಬಾಲಭಾಷೆಪೇಕ್ಷಾವರಿಷ್ಠ ಹೋಊನ ಗೇಲಿ. ಪರಂತು ಕಾನಡೀ ತಶೆ ಪಾಹತಾತೀ ಬಾಲ ಭಾಷೆಹೂನ ಹೀ ನೀಚಾವಸ್ಥೆನ ಜಾವ್ಹೂನ, ತಿಜಮಧ್ಯೆ ಪಿತ್ತ .ಅಕ್ಷರಾಂಚೆ ಉಚ್ಚಾರ ಘಾರಜಾಹತೆ ವ ಸಂಸ್ಕೃತಾಚಾ ಸಂಬಂಧ ದಿವಸೆ ದಿವಸ ತಮೀ ಪಡತ ಚಾಲಲಾ. ಅಶಾ ಸ್ಥಿತಿಮಧ್ಯೆ ಪುಷ್ಕಳ ಕಾಲ ಪರ್ಯಂತ ತೀ ರಾಹಿಲ್ಯಾ ನಂತರ

ಪುನಃ ಜೇಂವಾ ಶುದ್ಧ ಸಂಸ್ಕೃತ ಶಬ್ದಾಂಚಾ ಭರಣಾ ತಿಜಮಧ್ಯೆ ಹೋಊ ಲಾಗಲಾ ತೇಂವಾ ಜುನೆ ಶಬ್ದ ಅಸಲೇಲೆ ಅಗದೀ ಪರಕೀ ದಿಸೂಲಾಗತಿ. ಪರಂತೂ ಇತರೆ ದಿವಸ ಜೇ ಸಹಸ್ರಾವಧೀ ಕಾನಡೀ ಶಬ್ದ ಅಗದೀ ವೇಗಳ್ಯಾ ಉಗಮಾ ಪಾಸೂನ ಉತ್ಪನ್ನ ಜಾಹತಿ ಆಹೇತ ಅಶೀ ಸಮಜೂತ ಹೋತೀ ತ್ಯಾತೂನ ಬಹು ತೇಶಾಂಚಾ ಸಂಬಂಧ ಆರ್ಯ ಕುಟುಂಬಾತೀಲಿ ಭಾಷಾತಡೆ ಅಸಲೇಲ್ಯಾ ಹಲ್ಲೀ ಸ್ಪಷ್ಟ ಹೋತ ಚಾಲಲಾ ಆಹೆ. ಆಣಿ ಅಸಾ ಸಂಭವ ದಿಸತೋ ತೀ ಬಹುತೇತ ಸರ್ವ ತಾನಡೀ ಶಬ್ದಾಂಚಾ ಉಗಮ ಸಂಸ್ಕೃತ ಪಾಸೂನಚ ಝಾಲಾ ಅಸಾವಾ. ತಥಾಪಿ ಹೀಗೋಷ್ಟ ಅಧ್ಯಾಪಿ ವಾದಾಸ್ಪದ ಆಹೆ. ಯಾತರಿತಾ ತಿಜತಡೆ ಆಮಚೆ ಭಾಷಾಪಿತ್ತೆ ಲಕ್ಷದೇತಿಲ ತರ ಹಳೂ ಹಳೂ ಆಂತೀಲ ವಾಸ್ತವಿಕ ತತ್ವ ಅನೇಲ ತೇ ಬಾಹೇರ ಪದಿತ ಜಾಯೀಲ.

ಜೈಮಿನಿ ಭಾರತ ಸಂಧಿ-೧

ಮೂಲ ಮರಾಠೀ ಅನುವಾದಕರು : ಸ್ವ. ಶೇಷೋ. ರಾಮಚಂದ್ರ
ಚುರಮುರಿ

ಪ್ರಕಾಶಕರು : 'ವಿವಿಧ ಜ್ಞಾನ ವಿಸ್ತಾರ' ಮಾಸಪತ್ರಿಕೆ
ಅಂಕ-೭-ಪುಸ್ತಕ-೧
ಜಾನೇವರಿ-೧೮೬೮
ಪುಟನಂಬರ-೧೦೯ ರಿಂದ ೧೧೧

ಕನ್ನಡ ಅನುವಾದಕರು (ಮರಾಠಿ ಭಾಷೆಯಲ್ಲಿ ಬರೆದ ಪ್ರಸ್ತಾವನೆ ಭಾಗವಿಷ್ಟೆ) : ಪ್ರಲ್ಹಾದ. ಮುದಗಲ್ಲ
ಮುಂಬೈ-೩೬

ಅರ್ವಾಚೀನ ಕಾಲದ ಕನ್ನಡ ಸಾಹಿತ್ಯದಲ್ಲಿ ಹೆಸರು ಪಡೆದ ಉತ್ತಮ ಕವಿಗಳಲ್ಲಿ ಲಕ್ಷ್ಮೀಶ ಕವಿಯು, ಸರ್ವ ಶ್ರೇಷ್ಠನೆಂದು ತಿಳಿಯಲಾಗಿದೆ. ಆತನು ರಚಿಸಿದ ಕವಿತೆ ಯಾವ ಬಗೆಯದ್ದಾಗಿದೆ ಎಂಬುದನ್ನು ನಮ್ಮ ಮಹಾರಾಷ್ಟ್ರ ದೇಶದ ಪಂಡಿತರಿಗೆ ಅರಿವಾಗಲಿ ಎಂಬ ಉದ್ದೇಶದಿಂದ ಆತನ ಜೈಮಿನಿ ಭಾರತ ಉದ್‌ಗ್ರಂಥವನ್ನು ನನ್ನ ಶಕ್ತಿ ಮೇರೆಗೆ ಮರಾಠಿಭಾಷೆಯಲ್ಲಿ ಅನುವಾದ ಕೈಕೊಳ್ಳತೊಡಗಿರುವೆನು. ನನ್ನ ಈ ಅನುವಾದದಲ್ಲಿ ತಪ್ಪುತಡೆಗಳು ಇರಬಹುದು. ಅವುಗಳನ್ನೆಲ್ಲ ಬದಿಗಿಟ್ಟು ಕೇವಲ ಗುಣಗ್ರಹಣವನ್ನಷ್ಟೇ ಮಾಡಬೇಕೆಂದು ನಾನು ಪಂಡಿತರಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಒಂದು ಭಾಷೆಯಲ್ಲಿಯ ಕವಿತೆಯನ್ನು ಬೇರೊಂದು ಭಾಷೆಯಲ್ಲಿ ಅದರಲ್ಲಿಯು ಅರ್ಥದಷ್ಟಾದರೂ ಮೂಲ ರಸವನ್ನು ಕಾಯ್ದುಕೊಳ್ಳುವುದಕ್ಕೆ ಸಾಕಷ್ಟು ದುಸ್ತರ ವಾಗುತ್ತದೆ. ಅದರಲ್ಲಿ ಕನ್ನಡ ಭಾಷೆಯ ಕವಿತೆಯಲ್ಲಿ ಪ್ರಾಸದ ಸ್ಥಾನ ಶ್ಲೋಕದ ಪ್ರತಿಪದ್ಯದ ಎರಡನೆಯ ಅಕ್ಷರವಾಗಿದೆ, ಮತ್ತು ಪ್ರತಿ ಶ್ಲೋಕದಲ್ಲಿ ದೊಡ್ಡ ಆರು ಚರಣಗಳಿರುತ್ತವೆ. ಮೂರು ಮೂರು ಚರಣಗಳ ಒಂದೊಂದು ಭಾಗ–ಪ್ರತಿ ಭಾಗದಲ್ಲಿ ೩೨ ಮಾತ್ರಾಗಣಗಳು ಇರುತ್ತವೆ. ಹಿಂಗಾಗಿ ೧೪೪ ಮಾತ್ರಾಗಣಗಳ ಒಂದು ಶ್ಲೋಕ ನಿರ್ಮಾಣವಾಗುತ್ತದೆ. ಮರಾಠೀ ಭಾಷೆಯಲ್ಲಿ ಒಂದು ಪದ್ಯದಲ್ಲಿ ೩೭ ಮಾತ್ರಾಗಣಗಳಿರುವ ವೃತ್ತಗಳನ್ನು ಪ್ರಯೋಗಿಸಬೇಕಾಗುವುದು. ಅವಾಗ್ಗ ಈ ಕವಿಯ ಶಬ್ದಪ್ರಯೋಗಗಳನ್ನು ಮರಾಠಿಯಲ್ಲಿ ತರಲು ಬರುವುದು. ಆದರೆ ಇಂತಹ ವೃತ್ತಗಳು ಮರಾಠೀಭಾಷೆಯಲ್ಲಿ ಪ್ರಚಲಿತವಿದ್ದಂತೆ ಕಾಣುವುದಿಲ್ಲ. ಕನ್ನಡ ಭಾಷೆ ಯಲ್ಲಿ ಹೆಚ್ಚಾಗಿ ಪ್ರತಿಶ್ಲೋಕದಲ್ಲಿ ವಾಕ್ಯದಪೂರ್ಣಾರ್ಥ ಬಂದಿರುವದು, ಎಂಬುದು ಎಲ್ಲರಿಗೂ ಅರಿತ ಸಂಗತಿ. ಇದಕ್ಕಾಗಿ ಭಾಷಾಂತರದಲ್ಲಿ ಒಂದು ಶ್ಲೋಕವನ್ನು ವಿಚ್ಛೇದಿಸಿ ಎರಡು ಕೈಕೊಂಡಲ್ಲಿ ಅರ್ಥದ ಸಂದರ್ಭದಲ್ಲಿ ಸಾಕಷ್ಟು ತೊಂದರೆ ಉಂಟಾಗಿ ಮೂಲದಲ್ಲಿದ್ದ ಸುರಸವು ಕಡಿಮೆಯಾಗುವುದು. ಈ ಹಿನ್ನೆಲೆಯಲ್ಲಿ ಪ್ರತಿಶ್ಲೋಕಕ್ಕೆ ಒಂದು ಶ್ಲೋಕವನ್ನು ತೋರಿಸಿ ಭಾಷಾಂತರ ಕೈಕೊಂಡುದುದರಿಂದ ಕೆಲವು ಅಲಂಕಾರ ಶಬ್ದಗಳನ್ನು ಬಿಡಲಾಗಿದೆ. ಈ ಕವಿಯ ರಚನೆಯಲ್ಲಿ ಹೆಚ್ಚಾಗಿ ಜೋಡಾ ಕ್ಷರ ಅಥವಾ ದ್ವಿತ್ವಾಕ್ಷರಗಳನ್ನು ಬಳಿಸಿದ (ಣ್ಮ, ದ್ರ, ೞದ, ತ್ತ, ಇತ್ಯಾದಿ) ಕಠಿಣ ಪ್ರಾಸಗಳಿರುತ್ತವೆ. ಅಂತಹ ಪ್ರಾಸಗಳು ಮರಾಠೀ ಭಾಷೆಯಲ್ಲಿ ನನ್ನಂತಹ ಪ್ರಾರಂಭಿಕನಿಗೆ ಸಾಧಿಸುವುದು ಕಠಿಣವಾಗಿದೆ. ಉದಾಹರಣೆಗಾಗಿ ಸಾಕಷ್ಟು ಯಮಕದ ಒಂದು ಶ್ಲೋಕವನ್ನು ತೋರಿಸಿ ಕೊಡುವೆನು :–

ಎತ್ತಿಬಹ ಸತ್ತಿಗೆಯ ಮೊತ್ತಂಗಳೆತ್ತಲುಂ ।
ಕತ್ತಲಿಸೆ, ಪೊತ್ತ ಮಸೆವೆತ್ತ ಬಲ್ಗತ್ತಿಗಳ ।
ಕಿತ್ತುಭಟರೆತ್ತಿ ಜಡಿಯುತ್ತಿರಲ್ಕತ್ತಬೆಳಗಿತ್ತುವವು ವಂತ್ತೆಬಲಕ್ಕೆ ॥
ಸುತ್ತಲುಂ ಕೆತ್ತವೋಲ್ಮತ್ತಗಜ ಮೊತ್ತರಿಸಿ ।
ಮುತ್ತಿನಡೆಯುತ್ತೆಲರನೊತ್ತಿ ನಿಲಿಸುತ್ತಿರಲು,
ದತ್ತ ಚಮರೋತ್ಥಿತ ಮರುತ್ತತಿಯೊಳುತ್ತಮ ಹಿಮೋತ್ತರಂ ಚಿತ್ರಿಸಿತು ॥

ಘಟೋತ್ಕಜನ ಪುತ್ರನಾದ ಮೇಘನಾದನು, ಯೌವನಾಶ್ವ ರಾಜನ ಸೈನ್ಯ ದಲ್ಲಿಯ ಕುದುರೆಯನ್ನು ತನ್ನ ತೋಳಿನಲ್ಲಿ ಹಿಡಿದುಕೊಂಡು ಆಕಾಶಕ್ಕೆ ಹಾರಿದನು. ಆ ಸಮಯ, ಆ ರಾಜನ ಸೈನ್ಯದ ಸ್ಥಿತಿ ಮತ್ತು ಯುದ್ಧದ ವರ್ಣನೆ ಇಲ್ಲಿ ಕೈಕೊಳ್ಳ ಲಾಗಿದೆ. ಅರ್ಥ : ಸೈನ್ಯದಲ್ಲಿಯ ಅನೇಕ ವೀರರ ಛತ್ರ ಚಾಮರಗಳು ಒಂದೆಡೆಗೆ ಕೂಡಿದ್ದರಿಂದ, ಕತ್ತಲೆ ಉಂಟಾಯಿತು. ಆದರೆ ಶೂರರು ಚಿಕ್ಕದಾದ ಖಡ್ಗವನ್ನು

ಹಿಡಿದು ಮೇಲೆತ್ತಿ ಯುದ್ಧವನ್ನು ಪ್ರಾರಂಭಿಸಿದರು. ಆವಾಗ್ಗೆ ಝಳಪಿಸುತ್ತಿರುವದರಿಂದ ಪ್ರಕಾಶ ಉಂಟಾಯಿತು. ಆದರಂತೆ ಮದ್ದಾನೆಗಳಿಗೆ ದಾರಿ ಸಿಗದ್ದರಿಂದ ಅವು ಪರಸ್ಪರರಿಗೆ ರಭಸದಿಂದ ಅತ್ತ-ಇತ್ತ ಕಡೆಗೆ ದೂಡುತ್ತ ಹೋಗುವುದರಿಂದ ಹವೆ ಇಲ್ಲದಂತಾಗಿ, ಉಷ್ಣತೆಯು ಸಾಕಷ್ಟು ಉಂಟಾಯಿತು. ಆದಾಗ್ಯೂ ಸೈನಿಕರ ಚಾಮರಗಳಿಂದ ತಣ್ಣಗಿನ ಹವೆಯು ಹೊರಬರುತ್ತಿತ್ತು.

ಈ ಕೃತಿಯಲ್ಲಿ ಎರಡು ಸಾವಿರದಷ್ಟು ಪದ್ಯಗಳಿವೆ. ಅವುಗಳನ್ನು ಸಮಯಕ್ಕನುಸರಿಸಿ ಸ್ವಲ್ಪಸ್ವಲ್ಪ ಭಾಗಗಳಲ್ಲಿ ಭಾಷಾಂತರಿಸಿ ಈ ಪತ್ರಿಕೆಗೆ ಕೊಡುವೆನು ; ಮಾತ್ರವಲ್ಲ ವಿದ್ವಜ್ಜನರಲ್ಲಿ ಈ ರೀತಿಯಾಗಿ ಪ್ರಾರ್ಥಿಸುವೆನು :-

> ಕನ್ನಡಸಾಹಿತ್ಯಾರಣ್ಯದಲ್ಲಿಯ ವಿಶ್ವಮೋಹಿನಿಯಾದ,
> ಈ ಅಪೂರ್ವ ಕೃತಿಯನ್ನು ಮರಾಠಿ ವಾಚಕರಿಗೆ ನೀಡಿರುವೆನು.
> ವಿದ್ವಜ್ಜನರು ಇದನ್ನು ಅವಲೋಕಿಸಿ ನೀಡಿದ ಪ್ರಶಂಸೆ, ಮಹಾ
> ಸಾಗರವಲ್ಲಿಯ ಒಂದು ಬಿಂದುವಾಗಿದೆ.

ಜೈಮಿನಿ ಭಾರತವು

ಮೊದಲನೆಯ ಸಂಧಿ

ಪೀಠಿಕೆ

ಶ್ರೀವಧುವಿನಂಬಕ ಚಕೋರಕಂ ಪೊರೆಯೆ, ಭ ।
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ, ಜಗ ।
ತೀ ವಲಯದಮಲ ಸೌಭಾಗ್ಯ ರತ್ನಾಕರಂ ಪೆರ್ಚಿನಿಂ ಮೇರೆವರಿಯೆ ॥
ಆವಗಂ ಸರಸ ಕರುಣಾಮೃತ ಕಲೆಗಳಿಂ ।
ತೀವಿದೆಳೆನಗೆಯ ಬೆಳುದಿಂಗಳಂ ಪಸರಿಸುವ ।
ದೇವಪುರನಿಲಯ ಲಕ್ಷ್ಮೀರಮಣನಾಸ್ಯ ಚಂದ್ರಾನಂದವೆಮಗೀಯಲಿ ॥ ೧ ॥

ಪಾವನತುಲಾಭರಣಮಂ ಮಾಡಿಕೊಂಡೆಸೆವ ।
ಪಾವನತರ ಸ್ವರೂಪಂ ನಾರದಾದಿ ಮುನಿ ।
ಪಾವನತ ಪಾದಪಂಕೇರುಹದ್ವಂದ್ವವಿಂದು ಕಲಾವತಂಸಮುಮೆಯ ।
ಭಾವನೆಯನೊಡಗೂಡಿಸುವ ಸಕಲ ಸುರರ ಸಂ ।
ಭಾವನೆಯ ಕೈಗೊಂಬ ಲೋಕವಿಸ್ತರಣ ಪ್ರ ।
ಭಾವ ನಯನತ್ರಯಂ, ದೇವ ಗಂಗಾಧರಂ ಪೊರೆಗೆ ನಿಚ್ಚಂ ನಮ್ಮನು ॥ ೨ ॥

ಪ್ರಸ್ತುತದೊಳೊಗೆದ ಮಂಬೆಳಗಮಲ ದಂತದ ಗ ।
ಭಸ್ತಿ ನವಪೂರ್ವ ಸಂಧ್ಯಾರುಣಂ ಭಾಳ ವಿ ।

ನ್ಯಸ್ತ ಸಿಂದೂರಮಂತುರಿಪ ಪೊಂಬಿಸಿಲೊಡನೆ ಮೂಡುವೆಳನೇಸರೆಸೆವ ।
ಮಸ್ತಕದ ಮಣಿಮಕುಟಮಾಗಲು ದಯಾಚಲದ ।
ವಿಸ್ತಾರದಂತೆ ಭದ್ರಾಕೃತಿಯೊಳೊಪ್ಪುವ ಸ ।
ಮಸ್ತ ಸಿದ್ಧಿ ಪ್ರದಾಯಕ ವಿನಾಯಕ ಮಾಳ್ಪುದೆಮಗೆ ನಿರ್ವಿಘ್ನತೆಯನು ॥ ೩ ॥

ಭೂವ್ಯೋಮ ಪಾತಾಳ ಲೋಕಂಗಳಲ್ಲಿ ಸಂ ।
ಭಾವ್ಯರೆಂದೆನಿಸಿಕೊಂಬಖಿಳ ದೇವರ್ಕಳಿಂ ।
ಸೇವ್ಯನಾದಜನ ಪಟ್ಟದ ರಾಣಿ ವರದೆ ಕಲ್ಯಾಣಿ ಫಣಿವೇಣಿ ವಾಣಿ ।
ಕಾವ್ಯಮಿದು ಭುವನದೊಳ್ಸಕಲ ಜನರಿಂದ ಸು ।
ಶ್ರಾವ್ಯಮಪ್ಪಂತೆನ್ನ ವದನಾಬ್ಜದಲ್ಲಿ ನೀ ॥
ನೇ ವ್ಯಾಪಿಸಿರ್ದಮಲ ಸುಮತಿಯಂ ತಾಯನಗೆ ತಾಯೆ ನಗೆಗೂಡಿ ನೋಡಿ ॥ ೪ ॥

ಪಾರದೆ ಪರಾರ್ಥಮಂ, ವರಯತಿಗೆ ಭಂಗಮಂ ।
ತಾರದೆ ನಿಜಾನ್ವಯ ಕ್ರಿಯೆಗಳ್ಗೆ ದೂಷಣಂ ।
ಬಾರದೆ ವಿಶೇಷ ಗುಣಗಣ ಕಲಾಗೌರವಂ ತೀರದೆ, ದುರುಕ್ತಿಗಳ್ಗೆ ।
ಸೇರದೆ, ಸುಮಾರ್ಗದೊಳ್ನಡೆವ ಸತ್ಪುರುಷನ ಗ ।
ಭೀರ ದೆಸೆಯಂ ಪೋಲ್ವ ಕಾವ್ಯ ಪ್ರಬಂಧಮಂ ।
ಶಾರದೆಯ ಕರುಣದಿಂ ಪೇಳ್ವೆ ನಾಂ ದೋಷಮಂ ತೊರೆದೆಲ್ಲರು ಕೇಳ್ವುದು ॥ ೫ ॥

ಛಂದಸ್ಸುಲಕ್ಷಣಮಲಂಕಾರ ಭಾವರಸ ।
ವೊಂದಿ ತಲೆವೆತ್ತ ಸತ್ಕೃತಿ ಚಮತ್ಕೃತಿ ಯುಕ್ತಿ ।
ಯೊಂದುಮಿಲ್ಲದ ಕಾವ್ಯಮಶ್ರಾವ್ಯಮಕ್ಕೆಂದು ಜರೆದು ಕವಿತೆಯನು ಬರಿದೆ ।
ದಂದುಗಕ್ಕೊಳಗಾಗಿ ಪೇಳ್ದೆನೆಂದನ್ನ ನಗು ।
ವಂದಮಂ ಮಾಡದೆನಗೊಲಿದಿತ್ತನಮಲ ಮತಿ ।
ಯಂ ದೇವಪುರದ ಲಕ್ಷ್ಮೀರಮಣನೆಂದರಿದು ಕೇಳ್ವುದೆಲ್ಲಾ ಸುಜನರು ॥ ೬ ॥

ಕೆನೆವಾಲಗಡೆದು ನವನೀತಮಂ ತೆಗೆದು, ಬಾ ।
ಯ್ಗಿನಿದಾಗಿ ಸವಿಯುದದರೊಳಗೆ ಪುಳಿವಿಡಿದು ರಸ ।
ವನೆ ಕೆಡಿಸಿದೊಡೆ ಕರೆದ ಸುರಭಿಗಪ್ಪುದೆ ಕೊರತೆ ಕಾವ್ಯಮಂ ಕೇಳ್ದು ಮಥಿಸಿ ।
ಜನಿಸಿದ ಪದಾರ್ಥಮಂ ತಿಳಿದು ನೋಡದೆ ವಿನೂ ।
ತನ ಕವಿತೆಯೆಂದು ಕುಂದಿಟ್ಟು ಜರೆದೊಡೆ, ಪೇಳ್ದ ।
ವನೊಳಾವದೂಣೆಯಂ ಜಾಣರಿದನರಿದು ಮತ್ಸರವನುಳಿದಾಲಿಸುವುದು ॥ ೭ ॥

ಜಾಣರಿಂ ತಲೆದೂಗಿಸದೆ ನುಡಿದೊಡಾ ಪದ ।
ಕ್ಕೂಣೆಯಂ ಬಹುದೆಂದು ಸರಸೋಕ್ತಿಯಿಂದ ಗೀ ।
ರ್ವಾಣಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾ ನಿಪುಣನು ।
ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ ।
ವಾಣಿಯಿಂ ಕವಿತೆಯಂ ಪೇಳಿಸಿದನೆಂದರಿದು ।
ಕೇಣಮಂ ತೊರೆದು ಪುರುಡಿಸುವರಂ ಜರೆದು ಕಿವಿದೆರೆದು
ಕೇಳ್ಪುದು ಸುಜನರು ॥ ೮ ॥

ದುಷ್ಟಾಹಿ ಘೋರತರ ವಿಷವದನದಿಂದ ಸಂ ।
ದಷ್ಟವಾಗಿರುತಿರ್ದೊಡಂ ದೋಷಮಿರ್ದೊಡಂ।
ನಷ್ಟ ಕಲೆಯಾದೊಡಂ, ಚಂದ್ರನಂತೆನ್ನ ಕಾವ್ಯದ ರಸಂ ಸುಮನಸರ್ಗೆ ।
ಇಷ್ಟಮಾಗದೆ ಮಾಣದಿನ್ನಾವನಾದೊಡಂ |
ಕಷ್ಟಮಂ ಬಗೆವವಂ ಚೋರಂಗೆ, ವಿರಹಿಗಂ ।
ದೃಷ್ಟಾಂತವಾಗಿ ಸಲ್ವಂಧರಾವಲಯದೊಳ್ಸಂದೇಹಮೇನಿದರೊಳು ॥ ೯ ॥

ಮೊಗಮಾವಲೀಲೆಯಿಂದೆಸೆವುದಾ ಭಾವಮಂ
ಮುಗುಳೆ ತೋರುವದಲ್ಲದನ್ಯ ಪ್ರಕಾರದಿಂ
ಸೊಗಯಿಪುದೆ ರನ್ನಗನ್ನಡಿ ಧರೆಯೊಳಾರಾಜಿಸುವ ಕನ್ನಡದ ನುಡಿಗಳ ।
ಬಗೆಯರಿದ ಕಾವ್ಯಲಕ್ಷಣದಿಂದ ಮುನ್ನ ಕ
ಬ್ಬಿಗಳನುಸುರಿದರದೇ ಲಕ್ಷ್ಯಮಲ್ಲದೆ ಪೆರತೆ
ನಗೆ ಸಲ್ಲದದರಿಂದ ಪೂರ್ವ ಸತ್ಕವಿಗಳ್ಗೆ ನಮಿಸಿ ನಾಂ ಕೃತಿ ಪೇಳ್ವೆನು ॥ ೧೦ ॥

ವಿದ್ವಸ್ಸಭಾಮಯಮರಿಯೆ ವಿರಚಿಸಿದಂ ಭ
ರದ್ವಾಜಗೋತ್ರಭವನಣ್ಣಮಾಂಕನ ಸುತಂ
ಸದ್ವಿನುತ ಕರ್ನಾಟಕವಿ ಚೂತವನಚೈತ್ರ ಲಕ್ಷ್ಮೀಶನೆಂಬೋರ್ವನು ।
ಹೃದ್ವನಜದೋಳ್ದೇವಪುರದ ಲಕ್ಷ್ಮೀಶನ ಪ
ದದ್ವಯವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಲಿಂದ ವಿಮಲ ಜೈಮಿನಿ ಭಾರತದ ಕಥೆಯನು ॥ ೧೧ ॥

ವರವರ್ಣದಿಂದ ಶೋಭಿತಮಾಗಿ ರೂಪ ವಿ
ಸ್ತರದಿಂದ ಚೆಲ್ವಾಗಿ ಮಧುರತರ ನವರಸೋ
ದರ ಭರಿತದಿಂದ ವಿಲಸಿತಮಾಗಿ, ಸುಮನೋನುರಾಗದಿಂ ಪ್ರಚುರಮಾಗಿ ।
ನಿರುತ ಮಂಜುಳ ಶಬ್ದದಿಂದ ಕಿವಿಗಿಂಪಾಗಿ
ಚರಿಸುವ ಸುಲಲಿತ ಷಟ್ಪದಿಗಳಿಡೆಬಿಡದೆ ಝೇಂ
ಕರಿಸದಿರ್ಪುವೆ ಬಂದು ನೆರೆದ ವಿದ್ವಸ್ಸಭಾನೀರೇರುಹಾಕರದೊಳು ॥ ೧೨ ॥

ಪೀಠಿಕಾ ಸಂಧಿ ಸಂಪೂರ್ಣಂ

ಜೈಮಿನೀ ಬಾರತ

ಕರ್ನಾಟಕ ಭಾಷೆ ಮಧ್ಯೆ ಜೆ ಉತ್ತಮ ಕವೀ ಹೋವೂನ ಗೇಲೆ ತ್ಯಾ ಪೈಕೀ ಲಕ್ಷ್ಮೀಶನಾಮೆ ಕರೂನ ಜೋ ರಘಲಾ ತೋ ಸರ್ವಾತ್ ಶ್ರೇಷ್ಠ ಅಸೆ ಮಾನಿಲೆ ಆಹೆ, ಯಾಕರಿತಾ ತ್ಯಾಚೀ ಕವಿತಾ ಕಶೀ ಆಹೆ ಹೇ ಆಮಚ್ಯಾ ಮಹಾರಾಷ್ಟ್ರ ದೇಶಿಯ ವಿದ್ವಜ್ಜನಾಂಸ ಕಳಣ್ಯಾ ಕರಿತಾ, ತ್ಯಾನೆ ಕೇಲೆಲೇ ಜೈಮಿನೀ ಭಾರತ ಯಾಚೆ ಮೀ ಯಥಾಸುಶಕ್ತಿ ಮಹಾರಾಷ್ಟ್ರೀ ಮಧ್ಯೆ ಭಾಷಾಂತರ ಕರೀತ ಆಹೆ;

ತ್ಯಾಂತಚುಕಾ ಅಸತೀಲ ತ್ಯಾ ಟಾಕೂನ ತ್ಯಾಂತೀಲ ಗುಣಾಂಚೆ ಮಾತ್ರ ಗ್ರಹಣ ಕರಾವೆ ಹೀ ವಿದ್ವಜ್ಜನಾಂಸ ವಿನಯ ಪೂರ್ವಕ ಪ್ರಾರ್ಥನಾ ಆಹೆ.

ಏಕಾ ಭಾಷೇತೂನ ದುಸರ್‍ಯಾಭಾಷೇತ ಕವಿತಾ ನೆಲ್ಯಾಸ ತಿಜಮಧೀಲಿ ಏಕದ್ವಿತಿಯಾಂಶ ದೇಖೀಲ ರಸ ಆಣಣ್ಯಾಚೀ ಮೋಠ್ಯಾ ವಿದ್ವಾನಾಂಸ ಹೀ ಪಂಚಾಯೀತ ಪಡತೆ, ಆಣಿ ತಶಾತ ಕಾನಡೀ ಭಾಷೇತ ಪ್ರಾಸಾಚೆ ಸ್ಥಾನ ಶ್ಲೋಕಾಚ್ಯಾ ಪ್ರತ್ಯೇಕ ಪಾದಾಚೆ ದುಸರೇ ಅಕ್ಷರ ಆಹೆ, ಆಣಿ ಪ್ರತ್ಯೇಕ ಶ್ಲೋಕಾಂತ ಮೋಠ ಮೋಠಾತಿ ಸಹಾ ಚರಣ ಅಸತಾತ, ತೀನ ತೀನ ಚರಣಾಚೆ ಏಕ ಏಕ ಅರ್ಧ, ಪ್ರತ್ಯೇಕ ಅರ್ಧಾಂಸ 72 ಮಾತ್ರಾ ಅಸತಾತ, ತೆವ್ಹಾ 144 ಮಾತ್ರಾಂಚಾ ಏಕಶ್ಲೋಕ ಹೋತೊ, ಆಣಿ ಮರಾಠೀತ, ಜೆವ್ಹಾ ಏಕೆ ಪಾದಾತ 36 ಮಾತ್ರಾ ಅಸಲೀಲೆ ವೃತ್ತರಾಢವೆ ತೆಂವ್ಹಾ ಯಾ ಕವೀಚೆ ಏಕೆಂದರೆ ಶಬ್ದ ಮರಾಠೀತ ಏತೀಲ; ಪರಂತು ಅಸೆ ವೃತ್ತ ಕೋಠೆ ಪ್ರಸಿದ್ಧೀತ ನಾಹೀ. ಬಹುತೆಕಾಂಸ ಮಾಹೀತ ಅಹೆ ರೇ ಆಪಲ್ಯಾ ಭಾಷೇತ ಬಹುಧಾ ಪ್ರತಿಶ್ಲೋಕಾಂತ ವಾಕ್ಯಾಚಾ ಪೂರ್ಣಾರ್ಥ ಆಲೇಲಾ ಅಸತೊ. ಯಾಕರಿತಾ. ಭಾಷಾಂತಕಾಂತ ಏಕಾಶ್ಲೋಚೆೀಕಾದೋನಕೇತಿ ಅಸತಾ. ಅರ್ಥ ಸಂದರ್ಭಿತ ಫಾರಚ ಅಡಚಣ ಪಡೂನ ತಿಡಕೀ ತ್ಯಾಚೀ ಸುರಸತಾ ಕಮೀ ಹೋತೆ. ಯಾಕರಿತಾ ಏಕಾಶ್ಲೋಕಾಸ ಏಕಚ ಶ್ಲೋಕ ಠೇವೂನ ಭಾಷಾಂತರ ಕೆಲ್ಲಾಮುಳೆ ಕಾಹೀ ಅಲಂಕಾರಿಕ ಶಬ್ದ ಸೋಡಾವೆಲಾಗತಿ. ಯಾಶಿವಾಯ ಯಾ ಕವೀಚೆ ಫಾರ ಕರೂನ ಜೋಡಾಕ್ಷರೆ ಕಿಂವಾ ದ್ವಿತ್ವಾಕ್ಷರೆ ಯಾಂಚೆ ವ್ಹಣಜೆ, ಣ್ಮ, ದ್ರ, ಳವ, ತ್ತ, ಇತ್ಯಾದಿ ಅಕ್ಷರಾಂಚೆ ಕಠೀಣ ಕಠೀಣ ಪ್ರಾಸ ಅಸತಾತ ತೇ ಪ್ರಾಸ ಮರಾಠೀತ ಮಾಝ್ಯಾ ಸಾರಖ್ಯಾ ಅಭ್ಯಾಸಾಲಾ ಸಾಧಣೆ ಅಶಕ್ಷ ಆಹೆ. ಉದಾಹರಣಾರ್ಥ ಅತಿಶಯಿತ ಗಮಶಾಚಾ ಏಕಶ್ಲೋಕ ದಾಖವಿತೊಃ—

ಎತ್ತಿಬಹ ಸತ್ತಿಗೆಯ ಘೊತ್ತಂಗಳೆತ್ತಲುಂ ।
ಕತ್ತಲಿಸೆ, ಪೊತ್ತಮಸೆವೆತ್ತ ಬಲ್ಗತ್ತಿಗಳ ।
ಕಿತ್ತು ಭಟರೆತ್ತಿ ಜಡಿಯುತ್ತಿರ್ಕುತ್ತ ಬೆಳಗಿತ್ತುವವು ಮತ್ತೆಬಲಕ್ಕೆ ॥
ಸುತ್ತಲುಂ ಕೆತ್ತವೋಲ್ಮತ್ತಗಜಮೊತ್ತರಿಸಿ ।
ಮುತ್ತಿ ನಡೆಯುತ್ತೆಲರನೊತ್ತಿ ನಿಲಿಸುತ್ತಿರಲು ।
ದತ್ತ ಚಮರೋತ್ಥಿತ ಮರುತ್ತತಿಯೊಳುತ್ತಮ ಹಿಮೋತ್ತರಂ ಬಿತ್ತರಿಸಿತು ॥ ೧ ॥

ಜೆಂವ್ಹಾ ಮೇಘನಾದ [ಘಟೋತ್ಕಚಾಚಾಪುತ್ರ] ಯೌವನಾಶ್ವ ರಾಜಾಚ್ಯಾ ಸೈನ್ಯಾಮಧೀಲ ಘೋಡಾ ಏಕದಮ್ ಬಗತೇತ ಮಾರೂನ ಆಕಾಶಮಾರ್ಗೀ ತ್ಯಾವೇಳೆಸ ತ್ಯಾರಾಜಾಚ್ಯಾ ಸೈನ್ಯಾಚೆವ ಯುದ್ಧಾಚೆ ವರ್ಣನ ಕೇಲೇ ಆದೆ .

ಅರ್ಥ :- ಸೈನ್ಯಾ ಮಧೀಲ ಅನೇಕ ವೀರಾಂಚೀ ಛತ್ರ ಚಾಮರೆ ಏಕತ್ರ ಝಲ್ಲಾ ಮುಳೆ ಸಕಳ ಸೈನ್ಯಾಮಧ್ಯೆ ಏಕಚ ಅಂಧಃಕಾರ ಹೋವೂನ ಗೇಲಾ ; ಪರಂತು ಭಟವ್ಯುಣಜೇ ಶೂರ ಯಾಂಣೀ ಜೇಂವ್ಹಾ ಪಾಜ ವಿಲೇಲೀರುಂಧ ಅಶೀ ಖಡ್ಗೆ ವರ ಉಚೂನ ಯುದ್ಧಚಾಲವಿಲೆ ತ್ಯಾವೇಳೀಸ ಜೀ ಚಕಾಕೀ ಮಾರೀತ-ಹೋತಿ, ತೇಣೆಕರೂನ ಸರ್ವ ಸೈನ್ಯಭರ ದಿವ್ಯಉಜೇಡಾಚಾ ಲಖಲಖಾಟ ಝಲಾ ತನೇಚ ಸಭೋವತಾಲಚ್ಯಾ ಮತ್ತ ಗಜಾಂಸ ವಾಟ ನ ಮಿಳಾಲ್ಲಾ ಮುಳೆತೇ ಪರಸ್ಪರಾಂಸ ಜೋರಾನೆ ಡಕಲೀತ ಡಕಲೀತ ಜಿಕಡೆ ತಿಕಡೆ ಚಾಲತ ಅಸರ್ಯಾಮುಳೆ ಆಂತವಾರಾ ಅಗದೀ ನಾಹೀಸಾ ಹೋವೂನ ಉಪ್ಯಾ ಫಾರಚ ಝಲಾ, ಪರಾತು ಮೋದ್ಯಾಂಚ್ಯಾ ಚಾಮರಾಂಚ್ಯಾ ಯೋಗಾನೆ ಗಾರವಾರಾ ಸುಟತ ಅಸೆ.

ಹಾ ಏಕಂದರ ದೋನ ಹಜಾರ ಗ್ರಂಥ ಆಹೇ ಯಾಂತೀಲ ಅವಕಾಶಾನುಸಾರ ಥೋಡೇ ಥೋಡೇ ಭಾಷಾಂತರ ಕರೂನ ಮಾ ಪತ್ರಕಾಂತ ದೇತ ಆಹೇ ; ಆಣಿ ವಿದ್ವಜ್ಜನಾಸ ಅಶೀಪ್ರಾರ್ಥನಾ ಕರಿತೋ ಕೀ :

ಅಪೂರ್ವಭವ ಚಿತ್ತಹಾರಕ ಅಸೆ ಮಿಳಾಲೇಚಕೀ ॥
ಮಲಾಸುಫಲ ಹೇ ನವೆಸುರಸ, ರಾನ ಕರ್ನಾಟಕೀ ॥
ನ ಖಾಊನ ಚಿ ಬಿಲ್ಲ ಮೀ ಬುಧ ಜನಾಂಸಿ ಶಾಬಾಸಕೀ ॥
ಜಿಲಾ ವಿಕಿನ ತೀಚ ಮಾನಿನ ಚಿಮುಟ್ಯಾಮಾದಿಡಕೀ ॥

ಜೈಮಿನೀ ಭಾರತ

ಸಂಧಿ—1

ಶ್ರೀಲಕ್ಷ್ಮೀವಧುಚ್ಯಾ ಸುಲೋಚನ ಚಕೋರಾಂ ನಿತ್ಯ ಸಂತೋಷ ವೀ ।
ಸಂತೀ ದೃತ್ತುಮುದಾ. ಪುರೇ ವಿಕಸವೀ ಭಾಗ್ಯಾಂಭುಧೀ
ವಾಢವೀ ॥ ಕಾರುಣ್ಯಾಮೃತಯುಕ್ತ ಮಂದಹಸಣೆ
ಜ್ಯಾಣೆ ಪ್ರಕಾಶೀ ಕಲಾ । ಐಸಾ ಜೋ ಮುಖ ಚಂದ್ರಮಾ
ಹರಿ ತುಝಾ ಆನಂದ ದೇವೋ ಮಾಲಾ ॥ ೧ ॥

ಕಂಠೀ ಕೇಲಿಸ ಚಿನ್ಮಯಾ ಫಣಿಚೀನಿ ಮಾಳಾ. ಉಮೇಚ್ಯಾ
ಮನಾ । ವಿಶ್ವಾಮಾ ಸುಮನರ್ಷಿ ಪಾವನ ತಪಾದೇವೀವರಾ.
ಪಾವನಾ । ಸಾಜೆ ಇಂದು ಕಲಾವ ತಸ ಶುರಕೃಸ್ತೆ ಭಾವನಾಗ್ರಾಹಕಾ
ಹೇ ರಾಂಭೋ. ನಯನತ್ರಯಾ. ಜಲಂಧರಾ ಮಾಂಸಾ ಹಿ
ಮಾರಾಂತ ತಾ॥ ॥ ೨ ॥

ಶೋಭೇ ದಂತ ಸುಚಾರು ಕೋಮಲ ತರಾಂ ಭಾನೂ ಜಸೌ
ಘಾಂತವೀ । ಭಾಲೀ ಲಾಲ ಗುಲಾಲ ರಂಗ ಜಣೆ ಪ್ರಾತೆ ಸಂಧ್ಯಾ
ರುಣಾ ಭಾಸವೀ । ರಾಜೇ ರತ್ನ ಕೀರಿಟ ಮಸ್ತ್ರತಿ
ಜಸಾ ವಾಲಾಕ್ರ ವಾದೇಖಿಲಾ । ಭದ್ರಾಕರ ತುರ್ಘಾಟಿ
ಪೂರ್ವಗಿರೀಸಾ ನಿರ್ವಿಘ್ನ ದೇಗಾ ಮಾಲಾ ॥ ೩ ॥
ಭಾವೇ ಸೇವಾ ಸಕಳ ಜನ ಭೂವ್ಯೋಮಪಾತಾಳಲೋಕೀ ।
ವೀಣಾಪಾಣೇ ಕರಿತಿ ವರದೇ ಶಾರದೇ ಗೇ ತುರ್ಝೀ ಕೀ ॥
ಮಾತೇ ಮಾತೇ ವದನ ಸದನೀ ಬೈಸುತೀ ಸನ್ಮತೀತೇ । ಧ್ಯಾವೇ
ಕರಿ ಕೃತಿ-ಹಿ ಸುಸ್ರಾವ್ಯ ವಿದ್ವಜ್ಜನಾಂತೆ ॥ ೪ ॥
ಠೇವಿ ಸದ್ರುಣಗೌರವಾ ತಧಿ ಪರಾರ್ಥಸೀ ನ ಜಾನಾಂ ಸದಾ ।
ಸೋಡೀ ಜೋ ನ ನಿಜಾನ್ವಯಾಸಿ ಸುಯಾನೀ ಭಂಗಾ ನ
ಯೇಯೀ ತದಾ ॥ ಬೋಲೆ ಜೋ ನ ದುರುಕ್ತಿ ಸಜ್ಜನ
ಜಸಾ ತ್ರೈಸೀಚ ಮ್ಯಾ ಶಾರದ । ಕಾರುಣ್ಯೆದ ಬೇಲೀ ಕೃತೀ
ಮ್ಹಣುನಿ ಐಕಾವೀ ಖರೀ ಏಕದಾ ನಾಂಹೀ ॥ ೫ ॥
ಮಂಜುಳ ಶಬ್ದ ಭಾವ ರಸಯಾ ಕಾವ್ಯೀ ಅಲಂಕಾರಹೀ । ನಾಹೀ
ಛಂದ ಸುಬಂಧನಾದಿ ಗುಣ ನಾಹೀ ಪಾಹಣ್ಯಾ ಯೋಗ್ಯಹೀ । ಐಸೀ
ನರಕವಿತಾಜನೀನ ಮ್ಹಣತಾ. ಸುಶ್ರಾವ್ಯ ಹೋಯೀ ಅಸೀ ।
ಲಕ್ಷ್ಮೀಶೇ ದಿಧಲಿ ಮನೀ ಮಜಸಿ ಐಕಾವೀ ಗುಣೇ ಮಾಣೇಸಿ ॥ ೬ ॥
ದುಗ್ಧಾ ತಾಪವುನೀ ದಹೇ ಕರುನಿಯಾ ಲೋಣ್ಯಾಸ ಕಾಢೋನಿಯಾ ।
ಗೋಡೀಚಾ ರಸ ಪಾಹತಾ ನ ಶಿರಕಾ ಘಾಲೋನಿ ನಾಸೋನಿಯಾ ।
ಶಾಯೀಲಾ ಮಗು ದೂಷಣೆ ದಿಧಲಿಯಾ ಕ್ವೆಸೀ ಬರೆ ಶೋಧತೀ ॥
ಹೇವಾ ಟಾಕುನಿ ಮತ್‌ಕೃತೀ ಸುಕವಿತಾ ಪಾಹೀ ಕಸೀ
ಕಾಯುತೀ ॥ ೭ ॥
ವೀಣೆ ಗಾಯನ ಸತ್ಕಲಾ ನಿಪುಣ ಜೋ ಜೈಸೇ
ಸ್ವರಾಂ ನಾದವೀ । ತೈಸೀ ಮದ್ವಚನೀ ಸುರೇಶ ಕವಿತಾ
ನಿರ್ಮೋನಿಯಾ ರಂಜವೀ । ಮಾನಾ ಡೋಲವಿತೀ ಕವೀಶ
ನ ತಶಾ ಶಬ್ದಾನ ಕಾಢೀ ಕಥೀ । ಸರ್ವಾಸೀ ಮನ
ಮೋಕಳೇ ಕರುನಿ ಯಾ ಐಕಾವಿಕೀ ಸಮ್ಮುದಿ ॥ ೮ ॥
ಶತ್ರುಜನೀ ವಿಷಮುಖೀ ಜರಿದಷ್ಟ ಕೇಲಾ । ದೋಷೀ ಅಸೇ
ಜರಿ ಕಲಾಪರಿನಷ್ಟ ಝಾಲಾ । ಚಂದ್ರಾಪರೀ ಸುಮನಸಾ ರಸ
ಮತ್ಕೃತೀಚಾ । ನಿಂದೀಲ ಚೋರವಿರಹೀ ಸಮತೋಚೀ ಸಾಚಾ ॥ ೯ ॥
ದೋಷಾದೇತಿಲ ಕಾಯ ರತ್ನ ಖಚಿಲೇಲ್ಯಾ ದರ್ಪಣೀ
ಬಿಂಬಿತೆ । ಜೈಸಾ ಭಾವ ಮುಖೀ ಪ್ರದರ್ಶಿತ ಕರಾವಾ
ತ್ಯಾ ಪರೀಭಾಸತೇ । ಮೀ ನಿಂದೀನ ತಸಾ ಸುಮಂಜುಳ
ರಸಾ ಪ್ರಾಚೀನ ಕಾವ್ಯಾಚಿಯಾ । ಭಾವೇ ಪೂರ್ವಕರಿಸಿ
ಸದ್ಗುಣಗಣಾ ಗಾಯೀನ ವಂದೋನಿಮಾ ॥ ೧೦ ॥

ಕರ್ನಾಟಜಾಂತ ಕವಿಚೈತ್ರವನಾಸಿ ಚೂತ । ಲಕ್ಷ್ಮೀಶ ನಾಂವ
ಮಜ ಭಾರಜಧ್ಯಾಜ ಗೋತ್ರ । ವಿದ್ವನ್ ಸಭಾವಲಯ ತೋಷವಿಣ್ಯಾ
ನಿಮಿತೆ । ಕೇಲೀ ಕೃತೀ ಸುಜನ ಸೇವುನಿ ಏಕಚಿತ್ತೆ ॥ ೧೧ ॥

ರೂಪಾನೇತ ಸಚಿಸ್ತರೇಬೆ ವರವರ್ಣಾನಿ ಸುಶೋಭಿ ತಸೀ ।
ಹೀ ಪದೋ ಸುಮನೋನುರಾಗಜನಿವ ಪ್ರಾಚುರ್ಯ ಜ್ಯಾಂತೆ
ಅಸೀ ॥ ಕರ್ಣಾನಂದ ಕರೊನಿಯಾ ನವರಸಿ ತುಂಬೋನಿಯಾ
ಸುಸ್ವರೀ । ರ್ಝಂಕಾರೀತಿ ನ ಕಾಮ ಸದ್ಬುಧಸಭಾ ನೀರೆಂದು
ಹಾಚ್ಯಾ ಸರೀ ॥ ೧೨ ॥

ಪ್ರಥಮ ಸಂಧಿ ಸಮಾಪ್ತ

ಶೇ. ರಾ.

ಗ್ರಂಥಋಣ

1 ಶ್ರೀಚುರಮುರಿ ಶೇಷಗಿರಿರಾಯರ 'ಕನ್ನಡ ಶಾಕುಂತಲ' ನಾಲ್ಕನೆಯ ಆವೃತ್ತಿ ಶ್ರೀಮುದವೀಡು ಕೃಷ್ಣರಾಯರು ಬರೆದ ಪ್ರಸ್ತಾವನೆ

2 ಹೊಸಗನ್ನಡ ಸಾಹಿತ್ಯದ ಅರುಣೋದಯ : ಡಾ॥ ಶ್ರೀನಿವಾಸಹಾವನೂರ.

3 ಹೊಸಗನ್ನಡ ಸಾಹಿತ್ಯದ ಉದಯಕಾಲ (ಉತ್ತರ ಕರ್ನಾಟವನ್ನು ಅನುಲಕ್ಷಿಸಿ) ಡಾ॥ ರಾ. ಯ., ಧಾರವಾಡಕರ

4 ಹೊಸಗನ್ನಡದ ಪುಣ್ಯಪುರುಷರು—ಶ್ರೀ ವೆಂಕಟೇಶ ಸಾಂಗಲಿ

5 ಜೈಮಿನಿ ಭಾರತ—ಶ್ರೀ ಬಿ. ಭೀಮಸೇನರಾವ ಇವರಿಂದ ಪರಿಷ್ಕರಿಸಲ್ಪಟ್ಟದ್ದು

6 ವಿವಿಧ ಜ್ಞಾನ ವಿಸ್ತಾರ ಗ್ರಂಥ ಸೂಚಿ—ಕು : ಸೌ : ಪುಷ್ಪಾಭಾವೆ

7 ವಿವಿಧ ಜ್ಞಾನ ವಿಸ್ತಾರ—೧೮೭೨ ಮತ್ತು ೧೮೭೪

ಪೆರಿಯಪುರಾಣ ಹಾಗೂ ನಂಬಿಯಣ್ಣನ ರಗಳೆ

(ಸಂಪುಟ 10 ಸಂಚಿಕೆ 3 ರಿಂದ ಮುಂದುವರಿದಿದೆ.)

ಎಸ್. ವಿದ್ಯಾಶಂಕರ

ತಿರುವೆಣ್ಣೆನಲ್ಲೂರಿನಲ್ಲಿ ನಂಬಿಯಣ್ಣನನ್ನು ಶಿವನು ತೊತ್ತುಗೊಂಡ ಮೇಲೆ ಅವನ ಕೀರ್ತಿ ಎಲ್ಲೆಡೆ ಹರಡಿತೆಂದು ಹರಿಹರ ನಿರೂಪಿಸುವನು. 'ಶರ್ವಕಾರುಣ್ಯ ಸಾಮ್ರಾಜ್ಯ ಸದ್ಭಕ್ತಿ ಸಾರ್ವಭೌಮ'ನಾದ ನಂಬಿಯಣ್ಣನು ತಾನಿನ್ನು ಶಿವನ ತೊತ್ತಾದ ಮೇಲೆ (ಸನಾಥನಾದ ಮೇಲೆ) ತನಗೆ ಲೌಕಿಕ ಪದವಿ ಪ್ರತಿಷ್ಠೆಗಳ ಬಂಧನವೇಕೆ ? ಎಂದು ವಿಚಾರಮಾಡಿ, ತನ್ನ ಮುಂದಿದ್ದ ಚಾತುರಂಗ ಬಲವನ್ನು ನೋಡಿ 'ನಮಗೆಯುಂ ನಿಮಗೆಯುಂ ಸೊಮ್ಮು ಸಂಬಂಧವಿಲ್ಲ ನೀವೆಲ್ಲಂ ನಿಮ್ಮರಸನಲ್ಲಿಗಿರದೆ ಪೋಪುದು' ಎಂದು ಹೇಳಿ ಅವರನ್ನು ಕಳುಹಿಸುವನು. ಮಂತ್ರಿ ತುಂಬುರನು ಮಾತ್ರ 'ಈತಂ ಮಹಾಸಾಮರ್ಥ್ಯಪುರುಷನೀತನಂ ಬಿಡಲಾಗದು' ಎಂದು ಮನದಲ್ಲಿ ತೀರ್ಮಾನಿಸುವನು. ಅವನ ಕೋರಿಕೆಯಂತೆ ನಂಬಿಯು ಅವನನ್ನು ಆಳ್ಗೊಳ್ಳುವನು. ಶಿವನಿಂದ ಪಡೆದ ನಂದಿಯುಂಡಿಗೆಯು ಪೊನ್ನಳೆಲ್ಲವನ್ನು ನಂಬಿ ದಾನಮಾಡುವನು. ನಂಬಿಗೆ ಶಿವನಿಂದ ಪ್ರಾಪ್ತವಾದ ಅಷ್ಟಮಂಗಲಗಳು (ದಂಡಿಗೆ, ಧವಳಚ್ಛತ್ರ, ಚಾಮರ ; ಸೀಗುರಿ, ದರ್ಪಣ, ಹಡಪದ, ಶಂಖ, ಎಪ್ಪತ್ತೆರಡು ಮಂದಿ ನಿಯೋಗಿಗಳು) ; 'ಮಹೇಶ್ವರ ತೇಜಶ್ಯಲಾಕೆ ಬೆಸಲಾದಂತೆ' ಇರುವ ನಂಬಿಯ ದೇಹಕಾಂತಿ ; ನಂಬಿಯನ್ನು ಶಿವ ತೊತ್ತುಗೊಂಡನೆಂಬ ಪ್ರಸಿದ್ಧಿ–ಇವು ಲೋಕವನ್ನೆಲ್ಲಾ ವ್ಯಾಪಿಸಿದವು. ನಂಬಿಯಣ್ಣನನ್ನು ನೋಡಲು ಅರಸುಮಕ್ಕಳು, ಶರಣರು, ಹಿರಿಯರು, ಪರಸಮಯಿಗಳು, ಸಾಮಂತರುಗಳು ಇವರ ಸಮೂಹ ಗುಂಪುಗೂಡಿತು. 'ತಂಬಿರಾಂ ತೋಳ'* ನೆಂಬ ಹಾಗೂ ಇತರ ಕಡುಸಲುಗೆಯ ಬಿರುದಿನ ಘೋಷಣೆಗಳು ದಿಕ್ಕುದಿಕ್ಕಿಗೆ ಹಬ್ಬಿದುವು (ನಂಬಿರ. ಸ್ಥ. 8 ಸಾ. 1–24).

---

*ನಂಬಿಯಣ್ಣನಿಗಿದ್ದ ಬಿರುದುಗಳಲ್ಲಿ ಇದೂ ಒಂದು. 'ತಂಬಿರಾಂತೋಳರ್' ಎಂದರೆ ಆದಿದೇವನಿಗೆ ಸ್ನೇಹಿತರಾದವರು ಎಂದು ತಮಿಳಿನಲ್ಲಿ ಅರ್ಥ. ನಂಬಿಗೆ ಇದ್ದ ಈ ಬಿರುದಿನ ಉಲ್ಲೇಖ ಪೆರಿಯಪುರಾಣದಲ್ಲೂ ಕಂಡುಬರುತ್ತದೆ. ತಿರುವಣ್ಣೆನಲ್ಲೂರಿನಲ್ಲಿ ಶಿವ ನಂಬಿಯಣ್ಣನನ್ನು ಆಳ್ಗೊಂಡ ಮೇಲೆ ನಂಬಿಯು ಕ್ಷೇತ್ರ ಪರ್ಯಟನ ಮಾಡುತ್ತ ತಿರುವಾರೂರಿಗೆ ಬಂದು ಅಲ್ಲಿನ ಶಿವನನ್ನು ಸ್ತುತಿಸಿ, ತ್ಯಾಗೇಶರನನ್ನೂ ಸ್ತುತಿಸಿ ದೇವಮಂದಿರದಿಂದ ಹೊರಬರಲು ನಂಬಿಯನ್ನು ಅಂದು ಮೊದಲು ಶರಣರೆಲ್ಲರೂ 'ತಂಬಿರಾನ್ ತೋಳರ್' ಎಂಬ ಹೆಸರಿನಿಂದ ಕೊಂಡಾಡಿದರೆಂದು ಶೇಕ್ಕಿಳಾರ್ ಹೇಳುವನು (ಪೆ. ಪು. ಪದ್ಯ 2-65)

ಆಕಸ್ಮಿಕವಾಗಿ ನಂಬಿಯಣ್ಣನಿಗೆ ಶಿವಕರುಣವಾದುದನ್ನು ಕೇಳಿ ಅಚ್ಚರಿಗೊಂಡ ನರಸಿಂಗಮೊನೆಯರು ಮಗನಲ್ಲಿಗೆ ಬಂದು ಅವನನ್ನು ಆಲಂಗಿಸದೆ ಅವನಿಗೆ ಅಡ್ಡ ಬಿದ್ದು ಮೇಲೆದ್ದು ನಿಂತು ಹರುಷವಿಕಳನಾಗಿ ಬಾಯಿಗೆ ಬಂದಂತೆ ಅವನನ್ನು ಹೊಗಳಿ ಬಗೆಬಗೆಯಾಗಿ ಕೊಂಡಾಡಿ ಪುರಕ್ಕೆ ಕರೆದುಕೊಂಡು ಬಂದು ಸಿಂಹಾಸನದಲ್ಲಿ ಕೂರಿಸಿ ಅವನ ಶ್ರೀಪಾದವನ್ನು ತೊಳೆದು ಪಾದೋದಕವನ್ನು ಸ್ವೀಕರಿಸಿ ಕಣ್ಣಿಗೆ ಒತ್ತಿಕೊಂಡು ಬಾಪು ಭಾಗ್ಯವೆ ಎಂದು ಕೃತಾರ್ಥನಾಗುವನು. ನಂಬಿಯನ್ನು ಹೆತ್ತ ತಾಯಿ-ತಂದೆಯರು ಮಗನ ಕೀರ್ತಿ ಕೇಳಿ ಪ್ರೀತಿ ಹಾಗೂ ಸಂತೋಷದಿಂದ ಕೂಡಿ ಮಗನಿದ್ದಲ್ಲಿಗೆ ಬಂದು ಜಗವನ್ನು ರಕ್ಷಿಸಲಿದ್ದ 'ಪರಮಾರ್ಥದ ತಿರುಳ ಪುಣ್ಯದಂತಿರ್ದ' ಸೌಂದರನನ್ನು ನೋಡಿ ಹಿಗ್ಗುತ್ತಲಿರಲು, ನರಸಿಂಗಮೊನೆಯರು ಯಸ್ಯಜ್ಞಾನಿಯರ ಮುಖವನ್ನು ನೋಡಿ ಮಹಿಮಾಶಾಲಿ ಯಾದ ಮಗನನ್ನು ಹೆತ್ತ ನಿನ್ನುದರವೆ ಉದರಂ, ಸ್ತನ್ಯಪಾನ ಮಾಡಿಸಿದ ನಿನ್ನ ಮೊಲೆಯೆ ಮೊಲೆ ಎಂದು ಹಾಡಿ ಹೊಗಳುವನು. ಇದುವರೆಗೆ ಮಗನೆಂದು ಬಗೆದ ತಮ್ಮ ತಪ್ಪನ್ನು ಒಪ್ಪ ಮಾಡುವುದೆಂದು ಅರಸನೂ ತಾಯಿ–ತಂದೆಗಳೂ ಬೇಡಿ ಕೊಳ್ಳುವರು. ಅವರನ್ನು ನೋಡಿ ನಂಬಿಯಣ್ಣ 'ಅಂಜದಿರಿ ಎನ್ನ ಪೆತ್ತ ನಿಮಗಂ ಸಲಹಿದ ನೃಪಗಂ ಸಂಸಾರಭಯುವಿಲ್ಲ ಶಿವನ ಕರುಣಂ ನೆಲೆಗೊಂಬುದು' ಎಂದು ಕರುಣಿಸಿ, ಇನ್ನು ಮುಂದೆ ನನಗೆ ಪಾರ್ವತಿಯೆ ತಾಯಿ ವಿರೂಪಾಕ್ಷನೆ ತಂದೆ. ನಾನಿನ್ನು ಈ ಲೋಕಕ್ಕೆ ಪರವಶನಲ್ಲ, ಹರವಶ. ಶಿವನು ಎಲ್ಲಿರಿಸುವನೊ ಅಲ್ಲಿ ನಾನಿರಬೇಕು. ನಿಮಗೆ ಇನ್ನು ಮುಂದೆ ಶಿವನೂ ಪಂಚಾಕ್ಷರಿಮಂತ್ರವೂ, ಭಕ್ತರೂ ಪರಮಬಂಧು ಗಳು, ಹೆಚ್ಚಾಗಿ ಆಪ್ತರು ಎಂದು ಇದ್ದುದಿದ್ದಂತೆ ಉಪದೇಶ ಮಾಡಿ ಪುರದಿಂದ ಜಯಘೋಷದ ನಡುವೆ ಹೊರಬರುವನು (ನಂಬಿರ. ಸ್ಥ. 8 ಸಾ. 25_61).

ಹರಿಹರನಲ್ಲಿ ಬರುವ ಮೇಲಣ ಕಥಾಭಾಗ, ಪೆರಿಯಪುರಾಣದಲ್ಲಿ ಬರುವು ದಿಲ್ಲ. ಅವೆಲ್ಲವೂ ಹರಿಹರನ ಕಲ್ಪನೆ ಆದರೂ ಹರಿಹರನಲ್ಲಿ ಈ ಭಾಗ ಹೆಚ್ಚು ವಾಸ್ತವವಾಗಿದೆ. ಶಿವನ ತೊತ್ತಾದ ಮೇಲೆ ಲೌಕಿಕ ಸಂಬಂಧದ ಕಟ್ಟುಗಳನ್ನೆಲ್ಲಾ ಕಳಚಿಕೊಂಡು ಮಮಕಾರ ರಹಿತವಾಗಬೇಕು. ಆದ ಕಾರಣ ನಂಬಿಯಣ್ಣ ಸಾಮ್ರಾ ಜ್ಯದ, ತಂದೆ_ತಾಯಿ, ಬಂಧು–ಬಳಗದ ಮೋಹವನ್ನು ಕಡಿದುಕೊಂಡು ಲೋಕ ಸಂಚಾರಕ್ಕೆ ಹೊರಡುವನು. ಪೆರಿಯ ಪುರಾಣದಲ್ಲಿ ನಂಬಿಯು ಶಿವನ ತೊತ್ತಾದ ಮೇಲೆ ಆದಿಶೈವರು ವಿಧಿಸಿದ ಸುಂದರ ಲಾಂಛನಗಳನ್ನು ಧರಿಸಿ, ಚಂದನ, ಮಣಿ ಮಾಲೆ, ಪೂಮಾಲೆಗಳಿಂದ ಅಲಂಕೃತನಾಗಿ, ಮೈಮೇಲಿನ ಆಭರಣಗಳಿಂದ ಶೋಭಿ ಸುವವನಾದನು (ಪೆ.ಪು ಪದ್ಯ 266–267).

ಹರಿಹರನ ನಿರೂಪಣೆಯಂತೆ ನಂಬಿಯಣ್ಣ ತಿರುನಾವಲೂರನ್ನು ಬಿಟ್ಟು ಹೊರಡುವಾಗ ಅವನನ್ನು ಪೆರುಮಳಲೆಯ ಕುಟುಂಬರು ಬಂದು ಕಾಣುವನು.

ನಂಬಿಯಣ್ಣನ ಪ್ರಸಿದ್ಧಿಯನ್ನು ಕೇಳಿ ಅವನ ಸೇವೆ ಮಾಡುವ ಉದ್ದೇಶದಿಂದ ಪೆರುಮಳಲೆಯ ಕುಜುಂಬರು ಅಲ್ಲಿಗೆ ಬರುವನು. ತನ್ನ ಮುಂದೆ ಗುಡಿಗಟ್ಟಿ ಕಣಿಯುತ್ತಿದ್ದ ಅವನನ್ನು ನಂಬಿಯಣ್ಣ ಮಾತನಾಡಿಸುವನು. ಕೇಳಿಯೂ ಕೇಳದಂತೆ ಕುಜುಂಬರು ಮತ್ತೆ ಮತ್ತೆ ಸುತ್ತಿ ಕುಣಿಯುವನು. ಅವನ ಸಮೀಪ ಬಂದ ನಂಬಿಯು 'ಎಲೆಯಯ್ಯಾ ನೀವಾರ್ ನಿಮ್ಮ ಪೆಸರೇನು?' ಎಂದು ವಿಚಾರಿಸುವನು. ನಾನು ನಂಬಿಯಣ್ಣನ ತೊತ್ತಿನ ತೊತ್ತು, ಬಂಟರ ಬಂಟ. ನಿಮ್ಮ ಮುಂದೆ ಗುಡಿಗಟ್ಟಿ ಬರುವುದೇ ನನ್ನ ನೇಮ ಎಂದು ಕುಜುಂಬರು ಉತ್ತರಿಸುವನು. ನಂಬಿಯಣ್ಣ ಅವನ ಸೇವೆಯನ್ನೂ ಸ್ವಿಕರಿಸುವನು. ನಂಬಿ ಹೋದಲ್ಲೆಲ್ಲಾ ಅವನ ಮುಂದೆ ಧ್ವಜ ಹಿಡಿದು ಕುಣಿಕುಣಿಯುತ್ತ ಕುಜುಂಬರು ನಡೆಯುವನು. ಕುಜುಂಬರು ನಂಬಿಯಣ್ಣನಲ್ಲಿಗೆ ಬರುವ ಪ್ರಸಂಗ 'ನಂಬಿಯಣ್ಣನ ರಗಳೆ' ಯಲ್ಲಿ ಆರೇಳು ಸಾಲುಗಳಲ್ಲಿ ಬರುತ್ತದಷ್ಟೆ. ಹೆಚ್ಚಿನ ವಿವರಗಳು ಅಲ್ಲಿ ಸಿಗುವುದಿಲ್ಲ. ಹರಿಹರನ ಇವನ ಬಗೆಗೆ ಪ್ರತ್ಯೇಕವಾಗಿ ರಗಳೆಯೊಂದನ್ನು ಬರೆದಿರಬೇಕು*. ಪ್ರತ್ಯೇಕವಾಗಿ ರಗಳೆಯನ್ನು ಬರೆದಿರುವ ಭಕ್ತರ ಬಗೆಗೆ 'ನಂಬಿಯಣ್ಣನ ರಗಳೆ'ಯಲ್ಲಿ ಸೂಕ್ಷ್ಮವಾದ ಪ್ರಸ್ತಾಪ ಬರುತ್ತದೆ, ಅಲ್ಲಿ ವಿವರಗಳು ಬರುವುದಿಲ್ಲ. ಇದು ಅವನು ಅನುಸರಿಸಿರುವ ಕ್ರಮ. ಪ್ರತ್ಯೇಕವಾಗಿ ರಗಳೆಯೊಂದನ್ನು ಬರೆದಿರುವಾಗ ಆ ಭಕ್ತನ ವಿವರಗಳು 'ನಂಬಿಯಣ್ಣನ ರಗಳೆ'ಯಲ್ಲಿ ಮತ್ತೆ ಬರಬಾರದೆನ್ನುವ 'ಔಚಿತ್ಯ ಪ್ರಜ್ಞೆ' ಯಿಂದಾಗಿ ಆ ವಿವರಗಳು ಸಂಕ್ಷಿಪ್ತತೆಯನ್ನು 'ನಂಬಿಯಣ್ಣನ ರಗಳೆ'ಯಲ್ಲಿ ಪಡೆದುಕೊಂಡಿವೆ. ಈ ಮಾತಿಗೆ ನಿದರ್ಶನವಾಗಿ ಕಾರಿಕಾಲಮ್ಮೆ, ಕಲಿಕಾಮದೇವ, ಸೋಮಾಸಿಮಾರ, ಜಡೆಯ ನಾಯನಾರು–ಯಸ್ಯಜ್ಞಾನಿದೇವಿ ಈ ಭಕ್ತರನ್ನು ಕುರಿತ ಪ್ರತ್ಯೇಕವಾದ ರಗಳೆಗಳನ್ನು ಹೆಸರಿಸಬಹುದು.

ಪೆರಿಯಪುರಾಣದ ಪೆರುಮಿಟಲೈಕ್ಕುಜುಪ್ಪ ನಾಯನಾರ್ ಪುರಾಣಮ್ ನಲ್ಲಿ ಹನ್ನೊಂದು ಪದ್ಯಗಳಲ್ಲಿ ಈ ಭಕ್ತನ ಕಥೆ ಬಂದಿದೆ. ಅಲ್ಲಿ ಬರುವ ಕಥೆಯನ್ನು

* ಪ್ರಕಟವಾಗಿರುವ ಹರಿಹರನ ಪುರಾತನರ ರಗಳೆಗಳಲ್ಲಿ 'ಪೆರುಮಳಲೆಯ ಕುಜುಂಬರ ರಗಳೆ' ಬೆಳಕು ಕಂಡಿಲ್ಲ. ಡಾ॥ ಹಿರೇಮಲ್ಲೂರು ಈಶ್ವರನ್‌ರವರು ಕೊಡುವ ಹರಿಹರ ವಿರಚಿತ ಪುರಾತನರ ರಗಳೆಗಳ ಪಟ್ಟಿಯಲ್ಲಿ ಪೆರುಮಳಲೆಯ ಕುಜುಂಬರ ಹೆಸರೂ ಇದೆ (ನೋಡಿ : ಹರಿಹರನ ಕೃತಿಗಳು—ಒಂದು ಸಂಖ್ಯಾ ನಿರ್ಣಯ, ಪು. 440). ಎಚ್. ದೇವೀರಪ್ಪನವರು ಹರಿಹರನು ರಚಿಸಿರಬಹುದಾದ ಪುರಾತನರ ರಗಳೆಗಳ ಪಟ್ಟಿಯಲ್ಲಿ ಪೆರುಮಳಲೆಯ ಕುಜುಂಬರ ಹೆಸರು ಬರುವುದಿಲ್ಲ (ನೋಡಿ : ಶರಣ ಚರಿತ ಮಾನಸ, ಪೀಠಿಕೆ, ಪು. xxx—xxxi). ಎಚ್. ದೇವೀರಪ್ಪನವರ ತೀರ್ಮಾನಿಸಿರುವಂತೆ ಪೆರುಮಳಲೆಯ ಕುಜುಂಬರ ರಗಳೆ ಹರಿಹರ ಕೃತವಲ್ಲ, ಹರಿಹರೇತರರಿಂದ ರಚಿತವಾದುದು. ಅವರು ಕೊಡುವ ಹರಿಹರೇತರಕೃತ ವಿರೂಪಾಕ್ಷಾಂಕಿತ ರಗಳೆಗಳ ಪಟ್ಟಿಯಲ್ಲಿ ಪೆರುಮಳಲೆಯ ಕುಜುಂಬರ ಹೆಸರು ಬಂದಿದೆ (ನೋಡಿ : ಶಿವಶರಣ ಸಂಪುಟ, ಪೀಠಿಕೆ, ಪು. 11).

ಹೀಗೆ ಸಂಕ್ಷೇಪವಾಗಿ ಹೇಳಬಹುದು : ಮಿಳಲೆ ನಾಡಿನಲ್ಲಿ ಪೆರುಮಿಳಲೆ ಎಂಬ ಊರು. ಈ ಊರಿಗೆ ಮಿಳಲೈ ಕುರುಂಬನಾರ್ ಎಂಬವರು ಅಧಿಪರು. ಅವರು ಶಿವ ಭಕ್ತರಿಗೆ ಬೇಕು ಬೇಕಾದ ಸೇವೆಯನ್ನೆಲ್ಲಾ ಯೋಚಿಸಿ ತಕ್ಕಂತೆ ಮಾಡುತ್ತಿದ್ದರು. ಅವರು ಭಕ್ತರನ್ನು ತಾವಾಗಿಯೇ ಸ್ವಾಗತಿಸಿ ಅತಿಥಿಗಳಾಗಿ ಸ್ವೀಕರಿಸಿ ಅತಿಥಿಗಳ ಮನಸ್ಸಿನ ಆಸೆಯನ್ನು ತಿಳಿದು ಸೇವೆಯನ್ನು ಮಾಡುತ್ತಿದ್ದರು. ಶಿವ ಭಕ್ತರಿಗೆ ಪ್ರೀತಿಯಿಂದ ಊಣಬಡಿಸುತ್ತಿದ್ದರು ; ಕೈತುಂಬ ಉಡುಗೊರೆಗಳನ್ನು ಕೊಡುತ್ತಿದ್ದರು. ಈ ನಾಯನಾರರು ನಂಬಿಯಾರೂರನ ಪಾದಕಮಲಗಳಿಗೆ ನಮಿಸಿ, ಬಾಯಿಂದ ಸ್ತುತಿಸಿ ಮನದಲ್ಲಿ ಸ್ಮರಿಸುತ್ತಿದ್ದರು. ಹೀಗೆ ತ್ರಿಕರಣಗಳಿಂದಲೂ ಆ ಹಿರಿಯ ಭಕ್ತರನ್ನು ಸೇವಿಸುತ್ತಿದ್ದರು. ನಿತ್ಯವೂ ನಂಬಿಯಾರೂರನ ದಿವ್ಯ ನಾಮಗಳನ್ನು ಶಿರಸಾವಹಿಸಿ ಸ್ತುತಿಸುವ ಕಾರಣದಿಂದ ಈ ಭಕ್ತರಿಗೆ ಅಣಿಮಾದಿ ಅಷ್ಟಸಿದ್ಧಿಗಳು ಕೈವಶವಾದವು. ಸದಾಚಾರ ಪ್ರವರ್ತಕರಾಗಿ ಈ ನಾಯನ್ಮಾರರು ಬಾಳುತ್ತಿರಲು, ಅತ್ತ ನಂಬಿಯಾರೂರರು ಪವಿತ್ರ ಕ್ಷೇತ್ರಗಳಿಗೆಲ್ಲಾ ಭೇಟಿಕೊಟ್ಟು ಕೊಡುಂಗೊಳೂರನ್ನು ಬಂದು ತಲುಪಿದರು. ತಿರುವಂಜೈಕ್ಕಳದಲ್ಲಿರುವ ಶಿವನನ್ನು ನೋಡಿ ಬರುತ್ತಿದ್ದ ನಂಬಿಯಾರೂರರು ನೂತನ ತಮಿಳು ಮಾಲೆಗಳಾಗಿ ತೇವಾರ ಹಾಡುಗಳನ್ನು ಹಾಡಿ ಅನುಗ್ರಹಿಸುತ್ತಿದ್ದರು. ಶಿವನ ಅನುಗ್ರಹದಿಂದ ಅವರು ಕೈಲಾಸವನ್ನು ಸೇರಿ ಅಲ್ಲಿನ ಬಾಳುವೆಯನ್ನು ಪಡೆಯಬೇಕೆಂದು ಮನದಲ್ಲಿ ಸಂಕಲ್ಪಿಸಿಕೊಂಡರು. ಈ ವೃತ್ತಾಂತವನ್ನು ಅಂತರ್‌ದೃಷ್ಟಿಯಿಂದ ಪೆರುಮಿರಲೆ ಕುರುಂಬ ನಾಯನಾರರು ತಿಳಿದುಕೊಂಡರು. ನಂಬಿಯಾರೂರರು ಕೈಲಾಸವನ್ನು ನಾಳೆ ಹೋಗಲಿರುವರೆಂಬುದನ್ನು ತಿಳಿದ ಈ ನಾಯನರು ಕೈಲಾಸಕ್ಕೆ ನಂಬಿಯಾರೂರರು ಹೋದರೆ ನಾನು ದೃಷ್ಟಿ ಕಳೆದುಕೊಂಡವನಂತಾಗುವೆನು, ನಂಬಿಯಾರೂರರನ್ನು ಬಿಟ್ಟು ನಾನು ಈ ಲೋಕದಲ್ಲಿ ಜೀವಿಸಲಾರೆನು ಎಂದು ಮನದಲ್ಲಿ ನೆನೆದರು. ಯೋಗಮಾರ್ಗವಾಗಿ ಶಿವನ ಶ್ರೀಪಾದವನ್ನು ಇಂದೇ ಹೋಗಿ ಸೇರುವೆನೆಂದು ನಿಶ್ಚಯಿಸಿದ ಕುರುಂಬ ನಾಯನಾರರು ಬುದ್ಧಿ, ಅಹಂಕಾರ, ಮನ, ಚಿತ್ತಗಳೆಂಬ ಚತುಕರಣಗಳನ್ನು ಒಂದಾಗಿಸಿ ಪರಿಶುದ್ಧ ಜ್ಞಾನನೆಲೆಯಲ್ಲಿದ್ದು, ಸುಷುಮ್ನಾನಾಡಿ ಮಾರ್ಗವಾಗಿ ಪ್ರಾಣವಾಯುವನ್ನು ಮೇಲೆ ಕೊಂಡು ಹೋದರು. ಆ ಪ್ರಾಣವಾಯುವು ಬ್ರಹ್ಮರಂಧ್ರ ದ್ವಾರದ, ಮೂಲಕ ಹೋಗಲು ಪಂಚಾಕ್ಷರಿ ಮಂತ್ರವನ್ನು ಉಚ್ಚರಿಸಿದರು. ಬ್ರಹ್ಮರಂಧ್ರದ ಬಾಗಿಲು ತೆರೆಯಿತು. ಆ ದ್ವಾರದ ಮೂಲಕ ಕುರುಂಬ ನಾಯನಾರರು ಕೈಲಾಸವನ್ನು ನಂಬಿಯಾರೂರಿಗೆ ಮೊದಲೇ ಸೇರಿದರು (ಪೆ. ಪು ಪದ್ಯ 1706–1716).

ಹರಿಹರನ ಪ್ರಕಾರ, ಪೆರುಮಿಳಲೆ ಕುರುಂಬರು ನಂಬಿಯಣ್ಣನ ಮಹಿಮೆಯನ್ನು ಕೇಳಿ ಅವನಿರುವೆಡೆಗೆ ಬಂದು ಅವನ ಸೇವಕನಾಗಿ, ಅವನು ಹೋದೆಡೆ

ತಾನೂ ಹೋಗಿ, ಅವನ ಮುಂದೆ ಧ್ವಜವಿಡಿದು ಕುಣಿಯುತ್ತ ಕೊನೆಗೆ ನಂಬಿಯಣ್ಣ ಕೈಲಾಸಕ್ಕೆ ಹೋಗಲು ಅವನ ಜೊತೆ ತಾನೂ ಅಲ್ಲಿಗೆ ಹೋಗುವನು. ತನ್ನ ನಚ್ಚಿನ ಬಂಟನಾದ ಇವನಿಗೆ ಗಣಪದವಿಯನ್ನು ಶಿವನಿಂದ ನಂಬಿಯು ಕೊಡಿಸುವನು. ಶೇಕ್ಕಿಳಾರನ ಪ್ರಕಾರ, ಪೆರುಮಿಳಲೆಯ ಕುರುಂಬರು ನಂಬಿಯಾರೂರನ ಪರಮ ಭಕ್ತನು. ಅವನ ನಾಮವನ್ನು ನಿತ್ಯವೂ ಸ್ಮರಿಸಿ ಸ್ತುತಿಸಿ ಅಣಿಮಾದಿ ಅಷ್ಟ ಸಿದ್ಧಿಗಳನ್ನು ಇವನು ಪಡೆಯುವನು. ತಾನಿರುವೆಡೆಯಲ್ಲೇ ಇದ್ದು ನಿಯಮ ನಿಷ್ಠೆಯಿಂದಲೂ ಯೋಗಾಭ್ಯಾಸದ ಬಲದಿಂದಲೂ-ನಂಬಿಯಾರನನ್ನು ಅಗಲಿ ಇರಲಾರದೆ –ಅವನು ಕೈಲಾಸಕ್ಕೆ ಹೋಗುವುದನ್ನು ಅಂತರ್‌ಜ್ಞಾನದಿಂದ ತಿಳಿದು ಅವನಿಗಿಂತ ಮೊದಲೇ ಕೈಲಾಸವನ್ನು ಸೇರುವನು. ಹರಿಹರ ನಂಬಿಯಣ್ಣನ ಜೊತೆ ಪೆರುಮಿಳಲೆ ಕುರುಂಬರು ಇದ್ದನೆಂದು ಹೇಳಿದರೆ, ಶೇಕ್ಕಿಳಾರ್ ಇದಕ್ಕೆ ವಿರುದ್ಧವಾಗಿ ಇವರು ಜೊತೆಯಲ್ಲಿ ಇರಲೇ ಇಲ್ಲ, ಪರಸ್ಪರ ಭೇಟಿಮಾಡಿರಲೇ ಇಲ್ಲವೆನ್ನುವಂತೆ ನಿರೂಪಣೆ ಮಾಡಿರುವನು. (ಹರಿಹರ ಪೆರಿಯಪುರಾಣವನ್ನು ಅನುಸರಿಸಿಲ್ಲವೆಂಬುದಕ್ಕೆ ಪೆರುಮಿಳಲೆ ಕುರುಂಬರ ಕಥೆ ಒಳ್ಳೆಯ ಆಧಾರವಾಗುತ್ತದೆ.)

ರಗಳೆಯಲ್ಲಿ ತಿರುನಾವಲೂರನ್ನು ನಂಬಿಯಣ್ಣನು ಬಿಟ್ಟು ಕ್ಷೇತ್ರ ಸಂಚಾರಕ್ಕೆ ಹೊರಟು ಗ್ರಾಮವೆಂಬ ಶಿವಪುರಕ್ಕೆ ಬರುವನು. ತನ್ನ ಪ್ರೀತಿಯ ಕುವರನ ಆಗಮನವನ್ನು ಚೊಕ್ಕಣಂ ಕೊಡುತ್ತ ನಾಯನಾರನು (=ಶಿವ) ಮೊದಲೇ ಅಲ್ಲಿನ ಮಾಹೇಶ್ವರರೆಲ್ಲರಿಗೆ ಕನಸಿನಲ್ಲಿ ಕಾಣಿಸಿಕೊಂಡು ಅವನನ್ನು ಎಲ್ಲರೂ ಇದಿರುಗೊಳ್ಳುವಂತೆ ತಿಳಿಸುವನು (ನಂಬಿರ ಸ್ಥಳ ಸಾ. 69-71). ಮೃದಂಗ, ತೂರ್ಯತ್ರಯಗಳನ್ನು ನುಡಿಸುವುದರಲ್ಲಿ ಪ್ರವೀಣರಾದ ನಾನಾ ವಿಳಾಸಿನೀ ಜನರಿಂದ ಕೂಡಿ ಇದಿರುಗೊಂಡು ನಂಬಿಯನ್ನು ಕರೆತರಲಾಯಿತು. ಅಲ್ಲಿನ ದೇವಾಲಯಕ್ಕೆ ಬಂದು ಅಲ್ಲಿನ ಶಿವನಿಂದ ಪಡಿಹೊನ್ನನ್ನು ನಂಬಿಯು ಪಡೆಯುವನು, ಅಲ್ಲಿಂದ ಮುಂದೆ, ನಂಬಿಯು ಹಲವು ಶಿವಪುರಗಳನ್ನು ಹೊಕ್ಕು ಅಲ್ಲಿಯ ಶಿವನನ್ನು ಸಲುಗೆಯಿಂದ ಕಾಡಿ ಬೇಡಿ ಪ್ರೀತಿಯಿಂದ ಹಾಡಿ ಪಡಿಹೊನ್ನನ್ನು ಪಡೆದುಕೊಂಡು ಶಿವನ ಸಜ್ಜೆಯಂತಿರುವ ತಿರುವಾರೂರಿಗೆ ಬರುವನು. (ಹರಿಹರ ನಂಬಿಯಣ್ಣನು ಸಂದರ್ಶಿಸಿದ ಸ್ಥಳಗಳ ವಿವರಗಳೇನನ್ನೂ ಕೊಡುವುದಿಲ್ಲ.)

ಪೆರಿಯಾಪುರಾಣದಲ್ಲಿ ನಂಬಿಯು ತಿರುವಣ್ಣೈನಲ್ಲೂರಿನಲ್ಲಿ ಶಿವನಿಗೆ ತೊತ್ತಾದ ಮೇಲೆ ಪವಿತ್ರ ಕ್ಷೇತ್ರಗಳ ದರ್ಶನ ಮಾಡುತ್ತ ಬರುವನು. ಮೊದಲಿಗೆ, ತಿರುವಣ್ಣೈನಲ್ಲೂರಿನಿಂದ ತಿರುನಾವಲೂರಿಗೆ ಬಂದ ನಂಬಿಯು ಅಲ್ಲಿನ ಶಿವನನ್ನು ನಮಿಸಿ ತಿರುಪ್ಪದಿಕವನ್ನು ಹಾಡುವನು (ಇಲ್ಲಿ ಹೆತ್ತವರು, ಪೋಷಿಸಿದವರು ನಂಬಿಯನ್ನು ಕಾಣಲು ಬರುವುದಿಲ್ಲ.) ತಿರುತ್ತುರೈಯೂರು, ಪುಲಿಯೂರು, ತಿರುವದಿಕೈ

ವೀರಾಟ್ಟಾನ,* ತಿರುತ್ತಿನೈನಗರ, ಚಿದಂಬರ, ಕಳುಮಲಂ (ಈ ಊರಿನ ಮೇರೆಯ ಹೊರಗೆ ನಿಂತು ನಮಿಸಿ ಆ ಸ್ಥಳವನ್ನು ನಂಬಿಯು ಪ್ರದಕ್ಷಿಣ ಬರುವಾಗ ಉಮಾದೇವಿಯೊಡನೆ ಶಿವನು ನಂಬಿಗೆ ದರ್ಶನವಿತ್ತು ಅನುಗ್ರಹಿಸುವನು.). ತಿರುಕೋಲಕ್ಕಾ, ತಿರುಪ್ಪುಣ್‌ಕೂರು, ತಿರುಮಯಿಲಾಡುತುರೈ, ತಿರುವಂಬರ್ ಮಾಗಾಳ, ತಿರುಪ್ಪುಗಲೂರ್,–ಇವೇ ಆದಿಯಾದ ಊರುಗಳನ್ನು ಸಂದರ್ಶಿಸಿದ ನಂಬಿಯು ತಿರುವಾರೂರಿಗೆ ಬರುವನು. ಇಲ್ಲಿನ ಭಕ್ತರುಗಳಿಗೆ ಶಿವನು ಕನಸಿನಲ್ಲಿ ಕಾಣಿಸಿಕೊಂಡು ನಂಬಿಯ ಆಗಮನ ವಾರ್ತೆಯನ್ನು ತಿಳಿಸಿ ಅವನನ್ನು ಸ್ವಾಗತಿಸುವಂತೆ ಹೇಳುವನು. ಭಕ್ತರು ಪಟ್ಟಣವನ್ನು ಅಲಂಕರಿಸಿ ವೈಭವದಿಂದ ನಂಬಿಯನ್ನು ಸ್ವಾಗತಿಸುವರು. (ಪೆ. ಪು ಪದ್ಯ 256-259). ನಂಬಿಯು ದೇವಾಲಯದ ಬಳಿಗೆ ಬರುತ್ತ ಗಾಂಧಾರ ರಾಗದಲ್ಲಿ ಸ್ತೋತ್ರವೊಂದನ್ನು ಹಾಡುವನು. ಗರ್ಭಗೃಹದಲ್ಲಿನ ಶಿವನಿಗೆ ನಮಿಸಿ ಮನದಲ್ಲಾದ ಆತ್ಮಾನಂದದಿಂದ ಮಂಜುಲವಾದ ತೇವಾರವನ್ನು ಹಾಡುವನು. ಶಿವನು ನಂಬಿಯ ಭಕ್ತಿಗೆ ಮೆಚ್ಚಿ ತುಂಬು ಕೃಪೆಯಿಂದ 'ನಮ್ಮನ್ನು ಹಿಂದೆಯೇ ನಿನಗೆ ಅನುಗ್ರಹಿಸುವೆವು. ನಾವು ಹಿಂದೆಯೇ ನಿನ್ನನ್ನು ತಡೆದು ಆಳಾಗಿಸಿಕೊಂಡ ಆ ಮದುವೆಯ ಸಂದರ್ಭದಲ್ಲಿ ನೀನು ತಳೆದಿದ್ದ ಮದುವೆಯ ಅಲಂಕಾರದಲ್ಲಿಯೇ ಯಾವಾಗಲೂ ಇದ್ದವನಾಗಿ ನಿನ್ನ ಆಶೆಯು ತೀರುವಂತೆ ಈ ಭೂಲೋಕದಲ್ಲಿ ವಿಹರಿಸುವವನಾಗು' ಎಂಬ ವಾಣಿಯು ನಂಬಿಯಾರೂರನಿಗೆ ಕೇಳಿಬರುವುದು (ಪೆ.ಪು ಪದ್ಯ 262-263). ಹರಿಹರನಲ್ಲಿ ಮೇಲಣ ಯಾವ ವಿವರಗಳೂ ದೊರೆಯುವುದಿಲ್ಲ. ನಂಬಿಯ ಮದುಮಗನಂತೆ ತನ್ನ ಜೀವನಪರ್ಯಂತ ತಿರುವಾರೂರಿನ ಶಿವ ಆಶೀರ್ವದಿಸುವ ಪ್ರಸಂಗ ಪೆರಿಯಪುರಾಣದಲ್ಲಿ ಮಾತ್ರ ಬರುತ್ತದೆ.

---

* ಇಲ್ಲಿ ನಡೆದ ಘಟನೆಯೊಂದನ್ನು ಶೇಕ್ಕಿಳಾರ್ ಹೇಳಿರುವನು. ಇಲ್ಲಿನ ಮಠವೊಂದರಲ್ಲಿ ನಂಬಿಯು ಮಲಗಿರಲು ತಿರುವಿಟ್ಟಾನದ ಶಿವನು ಮುದಿಬ್ರಾಹ್ಮಣನ ವೇಷವನ್ನು ಧರಿಸಿ ಬಂದು ಯಾರೂ ತಿಳಿದಂತೆ ಆ ಮಠವನ್ನು ಪ್ರವೇಶಿಸಿ ಮಲರಮಾಲೆಗಳನ್ನು ಸುತ್ತಿದ್ದ ನಂಬಿಯಾರೂರನ ತಲೆಯ ಮೇಲೆ ತನ್ನ ಪಾದಗಳನ್ನಿಟ್ಟು ತಾನೂ ನಿದ್ರಿಸುವಂತೆ ನಟಿಸಿದನು. ಎಚ್ಚರಗೊಂಡ ನಂಬಿಯು 'ವೇದಿಯರೇ, ನಿಮ್ಮ ಪಾದಗಳನ್ನು ನನ್ನ ತಲೆಯ ಮೇಲೆ ಇಟ್ಟುದೇಕೆ ?' ಎಂದು ಕೇಳುವನು. ಅದಕ್ಕೆ ಹುಸಿವೇಷದ ಶಿವನು 'ನೀನು ನಿದ್ರಿಸಿದ ದಿಕ್ಕನ್ನು ತಿಳಿಯದೆ ಕಾಲಿಟ್ಟೆನು. ಈ ಪ್ರಮಾದವು ನನ್ನ ಮುಪ್ಪಿನ ಪರಿಣಾಮ' ಎಂದು ಹೇಳುವನು. ನಂಬಿಯು ನಂತರ ಬೇರೆ ದಿಕ್ಕಿಗೆ ತನ್ನ ತಲೆಯನಿಟ್ಟು ಮಲಗುವನು. ಅಲ್ಲಿಯೂ ಶಿವನು ತನ್ನ ಪಾದಗಳನ್ನಿಡಲು, ಆಗ ನಂಬಿಯು ಇಲ್ಲಿಯೂ ನನ್ನನ್ನು ಹಲವು ಸಲ ತುಳಿದೆ, ನೀನು ಯಾರು ? ಎಂದು ಕೇಳುವನು. ಹುಸಿವೇಷದ ಶಿವನು 'ನಮ್ಮನ್ನು ನೀನು ತಿಳಿಯೆಯೋ ?' ಎಂದು ಹೇಳಿ ಅಂತರ್ಧಾನನಾಗುವನು. ಜ್ಞಾನೋದಯವಾದ ನಂಬಿಯು ವೀರಟ್ಟೇಶ್ವರನನ್ನು ನಮಿಸಿ, 'ತಮ್ಮನ್ನು ತಿಳಿಯದವರೂ ಇದ್ದಾರೆಯೇ ? ಎಂದು ಪ್ರಾರಂಭವಾಗುವ ಹಾಡನ್ನು ಹಾಡುವನು (ಪೆ. ಪು ಪದ್ಯ 220–224).

ರಗಳೆಯ ಒಂಬತ್ತನೆಯ ಸ್ಥಲದ ಪೂರ್ವಾರ್ಧ ತಿರುವಾರೂರ ಸಿರಿಮೆಯ ವರ್ಣನೆಗೆ ಮೀಸಲಾಗಿದೆ. ತುಂಬುರಸು ಶಂಭು ನೆಲಸಿರುವ ತಿರುವಾರೂರಿನ ಪ್ರಾಕೃತಿಕ ರಮ್ಯತೆಯನ್ನು ತನ್ನ ಒಡೆಯನಾದ ನಂಬಿಗೆ ತಿಳಿಸುತ್ತಾ ಹೋಗುವನು. ಕವಿಸಹಜ ಹೃದಯದಿಂದ ಬಂದ ಈ ವರ್ಣನೆ ಹಿತವಾಗಿದೆ. ಇಲ್ಲೂ ಶಿವನು ತನ್ನ ಭಕ್ತರನ್ನು ಕರೆದು ತನ್ನ ಪುತ್ರನ ಆಗಮನ ವಾರ್ತೆಯನ್ನು ತಿಳಿಸಿ, ಅವನನ್ನು ವೈಭವದಿಂದ ಇದಿರುಗೊಳ್ಳುವಂತೆ ಹೇಳುವನು ಅಂತೆಯೇ ಭಕ್ತರು ಗುಂಪು ಗೂಡಿ ಒಂದು ಉತ್ಸವದಿಂದ ಇದಿರುಗೊಂಡು ನಂಬಿಯನ್ನು ಕರೆದುತರುವರು. ಪುರವೀದಿಯಲ್ಲಿ ಬರುತ್ತಿರುವಾಗ ನಂಬಿಯು ಉಪ್ಪರಿಗೆಯಲ್ಲಿ ಈ ಸಂಭ್ರಮ ಸಡಗರಗಳನ್ನು ಕುತೂಹಲಾಸಕ್ತಿಯಿಂದ ನೋಡುತ್ತಿದ್ದ ಪರವೆಯನ್ನು ಕಾಣುವನು. ಪರವೆಯ ನೋಟವೂ ಇವನಲ್ಲಿ ನಟ್ಟಿತು. ಇಬ್ಬರ ಮನಸ್ಸನ್ನೂ ಕೂಡಿಸುವಂತೆ ಮದನ ತನ್ನ ಬಾಣ ಪ್ರಯೋಗ ಮಾಡುವನು. ಮದನನ ಅರಳುಗೋಲಿಗೆ ಒಳಗೊಳಗೆ ನೋವುತ್ತ ಹೇಗೋ ಸಮಾಧಾನ ತಂದುಕೊಂಡು ಪರವೆಯ ಮೇಲಣ ನೋಟವನ್ನು ತೆಗೆಯುತ್ತ ಇಂತಹ ಸುಂದರ ರೂಪು ಜಗದೊಳುಂಟೆ? ಎನ್ನುತ್ತ ಶಿವನಿಳಯವನ್ನೂ ನಂಬಿಯಣ್ಣ ಪ್ರವೇಶಿಸುವನು. ತಿರುವಾರೂರ ಒಡೆಯನನ್ನು ಸ್ತುತಿಸಿ ಪಡಿಪೊರಿ ಗಳನ್ನು ಪ್ರಸಾದವನ್ನೂ ಸುವಾಸನಾದ್ರವ್ಯಗಳನ್ನೂ ಸ್ವೀಕರಿಸಿ ರಂಗಮಂಟಪದ ನಡುವೆ ಒಡ್ಡೋಲಗಗೊಟ್ಟು ಮನದಲ್ಲಿ ಲಿಂಗ ಸಿಂಗಾರವನ್ನು ನೆನೆಯುತ್ತ ಕವಿಗಮಕಿಗಳ ನವರಸಯುಕ್ತವಾದ ಗಾನವನ್ನು ಕೇಳುತ್ತ, ನರ್ತಕರ ಮನೋಹರ ವಾದ ಲಾಸ್ಯವನ್ನು ನೋಡುತ್ತ ಉಲ್ಲಾಸದಿಂದ ಅವರುಗಳನ್ನು ಸತ್ಕರಿಸುತ್ತ ಸುಖರಸವನ್ನು ಶಿವನಿಗರ್ಪಿಸುತ್ತ ಸುಖದಿಂದಿದ್ದನು.

ಪೆರಿಯಪುರಾಣದಲ್ಲಿ ತಿರುವಾರೂರಿನ ಶಿವನ ದರ್ಶನ ಪಡೆದ ಅನಂತರ ನಂಬಿಯು ವೀದಿವಿಟಂಕಣರಾದ ತ್ಯಾಗೇಶರ ಸನ್ನಿಧಿಗೆ ಹೋಗಿ, ಅಲ್ಲಿ ವಂದಿಸಿ ಸ್ತುತಿಸಿ

---

* 'ವೀತಿವಿಟಙ್ಕಪ್ಪೆರುಮಾನ್' ಎಂಬುದು ಶಿವನ ವಿಶೇಷಣ. ಪೆರಿಯಪುರಾಣದಲ್ಲಿ ಮನು ಚೋಳನಿಗೆ ಶಿವನು ದರ್ಶನ ಕೊಟ್ಟಾಗ ಶೇಕ್ಕಿಳಾರನು ಶಿವನಿಗೆ ಮೇಲಣ ವಿಶೇಷಣವನ್ನು ಪ್ರಯೋಗಿಸಿರುವನು (ನೋಡಿ: ಪೆ. ಪು. ಪ. 120). ಎರಡನೆಯ ಬಾರಿ ಅಲ್ಲಿ ಈ ಪದದ ಬಳಕೆ ತಿರುವಾಂಕೂರಿನ ಶಿವನ ದರ್ಶನ ಪಡೆದ ಮೇಲೆ ನಂಬಿಯು ವೀದಿವಿಟಂಕ ರಾದ ತ್ಯಾಗೇಶರ ಸನ್ನಿಧಿಗೆ ಬಂದಾಗ ಬಳಸಲಾಗಿದೆ (ನೋಡಿ: ಪೆ. ಪು. ಪ. 265). ಹರಿಹರನಿಗೆ ಶಿವನಿಗಿರುವ ಈ ವಿಶೇಷಣದ ಅರಿವಿದೆ. 'ನಂಬಿಯಣ್ಣನ ರಗಳೆ'ಯಲ್ಲಿ ಪರವೆಯು ತಿರುವಾರೂರಿನ ದೇವರದೇವನಾದ ಬೀದಿವೆಡೆಂಗ ಪೆರುಮಾಳೆಯನನ್ನು ಓಲೈಸುತ್ತಿದ್ದಳೆಂದು ಅವನು ಹೇಳುವನು (ನಂಬಿರ. ಸ್ಥ. 10 ಪ. 11-12). ಎಲ್. ಗುಂಡಪ್ಪನವರು ಈ ಪದದ ನಿಷ್ಪತ್ತಿಯನ್ನು ಮಾಡುತ್ತ "ವೀದಿ ವಿಟಂಕ" ಎಂಬ ಸಂಸ್ಕೃತ ರೂಪದ ತದ್ಭವವೆಂದು ಭಾವಿಸಿ ವಿ + ಟಂಕ = ಉಳಿಯ ಪೆಟ್ಟು ಬೀಳದ ದೇವರು (ಉಳಿ ಪಡಾದ ಕಡವುಳ್) ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಬೀದಿಯಲ್ಲಿ ಮೈದೋರಿ

ದೇವಾಲಯದ ಪ್ರದಕ್ಷಿಣೆ ಮಾಡಿ ಹೊರಗೆ ಬರುವನು. ಅಂದು ಮೊದಲು ಶರಣರೆಲ್ಲರೂ ನಂಬಿಯನ್ನು 'ತಂಬಿರಾನ್ ತೋಳರ್' (ಆದಿದೇವನಿಗೆ ಸ್ನೇಹಿತರಾದವರು) ಎಂಬ ಹೆಸರಿನಿಂದ ಕೊಂಡಾಡತೊಡಗಿದರು (ಪೆ. ಪು. ಪ. 265). ನಂಬಿಯು ಆದಿಶೈವರು ವಿಧಿಸಿದ ಸುಂದರ ಲಾಂಛನಗಳನ್ನು ಧರಿಸಿ ಚಂದನ, ಮಣಿಮಾಲೆ, ಪೂಮಾಲೆಗಳಿಂದ ಅಲಂಕೃತನಾಗಿ ಆಭರಣಗಳಿಂದ ಶೋಭಿಸುತ್ತ ತಿರುವಾಂಕೂರಿನಲ್ಲಿರಲು ಅವನಿಗೆ ಮೊದಲೇ ಕೈಲಾಸದ ಉಮಾದೇವಿಯ ಸೇವಕಿಯಾದ ಕಮಲಿನಿಯು ಅಲ್ಲಿ ಜನ್ಮ ತಾಳಿದ್ದಳು (ಪೆ. ಪು. ಪ. 266-67). ಆಕೆ ರುದ್ರಗಣಿಕೆಯರು ಎಂದು ಹೇಳಲ್ಪಡುವ ದೇವದಾಸಿ ಕುಲದಲ್ಲಿ ಜನಿಸಲು ಹಿರಿಯರು ಶಾಸ್ತ್ರವಿಧಿಯಂತೆ ಅವಳಿಗೆ ಪರವೈಯಾರ್ ಎಂಬ ಹೆಸರಿಟ್ಟರು (ಪೆ. ಪು. ಪ. 268). ಬಾಲ್ಯಾವಸ್ಥೆಯನ್ನು ದಾಟಲು ಅವಳ ಶರೀರವು ಚೆಲುವಿನಿಂದ ಕೂಡಿತು. ಅವಳ ಸ್ತನಗಳು ತೊಂಗೆ ಹೂವಿನ ಮೊಗ್ಗನ್ನು ತಿರಸ್ಕರಿಸುವಂತೆ ಚೆಲುವಿಕೆಯನ್ನು ಪಡೆಯಿತು (ಪೆ. ಪು. ಪ. 272). ದಿನದಿನಕ್ಕೆ ಬೆಳೆಯುತ್ತಿದ್ದ ಪರವೆಯು ನಿತ್ಯವೂ ತನ್ನ ಸಖಿಯರೊಡನೆ ತಿರುವಾಕೂರ ಶಿವನನ್ನು ವಂದಿಸಲು ತೇರುಬೀದಿಗಳನ್ನು ಸುತ್ತಿ ಹೋಗುತ್ತಿದ್ದಳು. ಒಂದು ದಿನ ತಿರುವಾರೂರ ಶಿವನನ್ನು ಸ್ತುತಿಸಿ ನಮಿಸಿ ದೇವಾಲಯದಿಂದ ಹೊರಬರುವಾಗ ನಂಬಿಯು ಪರವೆಯನ್ನು ನೋಡಿದನು. ಅವಳ ಅನುಪಮ ಸೌಂದರ್ಯವನ್ನು ಕಂಡು ಪರವಶನಾದ ನಂಬಿಯು ಇಲ್ಲಿ ನಾನು ಕಾಣುವ ಈ ವಸ್ತು ಕಲ್ಪವೃಕ್ಷದ ಹೂಗಳಿಂದ ಕೂಡಿದ ಶಾಖೆಯೋ, ಮನ್ಮಥನು ತನ್ನ ದೊಡ್ಡ ಜೀವಿತವಾಗಿಕೊಂಡ ವಸ್ತುವೋ, ಸೌಂದರ್ಯವೆನ್ನುವ ವಸ್ತುವು ಗಳಿಸಿದ ಪುಣ್ಯದ ಬೆಳೆಯೋ, ಮೇಘದ ಮೇಲೆ ಸುತ್ತಿಕೊಂಡು ಬಿಲ್ಲನ್ನೂ, ಕನ್ನೈದಿಲೆಯ ಹೂವನ್ನೂ, ಹವಳವನ್ನೂ, ತಾವರೆಯನ್ನೂ, ಚಂದ್ರನನ್ನೂ ಅಂಗಗಳಾಗಿ ತೆಗೆದುಕೊಂಡು ಪ್ರಕಾಶಿಸುವ ಒಂದು ಪರಿಮಳಯುಕ್ತವಾದ ಬಳ್ಳಿಯೋ ಎಂಬಂತೆ ಮೇಲೆ ಹೇಳಿದ ವಸ್ತುಗಳಲ್ಲಿ ಇಂಥದೆಂದು ಅಥವಾ ಇವುಗಳಲ್ಲಿ ಅಡಗದಿರುವ ಬೇರೊಂದರಲ್ಲಿ ಉಂಟೆಂದು ಹೇಳಲಾಗದ ಅದ್ಭುತ ವಸ್ತುವೋ, ಅಥವಾ ಒಂದರಿಂದಲೂ ಉಪಮಾನವನ್ನು ಕೊಡಲು ಸಾಧ್ಯವಿಲ್ಲದ ಪರಮೇಶ್ವರನ ದಿವ್ಯಾನುಗ್ರಹವೋ ಇದು ಇಂಥದೆಂದು ತಿಳಿಯೆನು' ಎಂದು ಉದ್ಗಾರ ತೆಗೆದನು (ಪೆ. ಪು; ಪ. 276). ಅವಳ ಲಾವಣ್ಯವನ್ನು ಕಂಡು ಬೆರಗಾಗಿ ಒಂದು ಕ್ಷಣ ನಂಬಿಯು ಮುಂದೆ ಸಾಗದೆ ನಿಂತನು. ಪರವೆಯೂ ನಂಬಿಯನ್ನು ನೋಡಿದಳು. ಕೋಮಲಸ್ವಭಾವದ ಪರವೆಗೆ ಮನಸ್ಸಿನಲ್ಲಿ ಅಡಗಿಸಲು ಸಾಧ್ಯವಿಲ್ಲದ, ಇದಕ್ಕೆ ಮೊದಲು ಲೋಕದಲ್ಲಿ ಅನುಭವಕ್ಕೆ ಬಾರದ ಒಂದು ಹೊಸ ಆಸೆಯು ಅಧಿಕ

ಬಂದು ಅನುಗ್ರಹಿಸಿದ್ದರಿಂದ 'ಬೀದಿ ಬೆಡಂಗ' ಎಂದು ಹೆಸರಾಯಿತೆನ್ನುವುದು ಹೆಚ್ಚು ಸಮಂಜಸವಾಗಿದೆ. 'ಇಜೀವ ಬೆಡಂಗ' 'ಗಜ ವೆಡಂಗ' ಮೊದಲಾದ ಬಿರುದುಗಳೊಡನೆ ಹೋಲಿಸಿ" ಎಂದಿರುವರು. (ನೋಡಿ: ತಿರುವಾರೂರ ಹಿರಿಮೆ, ಪ್ರ. ಕ. 19.4 ಪುಟ 9ರ ಅಡಿಟಿಪ್ಪಣಿ)

ವಾಗಿ, ತನ್ನಲ್ಲಿದ್ದ ಸ್ತ್ರೀಸಹಜವಾದ ಲಜ್ಜೆ, ಮುಗ್ಧತೆ, ಅಂಜಿಕೆ, ಅಸಹ್ಯ ಎಂಬ ನಾಲ್ಕು ಗುಣಗಳನ್ನೂ ಅಡಗಿಸಿ ಮೇಲೆದ್ದಿತು (ಪೆ. ಪು. ಪ. 279). ನಂಬಿಯನ್ನು ನೋಡಿದ ಆಕೆಯು ಈತನು ಜ್ಯೋತಿರ್ಮಯನಾದ ಸುಬ್ರಹ್ಮಣ್ಯಸ್ವಾಮಿಯೋ ತನಗೆ ಸಮಾನವಿಲ್ಲದ ಮನ್ಮಥನೋ, ಬಾಡದ ಮಾಲೆಗಳಿಂದ ಅಲಂಕೃತನಾದ ವಿದ್ಯಾಧರನೋ, ಮಿಂಚಿಗೆ ಸಮಾನವಾದ ಜಡೆಗಳಿಂದ ಕೂಡಿದ ಶಿವಪರಮಾತ್ಮನ ನಿಜವಾದ ಕೃಪೆಯನ್ನು ಪಡೆದವನೋ, ತನ್ನ ಮನಸ್ಸನ್ನು ಕದಲಿಸಿದ ಈತನು ಯಾರಿರಬಹುದು ? ಎಂದು ತನ್ನಲ್ಲಿ ಹಲಬಗೆಯಾಗಿ ಚಿಂತಿಸಿದಳು (ಪೆ. ಪು. ಪ. 280), ಮನ್ಮಥನ ಬಾಣಗಳು ತನ್ನನ್ನು ಸುತ್ತಿಮುತ್ತಿ ಘಾಸಿಮಾಡುತ್ತಿದ್ದರೂ ಅದನ್ನು ಶಿವಭಕ್ತಿಯ ಆಧಾರದಿಂದ ದಾಟಿ ಪರಮಾತ್ಮನು ನೆಲೆಸಿರುವ ಪೂಂಗೋಯಿಲ್ ಎಂಬ ಆಲಯವನ್ನು ಪರವೆಯು ಪ್ರವೇಶಿಸಿದಳು. ಆಗ ನಂಬಿಯು ಅಲ್ಲಿ ನಿಂತ ಭಕ್ತರನ್ನು 'ನನ್ನ ಮನಸ್ಸನ್ನು ಸೂರೆಗೊಂಡ ನವಿಲಿನಂತೆ ಕಣ್ಣಿಗೆ ಆಪ್ಯಾಯನ ಕರಳೂ, ಎಳಲತೆಯಂತೆ ಕೋಮಲೆಯೂ ಆದ ಈ ಹೆಣ್ಣು ಯಾರು?' ಎಂದು ಕೇಳಲು, ಅದಕ್ಕೆ ಅವರು 'ಈಕೆಯು ಸ್ತ್ರೀಯರಲ್ಲಿ ಉತ್ತಮಳಾದ ಪರವೆ ಎಂಬಾಕೆಯು, ದೇವತಾಸ್ವಭಾವವನ್ನು ಹೊಂದಿದವರಿಗೂ ಪಡೆಯುವುದಕ್ಕೆ ಸಾಧ್ಯವಾಗದವಳು' ಎಂದೂ ಹೇಳುವರು (ಪೆ. ಪು. ಪ. 283). ಸೀಮಾತೀತವಾದ ಅವಳ ಚೆಲುವನ್ನು ನಂಬಿಯು ಕೊಂಡಾಡಿ, ಮತ್ತೆ ಪರಮೇಶನ ದೇಗುಲವನ್ನು ಪ್ರವೇಶಿಸಿದನು. ನಂಬಿಯು ದೇವಾಲಯವನ್ನು ಪ್ರವೇಶಿಸುವ ಮೊದಲೇ ಅಲ್ಲಿಂದ ಬೇರೊಂದು ಪಕ್ಕವಾಗಿ ಪರವೆಯು ಹೊರಬಂದಳು. ಪರವೆಯನ್ನು ತನಗೆ ತಂದು ಕೊಡುವಂತೆ ನಂಬಿಯಾರೂರನು ನಾಗಭೂಷಣನನ್ನು ಪ್ರಾರ್ಥಿಸಿದನು. (ಪೆ. ಪು.ಪ. 296). ದೇವಾಲಯದಿಂದ ಹೊರಬಂದ ನಂಬಿಯು ತನ್ನ ಇನಿದಾದ ಉಸಿರಿನಂತಿರುವ ಪರವೆಯು ಎಲ್ಲಿ ಹೋದಳು? ಕೆಂಪಗಾದ ಬಾಯಿಯೂ ಬಿಳಿದಾದ ಉಗುರುಗಳೂ ಉಳ್ಳ ಆ ಪರವೆಯು ಎಲ್ಲಿ ಹೋದಳು? ದೇವದೇವನಾದ ಪರಮೇಶ್ವರನ ಶ್ರೀಪಾದಗಳನ್ನಲ್ಲದೆ ಬೇರೊಂದನ್ನು ನಂಬುವ ಪದ್ಧತಿಯಿಲ್ಲದ ತನ್ನ ಚಿತ್ತವನ್ನು ಕದಲಿಸಿ, ಹೆಚ್ಚಾದ ಪರವಶತೆಯನ್ನು ತಂದು ತನ್ನನ್ನು ಲತೆಯಂತೆ ಅಲುಗಿಸಿ, ಪರಮೇಶ್ವರನ ಅನುಗ್ರಹ ರೂಪದಂತೆ ಇಂದು ತನ್ನ ಮುಂದೆ ಬಂದ ಪರವೆಯು ಯಾವ ದಾರಿಯಲ್ಲಿ ಹೋದಳು? ಬಂಧಪಾಶವನ್ನೂ ಮೋಕ್ಷವನ್ನೂ ತರುವ ಪರಮೇಶ್ವರನ ಶ್ರೀಪಾದಗಳನ್ನು ಅನನ್ಯ ಭಕ್ತಿಯಿಂದ ಎಣಿಸುವ ತನ್ನ ಚಿತ್ತದೊಳಗೆ ಬಂದು ಹೊಕ್ಕು, ಮನವನ್ನು ಸೂರೆಗೊಂಡು ಜಿಂಕೆಯಂತೆ ನೋಟವನ್ನು ಬೀರಿ, ತನ್ನ ಈಶ್ವರನ ಅನುಗ್ರಹವೇ ಮೈದೋರಿದಂತಿರುವ ಪರವೆಯು ಎಲ್ಲಿ ಸೇರಿದಳು ? (ಪೆ. ಪು. ಪ. 287, 289, 290)—ಹೀಗೆ ಆಲಾಪಿಸುತ್ತಾ ಅಧಿಕವಾಗುತ್ತಿರುವ ಸಂತಾಪವನ್ನು ಸಹಿಸಲಾರದವನಾಗಿ, ನನ್ನ ಉಸಿರಾದ ಪರವೆಯು ಎಲ್ಲಿ ನಿಂತಿರುವಳು ? ಮುತ್ತುಗಳಿಂದ ಪುದಿದ ಆಭರಣಗಳಿಂದ ಅಲಂಕರಿಸಲ್ಪಟ್ಟ ಮಾಲೆಗಳನ್ನೂ ಸುವಾಸನಾಯುಕ್ತ

ಸುಂದರ ತಲೆಗೂದಲನ್ನು ಹೊಂದಿರುವ ಪರವೆಯು ಎಲ್ಲಿ ಹೋದಳು ? ಎಂದು ಅವಳನ್ನು ಹುಡುಕುತ್ತಾ ನಂಬಿಯು ಹೊರಟನು (ಪೆ. ಪು. ಪ. 291). ದೇವಾಚಾರ್ಯ ಮಂಟಪವನ್ನು ಸೇರಿದ ನಂಬಿಯು ಯಾರೊಡನೆಯೂ ಮಾತನಾಡದೆ ಅಲ್ಲೇ ಇದ್ದು, ತಿರುವಾರೂರನ್ನು ರಾಜಧಾನಿಯಾಗಿ ಮಾಡಿಕೊಂಡು ಇರುವಂತಹ ಪರಮೇಶ್ವರನು, ಇನಿಯೆಯೂ ಸುಂದರಿಯೂ ಆದ ಪರವೆಯನ್ನು ತನಗೆ ತಂದು ಕೊಟ್ಟು ಆ ಮೂಲಕ ತನ್ನ ಉಸಿರನ್ನು ತನಗೆ ಕೊಡುವನು ಎಂದು ಹೇಳುತ್ತಿರುವಲ್ಲಿ ಕತ್ತಲಾಯಿತು (ಪೆ. ಪು. ಪ. 292).

ಕತ್ತಲೆ ಆವರಿಸುತ್ತಿದ್ದಂತೆ ನಂಬಿಗೆ ನಂಗೈ ಪರವೆಯ ಮೇಲಣ ಮೋಹವು ಅಧಿಕವಾಗಿ ಅವನ ಉಸಿರನ್ನು ಸುತ್ತಿ ವ್ಯಾಪಿಸಿತು. ಆಗ ಮನ್ಮಥತಾಪವನ್ನು ಸಹಿಸಲಾರದೆ ನಂಬಿಯು 'ನನ್ನ ತಂದೆಯ ಹಣೆಗಣ್ಣಿನ ಬೆಂಕಿಯಲ್ಲಿ ಬೆಂದುಹೋದ ಮನ್ಮಥನು ಪುನಃ ಆಕಾರವನ್ನು ಹೊಂದಿ ಹೊರಬಂದು ನನ್ನ ಮುಂದೆ ನಿಂತು ಬಾಣವನ್ನೆಸೆಯುವ ಶಕ್ತಿಯುಳ್ಳವನಾಗುವುದೇ ? ನನ್ನ ತಂದೆಯ ಕೃಪೆಯು ಇಂತಹುದೋ ?' (ಪೆ. ಪು. ಪ. 300). 'ಶೀತಲವಾದ ಸ್ವಭಾವವುಳ್ಳ ಚಂದ್ರನೇ ದುಃಖಿತನಾದ ನನ್ನನ್ನು ಕಂಡೂ ನಿನ್ನ ಶೀತಲಸ್ವಭಾವಕ್ಕೆ ವಿರುದ್ಧವಾಗಿ ಗಮನವನ್ನು ನಿಲ್ಲಿಸಿ ಉಷ್ಣಕಿರಣಗಳನ್ನು ಮೇಲೆ ಮೇಲೆ ಪಸರಿಸುವುದೇ ? ನನ್ನನ್ನು ಪಡೆದು ಆಳಾಗಿ ಮಾಡಿಕೊಂಡ ಪರಮೇಶ್ವರನು ಜಲಮಯವಾದ ಅಲೆಗಳಿಂದ ಕೂಡಿದ ನೀಳವಾದ ಗಂಗೆಯನ್ನು ತಲೆಯಲ್ಲಿ ಧರಿಸಿದ ದೀರ್ಘವಾದ ಜಟಾಭಾಗದಲ್ಲಿ ಕೃಪೆಯಿಂದ ತೆಗೆದು ಧರಿಸಿಕೊಂಡ ಬಿಳಿಯ ಚಂದ್ರನಂತೆ ನೀನಿರುವ ರೀತಿಯು ಇಲ್ಲವಲ್ಲಾ!' (ಪೆ. ಪು. ಪ. 301). 'ಮೇಲೆಮೇಲೆಯೂ ಸಮೀಪಿಸಿ ಅಲೆಗಳನ್ನೆಬ್ಬಿಸುವ ಕಡಲೇ! ಇತರ ದೇವತೆಗಳನ್ನೆಲ್ಲಾ ದುಃಖಿಗೊಳಿಸಿದ ವಿಷವನ್ನು—ನನ್ನನ್ನು ಹಿಂದೆಯೇ ತಡೆದು ಆಳಾಗಿಸಿಕೊಂಡ ಪರಮೇಶ್ವರನೇ ಉಣ್ಣುವಂತೆ ನಿನ್ನ ಅಲೆಗಳೆಂಬ ಕೈಗಳಿಂದ ತೆಗೆದುಕೊಟ್ಟ ನೀನು ಇಂದು ನನ್ನನ್ನು ಏನು ಮಾಡಲಾರೆ?' (ಪೆ. ಪು. ಪ. 302). 'ತಂಪಾದ ದಕ್ಷಿಣಾನಿಲವೇ! ನೀನು ಹುಟ್ಟಿದುದು ನನ್ನ ಒಡೆಯನಾದ ಈಶ್ವರನಿರುವ ಪುದಿಯುಮಲೆ (ಅಗಸ್ತ್ಯಮಲೆ)ಯಲ್ಲಿ. ಹಾಗೆ ಹುಟ್ಟಿದೆಡೆಯಿಂದ ಹರಿದು ಬಂದ ದಾರಿಯು ದೈವಭಕ್ತಿಯು ಹೆಚ್ಚಿದ ಚೋಳನಾಡಿನಲ್ಲಿರುವ ತಟಾಕಗಳ ದಾರಿಯಲ್ಲವೆ? ಹೀಗಿದ್ದೂ ಬಿಸಿಯಾದ ಗಾಳಿಯನ್ನು ಬೀಸುವಂತೆ ನೀನು ಸ್ವಭಾವವನ್ನು ಹೊಂದಿದುದು ಎಲ್ಲಿಯೋ ? (ಪೆ. ಪು. ಪ. 303)—ಹೀಗೆ ಪ್ರಣಯಭಾವದಿಂದ ಕೂಡಿ ಪರವೆಗಾಗಿ ಹಂಬಲಿಸಿ ಮನದ ಭಾವನೆಗಳನ್ನು ಮಾತುಗಳಲ್ಲಿ ತೋಡಿಕೊಳ್ಳುತ್ತಿದ್ದನು.

ತ್ಯಾಗೇಶರ ಪಾದಪದ್ಮಗಳಿಗೆ ನಮಿಸಿ ಬಂದ ಪರವೆಯ ಮನದಲ್ಲಿ ನಂಬಿಯದೇ ಧ್ಯಾನ. ತನ್ನ ತಿರುಮಾಳಿಗೆಯನ್ನು ಸೇರಿದ ಪರವೆಯು ತನ್ನ ಸಖಿಯನ್ನು ನೋಡಿ

ದೇವಾಲಯದಲ್ಲಿ ಪರಮೇಶ್ವರನನ್ನು ನಮಿಸಿ ಬರುವಾಗ ದಾರಿಯಲ್ಲಿ ಇದಿರಾಗಿ ಬಂದವನು ಯಾರು ? ಎಂದು ಪ್ರಶ್ನಿಸುವಳು. ಅದಕ್ಕೆ ಸಖಿಯು 'ಬ್ರಹ್ಮ, ವಿಷ್ಣು ಮೊದಲಾದ ದೊಡ್ಡ ದೇವರುಗಳಿಗೂ ಕಾಣಲು ಸಾಧ್ಯವಿಲ್ಲದ ಶಿವಪರಮಾತ್ಮನು ಈ ಲೋಕದಲ್ಲಿ ಬ್ರಾಹ್ಮಣನಾಗಿ ಮೈದೋರಿ ಬಂದು ವಾದಿಸಿ ಆಳಾಗಿಸಿಕೊಂಡ ನಂಬಿ ಎಂಬವನೇ ಆತನು. ಆತನು ಶೈವಸಮಯಕ್ಕೇ ಮೊದಲಿಗನಾದ ತಿರುತೊಂಡನಾಗಿರುವನು. ಆತನು ಶಿವಪರಮಾತ್ಮನ ಸಖನು. ಶಿವನಿಂದ ಆಳಾಗಿಸಿಕೊಂಡು ಇತರರನ್ನು ಆಳಾಗಿಸಿಕೊಳ್ಳುವ ಹಿರಿಯ ಭಕ್ತನು' ಎಂದಳು (ಪೆ.ಪು.ಪ. 307). ನಂಬಿಯು ತ್ಯಾಗೇಶರ ಬಂಧುವೆಂಬುದನ್ನು ಕೇಳಿದ ಮೇಲೆ ಪರವೆಯ ಮನದಲ್ಲಿ ಪ್ರೇಮವು ಅಳವು ಮೀರಿ ವರ್ಧಿಸಿತು. ಪರವೆಯು ನಿಟ್ಟುಸಿರುಬಿಟ್ಟು ಮೃದುವಾದ ಕುಸುಮಶಯ್ಯೆಯಲ್ಲಿ ಬಿದ್ದಳು. ಸಖಿಯರು ಅವಳಿಗೆ ಶೈತ್ಯೋಪಚಾರ ಮಾಡಿದರು. ಅವೆಲ್ಲವೂ ಬೆಂಕಿಗೆ ತುಪ್ಪವನ್ನು ಸುರಿದಂತಾಯಿತು. ಮನ್ಮಥ ತನ್ನ ಪರಾಕ್ರಮವನ್ನು ತೋರಲು ಅವಳ ಮೇಲೆ ಪುಷ್ಪಬಾಣಗಳನ್ನು ಬಿಟ್ಟನು.

ಪರವೆ ಬೀಸುವ ದಕ್ಷಿಣಾನಿಲವನ್ನೂ ಸಹಿಸಲಾರದಾದಳು. ಚಂದ್ರನ ಕಿರಣಗಳ ತಂಪನ್ನೂ ತಾಳಲಾರದಾದಳು. ಸ್ವಭಾವಸಹಜವಾದ ಅವಳ ಸಹನಾಶಕ್ತಿಯೂ ಶಿಥಿಲವಾಯಿತು. ನವಿಲಿನ ಸೋಗೆಯಂತಿರುವ ತನ್ನ ಕರಿಯ ಕೂದಲ ಭಾರವನ್ನೂ ಸಹಿಸಲಾರದಾದಳು. ಅಸಹನೀಯವಾದ ದುಃಖೋದ್ವೇಗದಿಂದ ಕೂಡಿದ ಆಕೆ ತನ್ನ ಸಖಿಯರೊಡನೆ ಹೀಗೆ ಹೇಳತೊಡಗಿದಳು : 'ಸುವಾಸನೆಯನ್ನು ಬೀರುವ ಮೃದುವಾದ ಕೂದಲುಳ್ಳ ಸಖಿಯರೆ, ಇಂದೆಂತಹ ಆಶ್ಚರ್ಯ ! ಅಮೃತಕಿರಣನಾದ ಚಂದ್ರನೇ ನನ್ನನ್ನು ಸುಡುವವನಾಗಿದ್ದಾನೆ. ಈ ಚಂದನ ಕರ್ದಮವನ್ನು ಪನ್ನೀರಿನಲ್ಲಿ ಕಲಸಿ ನನ್ನ ಮೇಲೆ ಪೂಸುವ ಸಖಿಯರೆ, ನೀವೇನೋ ಈ ಉದ್ಯಮವನ್ನು ಬಿಟ್ಟಿಲ್ಲ. ಇಲ್ಲಿ ಬಂದು ಬೀಸುತ್ತಿರುವ ತಂಗಾಳಿಯೋ ಬೆಂಕಿಯ ಶರೀರದಿಂದಿದೆ. ಸುಂದರವಾದ ಶೀತಲವಾದ ಗಂಗೆಯನ್ನೂ ಹಾವನ್ನೂ ತನ್ನೆಡೆಯಲ್ಲಿಟ್ಟುಕೊಂಡಿರುವ ಶಿವಪರಮಾತ್ಮನ ಅನುಗ್ರಹವನ್ನು ಪಡೆದ ನಂಬಿಯೋ, ಸೇವಕಿಯಾದ ನನ್ನ ಮೇಲೆ ದಯೆ ತೋರುವುದಿಲ್ಲ. ನನ್ನ ಮಟ್ಟಿಗೆ ಈ ರಾತ್ರಿಯು ಕೊನೆಗೊಳ್ಳುವಂತೆ ಕಾಣುವುದಿಲ್ಲ. ಸಹನೆಯೂ ಕಾಪಾಡುವ ಶಕ್ತಿಯೂ ಕಮ್ಮಿಯಾಗುತ್ತಾ ಬರುವಂತಿದೆ. ಸ್ತನಭಾರದಿಂದ ಮನಸ್ಸೂ ಕರಿದು ಹೋಗುತ್ತಿದೆ. ಇಷ್ಟು ಕಷ್ಟದ ಅನುಭವಗಳು ದುರದೃಷ್ಟೆಯಾದ ನನ್ನೊಬ್ಬಳ ಪಾಲಿಗೇ ಬರಬೇಕೆ ? ಮನ್ಮಥನು ನನ್ನ ಪಕ್ಕದಲ್ಲಿ ನಿಂತು ಬಾಣಪ್ರಯೋಗ ಮಾಡುತ್ತಿರುವುದನ್ನು ನಿಲ್ಲಿಸುತ್ತಿಲ್ಲ. ಪರಮಾತ್ಮನ ದಿವ್ಯಾನುಗ್ರಹವನ್ನು ಪಡೆದು ನನ್ನನ್ನು ಸ್ವಂತವಾಗಿ ಕೊಂಡ ನಂಬಿಯೊ, ನಾನು ಪಡುವ ದುಃಖವನ್ನು ತಿಳಿಯದವನಾಗಿದ್ದಾನೆ.' (ಪೆ.ಪು.ಪ. 311, 312, 313).

ತಿರುವಾರೂರ ಶಿವನಲ್ಲಿ ತನ್ನ ಸಂಕಟವನ್ನು ಪರವೆಯು ಹೇಳಿಕೊಳ್ಳಲು ಪರವೆಯನ್ನೂ ನಂಬಿಯನ್ನೂ ಈ ಲೋಕದಲ್ಲಿ ಬರುವಂತೆ ಕರುಣಿಸಿದ ಶಿವ ಪರಮಾತ್ಮನು ಅವರಿಬ್ಬರನ್ನೂ ಒಂದುಗೂಡಿಸುವ ಮನಸ್ಸುಮಾಡಿ ಅಂದೇ 'ನಂಬಿ ಪರವೆಯರಿಗೆ ಮದುವೆಯನ್ನು ನೀವು ನೆರವೇರಿಸಿರಿ' ಎಂದು ತಿರುವಾರೂರಿನ ಪೂಜಾರಿಗಳಿಗೆ ಕನಸಿನಲ್ಲಿ ಬಂದು ಹೇಳಿದನು (ಪೆ. ಪು. ಪ. 315). ಹಾಗೆಯೇ ಶಿವನು, ನಂಬಿ ಪರವೆಯರಿಗೆ ಕನಸಿನಲ್ಲಿ ಕಾಣಿಸಿಕೊಂಡು ಅವರಿಬ್ಬರಿಗೂ ಶೀಘ್ರದಲ್ಲಿಯೇ ವಿವಾಹವು ಜರುಗುವುದೆಂಬ ಸಂತೋಷದ ಸುದ್ದಿಯನ್ನು ತಿಳಿಸಿದನು (ಪೆ. ಪು. ಪ. 316). ಸೂರ್ಯೋದಯವಾಗುತ್ತಿದ್ದಂತೆಯೇ ತಿರುವಾರೂರಿನ ಅಡಿಗಳೆಲ್ಲಾ ಕೂಡಿ ನಂಬಿ ಹಾಗೂ ಪರವೆಯರ ವಿವಾಹವನ್ನು ಸಂಭ್ರಮದಿಂದ ನೆರವೇರಿಸಿದರು (ಪೆ. ಪು. ಪ. 317).

ನಂಬಿಯಣ್ಣನ ರಗಳೆಯಲ್ಲಿ ಪೆರಿಯಪುರಾಣಕ್ಕಿಂತ ಭಿನ್ನವಾಗಿ ನಂಬಿ-ಪರವೆಯರ ಪ್ರಥಮ ಭೇಟಿಯ ಪ್ರಸಂಗ ಬಂದಿದೆ. ದೇವಾಲಯಕ್ಕೆ ಹೋಗುತ್ತಿದ್ದ ಪರವೆಯನ್ನು ನೋಡಿದ ನಂಬಿ ಅವಳಲ್ಲಿ ಅನುರಕ್ತನಾದವನು. ನಂಬಿಯನ್ನು ನೋಡಿದ ಪರವೆಯೂ ಅವನಲ್ಲಿ ಅನುರಕ್ತೆಯಾಗುವಳು. ಪ್ರಾಚೀನ ಕಾವ್ಯಗಳ ನಾಯಕ-ನಾಯಕಿಯರಂತೆ ಅವರು ಮೊದಲ ನೋಟದಲ್ಲೇ ಪರಸ್ಪರ ಪ್ರೀತಿಸಿ ವಿರಹೋದ್ಗಾರವನ್ನು ವ್ಯಕ್ತಪಡಿಸುವರು. ನಂಬಿ-ಪರವೆಯರ ಪ್ರಾರ್ಥನೆಗೆ ಓಗೊಟ್ಟ ತಿರುವಾರೂರಿನ ಶಿವ ಅಲ್ಲಿನ ಪೂಜಾರಿಗಳ ಮೂಲಕ ಅವರಿಗೆ ವಿವಾಹಮಾಡಿಸಿ ಪ್ರೇಮಿಗಳನ್ನು ಒಂದುಗೂಡಿಸುವನು. ರಗಳೆಯಲ್ಲಾದರೋ ನಂಬಿಯಣ್ಣನು ತಿರುವಾರೂರಿನ ಶಿವದೇವಾಲಯಕ್ಕೆ ಭಕ್ತರೊಡನೆ ಉತ್ಸವದಿಂದ ಬರುತ್ತಿರುವಾಗ ಪರವೆಯನ್ನು ಅವಳ ಮನೆಯ ಉಪ್ಪರಿಗೆಯಲ್ಲಿ ನೋಡುವನು. ಪರವೆಯೂ ಉತ್ಸವಮೂರ್ತಿಯಾದ ನಂಬಿಯಣ್ಣನನ್ನು ನೋಡುವಳು. ಈರ್ವರ ಮನಸ್ಸೂ ಒಂದುಗೂಡುವಂತೆ ಮನ್ಮಥ ಬಾಣಪ್ರಯೋಗ ಮಾಡುವನು. ಪೆರಿಯಪುರಾಣದಲ್ಲಿ ಬರುವಂತೆ, ರಗಳೆಯಲ್ಲಿ ನಂಬಿ-ಪರವೆಯರ ವಿರಹಾಲಾಪ ಬರುವುದಿಲ್ಲ; ಶಿವ ಆ ಪ್ರೇಮಿಗಳನ್ನು ವಿವಾಹದ ಸೂತ್ರದಲ್ಲಿ ಒಂದುಗೂಡಿಸುವುದಿಲ್ಲ. ರಗಳೆಯಲ್ಲಿ ಅವರು ತಮ್ಮ ವಯೋಮಾನಕ್ಕೆ ತಕ್ಕಂತೆ ಪ್ರಥಮ ದರ್ಶನದಲ್ಲಿ ಪರಸ್ಪರ ಆಕರ್ಷಿತರಾಗುವರು. ಅದೂ ಕೆಲವು ಕ್ಷಣಗಳಷ್ಟೆ. ಮುಂದೆ ನಿತ್ಯ ವ್ಯವಹಾರಗಳಲ್ಲಿ ಮುಳುಗಿ ಹೋದ ನಂಬಿಯಣ್ಣ ಪರವೆಯನ್ನು ಮರೆತೇ ಬಿಡುವನು. 'ಒಲಗವಿತ್ತು ನರ್ತಕರ ಜಾಣರ ಗಾಣರ ಗೇಯಗೋಷ್ಠಿಯೊಳ್ । ಬಾಲೆಯರೊಳ್ ಮಹಾಕವಿಗಳೊಳ್ ಗಮಕಿತ್ವದ ವಾಗ್ಮಿ ವೃಂದದೊಳ್ । ಲೀಲೆ ಮಿಗಲ್ಕೆ ಪಾಡಿಸುತವಾಡಿಸುತುಂ ಮಿಗೆ ಮೆಚ್ಚುತುಂ ಕರಂ । ಲಾಲಿಸುತಾಲಿಸುತ್ತೆ ಶಿವಸಂಗದೊಳೊಪ್ಪಿದನಂದು ಸೌಂದರಂ ॥' (ನಂಬಿರ ಸ್ಥ. 10 ಸೂಚನಾ ಪದ್ಯ) ಎಂದು ಹರಿಹರ ಹೇಳುವನು. ತಿರುವಾರೂರ

ಶಿವಲಿಂಗದ ರಂಗಮಂಟಪದಲ್ಲಿ ನಂಬಿಯಣ್ಣ ಓಲಗಗೊಟ್ಟಿರುವಾಗ ಅವನ ಪ್ರಸಿದ್ಧಿಯನ್ನು ಕೇಳಿ ಅವನ ದರ್ಶನ ಪಡೆದು ಪುನೀತರಾಗಲು ಬಂದ ಚೋಳಾದಿಗಳಿಗೆ ದರ್ಶನ ಕೊಡುತ್ತ, ಶಿವಭಕ್ತರು ಬಂದರೆ ಮನದಲ್ಲಿ ಅವರಿಗೆ ವಂದಿಸುತ್ತ, ಕಾಂತೆಯರು ಬಂದರೆ ಕಟಾಕ್ಷವನ್ನು ಚೆಲ್ಲುತ್ತ, ನೋಟಕ ಜನಕ್ಕೆ ಕರುಣಿಸುತ್ತ–ಹೀಗೆ ಸುಖದಿಂದಿದ್ದನೆಂದು ಹರಿಹರ ವರ್ಣಿಸುವನು (ನಂಬಿರ ಸ್ಥ. 10, ಸಾ. 1-5).

ಹರಿಹರನ ನಿರೂಪಣೆಯಂತೆ, ನಂಬಿಯಣ್ಣನು ತಿರುವಾರೂರ ಶಿವದೇವಾಲಯದಲ್ಲಿ ಓಲಗಗೊಟ್ಟಿರಲು ಅಲ್ಲಿಗೆ ಪರವೆಯ ಪರವಾಗಿ ವಿಳಾಸಿನಿಯೋರ್ವಳು 'ಪರವೆಯ ಮನಂ ಬರ್ಪಂತೆ' ಬಂದು ನಂಬಿಗೆ ನಮಸ್ಕರಿಸಿ, 'ತಿರುವಾರೂರ ದೇವರ ದೇವನಾದ ಬೀದಿವೆಡಂಗ ಪೆರುಮಾಳೆಯನನ್ನು ಓಲೈಸುವ ತಳಿಯಲಾರ ಕುಲದ ಪರಮ ಯೌವನೆಯಾದ ಪರವೆನಾಚಿಯೆಂಬ ಕನ್ಯಾಕನಕಲತೆಗೆ ಇಂದು ನಾಳೆ ಕುಸುಮಾಯುಧ ಪ್ರಥಮ ಪುಷ್ಪಿತಾ ಸಮಯ*. ಆ ಕಾರಣದಿಂದ ಅವಳ ಮನೆಯಲ್ಲಿ ಪುಷ್ಪಮಾಲಾ ಬದ್ಧವೆಂಬ ಒಂದು ಕಾಮನಹಬ್ಬ. ಪರವೆಗೆ ಹೂವಿನ ಹೆಡಗಯ್ಯನ್ನು ಬಿಡುವುದಾದರೆ ಶಿವಬ್ರಾಹ್ಮಣರಲ್ಲದೆ ಬೇರೆ ಯಾರೂ ಬಿಡಲಾಗದು. ಅವಳ ಕುಲವಾದರೋ ತಳಿಯಾರ ಕುಲ. ಅವಳನ್ನು ಉನ್ನತ ಕುಲಕ್ಕೆ ಸೇರಿದ ಶಿವಬ್ರಾಹ್ಮಣರಲ್ಲಿ ಯಾರಿಗಾದರೂ ಒಪ್ಪಿಸಲು ಆಲೋಚಿಸಿ ಹಲವರು ಶಿವಬ್ರಾಹಣರ ಹೆಸರು ಹೇಳಲು ಅವರಾರನ್ನೂ ಒಪ್ಪದ ಆಕೆ ನಿಮ್ಮ ಹೆಸರನ್ನು ಹೇಳಲು ಸಂತೋಷದಿಂದ ನಾಚಿ ತಲೆತಗ್ಗಿಸಿದಳು. ಮಗಳ ಮನಸ್ಸನ್ನರಿತ ಅವಳ ತಂದೆ-ತಾಯಿಯರು‡ ನಿಮ್ಮ ಬಳಿಗೆ ನನ್ನನ್ನು ಕಳುಹಿಸಿದರು. ಪರವೆಯ ಜೀವ ಬರುವಂತೆ

---

* ಹರಿಹರನ ಪ್ರಕಾರ ಕೈಲಾಸದ ರುದ್ರಕನ್ನಿಕೆಯಾದ ಪರವೆಯು ಮರ್ತ್ಯದಲ್ಲಿ ತಳಿಯಲಾರ ಕುಲದಲ್ಲಿ ಜನಿಸುವಳು. ತಳಿಯಲಾರ್ ಎಂಬುದು ದೇವದಾಸಿಯರ ಕುಲವನ್ನು ಸೂಚಿಸುತ್ತದೆ. ತಮಿಳುನಾಡಿನಲ್ಲಿ ತಳಿಯಲಾರ್ ಎಂಬ ದೇವದಾಸಿ ಕುಲದವರಿರುವರು. ಇವರು ವೇಶ್ಯೆಯರಲ್ಲ, ದೇವರ ಸೇವೆಗೆಂದು ಮೀಸಲಾದವರು.

ಕುಸುಮಾಯುಧ ಪ್ರಥಮ ಪುಷ್ಪಿತಾಸಮಯವೆಂದರೆ, ಬಹುಶಃ, ಮೈನೆರೆಯುವ ಕಾಲವಿರಬಹುದು. 'ಪುಷ್ಪಮಾಲಾಬದ್ಧವೆಂಬ ಕಾಮನಹಬ್ಬ'ವು ಪುಷ್ಪವತಿಯಾದ ದೇವದಾಸಿ ಹೆಣ್ಣಿಗೆ ಮಂಗಳಸ್ನಾನ ಮಾಡಿಸಿ ಹೂ ಮುಡಿಸುವ ಶಾಸ್ತ್ರ ವಿಧಿಯ ಸಮಾರಂಭವಿರಬಹುದು. 'ಹೂವಿನ ಹೆಡಗೆಯ್ಯಂ ಬಿಡು' ಎಂದರೆ ಏನೆಂಬುದು ಸ್ಪಷ್ಟವಾಗುವುದಿಲ್ಲ. ದೇವದಾಸಿ ಕುಲದಲ್ಲಿ ಹೆಣ್ಣು ಪುಷ್ಪವತಿಯಾದಾಗ ಮೇಲುವರ್ಗದ ಓರ್ವ ಗಂಡಿನ ರಕ್ಷಣೆಗೆ ಅವಳನ್ನು ಶಾಸ್ತ್ರೋಕ್ತವಾಗಿ ಒಪ್ಪಿಸುವ ಮಂಗಳಕಾರ್ಯ ಇದಾಗಿರಬಹುದು.

‡ ಪೆರಿಯಪುರಾಣದಲ್ಲಿ ಪರವೆಯ ತಂದೆ-ತಾಯಿಯರ ಉಲ್ಲೇಖ ಎಲ್ಲೂ ಬರುವುದಿಲ್ಲ. ಪರವೆಯು ರುದ್ರಗಣಿಕೆಯರು ಎಂದು ಹೇಳಲ್ಪಡುವ ದೇವದಾಸಿ ಕುಲದಲ್ಲಿ ಜನಿಸಲು, ಶ್ರೇಷ್ಠರಾದ ಹಿರಿಯರು ಚಂದ್ರಚೂಡನಾದ ಪರಶಿವನ ದಿವಸವಾದ ಆರ್ದ್ರಾ ದಿನದಲ್ಲಿ

ತಾವು ದಯಮಾಡಿಸಬೇಕು. ದೇವಾ, ನಿಮ್ಮಿಬ್ಬರಿಗೆ ಪ್ರಾಯಂ ಸಮನಾಗಿದೆ; ನಿಮ್ಮಿಬ್ಬರ ಯೌವನ, ಮೈತ್ರಿ, ಚೆಲುವು, ಚಮತ್ಕಾರ, ನೋಟ ಅತಿಶಯಂವಾಗಿದೆ. ಇನ್ನು ಹೆಚ್ಚು ಮಾತಿಗೆ ಅವಕಾಶವಿಲ್ಲ. ತಾವು ಈ ಹಾಲಂ ಬೆಳುದಿಂಗಳಿನಲ್ಲಿ ಪರವೆಯ ಮನೆಗೆ ಬಂದು ಕನ್ನೆಯ ಮನೋರಥವನ್ನು ಈಡೇರಿಸುವುದು' ಎಂದಂ ಪ್ರಾರ್ಥಿಸಿ ನಂಬಿಯನ್ನು ಒಪ್ಪಿಸಿ ಹೋಗುವಳು (ನಂಬಿರ ಸ್ಥ. 10, ಸಾ. 8-26).

ಪರವೆಯ ತಂದೆ-ತಾಯಿಯರಿಂದ ಬಂದ ಆಹ್ವಾನವನ್ನು ಅಂಗೀಕರಿಸಿದ ನಂಬಿಯಣ್ಣನು ತುಂಬುರನ ಅಭಿಮತ ತಿಳಿಯಲು ಅವನ ಮುಖವನ್ನು ನೋಡುವನು. ಸ್ವಾಮಿಚಿತ್ತವನ್ನು ಅರಿತ ತುಂಬುರನು 'ದೇವ ದೇವ ಚಿತ್ತವೆಂತಿರ್ದುದಂತೆ ನೆಗಳ್ವುದು' ಎಂದು ನುಡಿಯುವನು. ಅವನ ಜಾಣ್ಣುಡಿಗೆ ಸಂತಸಗೊಂಡು ಸ್ನಾನಾದಿ ದೈನಂದಿನ ಕಾರ್ಯಗಳನ್ನು ಮುಗಿಸಿದ ನಂಬಿಯು ಪ್ರಸಾದ ಸ್ವೀಕರಿಸಿ ಶಿವನಲ್ಲಿಗೆ ಬಂದು ಬೇಡಿ ಕಾಡಿ ಪ್ರಮಾಣಪತ್ರದ ಮೇಲುವರಿಯೆಂ ಮಾತಾಡಿ ಪಡಿವೊಂಗಳನ್ನು ಚಂದನ ಜವಾದಿ ಕರ್ದಮಂಗಳೊಂದಿಗೆ ಸ್ವೀಕರಿಸಿ ರಂಗಮಂಟಪದಲ್ಲಿ ಸುಖಾಸನದಲ್ಲಿ ಕುಳಿತುಕೊಳ್ಳುವನು. ಅಲ್ಲಿಗೆ ತುಂಬುರನು ಬಂದು ನಾದಿನ ಪರಿಮಳವನ್ನು ಕಂಕುಳಿಗೆ ಬಳಿದು, ಕಸ್ತೂರಿಯ ತಿಲಕವನ್ನು ಹಣೆಗಿಟ್ಟು, ಚಂದನವನ್ನು ಮೈಗೆ ಲೇಪಿಸಿ, ತೋರಹಾರವನ್ನು ಕೊರಳಿಗೆ ಹಾಕಿ, ರತ್ನಖಚಿತವಾದ ಉಂಗುರಗಳನ್ನು ಬೆರಳುಗಳಿಗೆ ತೊಡಿಸಿ, ನವುರಾದ ಬಿಳಿಯ ವಸ್ತ್ರವನ್ನು ಬಿಗಿಯಾಗಿ ಉಡಿಸಿ, ಬೆಳಗುವ ದುಕೂಲವನ್ನು ಹೊದೆಯಿಸಿ, ಶಿವನ ಅಜ್ಞೆಯಂತೆ ಬಂದ ಕುದುರೆಯ ಬೆನ್ನೇರಿ, ಅಲ್ಲಲ್ಲಿ ಕೈದೀವಿಗೆಗಳು ದಟ್ಟವಾಗುತ್ತಿರಲು ಪಲ್ಲವಸತ್ತಿಗೆ ಮೇಲೆ ಶೋಭಿಸಿರಲು ಎಳಲತೆಯ ಸೆರೆಯನ್ನು ಬಿಡಿಸಲು ಬರುವ ವಸಂತನಂತೆ, ಯೌವನದ ಮುದ್ರೆಯನ್ನು ಒಡೆಯಲು ಬರುವ ಮನ್ಮಥನಂತೆ, ಹೊಸ ಪರಿಮಳವನ್ನು ಒಕ್ಕಲಿಕ್ಕಲು ಬರುವ ದುಂಬಿಯಂತೆ, ಎಳೆಯ ಬೆಳುದಿಂಗಳನ್ನು ಬಳಸಲು ಬರುವ ಚಕೋರನಂತೆ ಸೌಂದರನು ಪರವೆಯ ಮನೆಗೆ ಬಂದನು (ನಂಬಿರ ಸ್ಥ. 10, ಸಾ. 28-55). ನಂಬಿಯಣ್ಣನು ತುಂಬುರನ ಕೈಹಿಡಿದು ಪರವೆಯ ಮನೆಯನ್ನು ಪ್ರವೇಶಿಸುತ್ತಿರುವುದನ್ನು ಆಗಸದಲ್ಲಿ ನಿಂತು ಶಿವ ಪಾರ್ವತಿಯರು ನೋಡಿದರು. ಶಿವ ತನ್ನ ಮಗನಾದ ನಂಬಿಯ ವಿಳಾಸವನ್ನು ನೋಡಿ ತನಗಾದ ಸಂತಸವನ್ನು ಮುಚ್ಚಿಡಲಾಗದೆ 'ನೋಡು ನೋಡು ಪಾರ್ವತಿ ನಿನ್ನ ಪರವೆಯ ರೂಪುಮನೆನ್ನ ನಂಬಿಯಣ್ಣನ ವಿಳಾಸಮಂ ಇವರಿರ್ವರ ಸುಖ

ಮಂಗಳಾಲಂಕಾರಗಳನ್ನು ಮಾಡಿ ಪರವೈಯಾರ್ ಎಂಬ ಹೆಸರನ್ನು ಶಾಸ್ತ್ರವಿಧಿಯಂತೆ ಇಟ್ಟರು. ಆ ಮಗುವಿಗೆ ಒಂದು ತಿಂಗಳಾಗುವಾಗ ಸಂಬಂಧಿಕರೆಲ್ಲಾ ಒಟ್ಟು ಸೇರಿ, ಮಗುವನ್ನು ಕಾಪಾಡುವಂತೆ ತಮ್ಮ ಇಷ್ಟದೇವತೆಗಳನ್ನು ಸ್ತುತಿಸಿ, ಆಯಾ ಮಾಸಗಳಲ್ಲಿ ಬಂದು ಸೇರುವ ಆಯಾ ಪರ್ವಗಳಲ್ಲೆಲ್ಲಾ ತಕ್ಕ ಸಂಸ್ಕಾರಗಳನ್ನು ಚಂದವಾದ ರೀತಿಯಲ್ಲಿ ಮಾಡಿದರೆಂದು ಶೇಕ್ಕಿಳಾರ್ ಹೇಳುವನು (ಪೆ. ಪು. ಪ. 268-269).

ದೋಜೆಯನೀ ಜಗತ್ರಯಂ ಮೆಚ್ಚೆ ಪೂಜೆಯಾಗಿ ಕೈಗೊಂಡಪಂ ಇವರಿರ್ವರ ಸುಖ ನಿಮಿತ್ತವಾನುಂ ನೀನುಮಿನಿತು ಬೇಗಂ ಬಿಯ್ಯಗರಾಗಿರ್ಪೆವು' ಎಂದು ವಿನೋದ ಮಾಡುವನು (ನಂಬಿರ ಸ್ಥ. 10, ಸಾ. 76-80). ಸಮಕುಲದ, ಸಮರೂಪಿನ, ಸಮಚಿತ್ತದ, ಸಮಯೌವನದ, ಸಮಾನುರಾಗದ, ಸಮಸುಖದ ನಂಬಿ-ಪರವೆಯ ರನ್ನು ಸೆಜ್ಜೆಯ ಮನೆಯಲ್ಲಿ ಕೂಡಲು ಅವರು ಮನ್ಮಥ ಸುಖದಲ್ಲಿ ತನಿಗರಗಿ ಮಳಲ ಪುತ್ಥಳಿಗಳ ಮೇಲೆ ಮಳೆ ಕೊಂಡಂತೆ, ಶಶಿಕಾಂತದ ಪ್ರತಿಮೆ ಚಂದ್ರನಪ್ಪಿದಂತೆ ಸುರತ ಸುಖದಲ್ಲಿ ತೇಲಾಡಿದರು. ಅವರು ಇರುಳುಂ ಹಗಲೆಂಬುದನರಿಯದೆ ಹಲವು ದಿವಸ ಗಳನ್ನು ನಿಮಿಷಗಳಾಗಿ ಕಳೆದು ಕಾಮಸುಖವನ್ನು ಶಿವಾರ್ಪಿತ ಮಾಡುತ್ತ ಸುಖಿಸಿದ ರೆಂದು ಹರಿಹರ ವರ್ಣಿಸುವನು (ನಂಬಿರ ಸ್ಥ. 10, ಸಾ. 93-113).

(ಸಶೇಷ)

ಬೆಕ್ಕುಗಳು

ಇಂಗ್ಲೀಷ್ : ಎನ್. ಎಸ್. ಜಿ. ಟೆಸ್ಸಿಮೊಂಡ್

ಕನ್ನಡಕ್ಕೆ : ಎನ್. ವೆಂಕಟಕೃಷ್ಣ

ನೆರಳಿಗಿಂತಲೂ ಹಗುರವಾಗಿ ಕರಗುವ
ಬೆಕ್ಕುಗಳು-
ಪರಿಸರಕ್ಕೆ ಧ್ವನಿಸುವುದಿಲ್ಲ
ಕೂದಲೆಳೆಯ ಅಂತರಗಳಲ್ಲೂ ಉಗ್ಗುತ್ತಾ ಕುಗ್ಗುತ್ತಾ
ಚೊಕ್ಕವಾಗಿ-ಅಳತೆ ಮೀರದೆ
ನುಸುಳುತ್ತಾ
ಬಂಧವಿಲ್ಲದ ಓಡಾಟಗಳಲ್ಲಿ
ಪ್ರತಿಕ್ರಿಯಿಸುತ್ತಾ
ಕೋಪದಿಂದ ಆಗಾಗ
ಮುಷ್ಟಿಬಿಗಿಯುತ್ತಾ
ಆಕರ್ಷಣೀಯವಾಗುತ್ತವೆ
ಕತ್ತಲೆಯಂತೆ ಸರದಿಗೆ ಕಾದು-
ನುಗ್ಗಿ ಬಂದಷ್ಟೇ ವೇಗದಲ್ಲಿ
ನಿಷ್ಕ್ರಮಿಸುತ್ತವೆ
ಯಾವುದೇ ಸೂತ್ರಕ್ಕೆ ಬದ್ಧವಾಗದ
ಈ ಹೇಡಿ ಬೆಕ್ಕುಗಳು
ಬದುಕಿನ ಒಡೆತನಕ್ಕಾಗಿಯೇ ಬದುಕುತ್ತವೆ
ಸಾಯುವವರೆಗೂ
ನೆರಳಿಗಿಂತಲೂ ತೀವ್ರವಾಗಿ ಕರಗುವ
ಈ ಬೆಕ್ಕುಗಳು
ಪರಿಸರಕ್ಕೆ ಸ್ಪಂದಿಸುವುದಿಲ್ಲ

ಸಮಾಸ ರಚಕಗಳು

ಎ. ಶಿವಾನಂದ

1.0. ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಮುಕ್ತಾಕೃತಿಮಾಗಳು ಸಂಧಿಯಾಗಿ ಅಥವಾ ಸಂಧಿಕಾರ್ಯವಿಲ್ಲದೆಯೂ (ಲೋಪ/ಆಗಮ/ಆದೇಶ) ಒಂದು ಹೊಸ ರೂಪ ಮತ್ತು ಅರ್ಥವನ್ನು ನೆಲೆಗೊಳಿಸುವುದು ಸಮಾಸ. ಆಕೃತಿಮಾ ಗಣಗಳಲ್ಲಿ ಇದೊಂದು 'ಬೃಹದಾಕೃತಿಮಾ' ಎನ್ನಬಹುದು. ಆದರೆ ರಚನೆಯಲ್ಲಿ ಸಂಯುಕ್ತಾಕೃತಿಮಾ, ನಿಕಟತಮ ರಚನೆಗಳ (immediate constituents) ದೃಷ್ಟಿಯಿಂದ ವಾಕ್ಯ ಮಟ್ಟದಲ್ಲಿನ ಪದಪುಂಜಕ್ಕಿಂತ ಇದು ವಿಶಿಷ್ಟವಾದುದು. ಇದನ್ನು ಉಚ್ಚಾರಣೆ ಹಾಗೂ ಅರ್ಥ ಇವೆರಡೂ ದೃಷ್ಟಿಯಿಂದ ಅರಿಯಬಹುದು. ನಿದರ್ಶನಕ್ಕೆ :

।॥ ಕೋಗಿಲೆ। ಇಂಚರದಿಂದ॥ ಹಾಡುತ್ತದೆ।॥ (ನಾ.ಪುಂ. + ಕ್ರಿ.ಪುಂ. = ವಾಕ್ಯ).
॥। ಕೋಗಿಲೆ। ಇಂಚರ + ದಿಂದ ॥ ಹಾಡು + ಉತ್ತ + ದೆ ॥।
॥। ಕೋಗಿಲೆ। ಇನಿದು। ಸ್ವರ + ದಿಂದ ॥ ಹಾಡು + ಉತ್ತ + ದೆ ।॥
।॥ ವಾಕ್ಯವಲಯ ಸಂಕೇತ. ॥ ಪದಪುಂಜವಲಯ ಸಂಕೇತ.। ಆಕೃತಿಮಾವಲಯ ಸಂಕೇತ).

ಮೇಲಿನ ವಾಕ್ಯದಲ್ಲಿ ಕೆಲವೊಂದು ಸರಳಾಕೃತಿಮಾ, ಆಖ್ಯಾತಾಕೃತಿಮಾ (Inflections) ಹಾಗೂ ಸಂಯುಕ್ತಾಕೃತಿಮಾ ಗಣಗಳು ಸೇರಿಕೊಂಡಿವೆ.

1) ಸರಳ→ಕೋಗಿಲೆ, ಹಾಡು (ಮುಕ್ತ)
2) ಆಖ್ಯಾತ→ಇಂಚರ + ದಿಂದ ('ಇಂಚರ'–ವಾಕ್ಯಂಗದಲ್ಲಿ ಮುಕ್ತ 'ದಿಂದ' ಬದ್ಧ.)
3) ಸಂಯುಕ್ತ→ಇನಿದು + ಸ್ವರ (ಮುಕ್ತ–ಮುಕ್ತ)

ಎರಡು ಮುಕ್ತಾಕೃತಿಮಗಳ ಸಂಯುಕ್ತತೆಯಿಂದ ಮತ್ತೊಂದು ಹೊಸ ನುಡಿ ಸಿದ್ಧವಾಗುವುದೇ ಇಲ್ಲಿ ಸಮಾಸ. ಇದನ್ನು ಹೀಗೆ ವಿವರಿಸಿದೆ :

ಪದ$_1$—ಪದ$_2$→ಪದ$_2$ (= ಸಮಾಸ)

ಸಮಾಸದಲ್ಲಿನ ಪದಗಳು ಹೇಗೆ ಮುಕ್ತವೆಂಬುದನ್ನು 'ಇಂಚರ' ದಿಂದಲೇ ಇಲ್ಲಿ ಉದಾಹರಿಸಿದೆ.

ಇನಿದು$_1$ = ಇನಿದಾದುದು, ಉದಾ :–'ನಿನ್ನ ಮಾತಂ ಇನಿದು'.

ಸ್ವರ$_2$ = ಧ್ವನಿ, ಕಂಠ. ಉದಾ :– ಕಾಗೆಯ ಸ್ವರ ಎಂದಿಗೂ ಅಪಸ್ವರವೇ'.


'ಕೋಗಿಲೆಯ ಸ್ವರ ಇನಿದು' ಎಂದು ವಾಕ್ಯ ಮಾಡಿದರೆ, ಇಲ್ಲಿ ಸಮಾಸ ರಚನೆಗೆ ಆಸ್ಪದವಿಲ್ಲ. ಆದರೆ ಅದನ್ನೇ 'ಕೋಗಿಲೆ ಇಂಚರದಿಂದ ಹಾಡುತ್ತದೆ' ಎಂಬಲ್ಲಿ 'ಇಂಚರ' ಪದ ಸಮಾಸವಾಗುತ್ತದೆ.

'ಇನಿದು' ಎಂಬ ಪೂರ್ವ ಪದದ ಮೇಲೆ ಇಲ್ಲಿ ಉಚ್ಚಾರಣೆಯ ಆಘಾತವಿದ್ದು, ಸಾಮಾನ್ಯವಾಗಿ ಇತರ ಪಕ್ಷಿಗಳ ಧ್ವನಿಗಿಂತ ಅದು ವಿಶಿಷ್ಟ ಕಂಠಶ್ರೀಯನ್ನು ಪಡೆದುದಾಗಿ ನಮಗೆ ತಿಳಿಯುತ್ತದೆ. ಇದರಿಂದ ಒಟ್ಟಾರೆ ಸಮಾಸದಲ್ಲಿ ಈ ಕೆಳಗಿನ ಲಕ್ಷಣಗಳು ಮುಖ್ಯವೆನ್ನಿಸುತ್ತವೆ.

1.1. ಸಮಾಸ = 1) ಮುಕ್ತಾಕೃತಿಮಾಗಳ ಸೇರುವಿಕೆ +
2) ನಿಕಟತಮ ಘಟಕಗಳಿನ್ನಿಸಿರುವುದು +
3) ಸ್ವರಾಘಾತದಿಂದ ಅರ್ಥ ಪರಿವರ್ತನೆ +
4) ಆಖ್ಯಾತ ಸಂಬಂಧ ಅಥವ ಕೇಂದ್ರ ರಚನೆಯಿಂದ ಅರ್ಥಬೋಧೆ

1.1.1. ಮುಕ್ತಾಕೃತಿಮಾಗಳ ಸೇರುವಿಕೆ

ಆಕೃತಿಮಾ ಗಣ ವಿಭಜನೆಯಲ್ಲಿ ಸಮಾಸ ಪದಗಳು ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಮುಕ್ತಾಕೃತಿಮಾಗಳನ್ನು ಒಂದಾಗಿಸುತ್ತವೆ. ಇದನ್ನು ಕೆಳಗಿನ ವಿಂಗಡಣೆಯಿಂದ ತೋರಿಸಿ, ಸಮಾಸ ರಚನೆಗೆ ಮಾತ್ರ ಇಲ್ಲಿ ಉದಾಹರಿಸಿದೆ.



1.1.2. ನಿಕಟತಮ ಘಟಕಗಳು ;

ಆಕೃತಿಮಾಗಳು ಪರಸ್ಪರ ಸೇರುವಲ್ಲಿ ನಾಮವರ್ಗದ ಸಮಾನತ್ವವನ್ನೇ ಪಡೆದಿರಬೇಕೆಂಬ ನಿಯಮವಿಲ್ಲ. ಅವು ನಾಮಕ್ಕೆ ಹೊರತಾದ ಘಟಕಗಳಿಂದಲೂ ನಿಕಟತ್ವವನ್ನು ಅರ್ಥಾತ್ ಸನ್ನಿಹಿತವನ್ನು ಸಾಧಿಸಬಹುದು[1]. ಇಂತಹ ಸನ್ನಿಹಿತ ಘಟಕಗಳನ್ನು ನಾವು ವಾಕ್ಯದಲ್ಲಿ ಕಾಣುವಂತೆ ಸಮಾಸ ರಚನೆಯಲ್ಲೂ ಕಾಣುತ್ತೇವೆ. ಕೇಶಿರಾಜ 'ಕರುತಾಯ ಬೞಿಯನುೞಿಯದ ತೆಱದಿಂ ನಾಮಪದಂ ಅರ್ಥಾನುಗಮ್ ಆಗೆಱಿಗೆ ಎಂದಿರುವಲ್ಲಿ (ಶ.ಮ.ದ. 173) ಕರು ತಾಯಿಯನ್ನು ಸೇರುವಂತಿರುವದೇ ನಿಕಟತಮ ಘಟಕ. ಆದರೆ ಕೇಶಿರಾಜನ ಸಾದೃಶ್ಯ, ರೂಪಗಳ ನಿಕಟತಮ ಘಟಕಕ್ಕೆ ಸೇರಿದ್ದೋ, ಅರ್ಥ ಸಂಬಂಧದಲ್ಲಿನ ನಿಕಟತಮ ಘಟಕವನ್ನು

1. 'ನಾಮಪದಂ ಅರ್ಥಾನುಗಮಾಗೆಱಿಗೆ' (ಶ. ಮ. ದ ; ನಾ. ಪ್ರ, 173) ಆದರೆ ನಾಗವರ್ಮನು 'ಸಮರ್ಥ ಕ್ರಿಯಾಪದೇಸ (ಕ.ಭಾ.ಭೂ.ಸೂ. 140) ಎಂದೂ ಹೇಳಿದ್ದಾನೆ.

ಕುರಿತಾದುದೋ ಸ್ಪಷ್ಟವಾಗುವದಿಲ್ಲ. ಏನಿದ್ದರೂ ರೂಪ ಮತ್ತು ಅರ್ಥವನ್ನು ಒಟ್ಟಿಗೆ ಅನ್ವಯಿಸಿಕೊಂಡಿರುವದೂ ಸಹ ಅವುಗಳ ಲಕ್ಷಣಗಳಿಗೆ ಹೊರತಾದುದಲ್ಲ. ಇಲ್ಲಿ ಒಂದು ವಾಕ್ಯವಿದೆ.

'ನಮ್ಮ ತೋಟದಲ್ಲಿ ಅತ್ಯುತ್ತಮ ಚಿಕ್ಕಲಿಂಬೆ ಹಣ್ಣಿನ ಗಿಡಗಳಿವೆ'

ಈ ವಾಕ್ಯದಲ್ಲಿ ನಿಕಟತಮ ಘಟಕಗಳಾವುವು ?

* ನಮ್ಮ ತೋಟ–ದಲ್ಲಿ ಅತ್ಯುತ್ತಮ ಚಿಕ್ಕ
* ಲಿಂಬೆ ಹ–ಣ್ಣಿನ ಗಿಡ
* ಗಳಿವೆ.

ಮೇಲಿನ ವಾಕ್ಯ ವಿಭಜನೆ ಸರಿಯಾದುದಲ್ಲ. ಆದುದರಿಂದ ಅರ್ಥವತ್ತಾದ ನಿಕಟತಮ ಘಟಕಗಳು.

1. ನಮ್ಮ ತೋಟದಲ್ಲಿ–
ಅತ್ಯುತ್ತಮ ಚಿಕ್ಕಲಿಂಬೆ ಹಣ್ಣಿನ } ನಾಮಪುಂಜ.
2. ಗಿಡಗಳಿವೆ. ಕ್ರಿಯಾಪುಂಜ.

ಇಲ್ಲಿ ಅತ್ಯುತ್ತಮ 'ಚಿಕ್ಕಲಿಂಬೆ' ಎಂಬವುಗಳಲ್ಲಿ ರೂಪದೃಷ್ಟಿಯಿಂದ ಪದ-ಪದಗಳ ಸೇರುವಿಕೆಯಿದ್ದರೂ, 'ಅತ್ಯುತ್ತಮ' ಸಮಾಸವಲ್ಲ. 'ಚಿಕ್ಕಲಿಂಬೆ' ಮಾತ್ರ ಸಮಾಸ. 'ಬಹಳೇಅತ್ಯುತ್ತಮಚಿಕ್ಕ' ಎಂದಾದರೂ ಸಹ ಇವು ಸಾಮಾಸಿಕವಾದ ನಿಕಟತಮ ಘಟಕಗಳಾಗಲಾರವು. ಇವು ನಾಮದ ಅರ್ಥವನ್ನು ಹೊಂದದೆ ಕೇವಲ, ವಿಶೇಷಣಗಳೇ ಎನ್ನಿಸುತ್ತವೆ.[2] ಆದರೆ 'ಚಿಕ್ಕಲಿಂಬೆ'ಯಲ್ಲಿ ವಿಶಿಷ್ಟವಾದ ಹಾಗೂ ಸಾಮಾನ್ಯ ಪದಗಳು ನಿಕಟತಮ ಘಟಕಗಳಾಗಿವೆ. ಲಿಂಬೆ ಒಂದು ಮರದ ಜಾತಿ 'ಚಿಕ್ಕ' ಎಂಬ ವಿಶೇಷಣ ಸೇರಿ ಅದೊಂದು ಪ್ರತ್ಯೇಕ ಜಾತಿ ಎಂಬ ಅರ್ಥ ನಿಷ್ಪನ್ನವಾಗಿದೆ. ಆದುದರಿಂದ ಸಮಾಸದಲ್ಲಿ ರೂಪ, ಅರ್ಥ ಎರಡೂ ಸನ್ನಿಹಿತವಾಗಿರಬೇಕೆಂಬ ಅಂಶ ಮುಖ್ಯವಾಗಿದೆ. ಸಮಾಸದಲ್ಲಿ ಕಾಣುವ ಈ ಬಗೆಯ ನಿ. ಘ. ಗಳ ಎರಡು ಮಾದರಿಗಳನ್ನು ಕೆಳಗೆ ಕೊಟ್ಟಿದೆ,

---

1. ಚಿಕ್ಕಲಿಂಬೆ, ಗಜಲಿಂಬೆ, ಸಕ್ಕರಿಲಿಂಬೆ, ಕಂಚಿಲಿಂಬೆ, ಕುರುಬಲಿಂಬೆ ಎಂಬಿವು ಉ.ಕ. ದಲ್ಲಿನ ಲಿಂಬೆಯ ಹಲವು ಪ್ರಕಾರಗಳಾಗಿವೆ.
2. ಬಹಳ, ಅತ್ಯುತ್ತಮ ಎಂಬಿವು ಇಲ್ಲಿ ಕ್ರಿಯಾ ವಿಶೇಷಣಗಳು. ವಿಶೇಷಕ್ಕೆ ನೋಡಿ. 'Can the adjective be pre-modified by an Adverb ? Valeric Adams. An Introdcation to Modern English Word–Formation (I.M.E.W.) Longman. (1973)

1) ನಾಮ + ನಾಮನಿಕಟತ್ವ : ಗುಣವಿಶೇಷಣ + ನಾಮ : ಇತರ ವಿಶೇಷಣ ವರ್ಗ

ಉದಾ :- ತಂಗಾಳಿ ತಣ್ಗಿತ್ತು + ಗಾಳಿ

ಸ್ಥಾನಾಪತ್ತಿಯಿಂದ ಸೇರುವ ಇತರ ವಿಶೇಷಣ ವರ್ಗ. { ಬೆಂ, ಕಡು, ಬಿರು } + ಗಾಳಿ { ಸುಳಿ, ಪಡು, ಸುಂಟರ } + ಗಾಳಿ

2) ಕಾರಕ + ಕ್ರಿಯೆಗಳ ನಿಕಟತ್ವ : ಉದಾ : ಕೀರ್ತಿವಡೆ ಕಾರಕ + ಕ್ರಿಯೆ
ಕೀರ್ತಿಯಂ_ವಡೆ


ಸ್ಥಾನಾಪತ್ತಿಯಿಂದ ಸೇರುವ ಇತರ ನಿ. ಘ. ಗಳು { ಜಯ, ಧನ, ಬೆರಗು } + ಪಡೆ→ ಜಯವಡೆ, ಧನಂವಡೆ, ಬೆರಗುವಡೆ

"ಶ್ರೀ ಶರಣಬಸವೇಶ್ವರ ಹೆಣ್ಣುಮಕ್ಕಳ ಶಾಲೆಗೆ ಸೋಮವಾರ ರಜೆ ಇದೆ"

ಮೇಲಿನದರಲ್ಲಿ 'ಶ್ರೀ ಶರಣಬಸವೇಶ್ವರ ಹೆಣ್ಣುಮಕ್ಕಳ' ಎಂಬಲ್ಲಿ ವಾಕ್ಯಾಂಶೀಯ ಸಂಬಂಧವಿದೆ. ಆದರೆ ಸಾಮಾಸಿಕವಾಗಿ ಅವು ನಿ. ಘ. ಗಳಾಗಲಾರವು. 'ಶಾಲೆ' ಪದಕ್ಕೆ ಹಿಂದಿನ ಇವೆರಡೂ ನಿ. ಘ. ಗಳಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಸೇರಿದಾಗ ಅಲ್ಲಿನ ರೂಪಗಳು ಸಮಾಸವಾಗುತ್ತವೆ.

ಸಮಾಸಗಳು ಕೇವಲ ಆಕೃತಿಮಾ ಮಟ್ಟದಲ್ಲಿ ಮಾತ್ರ ಕಾರ್ಯನಿರ್ವಹಿಸದೆ ಅವು ವಾಕ್ಯಮಟ್ಟದಲ್ಲೂ ಸಹ ಭಾಷಿಕ ಕಾರ್ಯವನ್ನು ನಿರ್ವಹಿಸುತ್ತಿರುತ್ತವೆ.[1] ಇಲ್ಲಿ ಇವೆರಡೂ ನಿ. ಘ ಗಳ ವಿಶ್ಲೇಷಣೆಯನ್ನು ತೋರಿಸಿದೆ.

ಉದಾ :- ಒಳ್ನುಡಿ



ನುಡಿಒಳ್ಳಿತು → ಒಳ್ನುಡಿ

1. ವಿಶೇಷಕ್ಕೆ Dr. S. Agesthialingom ; 'Adjectives in Dravidian. Dr. Ling V. (1976)

1.1.3. ಸ್ವರಾಘಾತ

ಎರಡು ಮುಕ್ತ ನಿಕಟತಮ ಘಟಕಗಳನ್ನು ಒಂದು ವಾಕ್ಯದಲ್ಲಿ ವಿರಾಮವಿಲ್ಲದಂತೆ ಎಲ್ಲಿ ಉಚ್ಚರಿಸಲು ಸಾಧ್ಯವಾಗುವದೋ ಅಂಥಕಡೆಯಲ್ಲಿ ಸಮಾಸ ಸಿದ್ಧಿಸುತ್ತದೆ. ಇದನ್ನು ನಿ. ಘ ಗಳ ದ್ವಿಭಾಗೀಯ ವಿಂಗಡಣೆಯಿಂದ ಹಿಂದೆ ತಿಳಿಸಿದೆ. ಸಮಾಸ ಪದಗಳನ್ನು ಭಾಷೆಯ ವ್ಯವಹಾರದಲ್ಲಿ ರೂಢಿಯಿಂದಲೇ ಅರ್ಥ ಮಾಡಿಕೊಳ್ಳುವ ಕ್ರಮವಿದ್ದರೂ, ಶಾಸ್ತ್ರೀಯವಾಗಿ ನೋಡಿದಾಗ ಅವುಗಳ ಉಚ್ಚಾರಣೆ ಮತ್ತು ಅಲ್ಲಿನ ಸ್ವರಾಘಾತಕ್ಕೂ ಸಹ ಅಷ್ಟೇ ಮಹತ್ವವಿದೆ. ಅರ್ಥ ಪರಿವರ್ತನೆಯ ದೃಷ್ಟಿಯಿಂದ ಸ್ವರಾಘಾತಕ್ಕಿರುವ ಮಹತ್ವವನ್ನು ಕೆಲವು ಉದಾಹರಣೆಗಳಿಂದ ಇಲ್ಲಿ ತಿಳಿಸಿದೆ[1]

ಸ್ವರಘಾತ ಚಿಹ್ನೆ[2]

ಉದಾ :-

1) ಶ್ವೇತ ಭವನ, (ಸಮಾನ ಸ್ವರಾಘಾತ) ಸುಣ್ಣಬಳಿದ ಯಾವುದೇ ಮನೆ (ಸ. ಸ್ವ)
ಶ್ವೇತ ಭವನ, (ಪೂರ್ವಪದ ಸ್ವರಾಘಾತ) – ನಿರ್ದಿಷ್ಟವಾದ ಮನೆ (ಪೂ. ಸ್ವ) — ಅಮೇರಿಕ ಅಧ್ಯಕ್ಷರ ನಿವಾಸ.

2) 'ಹಂಡ' ಆಕಳು[3]–(ಸ.ಸ್ವ.) 'ಹಂಡ–ಬಂಡ ಬಣ್ಣದ ಯಾವುದೇ ಆಕಳು. ಹಂಡ ಆಕಳು–(ಪೂ.ಸ್ವ.) 'ಸ್ವಭಾವದಲ್ಲಿ ದುಷ್ಟವಾದ ಒಬ್ಬ ಮಾಲೀಕನ ಆಕಳು'

3) 'ವಿರಕ್ತ' ಮಠ–(ಸ.ಸ್ವ.) ಯಾವುದೇ ಊರಿನಲ್ಲಿರುವ ವಿರಕ್ತಮಠ (ಸಾಮಾನ್ಯಾರ್ಥ) 'ವಿರಕ್ತಮಠ[4]–(ಪೂ.ಸ್ವ.) ಒಂದು ಮನೆತನದ ಅಡ್ಡನಾಮವುಳ್ಳ ವ್ಯಕ್ತಿ (ವಿಶೇಷಾರ್ಥ)

---

1. ಇಂದ್ರಶತ್ರು - ವರ್ಧಸ್ವ; ಸಮಾನ ಸ್ವರಾಘಾತಿ, ಇಂದ್ರನ ಶತ್ರುವಾದ ತ್ವಷ್ಟ್ರ ಬೆಳೆಯಲಿ ಎಂಬರ್ಥ, ಇಂದ್ರಶತ್ರು-ವರ್ಧಸ್ವ : ಪೂರ್ವಸ್ವರಾಘಾತಿ—ಇಂದ್ರನು ತ್ವಷ್ಟೃವಿಗೆ ಶತ್ರುವಾಗಿ ವಧಿಸಲಿ ಅರ್ಥ – ತೈತ್ತರೀಯ.
2. ಇಂಗ್ಲೀಷಿನಲ್ಲಿ ಸ್ವರಾಘಾತ ಚಿಹ್ನೆ ಸ್ವರದ ಮೇಲೆಯೇ ಬರುವದು ರೂಢಿ. ಇಲ್ಲಿ ಪದದ ಆರಂಭವನ್ನು ಆಘಾತದಿಂದ ವಿಶೇಷವಾಗಿ ಸೂಚಿಸಿದೆ.
3. ಬ್ಲೂಮ್ ಫೀಲ್ಡ್ ಅವರು ಕೊಟ್ಟಿರುವ Black bird ಉದಾಹರಣೆಯಲ್ಲಿ ಇಲ್ಲಿ ಪ್ರಸಿದ್ಧ Lang. Chap. 14. p. 227
4. ಇಲ್ಲಿನ ಅಡ್ಡನಾಮ ಉತ್ತರ ಕರ್ನಾಟಕದವರಿಗೆ ಹೆಚ್ಚು ಪರಿಚಿತ.

4) ವನ್ಯಮೃಗಾಲಯ (ಪದಪುಂಜ) (Wild animal house) 'ವನ್ಯ ಮೃಗ-ಆಲಯ[1] 'ವನ್ಯಮೃಗ' (ಸಮಾಸ)

ಸಮಾಸಗಳಲ್ಲಿ ಪೂರ್ವ ಪದದ ಮೇಲಿನ ಸ್ವರಾಘಾತವು ಅರ್ಥವನ್ನು ಪರಿವರ್ತಿಸುತ್ತದೆ. ಆದರೆ ಎಲ್ಲ ಸಮಾಸಗಳು ಇಂಥಲ್ಲಿಯೇ ಸ್ವರಾಘಾತವನ್ನು ಹೊಂದಿರುತ್ತವೆಯೆಂದು ಹೇಳಲಾಗುವದಿಲ್ಲ. ಇದನ್ನು ವಿಶೇಷ್ಯ-ವಿಶೇಷಣ ಸಂಬಂಧದಲ್ಲಿ ಮಾತ್ರ ಗುರುತಿಸಬಹುದು. ಈ ದೃಷ್ಟಿಯಿಂದ ಇವನ್ನು ಆಶ್ರಿತ ಮಾದರಿಯ ಸಮಾಸಗಳು (Attributive or subordinate compounds) ಎನ್ನಲಾಗುತ್ತದೆ. ಈ ಕೆಳಗಿನವು ಆಶ್ರಿತವೆನ್ನಿಸದೆ ಸಮಾನಾಶ್ರಿತ ಲಕ್ಷಣದಿಂದಿವೆ.

ಉದಾ :—ಜಾಣ ಜಾಣೆ—(ಸಮಾನಾಧಿಕರಣತ್ವದಿಂದ ಗ್ರಾಹ್ಯ)
ಗಂಗೆ–ಯಮುನೆ ,, ,,
ಭೀಮಾರ್ಜುನ ನಕುಲ ಸಹದೇವ ,, ,,

ಸಮಾನಾಶ್ರಿತಗಳಲ್ಲಿ ಕೇವಲ ದ್ವಂದ್ವ ಸಮಾಸಗಳಷ್ಟೇ ಅಲ್ಲದೆ, ಎರಡಂ ಮುಕ್ತ ನಾಮಾಕೃತಿಮೀಯಗಳುಳ್ಳ ನಿಕಟತಮ ಘಟಕಗಳೂ ಸಹ ಸಮಾವೇಶವಾಗುತ್ತವೆ. ಇಲ್ಲಿ ಎರಡೂ ಘಟಕಗಳು ಉಚ್ಚಾರಣೆಯಲ್ಲಿ ಮಹತ್ವದ್ದಾಗುತ್ತವೆ.

ಉದಾ :—ಮನೆಗೆಲಸ	ಜೇನುಗೂಡು
ಹೊಲ–ಮನೆ	ಮಳೆ ಬಿಲ್ಲು
ದವಾಖಾನೆ	ಮಂಜುಗಡ್ಡೆ

ಕೆಲವೊಂದು ಸಮಾಸಗಳು ಸ್ಥಾನಪಲ್ಲಟವಾದಾಗಲೂ ಸಹ ಅರ್ಥ ಬದಲಾವಣೆಯಾಗುವುದಿಲ್ಲ. ಇವನ್ನು ಕೂಡ ಸಮಾನಾಶ್ರಿತಗಳ ಸಾಲಿಗೇ ಸೇರಿಸಬಹುದು. ಆದರೆ ಇಲ್ಲಿ ಅವುಗಳ ಪ್ರಯೋಗವೇ ನಿರ್ಣಾಯಕವಾಗುತ್ತದೆ.

ಉದಾ :—ಬೇಂದ್ರೆ ಮಾಸ್ತರು	ರಾಣಿ ಎಲಿಝಬೆಥ್
ಮಾಸ್ತರು ಬೇಂದ್ರೆ	ಎಲಿಝಬೆಥ್ ರಾಣಿ

ಕೆಲವೊಮ್ಮೆ ಮುಕ್ತಾಕೃತಿಮೀಯ ಘಟಕಗಳನ್ನು ತಿರುವು ಮುರವು ಮಾಡಿದರೆ ಅರ್ಥ ವ್ಯತ್ಯಾಸವಾಗುತ್ತದೆ. ಇವು ವಿಪರ್ಯಯ ಸಮಾಸಗಳು (Reversible compounds).

---

1 Bloom Field–Lang. Chap. 14, P–228

ಉದಾ :—ನ್ಯಾಯ ಗ್ರಂಥ — ನ್ಯಾಯಶಾಸ್ತ್ರದ ಹೊತ್ತಗೆ
(i) ಗ್ರಂಥನ್ಯಾಯ ಗ್ರಂಥದ ವಿಷಯದಲ್ಲಿ ನಡೆದ ವ್ಯಾಜ್ಯ
(ii) ಕಡೆಮನಿ ಊರಿನ ಮನೆಗಳಲ್ಲಿ ಕೊನೆಯದು
ಮನಿಕಡಿ ಒಂದೇ ಮನೆಯ ಕೊನೆ ಭಾಗ.

1.1.4. ಕೇಂದ್ರ ರಚನೆಯ ನೆಲೆಯಲ್ಲಿ ಸಮಾಸ ವರ್ಗೀಕರಣ

ಏಕ ವರ್ಗ ಅಥವ ವಿಭಿನ್ನ ವರ್ಗದ ನಿಕಟತಮ ಘಟಕಗಳು ಸೇರಿ ಒಂದು ಹೊಸ ಪದಪುಂಜ ನಿರ್ಮಾಣಗೊಳ್ಳುತ್ತದೆ. ಇದು ಪರಿಣಾಮಿತ ಪದಪುಂಜ. (Resultant phrase) (=ಸಮಾಸ) ಈ ನಿಕಟತಮ ಘಟಕಗಳ ರಚನೆಯ ಆಯ್ಕೆ ಎಲ್ಲಿಂದ? ಮತ್ತು ಈ ಬಗೆಯ ರಚಕಗಳಲ್ಲಿ 'ಕೇಂದ್ರ' ಯಾವುದು? ಮತ್ತು ಅದರ 'ಪ್ರಸಾರ ವರ್ಗ ಯಾವುದು ?' ಎಂಬುದನ್ನರಿಯಬೇಕು. ಇಲ್ಲಿ ಕೇಂದ್ರವೆಂದರೆ ಸಮಾಸದಲ್ಲಿನ ಆಖ್ಯಾತನಿರ್ಣಯದ ಭಾಗ.[1] (Centre of function) ಇದನ್ನೇ 'ಕ್ರಿಯಾಕೇಂದ್ರ'ವೆಂದೂ ಹೇಳಲಾಗುತ್ತದೆ.[2] ಇದು ಸಂಯೋಜಿತವಾದ ನಿಕಟತಮ ಘಟಕಗಳಲ್ಲೇ ಇದೆಯೇ, ಅಥವಾ ಹೊರಗಿದೆಯೇ ಇಲ್ಲವೆ ಸಮಾನಾಧಿಕರಣದಲ್ಲಿ ಗ್ರಹೀತವೇ ಎಂಬುದರ ಮೇಲಿಂದ ಇಲ್ಲಿನ ಪರಿಣಾಮಿತ ಪದಪುಂಜಗಳನ್ನು ಆಯಾ ವರ್ಗಕ್ಕೆ ಸೇರಿಸಬಹುದು. ಅವನ್ನು ವಿಂಗಡಿಸಲು ಇದಕ್ಕೆ ಈ ಕೆಳಗಿನ ಅಂಶಗಳು ನೆರವಾಗುತ್ತವೆ.

1.1.4.1. ಉದಾ : ಬೆಳ್ದಾವರೆ

1. ನಿಕಟತಮ ಘಟಕಗಳ — ಬಿಳಿದು, ತಾವರೆ
2. ರಚನೆ — ಬೆಳ್ದಾವರೆ
3. ರಚಕಗಳು — ಗುಣವಾಚ+ನಾಮ
4. ಪ್ರಸಾರ — ನಾಗವರ್ಮ
5. ಕ್ರಿಯಾಕೇಂದ್ರ — ತಾವರೆ; ಪೂರಕ ಘಟಕ — ಬಿಳಿದು } ಅಂತಃಕೇಂದ್ರೀಯ

---

1 ಕಾರ್ಯವನ್ನು ನಿರ್ಧರಿಸುವ ರಚನೆಯ ಭಾಗ : ಡಾ. ಜೆ. ಎಸ್. ಕುಳ್ಳಿ. ವ.ಭಾ.ವಿ. ಪು. 164.

2 ಸಮಾಸ ಜರುಗಿಸುವ ವ್ಯಾಕರಣ ಕ್ರಿಯೆಯೇ ಕ್ರಿಯಾ ಕೇಂದ್ರ ಡಾ. ವಿಲ್ಯಂ ಮಾಡ್ತಾ ಕ.ಭಾ.ರೂ.ಪು. 75.

ತಾವರೆಯು ವರ್ಣವು ಬಿಳಿದು ಎಂಬುದನ್ನು ವರ್ಣಿಸುವ ಪೋಷಕ ಕ್ರಿಯೆಯೂ ಸಹ ಕೇಂದ್ರಿತವಾಗುವದು ತಾವರೆ ಎಂಬ ಪದದಲ್ಲಿ ಕ್ಷ ಇದನ್ನು ನಾಮವರ್ಗದ ಅಂತರ್ಯದಲ್ಲೇ ನಾವು ನಿರ್ಧರಿಸುವದರಿಂದ ಇದು ಅಂತಃಕೇಂದ್ರೀಯ[1] ಕೆಳಗಿನ ಉದಾಹರಣೆ.

1.1.4.2. ನಿಡುಮೂಗಿ

1. ನಿ.ಘ.ಗಳು — ನಿಡು — ಮೂಗು — ಇ
2. ರಚನೆ — ನಿಡು ಮೂಗಿ
3. ರಚಕಗಳು — ವಿಶೇಷಣ + ನಾಮ
4. ಪ್ರಸಾರ — ನಾಮ ವರ್ಗ
5. ಕ್ರಿಯಾಕೇಂದ್ರ — ತೃತೀಯ ಪುರುಷ 'ಇ' (ಬಹಿ:ಕೇಂದ್ರೀಯ)
6. ಪೂರಕ ಘಟಕಗಳು— ನಿಡಿದು ಮೂಗು

ಇಲ್ಲಿ 'ನಿಡುಮೂಗು' ಎಂದಿದ್ದರೆ ಅಂತಃಕೇಂದ್ರಿಯವಾಗುತ್ತಿತ್ತು (ಆದರೆ ಇ. ಪ್ರತ್ಯಯದಿಂದ ನಿಡುಮೂಗುಳ್ಳ ಬೇರೊಬ್ಬ ತೃ. ಪು. ವ್ಯಕ್ತಿ ಇಲ್ಲಿ ಮುಖ್ಯ ವಾಗುತ್ತಾನೆ. ನಿರ್ದೇಶಿತವಾದ ಇಲ್ಲಿನ ಎರಡೂ ನಿಕಟತಮ ಘಟಕಗಳು ಇಲ್ಲಿ ಅಮುಖ್ಯವಾಗುತ್ತವೆ. ಆದುದರಿಂದ ಇಲ್ಲಿನ ಕ್ರಿಯೆ ಬಾಹ್ಯದಲ್ಲಿ ಸ್ಥಾಪಿತವಾಗುವುದ ರಿಂದ ಇದು ಬಹಿಃಕೇಂದ್ರೀಯ ಇನ್ನೊಂದು[2] ವಿಧಕ್ಕೆ ನಿದರ್ಶನ.

1.1.4.3. 'ಮರಗಿಡ ಬಳ್ಳಿ'

1) ನಿ. ಘ. ಗಳು — ಮರವು + ಗಿಡವು + ಬಳ್ಳಿಯು
2) ರಚನೆ — ಮರಗಿಡಬಳ್ಳಿ
3) ರಚಕಗಳು — ನಾಮ + ನಾಮ + ನಾಮ
4) ಪ್ರಸಾರ — ನಾಮವರ್ಗ
5) ಕ್ರಿಯಾಕೇಂದ್ರ — ಸಮನಾಧಿಕರಣ ಕೇಂದ್ರೀಯ
6) ಪೂರಕ ಘಟಕ — × × ×

---

1 The resultant Phrase which belongs to the same form class as one of the constituents is Endocentric. Bloomfield lang. P. 194.

2 The resultant phrase belongs to the form class of no Immediate constitent is Exocentric Ibid : P 194.

1.1.4.4. ಮೇಲಿನ ಮೂರು "ಕ್ರಿಯಾ ಕೇಂದ್ರ"ಗಳ ಆಧಾರದಲ್ಲಿ ಕನ್ನಡ ವೈಯಾಕರಣರು ಹೇಳುವ ಹಿಂದಿನ ಸಮಾಸಗಳನ್ನು ಹಾಗೂ ಇನ್ನೂ ಹಲವಾರು ನೂತನವಾಗಿ ಗುರುತಿಸಬಹುದಾದ ಸಮಾಸಗಳನ್ನು ಕೆಳಗಿನಂತೆ ವಿಂಗಡಿಸಿದೆ.

ಕ್ರಿಯಾಕೇಂದ್ರ

- ಅಂತಃಕೇಂದ್ರಿಯ
  - ಸಮನಾಶ್ರಿತ
    - ನಾಮ + ನಾಮರಚಕಗಳು
  - ಆಶ್ರಿತ
    - ವಿಶೇಷ + ಸಮಾನ್ಯರಚಕಗಳು
      - (ಉತ್ತರಪದಮುಖ್ಯ) (ತತ್ಪುರಷ ಕ.ದಾ) ದ್ವಿಗು, ಗಮಕ, ಕ್ರಿಯೆ
      - (ಪೂರ್ವಪದಮುಖ್ಯ) ಅವ್ಯಯೀಭಾವ
- ಸಮಾನಾಧಿಕರಣ ಕೇಂದ್ರಿಯ (ಉಭಯ ಪದಮುಖ್ಯ) ದ್ವಂದ್ವ (ಸಮುಚ್ಚಯ – ಬೋಧಕ)
- ಬಹಿಃಕೇಂದ್ರಿಯ (ಉಭಯಪದ ಅಮುಖ್ಯ) ಬಹುವ್ರೀಹಿ.

1) ಅನುಪೂರಕ. ಉದಾ. ನೂರಾಪ್ಪತ್ತು

2) ವೈಕಲ್ಪಿತ–ಇಂದೊ–ನಾಳಿಯೊ

3) ವಿರೋಧಾಭಾಸಾತ್ಮಕ

ಉದಾ :— ರಾಣಿಚೆನ್ನಮ್ಮ (ರಾಣಿಯೇ ಚೆನ್ನಮ್ಮಳೇ ಚೆನ್ನಮ್ಮನೇ ರಾಣಿಯೆ ?)

ಭಕ್ತಿ ಭಂಡಾರಿ ಬಸವಣ್ಣ (ಭಕ್ತಿ ಭಂಡಾರಿಯೇ ಬಸವಣ್ಣನೇ ಬಸವಣ್ಣನೇ ಭಕ್ತಿ ಭಂಡಾರಿಯೆ ?

4) ವಾಕ್ಯಾತ್ಮಕ : 'ಗುಣಕ್ಕೆ ಸಲ್ಲ ಗಣೇಶಂ' ಗಜಬೇಂಟೆಕಾರಂ'

1.1.45. ವ್ಯಾಕರಣಗಳಲ್ಲಿ ಅರ್ಥ ದೃಷ್ಟಿಯಿಂದ ವಿಂಗಡಿಸಲಾಮುವನ್ನೇ ಮೇಲಿನ ಅಂಶಾಧಾರಗಳಿಂದ ಕೆಳಗಿನಂತೆ ವಿಭಾಗಿಸಬಹುದು.

	ಆಖ್ಯಾತನಿರ್ಣಯ	ಕೇಂದ್ರರಚಕ		ಹೆಸರು	ವರ್ಗ
ಉತ್ತರ ಪದ ಪ್ರಧಾನ ಉದಾ :	ಮಲ್ಲಿಗೆ ನನೆ	ಮಲ್ಲಿಗೆಯ ನನೆ		ತತ್ಪುರುಷ	ನಾಮ ವರ್ಗ
	ಕರಿಗೊರಲು	ಕರಿದು	ಕೊರಲು	ಕ.ಧಾ.	,,
	ಮೂಲೋಕ	ಮೂರು	ಲೋಕ	ದ್ವಿಗು	,,
	ಈಮನೆ	ಈ/ಇದು	ಮನೆ	ಗಮಕ	,,
ಪೂರ್ವಪದ ಪ್ರಧಾನ	ಅಂಗೈ	ಅಡಿ	ಕೈ	ಅವ್ಯಯಿಭಾವ	,,
ಉಭಯ ಪದ ಅಪ್ರಧಾನ	ಮುಕ್ಕಣ್ಣ	ಮೂರು ಕಣ್ಣು	ಅವಂ (ತೃಪು)	ಬಹುವ್ರೀಹಿ	,,
ಉಭಯ ಪದ ಪ್ರಧಾನ	ಅಣ್ಣತಮ್ಮ	—	ಅಣ್ಣ ತಮ್ಮ	ದ್ವಂದ್ವ	,,
	ಮೊಗನೋಡು	ಮೊಗಮಂ	ನೋಡು	ಕ್ರಿಯಾ	ಕ್ರಿಯಾ ವರ್ಗ

1.2. ಸಮಾಸ ರಚಕಗಳು

ರಚನಾತ್ಮಕವಾಗಿ ಸಮಾಸಗಳನ್ನು ವಿಂಗಡಿಸುವಲ್ಲಿ ಅವುಗಳ ಆಕೃತಿಮಾತ್ಮಕ ಸಂರಚಕ (constituents) ಹಾಗೂ ಅವುಗಳ ಸ್ವರೂಪ ಮುಖ್ಯವಾಗುತ್ತದೆ. ಕೇಶಿರಾಜನು 'ನೆಱೆಪ್ರೋಕ್ತಂ ಮಧ್ಯಗತ ವಿಭಕ್ತಿಗಳ್ ಅವಱೊಳೆ. ಎಂದಿದ್ದರೂ[1] ತನಗತ್ವಂ ವೆಱಗಿತ್ವಂ' ಎಂಬ ನಿಯಮದಿಂದ ಅದು ಮಾತಿನಂತೆ ಸ್ಪಷ್ಟವಾಗಿ ತೋರುವ ಗಮಕವನ್ನೂ ಸಹ ಹೇಳಿದ್ದಾನೆ. ಇದರಿಂದ ಆಕೃತಿಮಾತ್ಮಕ ಸಂರಚಕಗಳ ದೃಷ್ಟಿಯಿಂದ ಕನ್ನಡದಲ್ಲಿ ಕಾಣದೊರೆಯುವ ಸಮಾಸಗಳನ್ನು ಒಟ್ಟು ಕೆಳಗಿನಂತೆ ವಿಂಗಡಿಸಲು ಸಾಧ್ಯವಾಗುತ್ತದೆ.

ಮುಖ್ಯ ವಿಭಜನೆ

1. ನಾಮಾ ಕೃತಿಮೀಯ ರಚಕಗಳು
2. ಕ್ರಿಯಾಕೃತಿಮೀಯ ರಚಕಗಳು
3. ಇತರ

1.2.1. ನಾಮಾಕೃತಿಮೀಯ ರಚಕಗಳು

1. **ಪ್ರಧಾನ** ಉದಾಹರಣೆಗಳು
1. ನಾಮ–ನಾಮ–ಕನ್ನಡನಾಡು, ಜಿಲ್ಲಾ ಪರಿಷತ್ತು, ಮನೆಗೆಲಸ ರೇಶ್ಮೆಹುಳ
2. **ಸಮಾನಾಶ್ರಿತ**
2. ನಾಮ+ನಾಮ—ಅಣ್ಣತಮ್ಮ, ಗಂಡ ಹೆಂಡತಿ, ಗಿಡಮರ, ಪಾರ್ವತಿ ಪರಮೇಶ್ವರ
3. **ಆಶ್ರಿತ** ಉದಾ :
3. ಗುಣವಚನ+ನಾಮ→ಮೆಲ್ಮಾತು, ಬೆಳ್ಗದಂಪು (ಆದೇಶಿತ)

---

1. ಶಮದ ಸ. ಪ್ರ. ಸೂ. 162 2. ಸಂಸ್ಕೃತ ಸಮಾಸಗಳಲ್ಲಿ ವಿಭಕ್ತಿಪ್ರತ್ಯಯಗಳು ಲೋಪವಾಗಿ ತೋರುವುದನ್ನು 'ಲುಕ್' ಸಮಾಸವೆಂದೂ, ಲೋಪವಾಗದಿರುವರನ್ನು ಅಲುಕ್ ಸಮಾಸವೆಂದೂ ವಿಭಜಿಸುತ್ತಾರೆ. ಇಂಗ್ಲೀಷಿನಲ್ಲಿ Root compounds, Syntactical compounds, Stem Compounds Phrasal compounds verb object compounds, Hybrid compoundsಮುಂತಾದುದರ ವರ್ಗೀಕರಣವಿದೆ.
C. F. Hockett. A. C. M. L. P. chap. 28-24 Bloom field lang. P. 233

4. ಗುಣವಚನ + ನಾಮ → ಅಸಿಯಾನಡು ಪಸಿಯಬಣ್ಣ (ಆದೇಶ ರಹಿತ)
5. ಕೃದಂತ + ನಾಮ → ತೂಗುಂದೊಟ್ಟಿಲ್, ಆಡುಂಬೊಲ,
 ಸುಲಿಗಾಯಿ, ಸಿಡಿಗಾಯಿ (ಆದೇಶಿತ)
6. ಕೃದಂತ + ನಾಮ → ಪಾಡುವ ತುಂಬಿ, ಆಡಿದಪ್ರೊಲಂ; ಉಂಡ
 ಮರ್ದಂ (ಆದೇಶ ರಹಿತ)
7. ಸಂಖ್ಯೇಯ + ನಾಮ → ಮೂಲೋಕ ಎಣ್ದೆಸೆ
8. ಸಂಖ್ಯಾನ + ನಾಮ → ಇರ್ಪೆಂಡಿರ್, ಮೂವಾಳ್
9. ಸಂಖ್ಯೆ + ಸಂಖ್ಯೆ → ನೂಱುಪ್ಪತ್ತು, ಇಪ್ಪತ್ತೈದು, ಮೂವತ್ತಾಱು
10. ಸರ್ವನಾಮ + ನಾಮ → ಅವಮಾತು ; ಅವಕಾಂತೆ (ಆದೇಶ ರಹಿತ)
11. ಸರ್ವನಾಮ + ನಾಮ → ಅಮನೆ, ಈಮನೆ (ಆದೇಶಿತ)
12. ಗುಣಕ ಸಂಖ್ಯೇಯ + ನಾಮ → ಈರೇಳು ಲೋಕ
13. ವಿಶೇಷ + ನಾಮ → ಕೆಂದಾವರೆ ಬೆಳ್ದಿಂಗಳು, ಮೇಲ್ವಾತು, ಹೆದ್ದೀವಿಗೆ
14. ವಿಶೇಷಣ ಪೂರ್ವ + ನಾಮ → ಕೃಷ್ಣ ಸರ್ಪ
15. ಕೃದಂತ ವಿಶೇಷಣ + ನಾಮ → ತೂಗುಂದೊಟ್ಟಿಲು
16. ನಾಮ + ವಿಶೇಷಣೋತ್ತರ → ಗೋಪಾಲ ಬಾಲ
17. ವಿಶೇಷಣ + ವಿಶೇಷಣ → ಶೀತೋಷ್ಣ, ಓರಿಕಿರಿ, ಹಸಿಬಿಸಿ, ಟೊಳ್ಳು–ಗಟ್ಟಿ
18. ಉಪಮಾನಪೂರ್ವ + ನಾಮ → ಮೇಘಶ್ಯಾಮ
19. ಉಪಮಾನೋತ್ತರ → ಪುರುಷ ವ್ಯಾಘ್ರ
20. ಸಂಭಾವನ ಪೂರ್ವ → ಚೂತ ವೃಕ್ಷ
21. ಅವಧಾರಣ ಪೂರ್ವ → ಅಭಿಮಾನ ಧನ
22. ಪ್ರಮಾಣವಾಚಿ + ನಾಮ → ಕೆಲಮಾತು ಹಲದಿವಸ, ಅರಸಿ ಅರದೋಟಿ
23. ವಿಶೇಷಣ ಸಾಮಗ್ರಿ ನಾಮ + ಸಾಮಾನ್ಯ ನಾಮ → ಕಾಯಿ -- ಹಾಗಲಕಾಯಿ
 ಕುಂಬಳಕಾಯಿ
 ಬೆಂಡೆಕಾಯಿ

(ವರ್ಗೀಕೃತ – ವರ್ಗಕರ್ತ)
(classified – classifier

ನಾಮ + ಹಸಿ – ಅರ್ವಸಿ, ಹಾಲ್ವಸಿ, ತಾಯ್ವಸಿ, ತಾಡ್ವಸಿ,
+ ಗಾಳಿ – ಪಡುಗಾಳಿ, ಮೂಲಿಗಾಳಿ, ಗಂಗಿಗಾಳಿ
+ ವಾರ – ಬುಧವಾರ, ಗುರುವಾರ, ಶುಕ್ರವಾರ
+ ಕಸ – ಹೂಗಸ, ಚೆಂಂಚಗಸ, ಅಡಿಗಸ
+ ನೆಲ – ಹುಂಪ್ಲಿನೆಲ, ಕ್ಯಾಸ್ರಿನೆಲ, ಎರಿನೆಲ, ಹಾಳನೆಲ
+ ಹಣ್ಣು, – ಬಾಳೆಹಣ್ಣು, ಬಾರೆಹಣ್ಣು, ನೀಲ್ದಹಣ್ಣ
ಮಾವಿನಹಣ್ಣು,

24. ಅಂಶ + ಅಂಶಿ < ಒಳಪಡಸಾಲಿ. ಅಂಗಾಲಂ. ಅಂಗೈ

25. ಕ್ರಿಯಾವಿಶೇಷಣ + ನಾಮ – ಅಧೋಗತಿ

26 ಕ್ರಿಯಾಪದ + ನಾಮ → ತಡೆಯಾಜ್ಞೆ

IV 27. ಪ್ರಾತಿಪಾದಿಕ :

ಆಂಗ್ಲೋ–ಇಂಡಿಯನ್ (ಆಂಗ್ಲ → ಆಂಗ್ಲೋ
+ ಇಂಡಿಯನ್)

V ಪ್ರಾತ್ಯಯಿಕ : ಇದರಲ್ಲಿ ಕೆಳಗಿನವು ಮುಂಖ್ಯ ರಚಿತಗಳಾಗಿವೆ.

28. ತದ್ಧಿತ.
ವಿಶೇಷಣ + ನಾಮ – ರಾಜಕೀಯ ವಿಜ್ಞಾನ., → ಮಾನವಿಕ ವಿಜ್ಞಾನ,
ಸಾಮಾಜಿಕ–ಭಾಷಾ ವಿಜ್ಞಾನ

---

1 ಕೆಲವೊಂದು ಸಾಮಾನ್ಯ ನಾಮಗಳಾದ ಗಿಡ, ಮರ, ಸಸ್ಯ, ಭೂಮಿ, ಸೀಮೆ ಹಣ್ಣು ಫಲ ಕಾಯಿಗಳಿಗೆ ಸೇರುವ ಹಲವಾರು ವಿಶೇಷಣಗಳನ್ನಲ್ಲಿ ವಿಶೇಷಣ ಸಾಮಗ್ರಿ ಎಂದಿದೆ. ಇಲ್ಲಿನ ವಿಶೇಷಣಗಳಿಂದ ಸಾಮಾನ್ಯ ನಾಮವು ವರ್ಗಕರ್ತ (classifier) ಎನ್ನಿಸುತ್ತದೆ. ವಿಶೇಷಣಗಳು ಇಲ್ಲಿ ಅವಯುವನಾಗಿ (corpus) ಸೇರುತ್ತವೆ. ಅಂತಃ ಕೇಂದ್ರೀಯದಲ್ಲಿ ಇದೊಂದು ಸಾಮಾನ್ಯ ರಚನೆಯೆಂಬುದಾಗಿ ಡಾ : ಭ. ಕೃಷ್ಣಮೂರ್ತಿ ಉಲ್ಲೇಖಿಸುತ್ತಾರೆ.

A very common class of Endocentric compounds consists of such of Plants, trees, fruits etc in which the first constituent is a specific name followed by general name or classifier.

Dr. B. H. Krishnamurti. Konda or Kubi, P. 235
Pub : Govt. of A.P. (1969)

29. ತದ್ಧಿತನಾಮ + ನಾಮ→ಕುಂಬಾರಗುಂಟೆ, ಮೆಚಗಾರ್ತಿ ಕುಡುಗೋಲ

30. ನಾಮ + ಕೃ. ನಾಮಸಾಧಿತ→ಕತ್ತೆದುಡಿತ, ಗ್ರಾಮಗತ, ಕೃಷ್ಣಾಶ್ರಿತ.

31. ವಿಶೇಷಣ + ಸಂಬಂಧ ಕೃದ್ವಾಚಕ→ದೊಡ್ಡ ದೊಡ್ಡವ್ರು

32. ನಾಮ + ತದ್ಧಿತನಾಮ→ಜಲವಾದಿ (ಜಲವನ್ನು ವಾದಿಸುವವನು)

33. ತದ್ಧಿತನಾಮ + ನಾಮ→ಪಲ್ಲಿಲಿವಾಯು, ನಾಣೆಲಿವೇಕ್, ಕೂರಿಲಿ ಕಡೆಗೋಲ

34. ವಿಭಕ್ತಿ ನಿರ್ಣಯಕ + ನಾಮ→ಗಾಣಕಾಯಿಪೊಲ (ಗಾಣವನ್ನು ಕಾಯು
ವುದು. (ದ್ವಿತೀಯ ತತ್ಪುರುಷ.)
ಕೈಗೆಲಸ-ಕೈಯಿಂದಾಗುವ ಕೆಲಸ (ತೃ. ತ)
ನೊಗಸುತ್ತ. ನೊಗಕ್ಕೆ ಸುತ್ತುವ ಹಗ್ಗ
ಪಡುಗಾಳಿ. ಪಡುದಿಕ್ಕಿನಿಂದ ಬರುವಗಾಳಿ
(ಪಂ. ತ)
ಪಲ್ಲಕ್ಕಿ ಮಾನ್. ಪಲ್ಲಕ್ಕಿಯ ಮಾನ್ಯ (ಷ.ತ)
ಪೂಗಂಧ. (ಪೂವಿನಲ್ಲಿಯ ಗಂಧ) (ಸ. ತ)
ಹೊಲದ ಹೆಸರು.

1.22. ಕ್ರಿಯಾಕೃತಿವೀಯ ರಚಕಗಳು[1] :—

1. ಪ್ರಧಾನ

ನಾಮ + ಕ್ರಿಯೆ→ಬಳಿದೊಟ್ಟಂ, ಮಾತುಗುಟ್ಟು
ಕ್ರಿಯಾವಿಶೇಷಾವ್ಯಯ + ಕ್ರಿಯೆ – ಮುಂಬರಿ (ಮುಂದಕ್ಕೆ ಹರಿ)
ಅವ್ಯಯ + ಕ್ರಿಯೆ→ಸೇರ್ಪಡು, ಒಳಕೆಯ, ಬೆಕ್ಕಸು ಬಡು
ನ್ಯೂನಕೃದ್ವಾಚಿ + ನ್ಯೂನಕೃದ್ವಾಚಿ→ ವಿಜಿವಿಜಿ, ದಾಂಟಿ ದಾಂಟಿ,
ಕ್ರಿಯಾವಿಶೇಷಣ + ಕ್ರಿಯೆ→ಮೇಲ್ವಾಯು, ಬೆಂಗೆವಂದಂ (ಬೆನ್ನಿ
ನಲ್ಲೇ ಬಂದ) (= ಒಡಹುಟ್ಟು)

ಅನುಕರಣ ಕ್ರಿಯೆ→ಜೇರೇಳಂ, ಗುಯ ಗುಡು.
ಭೂತ ಕೃದ್ವಾಚಿ + ಸಹಾಯಕಕ್ರಿಯಾ ಪದ compound verbs
ಬಂದು ಬಿಡು ಇದ್ದು ಕುಳಿತುಕೊಳ್ಳು (ಇಲ್ಲಿ ಕ್ರಿಯಾ ಪದಗಳೆರಡಾ
ದರೂ ನಡೆಯುವ ಕೆಲಸ ಒಂದೇ.)

---

1 ಗುಣ + ಧಾತು – ಉಳ್ಳಲರ್, ಧಾತು + ಧಾತು—ಎಟ್ಟಿರ್, ಇವು ಹಳೆಗನ್ನಡದಲ್ಲಿ ಸಮಾಸ ವೆನ್ನಿಸದೆ ಸಂಯುಕ್ತ ಧಾತುಗಳಾಗುತ್ತವೆ. (ಕ. ಕೈ. ಪು. 19) ಆದರೆ ನಾಮ + ಧಾತು ಸ್ವರೂಪದಲ್ಲಿ ಸೇರುವ ಈ ರೂಪವನ್ನು ಕ್ರಿಯಾಸಮಾಸದಲ್ಲಿ ಸೇರಿಸುವ ವಾಡಿಕೆಯಿದೆ.

2. ಸಾಪೇಕ್ಷಕ

ಸತ್ಯರ್ಥಕ + ಕ್ರಿಯೆ (Infinitive verb compounds)
ತರಬೇಕು, ಉಣಬೇಕು, ಇರಬಹುದು, ಬರಲಿರು. ಆಗುವಾಡು.
ನಾಮ + ಆತ್ಮಾರ್ಥಕ ಒಳಕೊಳ್ಳು, ನೋಡಿಕೊಳ್ಳು, ಕಣ್ಗೊಳ್, ಮಾರ್ಕೊಳ್,
ವಿಶೇಷಣ + ಸಾಧಿತ ಧಾತು→ಕಿಸುಗಣ್ಚು

1.2.3. ಬಹಿಃಕೇಂದ್ರಿಯ ವಚಕಗಳು

1. ದ್ವಿಪದ ಅಲರ್ಗಣ್ಣ[2] – ಅಲರ್ – ಕಣ್ಣ [ವಿಷ್ಣು]
ಜಿತಮನ್ಮಥ ಜಿತ – ಮನ್ಮಥ [ಶಿವ]

2. ಬಹುಪದ — ಬಾಂಪೊಚ್ಚದಲೆಯಂ (ಬಾನ್–ಪೊಚ್ಚ–ತಲೆಯಂ) [ಈಶ್ವರ]
ಪಲ್ಲಿಲಿವಾಯ್ (ಪಲ್ಲ–ಇಲ್–ವಾಯಿ) (ಬೊಚ್ಚುಹಲ್ಲುಳ್ಳವನ)
ಪಾಲ್ಗಡಕುವರಿ (ಪಾಲ್–ಕಡಲ್–ಕುವರಿ) [ಲಕ್ಷ್ಮಿ]
ಬಿಸಿಕಣ್ಣಣಗಂ (ಬಿಸಿ–ಕಣ್ಣ–ಅಣುಗಂ) (ವೀರಭದ್ರ)

3. ಇತರೇತರಕ್ರಿಯೆ — ಮುಷ್ಟಾಮುಷ್ಟಿ (ಮುಷ್ಟಿಯಂ ಮುಷ್ಟಿಯಿಂ ಗೈವಯುದ್ಧ)

---

2 ತೆಕ್ಕುಂಜೆ ಗೋಪಾಲಕೃಷ್ಣಭಟ್ ಅವರು, ಅಲರ್ – ಅಂತಪ್ಪ – ಕಣ್ – 3 ಪದಗಳಿವೆಯೆಂದು ಹೇಳಿ, ಬಹುಪದ ಬಹುವ್ರೀಹಿಗೆ ಸೇರಿಸಿದ್ದಾರೆ. ಆದರೆ 'ಅಂತಪ್ಪ' ಇಲ್ಲಿ ರಚನೆಗೆ ಸಂಬಂಧಿಸಿದ ಪದವಾಗಲಾರದು.

ಇದನ್ನು ಬಾನೊಳ್ ಪೊಚ್ಚಂ + ತಲೆಯಂ ಎಂದು ತತ್ಪುರಷ ವಿಧಾನದಿಂದಲೂ, ಇಲ್ಲವೆ ಬಾಂಬೊಚ್ಚ + ತಲೆಯೊಳ್ + ಅವಂಗೆ ಅವಂ. ಎಂದೂ ವಿಗ್ರಹಿಸಬೇಕೆನ್ನುತ್ತಾರೆ. ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ (ಕ. ಸ. ಪು.) ಆದರೆ ಹಾಗೆ ವಿಗ್ರಹಿಸ ಬರೆದರೂ ಇದು ಬಹುಪದ ದ್ವಿಪದವನ್ನಿಸುವದಿಲ್ಲ.
ಹೆಚ್ಚಿನ ವಿವರಣೆ ಸಮಾಸ ಚಕ್ರ 'ಬಾಲಕೃಷ್ಣ ಲಕ್ಷ್ಮಣಪಾಠಕ್–ಬಾಂಬೆ (1907) ಹಾಗೂ ಸಮಾಸ ಕುವಲಯಾಕಾರ ಪು. 35.

(ವ್ಯತೀಹಾರ) ಮುಷ್ಟಿಯುದ್ಧ
(ಪೂರ್ವದ ಅತ್ವ ಉತ್ತರಪದ) ಮಲ್ಲಾಮಲ್ಲಿ (ಮಲ್ಲನುಂ, ಮಲ್ಲನುಂ ಕಾದುವುದು ಇತ್ಯಾಂತ) —ಮಲ್ಲಗಾಳಗ
ಹಾಣಾಹಣಿ (ಹಣೆಯಿಂ-ಹಣೆಯಿಂ ಕಾದುವುದು)
ದೇಖಾದೇಖಿ (ದೃಷ್ಟಿಯಿಂ–ದೃಷ್ಟಿಯಿಂ ಕಾದುವದು ದೃಷ್ಟಿಯುದ್ಧ)
ಅನ್ಯದೇಶೀಯ ಪ್ರಯೋಗಗಳು
ಮಾರಾಮಾರಿ–ಮಾರ್ (ಹಿಂ)ಹೊಡೆ– ಹೊಡೆದಾಟ

4. ವಿಭಕ್ತಿ ನಿರ್ಣಾಯಕ ವ್ಯಧಿಕರಣ — ವಿಭಕ್ತಿಗಳು
ಚಕ್ರಪಾಣಿ (ಚಕ್ರವು ಪಾಣಿಯಲ್ಲಿರುವವನು (ಪ್ರಥಮಾ)
ಚಲವಾದಿ (ಚಲವನ್ನು ವಾದಿಸುವವನು) (ದ್ವಿತೀಯಾ)
ಖಡ್ಗಾಖಡ್ಗಿ (ಖಡ್ಗದಿಂ ಖಡ್ಗದಿಂಗೈವಯುದ್ಧ (ತೃತೀಯಾ)
ತೇರ್ಮರಂ (ತೇರ್ಗೆ ಮರಂ) (ಚತುರ್ಥಿ)
ಬಟ್ಟದೊಡೆಯು (ಬಟ್ಟದುದು ತೊಡೆ) (ಷಷ್ಠೀ)
ಕುಡುವಿಲ್ಲು (ಕೊಂಕಿದುದು ಬಿಲ್ಲು) (")
ಕೇಸಡಿಯುಂ (ಕಿರಿದದುಂ + ಅಡಿಯುಂ) (")
ಜಾಂದೊಟ್ಟದಲೆಯುಂ (ಜಾನೆಪ್ಪೊಟ್ಟ ತಲೆಯೊಳ್ ಉಳ್ಳವನು (ಸಪ್ತಮಿ). (ಗಂಗಾಧರನಾದ ಶಿವ)

5. ಸಂಖ್ಯೆ — ಎರಟ್ಮೂರು (ಎರಡೋ ಮೂರೋ ಇಲ್ಲಿ ಇವೆರಡು ಅಲ್ಲದ ನಾಲ್ಕರ ಸಂಖ್ಯೆಯೂ ಧ್ವನಿತ.
ಉದಾ:- ಹತ್ತೆಂಟು ದಿನ ಊರಿಗೆ ಹೋಗುವೆ (ಹೆಚ್ಚಿನ ದಿನಗಳೂ ಇಲ್ಲಿ ಗ್ರಹಿತ.)

6, ದಿಗಂತಕಾಲ — ನಿರ್ದಿಷ್ಟ ದಿಗ್ವಾಚಿ ನಡುವೆ ಸೇರುವುದು,
ದಕ್ಷಿಣ–ಪೂರ್ವ–ಆಗ್ನೇಯ
ಮೂಲೆದಿಕ್ಕು-ವಾಯುವ್ಯ ಈಶಾನ್ಯ ಆಗ್ನೇಯ ನೈಋತ್ಯ
ಯಾವುದೇ ದಿಕ್ಕಿಗೆ 'ಮೂಲೆದಿಕ್ಕು' ಎಂಬ ಹೆಸರು.

1.3. ಇತರ ವರ್ಗ

'ಅಚ್ಚಗನ್ನಡಂ ಬೇಟ್ವರ ಕೆಯ್ವೊಕ್ಕನಿಧಿ'[1] ಎಂದರೆ ಬಯಸುವವರಿಗೆ ಕನ್ನಡವು ಕೈಸಾರಿದ ನಿಧಾನ. ಇದು ಕೇಶಿರಾಜನು ಕನ್ನಡ ಭಾಷೆಯ ಬೆಳವಣಿಗೆಯ ಜೀವಂತ ಲಕ್ಷಣವನ್ನು ಗುರುತಿಸಿ ಆಡಿದ ಅಷ್ಟು ಹಿಂದಿನ ಮಾತು ಕೋಶದ ದೃಷ್ಟಿಯಿಂದಲ್ಲದೆ ಸಮಾಸಗಳಂತಹ ಹೊಸ ಶಬ್ದಗಳ ನಿರ್ಮಿತಿಗೂ ಹಾಗೂ ಅವುಗಳ ಸಾಧ್ಯತೆಗೂ ಇರುವ ಹಲವು ಹತ್ತು ಮುಖಗಳತ್ತ ಅವನು ದೃಷ್ಟಿಚೆಲ್ಲಿದ್ದು ಇಲ್ಲಿ ಗೊತ್ತಾಗುತ್ತದೆ. ಈ ನಿಟ್ಟಿನಲ್ಲಿ ತನ್ನ ಕಾಲದಲ್ಲಿ ಗುರುತಿಸಿರುವ ಕೆಲವೊಂದು ಸಮಾಸಗಳನ್ನು ಇಲ್ಲಿ ವಿಂಗಡಿಸಿ ಹೇಳಿದೆ.

1.3.1. ಸ್ವೀಕರಣ :

ಇಲ್ಲಿ ಇವನ್ನು ಸಂಪೂರ್ಣವಾಗಿ ಎರವಲು (Loan) ಎನ್ನುವುದಕ್ಕಿಂತ ಕೆಲವೊಂದು ತತ್ತ್ವಗಳಿಂದ ಸ್ವೀಕರಿಸಲು ಬರುವ ಸಮಾಸಗಳು ಎನ್ನಬಹುದು. ಕೇಶಿರಾಜನು ಹೇಳುವ ಸಮಸಂಸ್ಕೃತ ವಿಧಾನದ ಸಮಾಸಗಳನ್ನು ಇಲ್ಲಿ ಹೇಳಿದೆ[2] ಇವನ್ನು ಕನ್ನಡದಲ್ಲಿ ನಾಮ ಪ್ರಕೃತಿ (ಲಿಂಗ)ಯಾಗಿಸಬೇಕಾದರೆ ಪದವಿಧಿ ಅನಿವಾರ್ಯವೆನ್ನುತ್ತಾನೆ. ಕೇಶಿರಾಜ ಇಲ್ಲಿಯ ರಚಕಗಳು ಕೆಳಗಿನಂತಿದ್ದು ಇವಕ್ಕೆ ನಾ. ವಿ. ಪ್ರತ್ಯಯಗಳನ್ನು ಹಚ್ಚಲು ಬರುತ್ತದೆ.

(ಸಂ) ಅವ್ಯಯ + ನಾಮ ನಿಷ್ಪನ್ನ ಸಮಾಸ ಪ್ರಕೃತಿ

ಅಂತರ್→ಅಂತರ್ + ಮುಖ, ಅಂತರ್ಮುಖ, ನಾ. ವಿ. ಪ್ರ.

ಬಹಿರ್→ಬಹಿರ್ + ಅಂಗ. – ಬಹಿರಂಗ – ನಾ. ವಿ. ಪ್ರ.

ಪ್ರಾತಃ→ಪ್ರಾತಃ + ಕಾಲ – ಪ್ರಾತಃಕಾಲ ನಾ. ವಿ. ಪ್ರ.

ಸಂ) ಸರ್ವನಾಮ + ನಾಮ ಇದಂ→ಇದಂ + ದೇವ – ಇದುದೇವ ನಾ. ವಿ. ಪ್ರ.

ತದ್→ತದ್ + ವಚನ – ತದ್ವಚನ –

I ಶ.ಮು.ದ. ಸೂ. 2991

ಶ.ಮು.ದ. (ನಾ. ಪ್ರ.) ಸೂ. 91-92. ಕನ್ನಡ ನಾಮ ಪ್ರಕೃತಿಗಳಲ್ಲಿ ಸರಳವಲ್ಲದ ನಿಷ್ಪನ್ನ ನಾಮಗಳ ಗುಂಪಿನಲ್ಲಿ ಇವು ಸಮಾವೇಶಗೊಳ್ಳುತ್ತವೆ. ಕೇಶಿರಾಜನು ಹೇಳುವ ಸ್ವೀಕರಣ ಸಮಾಸ ಪದಗಳಲ್ಲಿ (1) ಅಚ್ಚಕನ್ನಡ (2) ಸಂಸ್ಕೃತ (3) ಅಪಭ್ರಂಶ (= ಪ್ರಾಕೃತ) ಈ ಮೂರೂ ಜೊತೆಗಳ ಪದಗಳ ಮೇಲೆ ಕಣ್ಣಾಡಿ ಸಿದ್ದಾನೆ. ವರ್ಣನಾತ್ಮಕ ವೈಯಾಕರಣಿಗೆ ಚಾರಿತ್ರಿಕ ಧೋರಣೆಯೂ ಕೆಲವೊಮ್ಮೆ ಅಗತ್ಯವೆಂಬುದನ್ನು ಕೇಶಿರಾಜ ಇಲ್ಲಿ ತಿಳಿದಂತಿದೆ. In Kesiraja we find the admixture of the historical and Descriptive techniques' ಡಾ॥ ಕೆ. ಕುಶಾಲಪ್ಪಗೌಡ—"The noun classification in Kannada" Dr. Ling. Vol. V, (1976).

ಸ೦) ಕೃದಂತ + ನಾಮ ಚಂಚನ್→ಚಂಚದ್ + ರೂಪ.ಚಂಚದ್ರೂಪ ನಾ. ವಿ. ಪ್ರ.

ಝಣನ್→ಝಣನ್ + ನೂಪುರ – ಝಣನ್ನೂಪುರ ನಾ. ವಿ. ಪ್ರ.

ಕ್ವಣತ್→ಕ್ವಣತ್ + ಕಂಕಣ – ಕ್ವಣತ್ಕಂಕಣ ನಾ. ವಿ. ಪ್ರ.

(ಸಂ) ಸಂಖ್ಯಾವಾಚಿ + ನಾಮ

	ಏಕ	ಏಕ + ಅಂಗ ಏಕಾಂಗ – ನಾ. ವಿ. ಪ್ರ.
	ದ್ವಿ	ದ್ವಿ + ಮುಖ ದ್ವಿಮುಖ – ನಾ. ವಿ. ಪ್ರ.
	ತ್ರಿ	ತ್ರಿ + ಲೋಕ – ತ್ರಿಲೋಕ ನಾ. ವಿ. ಪ್ರ.
	ಚತುರ	ಚತುರ್ + ವೇದ ಚತುರ್ವೇದ ನಾ.ವಿ.ಪ್ರ.
	ಪಂಚ	ಪಂಚ + ಭೂತ – ಪಂಚಭೂತ ನಾ.ವಿ.ಪ್ರ.
	ಷಟ್	ಷಟ್ + ಕೂಟ – ಷಟ್ಕೂಟ ನಾ. ವಿ. ಪ್ರ.
	ಸಪ್ತ	ಸಕ್ತ + ದ್ವೀಪ – ಸಪ್ತದ್ವೀಪ ನಾ. ವಿ. ಪ್ರ.
	ಅಷ್ಟ	ಅಷ್ಟ + ಭುಜ – ಅಷ್ಟಭುಜ ನಾ. ವಿ. ಪ್ರ.
	ನವ	ನವ + ನಿಧಿ – ನವನಿಧಿ – ನಾ. ವಿ. ಪ್ರ.
	ದಶ	ದಶ + ವ್ಯಾಕರಣ – ದಶವ್ಯಾಕರಣ

1.3.2. ಸ್ವೀಕರಣ ಮಿಶ್ರ ರಚಕಗಳು :

1) ಅಚ್ಚಗನ್ನಡ ಸ್ವೀಕರಣ

ಅಪಭ್ರಂಶ

1) ಅಪಭ್ರಂಶ + ದೇಶೀಯ ಪದ

2) ಅಪಭ್ರಂಶ ಸಮಾಸ + ದೇಶೀಯ ಪದ

ತತ್ಸಮ

3) ತತ್ಸಮ + ದೇಶೀಯ ಸಮಾಸ ಪದ

ದೇಶೀಯ

ಉದಾ : 1) ಸಜ್ಜೀವನೆ
2) ತಾಣದೀವಿಗೆ ಬೆಳಗು
3) ಪೂಮಾಲೆದು

2) ತತ್—ಸಮ ರಚಕಗಳು :

ಕೇಶಿರಾಜನು 21 ಪದಗಳು ಸಂಸ್ಕೃತಕ್ಕೂ ಕನ್ನಡಕ್ಕೂ ಸರಿ ಎಂದಿದ್ದಾನೆ, ಇವುಗಳಲ್ಲಿ ಸಮಾಸೋಕ್ತಿ ನಿರ್ದೋಷಯುಕ್ತವೆಂದು ಅವನೇ ಹೇಳಿದ್ದಾನೆ.[1] ಆದರೆ ಕಿಟಲ್ ಮೊದಲಾದವರು ಇವು ದ್ರಾವಿಡ ಕೋಶದಲ್ಲೇ ಇದ್ದಿರಬಹುದಾದ ಪದಗಳೆಂದೂ ಅನಂತರ ಸಂಸ್ಕೃತದಲ್ಲಿ ಸೇರಿದ್ದಾಗಿಯೂ ತರ್ಕಿಸಿದ್ದಾರೆ. ಇವು ಕೆಳಗಿನಂತಿವೆ.

1.	ಮಣಿ	ದಿನಮಣಿ
2.	ಮಂಚ	ರತ್ನಮಂಚ
3.	ಪಟ್ಟ	ಪಟ್ಟಮಹಿಷಿ
4.	ತೋರಣ	ತಳಿತೋರಣ
5.	ಅಟ್ಟ	ಅಟ್ಟಹಾಸ
6.	ಗೋಣಿ	ಪೆರ್ಗೋಣಿ
7.	ಗಂಡ	ಗಂಡಗಲಿ
8.	ಗಲ್ಲ	ಗಲ್ಲಸ್ಥಳ
9.	ಸಬಳ	ಸಬಳಗದ್ಯಾಣ
10.	ಅಂಕ	
11.	ಲತೆ	ಎಳಲತೆ
12.	ಕಂಕಣ	ಹಸ್ತಕಂಕಣ
13.	ಕೋಂಟೆ	ಧೂಳಿಕೋಂಟೆ
14.	ಬಲ	ಭುಜಬಲ
15.	ಅಂಗಣ	ಅಂಗಣವಲಯ
16.	ಬಿಲ	ಬಿಲದ್ವಾರ
17.	ಬಿಂದಿ	ಬಿಂದಿಗ್ರಹಣ
18.	ಮಾಲೆ	ಪೂಮಾಲೆ
19.	ಗಾಳ	ಎರೆಗಾಳ
20.	ವಲ್ಲ	ವಲ್ಲಗಾಳಿಗ
21.	ತಳ	ಕರತಳ

---

1 The so called Tatsamas which as it seems are acknowledged by pandits to have seem introduced into Sanskrit from Dravid without going any alternations. Kitt. Dic Vol. I. P. XXIV.

3) ಸಮ ಸಂಸ್ಕೃತೀಕರಣ ಪ್ರಕ್ರಿಯೆ[1] :–

ತತ್ಸಮ	ತದ್ಭವ	ದೇಸ್ಯ
↓	↓	↓
ತತ್ಸಮ + ತತ್ಸಮ (ಧರಣೀತಳ)	ತದ್ಭವ + ತದ್ಭವ (ಜೊನ್ನವಕ್ಕಿ)	ದೇಸ್ಯ + ತತ್ಸಮ (ಪೂಮಾಲೆ :
ತತ್ಸಮ + ತದ್ಭವ (ಮಂಗಳಾರತಿ)	ತದ್ಭವ + ತತ್ಸಮ (ಮಾಪುರುಷ)	ಅಪಭ್ರಂಶ
ತತ್ಸಮ ಸಮಾಸ + ದೇಶೀಯಪದ	ತದ್ಭವ + ದೇಶ್ಯ (ಪಟವಾಸಿಸ)	ಸಮಾಸ + ದೇಶ್ಯ (ತಾಣದೀವಿಗೆ ವೆಳಗಂ.

4) ರೂಢಿಯಲ್ಲಿನ ಅರಿ ಸಮಾಸಗಳು :

ಕನ್ನಡ + ಸಂಸ್ಕೃತ — ಕಡು + ರಾಗ = ಕಡುರಾಗ	(ಕ.ಧಾ.)
ಸಂಸ್ಕೃತ + ಕನ್ನಡ — ಮಂಗಳ + ಆರತಿ = ಮಂಗಳಾರತಿ	...
,, ,, — ಚಕ್ರಂ + ಗೊಳೆ = ಚಕ್ರಂಗೊಳೆ[2]	(ಕ್ರಿಯಾ ಸಮಾಸ)
ಕನ್ನಡ + ಸಂಸ್ಕೃತ — ಆದ + ವಿಷ್ಣ = ಆದವಿಷ್ಣ	(ಗಮಕ)

ಎರವಲು ಸಮಾಸಗಳು (Loan word compounds)

5) ಅನ್ಯದೇಶೀಯಂಗಳು	ನಾಮಾಕೃತಿಯೀಯು :	ಕ್ರಿಯಾಕೃತಿಯೀಯು
1) ಹಿಂದಿ ——→	ಆರಾಮಕುರ್ಚಿ	ಬಚಾವ್ ಮಾಡು
	ಟೋಲನಾಕಾ	ತನಿಖೇ ಮಾಡು
	ಕಾಲಾಬಜಾರ	
2) ಇಂಗ್ಲಿಷ್	ಶೋಕೇಸ್	think ಮಾಡು
	ಏರಭ್ಯಾಗ	proposal ಕಳಿಸು
	ಮನಿ ಆರ್ಡರ್	feel ಮಾಡು
	ಪೋಸ್ಟ್‌ಮ್ಯಾನ್	vote ಕೊಡು
3) ಎರವಲುಮಿಶ್ರ	ಅಣುಬಾಂಬು (ಕ-ಇಂ)	draw ಆಗು
	ಕಾರ ಗಾಡಿ (ಇಂ-ಹಿಂ)	out ಆಗು

---

1 ಇಲ್ಲಿನ ಸಮಸಂಸ್ಕೃತ "ದೇಶೀಯ ಪದೇನ ಸಯಂಸಮಸ್ಯತೇ" ನಾಗವರ್ಮನ ಹೇಳಿಕೆಯಿಂದ ಆಧಾರಿತ.

2 ಗೊಳೆ–ಎಂಬುದು ಗೊಳಲ್ ಪತ್ಯರ್ಥದ (Infinitive) ಆದೇಶರೂಪ.

	ಭಾಷಾಂತರ ಸ್ವೀಕರಣ	loan Translations	
1)	ಸಾದೃಶ್ಯ ಭಾಷಾಂತರ	Hereculous effort	ಭಗೀರಥ ಪ್ರಯತ್ನ
	ಸಾದೃಶ್ಯ	Epilogue	ಭರತವಾಕ್ಯ
2)	ತದ್ರೂಪ ಭಾಷಾಂತರ	group song	ವೃಂದಗಾನ
		Silver jubilee	ರಜತೋತ್ಸವ
		Superman	ಅತಿಮಾನವ
		Telephone	ದೂರವಾಣಿ
		Short story	ಸಣ್ಣ ಕತೆ
		Blotting paper	ಒತ್ತು ಕಾಗದ
		necktie	ಕಂಠಲಂಗೋಟಿ
		Rock oil	ಸೀಮೆಯೆಣ್ಣೆ/ಕಲ್ಲೆಣ್ಣೆ
		black money	ಕಪ್ಪು ಹಣ
		ಪಾಯತಾಪಾ (ಹಿಂ)	ಕಾಲು ಚೀಲ
3)	ನವ್ಯ-ಪಾಚ್ಯ ರೂಪಗಳು[1] :–	Tooth powder	ಹಲ್ಲು ಪುಡಿ
		match box	ಕಡ್ಡಿ ಪೆಟ್ಟಿಗೆ
		Face powder	ಮುಖ ಚೂರ್ಣ
		foreword	ಮುನ್ನುಡಿ
	ಅಥವ ಪ್ರಾತಿಪದಿಕಗಳು	1) ಸ್ಥಳವಾಚಿ	Indo-European ಭಾರೋಪಿಯ
		name group	politico-religion
		2) ಜಾತಿಸೂಚಕ	ರಾಜಕೀಯ ಧರ್ಮ
		cappealative	ಮಾರ್ಗ
		3) ಅಭ್ಯಾಸ ಸೂಚಿ	socio-linguistics ಸಾಮಾಜಿಕ ಭಾಷಾ ವಿಜ್ಞಾನ

---

1) ಇಲ್ಲಿ ಭಾರತ ಪ್ರಾಚೀನ ದೇಶ Indus, ಹೊಸ ರೂಪವಾದ ಯುರೋಪ ಸಂಬಂಧ ಬಂದ ಮೇಲೆ ಇಂತಹ ರಚನೆ ಅಗತ್ಯವಾಯಿತು ಇದು ಇಲ್ಲಿ ನವ್ಯ-ಪ್ರಾಚ್ಯರೂಪ (Neo-classical type) ವಿಶೇಷಣಕ್ಕೆ Neo-classical compounds AIMW Chap. P. 128 Valeric Admas.

1.4 ಅವಧಾರಣ ವೃತ್ತಿಯ ಸಮಾಸಗಳು[1] :-

ಒಂದೇ ಬಗೆಯ ಪದಗಳು ಸೇರಿಯುಂಟಾಗುವ ಸಮಾಸ ಪುನರಾವೃತ್ತೀಯ

ಉದಾ :

1) ಪೂರ್ಣ ಪುನರಾವೃತ್ತೀಯ — ಊರು ಊರು
ಕೇರಿ ಕೇರಿ
ಮನೆ ಮನೆ

2) ಆಂಶಿಕ ಪುನರಾವೃತ್ತೀಯ — ಕಟ್ಟು ಕಡೆ (ಪೂರ್ವ ಪದ ಆಘಾತ)
ತುಟ್ಟ ತುದಿ (ಪೂರ್ವಪದ ಆಘಾತ)

3) ಪ್ರತಿಧ್ವನಿತ ಪುನರಾವೃತ್ತೀಯ — ರೊಟ್ಟಿಗಿಟ್ಟಿ, (ಉತ್ತರಪದ (ಆಘಾತ)
ಹಪ್ಪಳ-ಗಿಪ್ಪಳ ,,

4) ದರ್ಶಕ ಪುನರಾವೃತ್ತೀಯ
1) ದೂರ — ಅಗೊ ಅಗೊ
2) ಸಮೀಪ — ಇಗೋ ಇಗೊ

5) ಪ್ರತಿಮುಖಾವಲೋಕನ — ನೋಡಿ ನೋಡಿ

6) ಅನುಕರಣ ಆವೃತ್ತೀಯ — ಭೋರ್ ಭೋರ್ (ಪ್ರತಿಧ್ವನಿ ಆಘಾತ)
ಫಲ್ ಫಲ್

7) ಕ್ರಿಯಾಭಿಮುಖತ್ವ — ನಡೆ ನಡೆ
" — ಇರು ಇರು

8) ಕ್ರಿಯಾ ವಿಶೇಷಣತ್ವ — ಬೇಗ ಬೇಗ

9) ಸಮಾನಾರ್ಥಕಗಳು
1) ಪ್ರಾಸಯುಕ್ತ — ಇಂಪು–ಸೊಂಪು (ಸುಂದರ–ಮಂಧುರ) ಆಟ–ಪಾಟ, (ಆಟ–

---

1) 'These compounds are formed by- together two synonyms or words with similar meaning these compounds which cannote, either intensive or inclusive meaning. Dr. K. M. Shastry, I. L. Vol M. (1954)

ವಿನೋದ ಎಂಬರ್ಥ) ಗುಣ್ಣು
ನುಣ್ಣು (ಹೆಚ್ಚಿನ ಗಾಂಭೀರ್ಯ)

2) ಪ್ರಾಸ ರಹಿತ — ಮನೆ ಮಠ (ವಾಸ್ತವ್ಯ)
ಹೊಲ ಮನೆ (ಸ್ಥಿರಾಸ್ತಿ)

10) ಅನ್ಯದೇಶೀಯಗಳು — ಬಾಜಾ–ಬಜಂತ್ರಿ–(ವಾದ್ಯ ಮೇಳ)
ಟೀ–ಟಿಫಿನ್ ತಿಂಡಿತೀರ್ಥ

ಮಂಗಳ ಅಭಿವ್ಯಕ್ತಿಪರ
ಕೈಲಾಸವಾಸಿ (ಸ್ವರ್ಗಸ್ಥರಾಗು) ವೀರಶೈವರಲ್ಲಿ
ವೈಕುಂಠವಾಸಿ ,, ವೈಷ್ಣವರಲ್ಲಿ

1.4 ದ್ವಿರುಕ್ತಿ ಸಮಾಸಗಳು

ಬೇರೆ ಬೇರೆ ಜನಾಂಗಗಳ ಸಂಪರ್ಕದಿಂದ ಒಂದೇ ಅರ್ಥದ ಎರಡು ಪದಗಳು ಸೇರುತ್ತವೆ. ಇದು ದ್ವಿರುಕ್ತಿ, ಸ್ಥಳಿಕ ಭಾಷೆಯ ಪದವನ್ನು ಹೆಚ್ಚು ಸ್ಪಷ್ಟವಾಗಿಸಲು ಅದೇ ಅರ್ಥದ ಶಿಷ್ಟರೂಪವನ್ನು ಸಂಸ್ಕೃತದಿಂದ ಪ್ರಯೋಗಿಸುವ ಪ್ರವೃತ್ತಿ ಇಲ್ಲಿ ಕಂಡುಬರುತ್ತದೆ. ಇದನ್ನು ಕೆಳಗಿನಂತೆ ಎರಡು ವಿಧವಾಗಿ ವಿಂಗಡಿಸಿದೆ.

ಸುಶಿಕ್ಷಿತ	ಕೂಡಲ ಸಂಗಮ (ಕ+ಸಂ)
	ಛಪ್ಪನ್ನೈವತ್ತಾರು (ಸಂ+ಕ)
ಅಶಿಕ್ಷಿತ	ಅಕಳ ಗೋಮೂತ್ರ (,,)
	ಹಳದಿ ಪೀತಾಂಬರ (,,)
	ಸಹ್ಯಾದ್ರಿ ಪರ್ವತ (ಸಂ...ಸಂ)
	(ಅದ್ರಿ ಪದದ ಸ್ಪಷ್ಟೋಕ್ತಿಗೆ ಪದದ ಪ್ರಯೋಗ)

1.5 ಕಾಲಕ್ರಮಿತ (Di-chronical) ರೂಪ ವ್ಯತ್ಯಾಸಗಳು :—

ಕೆಲವೊಂದು ಸಮಾಸಗಳನ್ನು ಐತಿಹಾಸಿಕ ಭಾಷಾಧ್ಯಯನದ ನೆಲೆಯಲ್ಲಿ ನೋಡಿದಾಗ ಅವುಗಳ ರೂಪ ಪರಿವರ್ತನೆಗೊಂಡುದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾದವನ್ನು ಇಲ್ಲಿ ಧ್ವನ್ಯಾತ್ಮಕ, ಆಕೃತಿಮಾತ್ಮಕ ಹಾಗೂ ಅರ್ಥವಿಜ್ಞಾನದ ನೆಲೆಯಲ್ಲಿ ವಿಂಗಡಿಸಿ ಹೇಳಿದೆ :

1.5.1. ಧ್ವನ್ಯಾತ್ಮಕ ಸ್ತರ :

ಶಿಥಿಲದ್ವಿತ್ವ ಸಾಮಾಸಿಕ ರೂಪಗಳು–ಪೂ.ಪ. ಅಂತ್ಯ [ರ್ / ಳ್] + [ಗ್ / ದ್ / ವ್ / ಜ್]

–ಪ. ಪ. ಶಿಥಿಲದ್ವಿತ್ವ

ರ್/ಳ್ + |ಗ್ ದ್ ವ್ ಜ್|	ಶಿಥಿಲ ಉಚ್ಚಾರಣೆ	ಛಂದೋನಿಯಮ
ಕುಳಿರ್→|	ಕುಳಿಗ್ರ್ಗಾಳಿ (ಕುಳಿ–ಗ್ರ್ಗಾಳಿ)	[∪∪–∪]
ತಳಿರ್→|	ತಳಿದ್ರ್ದೋರಣ (ತಳಿ–ದ್ರ್ದೋರಣ)	[∪∪–∪∪]
ಜಿಮುರ್→|	ಜಿಮುರ್ವನಿ (ಜಿಮು–ರ್ವನಿ)	[∪∪–∪]
ಅಲರ್→|	ಅಲಜ್ರ್ಜೊಂಪಂ (ಅಲ–ಜ್ರ್ಜೊಂಪಂ)	[∪∪–¯]
ಮುಗುಳ್→|	ಮುಗಳ್ಗಾಯ್ (ಮುಗ–ಳ್ಗಾಯ್)	[∪∪––]

ಇಲ್ಲಿ ಶಿಥಿಲವೆಂದರೆ ಸಂಯುಕ್ತ ವ್ಯಂಜನವಿರುವಲ್ಲಿ ಅದನ್ನು ಒತ್ತಾಗಿಸದೆ ಆಶಕ್ತವಾಗಿ ಉಚ್ಚರಿಸುವುದು. ಇದರಿಂದ ಛಂದೋದೃಷ್ಟಿಯಿಂದ ಸಂಯುಕ್ತರೇಫ ಳಾಂತಗಳ ಹಿಂದಿನ ವರ್ಣಕ್ಕೆ |–| ಬರಲಾರದು. ಈ ವರ್ಣಗಳನ್ನು ಉಚ್ಚಾರಣೆಯಲ್ಲಿ ಹೀಗೆ ಹಿಂದೆ ಶಿಥಿಲವಾಗಿ ಉಚ್ಚರಿಸುತ್ತಿರಬೇಕು.[1] ಇದು ಪದಾದಿ ಹ್ರಸ್ವ ಹಾಗೂ (c)vcvc ~ ~ ~ ಅಕ್ಷರ ವ್ಯವಸ್ಥೆಯಿರುವಲ್ಲಿನ ರ್/ಳ್ ಗಳಿಗೆ ಮಾತ್ರ ಇಲ್ಲಿ ಅನ್ವಯಿಸುತ್ತಿದೆ ಇರ್ + ಕುಳ್ > ಇರ್ಕುಳ್ > ರ್ > |-ಕ್ಕ = ಇಕ್ಕುಳ. ಇಲ್ಲಿ ದ್ವಿತ್ವವಿದೆ. ರೇಫಲೋಪಗೊಂಡು ಸಜಾತೀಯ ದ್ವಿತ್ವ ಆವರಿಸಿದೆ.[2]

1.5.2. ಆಕೃತಿಮಾತ್ಮಕಸ್ತರ.

ಅಸ್ಪಷ್ಟ ಸಮಾಸಗಳು : (Obscured compounds)

ಕಾಲಕ್ರಮದಲ್ಲಿ ಸಮಾಸ ಆಕೃತಿಮಾಗಳಲ್ಲಿ ಒಂದು ಘಟಕ ಸ್ಪಷ್ಟ ತಿಳುವಳಿಕೆ ಇಲ್ಲದಂತಾಗಿ ಒಂದೇ ಪದವೆಂಬಂತೆ ಉಚ್ಚಾರಣೆಗೊಳ್ಳುತ್ತದೆ. ಇದರ ಸ್ಪಷ್ಟತೆ ಗೋಸ್ಕರ ಇಂಥ ಒಂದು ಪದಕ್ಕೆ ಮತ್ತೊಂದು ಪದ ಪೂರ್ವದಲ್ಲಿ ವಿಶೇಷಣವೆಂಬಂತೆ

---

1. ಗ್ ದ್ ಜ್ ವ್ ಗಳಲ್ಲದೆ ಚ ತ್ತ್ವ ಪರವಾದಾಗಲೂ ರೇಫ ಶಿಥಿಲತ್ವ ಅದೇ ರೀತಿ ಳ್-ಕಾರ (ದೇಶೀಕುಳ) ಎಂಬಲ್ಲಿ ಮಾತ್ರ ಶಿಥಿಲತ್ವ. ಆದರೆ ಎರಟ್ಟುದುರೆ (ಜಟ) ಎಂಬಲ್ಲಿ ದ್ವಿತ್ವವೇ ಇರುವದಕ್ಕೆ ಡಾ. ಬಿಳಿಗಿರಿ ಪಂ. ಭಾ. ಪ್ರಯೋಗವನ್ನು ಕೊಟ್ಟಿದ್ದಾರೆ. ಆಲೋಕ ಪು. 142.
2. ರೇಫ ಸಂಯುಕ್ತದ ಶಿಥಿಲ ದ್ವಿತ್ವ ವಿಶೇಷಣಕ್ಕೆ ಡಾ. ಕೆ. ಕುಶಾಲಪ್ಪಗೌಡ ಪ್ರ. ಕ ಸಂ. 42(1961)

ಸೇರುವುದರಿಂದ ಅದು ದ್ವಿರುಕ್ತಿಯ ಅಪಪ್ರಯೋಗವನ್ನು ಕೊನೆಗೆ ಪಡೆಯುತ್ತದೆ.[1] ಕನ್ನಡದಲ್ಲಿ ಸಿಕ್ಕುವ ಕೆಲವಕ್ಕೆ ಇಲ್ಲಿ ಉದಾಹರಿಸಿದೆ ; ಸಂಧಿ ನಿಯಮದಿಂದ ಇದನ್ನು ಅಭ್ಯಸಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ.

ಎಣ್ಣೆ→ಎಳ್ + ನೆಯ್ (ಳ್ + ನ್→ಣ)
ದ್ವಿರುಕ್ತಿ ಅಪ ಪ್ರಯೋಗ→ಒಳ್ + ಎಣ್ಣೆ (ಸೇವ + ಎಣ್ಣೆ ಉಂಬ + ಎಣ್ಣೆ)
ಹರಳು–ಎಣ್ಣೆ
ಕೊಬ್ಬರಿ–ಎಣ್ಣೆ

ಹಂಫಲ :—ಹಣ್ಣು + ಫಲ (ಣ್→ಮ್) (= ಬಿಂದು)
ದ್ವಿರುಕ್ತಿ ಅಪಪ್ರಯೋಗ→ ಹಣ್ಣು–ಹಂಪ್ಲ
ಗ್ವಾಂತ–ಗೋ + ಮೂತ್ರ (ಮ್>ವ್>ಬಿಂದು)
ದ್ವಿರುಕ್ತಿ ಅಪ ಪ್ರಯೋಗ→ಅಕಳ ಗ್ವಾಂತ
ಎಮ್ಮಿ–ಗ್ವಾಂತ

ಇನ್ನೂ ಕೆಲವು ಪ್ರಯೋಗಗಳು.

ಕಬ್ಬುನ ~ ಕಬ್ಬಿಣ	—	(ಕರ್ + ಪೊನ್)
ತಂಗೂಳು ~ ತಂಗ್ಳು	—	(ತಣಿ + ಕೂಳ್)
ಬಾಕಿಲು ~ ಬಾಕ್ಲು	—	(ಬಾಯ್ + ಇಲ್)
— ಕೈದು	—	(ಕೈ + ಅದು) (ಒಂದು ಆಯುಧ ವಿಶೇಷ)
ಬೆಣ್ಣೆ ~ ಬೆಣ್ಣೆ	—	(ಬೆಳ್ + ನೆಯ್)
ಹೆಂಗಸು ~ ಹೆಂಗ್ಸು	—	(ಪೆಣ್ + ಕೂಸು)
ಫಲಾರ / ಫರಾಳ	—	(ಫಲ + ಆಹಾರ)
— ದೀವಳಿಗೆ	—	(ದೀಪ + ಆವಳಿಕೆ)
— ಗಂಗಾಳ	—	(ಗಂಗ + ವಾಳ)
— ಗೌಡ	—	(ಗ್ರಾಮ + ಉಂಡ)
ಚೊಚ್ಚಲು ~ ಚೊಚ್ಲ	—	(ಸುರು + ಶೂಲೆ)
— ತೆಂಗು	—	(ತೇನ್ + ಕಾಯ್)
ಅಂಗಳ ~ ಅಂಗ್ಳ	—	(ಅಗಂ + ಕಳ್) (ಅಗಂ—ಒಳಗೆ)
ಅಂಗೈ	—	(ಅಗಂ + ಕಯ್—

1. ಇಂಗ್ಲೀಷಿನ ಉದಾಹರಣೆಗಳು Barn (barley + hall) next (nether + sit) simeon Potter L.M.W. P. 63.

1.5.3. ಸಮಾಸದಲ್ಲಿನ ಗುಣವಚನ ಹಾಗೂ ಸಂಖ್ಯಾವಿಶೇಷಣದ ಮೂಲ ರೂಪಗಳು :—

ಕೇಶಿರಾಜನು ಸಮಾಸ ಕಾರ್ಯಗಳಾಗುವಲ್ಲಿ ವಿಭಕ್ತಿ ಲೋಪ, ಆಗಮ ಗಳಾಗುತ್ತವೆ, ಎಂದಿದ್ದಾನೆ, ಇದು ಸಹಜ. ಆದರೆ ಗುಣವಚನ ಹಾಗೂ ಸಂಖ್ಯಾ ವಾಚಕಗಳಲ್ಲಿ ಅವನು ಕೊಟ್ಟಿರುವ ವಿಗ್ರಹ ರೂಪಗಳು ಆಕೃತಿಮಾ ದೃಷ್ಟಿಯಿಂದ ಸಮಂಜಸವಾಗಿಲ್ಲ. ಅವುಗಳ ಕೇಂದ್ರ ರಚನೆ ಕೆಳಗಿನಂತಿದೆ. ಇಲ್ಲಿನ 'ದು' ಪ್ರತ್ಯಯ ಅಮೂರ್ತ ನಪುಂಸಕ ಪ್ರತ್ಯಯ (Abstract neuter) ನಿಂದಾಗಿ ಕಾಲ್ಡವೆಲ್ ವಿಚಾರಿಸಿದ್ದಾರೆ. (CGIDL P. 323)

ಕಟ್ < ಕಡಿದು	ಒರ್ < ಒಂದು
ನಿಟ್ < ನಿಡಿದು	ಇರ್ < ಎರಡು
ನಟ್ < ನಡು	ಮೂ < ಮೂರು
ಕಿರ್ < ಕಿರಿದು	ನಾಲ್ < ನಾಲ್ಕು
ಪಚ್ < ಪಚ್ಚನೆ	ಐ < ಐದು
ಕೆಚ್ < ಕೆಚ್ಚನೆ	ಆರು < ಆರು
ಬೆಚ್ < ಬೆಚ್ಚನೆ	ಏಟ್ < ಏಟ್
ಕಿಟ್ < ಕೆಟಿಗು	ಎಣ್ < ಎಂಟು
	ಒಂದು + ಪತ್ತು < ತೊರ್ಮ
	ಪತ್ + ಹತ್ತು

1.6. **ಸಮಾಸ ತತ್ವ** :—

ಭಾಷೆಯಲ್ಲಿ ಹೊಸ ಪದಗಳ ರಚನೆ ಅಗತ್ಯ ; ಅನಿವಾರ್ಯ. ಒಂದು ಸಾಮಾನ್ಯ ಪದಕ್ಕೆ ಸೇರುವ ಇನ್ನೊಂದು ಪದದಿಂದ ರೂಪ ವ್ಯತ್ಯಾಸವಾಗುವದರ ಜೊತೆಗೆ ಆ ಇಡೀ ರೂಪ ಒಂದಾಗಿ ಅದರ ಅರ್ಥವೂ ವಿಶಿಷ್ಟವಾಗುತ್ತದೆ. ಇದರಿಂದ ಸಮಾಸ ಪದಗಳು ಕಾಲಕ್ರಮದಲ್ಲಿ ಕೋಶದಲ್ಲಿ ಸ್ವತಂತ್ರ ಸ್ಥಾನ ಪಡೆಯುತ್ತವೆ. ಆದರೆ ಕೋಶಕ್ಕಿಂತ ಹೆಚ್ಚಾಗಿ ಸಾಮಾಜಿಕ ಪರಿಸರ ಹಾಗೂ ಅದರ ಬೆಳವಣಿಗೆಯಲ್ಲಿ ಈ ಪದಗಳ ನಿರಂತರ ಸೃಷ್ಟಿ ನಡದೇ ಇರುತ್ತದೆ. ಇದರಲ್ಲಿ ಯಾವುದು ಸ್ಪಷ್ಟ ಪ್ರಯೋಗವೆಂಬುದನ್ನು ರೂಢಿಯಲ್ಲೇ ನಿರ್ಣಯಿಸಬೇಕು. ಕೇಶಿರಾಜನು ಅಂದು ಹೇಳುವ ಅರಿಸಮಾಸ ನಿಷಿದ್ಧವೆಂಬುದು ಈಗ ಉಳಿದಿಲ್ಲ.[1] ಪದಗಳ ಸ್ವೀಕರಣದಲ್ಲಿ ಎಂದಿಗೂ ಮಡಿವಂತಿಕೆಯೆಂಬುದಿಲ್ಲ ಆದರೆ ಅವನ್ನು ಸ್ವೀಕರಿಸುವ ಪ್ರಕ್ರಿಯೆ ನಮ್ಮದಾದರೆ ಯಾವುದೂ ಪರಕೀಯವಲ್ಲ.

1. ದ್ರಾವಿಡ ಭಾಷೆಗಳಲ್ಲಿ ತೆಲುಗು, ಕನ್ನಡದಲ್ಲಿ ಮಾತ್ರ ಅರಿಸಮಾಸದ ವಿಚಾರವಿದೆ. ತಮಿಳು, ಮಲೆಯಾಳಂಗಳಲ್ಲಿ ಅರಿಸಮಾಸ ಇಲ್ಲವೇ ಇಲ್ಲ. ಡಾ॥ ಕೆ. ಕುಶಾಲಪ್ಪ ಗೌಡ ಅವರ ವಿಚಾರಗಳು.

ಅಂಬಿಗರ ಚೌಡಯ್ಯ ಅದ್ವೈತಿಯೆ ?

ಶ್ರೀನಿವಾಸರಾವ್

'ಸಾಧನೆಯ ಸಂಪುಟ 9, ಸಂಚಿಕೆ 2 (ಏಪ್ರಿಲ್-ಜೂನ್, 1980) ರಲ್ಲಿ ಶ್ರೀ ಬಸವರಾಜ ಸಿದ್ಧಾಶ್ರಮ ಅವರ 'ಅಂಬಿಗರ ಚೌಡಯ್ಯನ ತಾತ್ತ್ವಿಕ ಚಿಂತನೆ' ಪ್ರಕಟವಾದಮೇಲೆ ಅವರು ಪ್ರೀತ್ಯಾದರಗಳಿಂದ ಕೊಡಮಾಡಿದ ಲೇಖನದ ಪ್ರತಿಯೊಂದರ ಮೇಲೆ ಕಣ್ಣಾಡಿಸಿದಾಗ ನನಗೆ ಆಘಾತವಾಯಿತು. ಆ ಲೇಖನವಲ್ಲಿನ ದೋಷಗಳನ್ನು ಗಮನಿಸಿ ಬೇರೆ ಯಾರಾದರೂ ಬರೆದಾರೆಂಬ ನಿರೀಕ್ಷೆಯಲ್ಲಿ ಸುಮ್ಮನಿದ್ದೆನು. ಆದರೆ ಇದುವರೆಗೂ ಯಾರೂ ಬರೆಯದಿರುವುದರಿಂದ ನಾನೇ ಬರೆಯುವ ಅಪ್ರಿಯವಾದ, ಆದರೆ ಶಾಸ್ತ್ರದೃಷ್ಟಿಯಿಂದ ಅವಶ್ಯವಾದ, ಕೆಲಸಕ್ಕೆ ಕೈಹಾಕಿದ್ದೇನೆ.

ಶ್ರೀ ಸಿದ್ಧಾಶ್ರಮ ಅವರು ತಮ್ಮ ಲೇಖನದಲ್ಲಿ ಮಂಡಿಸಿರುವ ವಾದಗಳಿಂದ ಹೊರಡಿಸಿರುವ ನಿಸ್ಸಂದಿಗ್ಧ ತೀರ್ಮಾನವೆಂದರೆ ಅಂಬಿಗರ ಚೌಡಯ್ಯನು ಒಬ್ಬ ನಿರ್ಗುಣತತ್ತ್ವ ಪ್ರತಿಪಾದಕ (ಅದ್ವೈತಿ). ಆದರೆ ಅವರು ಮುಂದೊಡ್ಡಿರುವ ವಾದಗಳಿಂದ ಚೌಡಯ್ಯನು ಅದ್ವೈತಿಯೆಂದು ಸಿದ್ಧವಾಗುವುದಿಲ್ಲ. ಹಾಗೂ ಇದುವರೆಗೆ ಉಪಲಬ್ಧವಿರುವ ಚೌಡಯ್ಯನ ಸಮಗ್ರ ವಚನಗಳಿಂದಲೂ ಸಹ ಅವನು ಅದ್ವೈತಿ ಎಂದು ಸಿದ್ಧಮಾಡಲು ಆಗುವುದಿಲ್ಲ. ಈ ಲೇಖನದಲ್ಲಿ ಸಿದ್ಧಾಶ್ರಮ ಅವರ ಲೇಖನಕ್ಕೆ ನೇರವಾಗಿ ಸಂಬಂಧಿಸಿದ ಮೊದಲನೆಯ ಅಂಶವನ್ನು ಮಾತ್ರ ವಿವರಿಸಲಾಗುತ್ತದೆ.

ಅದ್ವೈತಿಗಳು ಸಾಮಾನ್ಯವಾಗಿ ಜಗತ್ತನ್ನು ಮಿಥ್ಯಾಸ್ವರೂಪವೆಂದು ಭಾವಿಸುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ಚೌಡಯ್ಯನ ನಿಲುವು ಅವನನ್ನು ಅದ್ವೈತಿಯೆಂದು ತೋರಿಸಲು ಕಾತರರಾಗಿರುವ ಲೇಖಕರಿಗೆ ಸಹಜವಾಗಿಯೇ ತೊಡಕಾಗಿ ಪರಿಣಮಿಸಿದೆ. ಭಾರತದಲ್ಲಿ ಅದ್ವೈತ ಶಬ್ದದಿಂದ ಸೂಚಿತವಾಗುವ ವಿವಿಧ ದರ್ಶನಗಳಿವೆ. ಉದಾ: ಶುದ್ಧಾದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಶಿವಾದ್ವೈತ ಇತ್ಯಾದಿ. ಹೀಗಿರುವಾಗ ಈ ದರ್ಶನಗಳಲ್ಲಿನ ಪ್ರಭೇದಗಳಿಗೆ ಆಧಾರವಾದ ಅಂಶಗಳನ್ನು ಗುರುತಿಸಿಯೇ ಒಬ್ಬ ಚಿಂತಕನ ದರ್ಶನವನ್ನು ಇಂತಹ 'ಅದ್ವೈತ'ವೆಂದು ಕರೆಯುವುದು ಯೋಗ್ಯವಾಗುತ್ತದೆ. ಈ ಎಲ್ಲಾ ದರ್ಶನಗಳೂ ದೇವರು, ಜೀವ ಹಾಗೂ ಜಗತ್ತುಗಳ ಸ್ವರೂಪದ ಬಗ್ಗೆ ತಮ್ಮದೇ ವಿಶಿಷ್ಟ ನಿಲುವುಗಳನ್ನು ಹೊಂದಿವೆ. ಆದ್ದರಿಂದ ಶ್ರೀ ಸಿದ್ಧಾಶ್ರಮ ಅವರು ಅದ್ವೈತಿಯೆಂದು ನಿಸ್ಸಂದೇಹವಾಗಿ ಗುರುತಿಸಿದ

ಚೌಡಯ್ಯನು ಜಗತ್ತಿನ ಬಗ್ಗೆ ತಾಳಿದ ನಿಲುವೇನೆಂದು ಪರೀಕ್ಷಿಸಿದರೆ ಒಂದು ಕೌತುಕ ಕಾದಿದೆ. ಚೌಡಯ್ಯನು "ಜಗತ್ತಿನ ಬಗ್ಗೆ ಅಷ್ಟೊಂದು ಮಾತನಾಡಿಲ್ಲ. ಶಕ್ತಿ ವಿಶಿಷ್ಟಾದ್ವೈತದರ್ಶನದಲ್ಲಿ ಹೇಳಿದಂತೆ ಅದು ಸತ್ಯವೆಂದೂ ಹೇಳಿಲ್ಲ. ಅದ್ವೈತದಲ್ಲಿ ಹೇಳಿದಂತೆ ಅದು ಮಿಥ್ಯವೆಂದೂ ಹೇಳಿಲ್ಲ. ಅದರ ಬಗ್ಗೆ ತಟಸ್ಥವಾಗಿದ್ದಾನೆ." ಎಂದು ಲೇಖಕರೇ ಹೇಳುವಾಗ[1] ಈ ಆಧಾರದ ಮೇಲೆ ಚೌಡಯ್ಯನು ಅದ್ವೈತಿಯೆಂಬ ತೀರ್ಮಾನಕ್ಕೆ ಬರಲಾಗುವುದಿಲ್ಲವೆನ್ನುವುದು ಸ್ಪಷ್ಟ. ಆದರೂ ಸೃಷ್ಟಿಯ ಬಗ್ಗೆ ಚೌಡಯ್ಯನ "ಗಂಧವ ವಾಯುಕೊಂಬಾಗ......" ಎಂಬ ವಚನವನ್ನು ಲೇಖಕರು ವಿಶಿಷ್ಟ ರೀತಿಯಲ್ಲಿ ವ್ಯಾಖ್ಯಾನಿಸಿ ಚೌಡಯ್ಯನು ಜಗತ್ತಿನಲ್ಲಿನ "...ಈ ಎಲ್ಲ ಪದಾರ್ಥಗಳ ನಿಜವಾದ ಸ್ವರೂಪವು ಲಿಂಗವೇ ಇದ್ದು ಇದಕ್ಕೆ ಭಿನ್ನವಾದ (ದ್ವೈತ) ಯಾವ ಹೊರಗಿನ ವಸ್ತುವೂ ಸಂಧಿಸಿ ಈ ಜಗದ್ವ್ಯಾಪಾರಕ್ಕೆ ಕಾರಣವಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾನೆ" ಎಂಬ ತೀರ್ಮಾನಕ್ಕೆ ಬಂದಿದ್ದಾರೆ.[2] ಆದರೆ ಜಗತ್ತಿನ ಎಲ್ಲಾ ವಸ್ತುಗಳ ನಿಜವಾದ ಸ್ವರೂಪ (ತೋರಿಕೆಯ ಸ್ವರೂಪವಲ್ಲ) ಲಿಂಗವೇ ಎಂದು ನಾವು ಒಪ್ಪುವುದಾದರೆ ಲೇಖಕರು ಕೆಲವೇ ಸಾಲುಗಳ ಹಿಂದೆ ಪ್ರಸ್ತಾಪಿಸಿದ ಚೌಡಯ್ಯನ 'ತಾಟಸ್ಥ್ಯ'ವನ್ನು ತೀವ್ರವಾಗಿ ಶಂಕಿಸಬೇಕಾಗುತ್ತದೆ, ಜಗತ್ತಿನ ವಸ್ತುಗಳ ನಿಜವಾದ ಸ್ವರೂಪವು ಲಿಂಗವೇ ಆಗಿದ್ದಾಗಲೂ ಸಹಾ ಆ ಜಗತ್ತು 'ಸತ್ಯ'ವಾಗುವುದಿಲ್ಲವೆ ? ಲಿಂಗವು 'ಸತ್ಯ'ವೂ ಅಲ್ಲದ 'ಮಿಥ್ಯ'ವೂ ಅಲ್ಲದ ಒಂದು ಅನಿರ್ವಚನೀಯ ವಸ್ತುವೆ ? ಚೌಡಯ್ಯನು ನಿಜವಾಗಿಯೂ ತಟಸ್ಥನೇ ಎಂದು ಒಪ್ಪಿಕೊಂಡರೆ ಮೇಲಿನ ವಚನಕ್ಕೆ ಲೇಖಕರು ನೀಡಿರುವ ವ್ಯಾಖ್ಯಾನ ಅಸಂಬದ್ಧವಾಗುತ್ತದೆ. ಅಲ್ಲದೇ ಜಗತ್ತು ಸತ್ಯವೆಂದೂ ಹೇಳದೇ ಮಿಥ್ಯವೆಂದಾಗಿ ಸಹಾ ಹೇಳದೇ ಇರುವವನನ್ನು ಆ ವಿಷಯದಲ್ಲಿ ತಟಸ್ಥನೆಂದು ಹೇಗೆ ಭಾವಿಸಬಹುದೆಂಬ ಜಟಿಲ ಪ್ರಶ್ನೆಯೂ ಏಳುತ್ತದೆ ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಹೇಳಿಕೆಗಳ ಆಧಾರದ ಮೇಲೆಯೇ 'ಪರ' 'ವಿರೋಧ' ಅಥವಾ 'ತಟಸ್ಥ' ಎಂದು ನಿರ್ಧರಿಸಬಹುದೇ ಹೊರತು ಏನನ್ನೂ ಹೇಳದಿರುವಾತನು ತಟಸ್ಥನೆಂದು ತೀರ್ಮಾನಿಸಲು ಆಗುವುದಿಲ್ಲ. ಅಲ್ಲದೇ ಜಗತ್ತಿನ ಸ್ವರೂಪದ ಬಗ್ಗೆ ತಟಸ್ಥನಾಗಿರುವ ಯಾವ ಅದ್ವೈತಿಯೂ ಆ ದರ್ಶನದ ಇತಿಹಾಸದಲ್ಲೇ ಇಲ್ಲದಿರುವಾಗ ಚೌಡಯ್ಯನಂತಹ 'ತಟಸ್ಥ' ಅದ್ವೈತಿಯನ್ನು ಒಪ್ಪಿಕೊಳ್ಳಲು ಪ್ರಬಲವಾದ ಆಧಾರಗಳೇ ಬೇಕಾಗುತ್ತವೆ.

ಆದ್ದರಿಂದ ಚೌಡಯ್ಯನು 'ತಟಸ್ಥ'ನೆಂದು ಹೇಳುವಲ್ಲಿ ಲೇಖಕರು ಎಡವಿದ್ದಾರೆಂದು ಭಾವಿಸಿ ಅವರು ಸೃಷ್ಟಿಯ ಬಗೆಗಿನ ವಚನಕ್ಕೆ ಕೊಟ್ಟ ವ್ಯಾಖ್ಯಾನವನ್ನೇ ಒಪ್ಪಿಕೊಂಡು ಹೊರಟರೂ ಇನ್ನೊಂದು ಕೌತುಕ ಕಾದಿದೆ. ಹೇಗೆಂದರೆ, ಜಗತ್ತಿನ ಎಲ್ಲಾ ವಸ್ತುಗಳ ನಿಜಸ್ವರೂಪವು 'ಲಿಂಗ'ವೇ ('ಲಿಂಗ'ವು ಉಪನಿಷತ್ತಿನ ಹಾಗೂ ಅದ್ವೈತದ 'ಬ್ರಹ್ಮ'ಕ್ಕೆ ಪರ್ಯಾಯವಾಗಿ ಚೌಡಯ್ಯನು ಬಳಸುವ ಪದ ಎಂಬುದು

ಲೇಖಕರ ಇನ್ನೊಂದು ಸಿದ್ಧಾಂತ.[3]) ಎಂದು ಸಾರಿದ ಲೇಖಕರು ಮುಂದೆ ಅದೇ ಲೇಖನದಲ್ಲಿ "ಚೌಡಯ್ಯನು ಸತ್ತಾದ್ವೈತಿಯಾಗದೇ ಆತ್ಮಾದ್ವೈತಿಯಾಗಿ ನಿಂತಿದ್ದಾನೆ. (ಸತ್ತಾದ್ವೈತವೆಂದರೆ, ಹೊರಗೊಂದು 'ಬ್ರಹ್ಮ' ಅಥವಾ 'ಸತ್ಯ' ಇದೆ, ಅದೊಂದೇ ಸತ್ಯ ಎನ್ನುವುದು ; ಹಾಗೂ ಆತ್ಮಾದ್ವೈತವೆಂದರೆ ನಮ್ಮೊಳಗಣ ಆತ್ಮ ಒಂದೇ ಸತ್ಯವೆಂಬುದು)" ಎಂದೂ ಸಾರಿ[4] ನಮ್ಮನ್ನು ಗೊಂದಲಕ್ಕೆ ಕೆಡವಿದ್ದಾರೆ. ಈಗ ಹೇಳಿದಂತೆ ನಮ್ಮೊಳಗಣ ಆತ್ಮ ಒಂದೇ ಸತ್ಯವೆಂದು ಚೌಡಯ್ಯನು ಹೇಳಿದ್ದರೆ ಬಾಹ್ಯ ಜಗತ್ತು ಸತ್ಯವಾಗಲಾರದು. ಹಾಗಾದರೆ ಬಾಹ್ಯಜಗತ್ತು ಲಿಂಗಸ್ವರೂಪವೆಂದು ಚೌಡಯ್ಯನ ಇನ್ನೊಂದು ವಚನಕ್ಕೆ ಇದೇ ಲೇಖಕರೇ ನೀಡಿದ ವ್ಯಾಖ್ಯಾನದ ಗತಿ ಏನು ? ಚೌಡಯ್ಯನ 'ತಾಟಸ್ಥ್ಯ'ದಿಂದ ಉಂಟಾದದ್ದಕ್ಕಿಂತಲೂ ಹೆಚ್ಚಿನ ಗೊಂದಲ ಅವನು 'ಆತ್ಮಾದ್ವೈತಿ' ಎಂದು ವಾದಿಸುವುದರಿಂದ ಉಂಟಾಗುತ್ತದೆ. 'ಆತ್ಮಾದ್ವೈತ' 'ಸತ್ತಾದ್ವೈತ' ಎಂಬ ಶಬ್ದಗಳಿಗೆ ಲೇಖಕರು ನೀಡಿರುವ ಭಯಾನಕ ವಿವರಣೆಯನ್ನು ನಂತರ ಪರೀಕ್ಷಿಸೋಣ.

"ಚೌಡಯ್ಯನು ಒಬ್ಬ ನಿರ್ಗುಣತತ್ತ್ವಪ್ರತಿಪಾದಕನೆಂಬುದು ಅವನ ಈ ಕೆಳಗಿನ ವಚನಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ" ಎಂದು ಹೇಳುವ ಲೇಖಕರು[5] ಅದಕ್ಕೆ ಆಧಾರವಾಗಿ ಕೊಟ್ಟ ಮೊದಲ ವಚನ ಹೀಗಿದೆ :

ಅಸುರಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ
ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ,
ವೃಷಭವಾಹನನಲ್ಲ, ಋಷಿಗಳೊಡನೆ ಇದ್ದಾತನಲ್ಲ
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದು ಇಲ್ಲವೆಂದನಂಬಿಗ ಚೌಡಯ್ಯ

ಇದು ಶಿವನ ಸ್ವರೂಪವನ್ನು ಕುರಿತ ವಚನವೆಂಬುದು ಸ್ಪಷ್ಟ. ತ್ರಿಶೂಲ, ಡಮರು, ಬ್ರಹ್ಮಕಪಾಲ ಇತ್ಯಾದಿಗಳೆಲ್ಲವೂ ಶಿವನನ್ನು ಮೂರ್ತ ಸ್ವರೂಪದಲ್ಲಿ ಕಲ್ಪಿಸಿಕೊಂಡಾಗ—ಅಂದರೆ ಶಿವನನ್ನು ಚಿತ್ರ ಅಥವಾ ಶಿಲ್ಪದ ರೂಪದಲ್ಲಿ ಮೂರ್ತೀಕರಿಸಿದಾಗ—ಅವನಿಗೆ ಆರೋಪಿಸಿದ ಲಾಂಛನಗಳು. ಶಿವನ ಪ್ರತೀಕಗಳಾದ ವಿಗ್ರಹಗಳು ಅಥವಾ ಶಿಲ್ಪಗಳಿಗಿರುವ ರೂಪವನ್ನೇ ಶಿವನ ನಿಜಸ್ವರೂಪವೆಂದು ಭಾವಿಸುವುದನ್ನು ಚೌಡಯ್ಯ ಇಲ್ಲಿ ಟೀಕಿಸುತ್ತಾನೆ. ಶಿವನು 'ಎಸಗುವ ಸಂಸಾರದ ಕುರುಹಿಲ್ಲದಾತ'. ಶಿವನ ವಿಗ್ರಹವನ್ನು 'ವೃಷಭವಾಹನ' 'ಭಸ್ಮಭೂಷಣ' ಇತ್ಯಾದಿಯಾಗಿ ಕರೆಯಬಹುದು : ಆದರೆ ಆ ವಿಗ್ರಹವೇ ಸಾಕ್ಷಾತ್ ಶಿವನಲ್ಲವಾದ್ದರಿಂದ ಇವಾವುವೂ ಶಿವನ 'ಹೆಸರು' ಆಗುವುದಿಲ್ಲ. 'ಆತಂಗೆ ಹೆಸರಾವುದು ಇಲ್ಲ.' ಆದ್ದರಿಂದ ಇಡೀ ವಚನವನ್ನು ಸಮಗ್ರವಾಗಿ ಪರಿಶೀಲಿಸಿದಾಗ ಶಿವನನ್ನು ನಿರ್ದಿಷ್ಟವಾದ ಸ್ವರೂಪ ಅಥವಾ ಆಕಾರದಲ್ಲಿ ಕಲ್ಪಿಸಿಕೊಳ್ಳುವುದಕ್ಕೆ ಚೌಡಯ್ಯನು ಸಮ್ಮತಿಸುವುದಿಲ್ಲವೆನ್ನು

ವುದು ಸ್ಪಷ್ಟವಾಗುತ್ತದೆ. ಲೇಖಕರು ಉದ್ಧರಿಸುವ ಈ ಕೆಳಗಿನ ಎರಡನೆಯ ವಚನವೂ ಇದನ್ನೇ ಪುಷ್ಟೀಕರಿಸುತ್ತದೆ :

ಹರಿಗೆ ಚಕ್ರ ಡಾಣೆ, ಬ್ರಹ್ಮಂಗೆ ವೇದ ಪಾಶ
ಹಿರಿಯ ರುದ್ರಂಗೆ ಜಡೆ, ಜಪಮಣಿ ನೋಡಾ
ಧರೆಯವರೆಲ್ಲಾ ನೆರೆದು ಇವರ ದೇವರೆಂಬರು
ಪರದೈವ ಬೇರೆಂದಾಡನಂಬಿಗ ಚೌಡಯ್ಯ

ಈ ವಚನ ಶಿವ, ವಿಷ್ಣು, ಬ್ರಹ್ಮ–ಈ ಮೂರು ದೇವತೆಗಳನ್ನೂ ಕುರಿತದ್ದು. (ತ್ರಿಮೂರ್ತಿಗಳನ್ನು ಹೆಸರಿಸುವಾಗ ಶಿವನನ್ನು 'ಹಿರಿಯ ರುದ್ರ' ಎಂದು ಕರೆದಿರುವುದೂ ಅರ್ಥಗರ್ಭಿತ). ಇಲ್ಲಿಯೂ ಸಹ ದೇವರಿಗೊಂದು ವಿಶಿಷ್ಟ ಆಕಾರ, ಲಕ್ಷಣ ಅಥವಾ ಸ್ವರೂಪವನ್ನು (ಚಕ್ರಧಾರಿ, ಜಟಾಧಾರಿ ಇತ್ಯಾದಿ) ಕೊಡುವುದನ್ನು ಚೌಡಯ್ಯ ಒಪ್ಪದೇ ಪರದೈವವೇ ಬೇರೆ ತೆರನಾದುದೆಂದು ಹೇಳುತ್ತಾನೆ. ಆದರೆ ಶ್ರೀ ಸಿದ್ಧಾಶ್ರಮ ಅವರಿಗೆ ಈ ವಚನಗಳಲ್ಲಿ ಸ್ಫುರಿಸಿರುವ ಅರ್ಥವೇ ಬೇರೆ. ಅವರಿಗೆ ಇಲ್ಲಿ 'ದೇವರಿಗೆ ನಾಮ (ಹೆಸರು) ರೂಪ (ಕುರುಹು) ಒಂದೂ ಇಲ್ಲ ; ಅವನು ನಾಮರೂಪ ರಹಿತ ; ನಿರ್ಗುಣ, ನಿರಾಕಾರನೆಂದು ಪ್ರತಿಪಾದಿಸಿರುವುದು ಕಂಡುಬಂದಿದೆ.[6] ಲೇಖಕರ ವಾದ ಹೀಗಿದೆ :

ಅದ್ವೈತಿಗಳು ಬ್ರಹ್ಮನಿಗೆ ನಾಮರೂಪಗಳಿಲ್ಲ (ನಿರ್ಗುಣ) ಎನ್ನುತ್ತಾರೆ.
ಚೌಡಯ್ಯನು ದೇವರಿಗೆ ನಾಮರೂಪಗಳಿಲ್ಲ (ನಿರ್ಗುಣ) ಎನ್ನುತ್ತಾನೆ.
ಚೌಡಯ್ಯನ 'ದೇವರು' = ಅದ್ವೈತದ 'ಬ್ರಹ್ಮ'
ಆದ್ದರಿಂದ ಚೌಡಯ್ಯ ಅದ್ವೈತಿ (ನಿರ್ಗುಣತತ್ತ್ವ ಪ್ರತಿಪಾದಕ).

ಈ ವಾದದಲ್ಲಿನ ದೋಷವೇನೆಂಬುದನ್ನು ಅರಿಯದವರು ತರ್ಕಶಾಸ್ತ್ರದ ಪ್ರಾಥಮಿಕ ಪರಿಚಯವಿರುವ ಯಾರನ್ನೇ ಆದರೂ ಕೇಳಿ ತಿಳಿದುಕೊಳ್ಳಬಹುದು.

ಈ ಪ್ರಾಥಮಿಕ ತಾರ್ಕಿಕ ದೋಷವನ್ನು ಕಡೆಗಣಿಸಿ ಅವರ ವಾದವನ್ನು ಒಪ್ಪುವುದಾದರೂ ಇತರ ತೊಡರುಗಳು ಎದುರಾಗುತ್ತವೆ. "ಹರಿಗೆ ಚಕ್ರ ಡಾಣೆ..." ಎಂದು ಚೌಡಯ್ಯನು ಹೇಳಿದ ಧಾಟಿಯಲ್ಲೇ ಗ್ರೀಕ್ ತತ್ತ್ವಜ್ಞಾನಿ ಗ್ಸೆನೊಫಾನೆಸ್‌ನು ಕುದುರೆ, ಹಸುಗಳಿಗೂ ಸಾಧ್ಯವಿದ್ದಿದ್ದರೆ ಅವೂ ಸಹ ತಮಗೆ ಇಷ್ಟವಾದ ಸ್ವರೂಪದಲ್ಲಿ ಮನುಷ್ಯರು ಕಲ್ಪಿಸಿಕೊಂಡಂತೆಯೇ ದೇವರನ್ನು ಕಲ್ಪಿಸಿಕೊಳ್ಳುತ್ತಿದ್ದುವೆಂದು ಹೇಳಿದ್ದಾನೆ.[7] ದೇವರಿಗೆ ಮನುಷ್ಯರು ಆರೋಪಿಸಿದ ಎಲ್ಲಾ ರೂಪಗಳನ್ನೂ ಅಲ್ಲಗಳೆದ ಗ್ಸೆನೊಫಾನೆಸ್ ಶ್ರೀ ಸಿದ್ಧಾಶ್ರಮ ಅವರ ಸಿದ್ಧಾಂತದ ಪ್ರಕಾರ ಅದ್ವೈತಿಯಾಗಲು ಕಷ್ಟವಿಲ್ಲ. ಮುಸಲ್ಮಾನರು ದೇವರನ್ನೇ ಏಕೆ, ಅವನ ದೂತನಾದ ಪ್ರವಾದಿ ಮಹಮ್ಮದನನ್ನೂ ಸಹಾ ಮೂರ್ತರೂಪದಲ್ಲಿ ಕಲ್ಪಿಸುವುದನ್ನು ಕಟುವಾಗಿ ವಿರೋಧಿಸುತ್ತಾರೆ. ನನಗೆ ತಿಳಿದ ಮಟ್ಟಿಗೆ ಕ್ರೈಸ್ತರಲ್ಲೂ ಸಹಾ ದೇವರನ್ನು ಸಾಕಾರವಾಗಿ

ಕಲ್ಪಿಸುವ ರೂಢಿ ಇಲ್ಲ. ಹೀಗೆ ದೇವರ ನಿರಾಕಾರತ್ವವನ್ನು ಪ್ರತಿಪಾದಿಸುವ ಕ್ರೈಸ್ತರು ಹಾಗೂ ಮುಸಲ್ಮಾನರು ಅದ್ವೈತಿಗಳ ಗುಂಪಿಗೇ ಸೇರಿದವರೆಂದು ಹೇಳೋಣವೆ? ಅದ್ವೈತಿಗಳು ನಾಮರೂಪ ನಿರಾಕರಣೆ ಮಾಡಿದ ಮಾತ್ರಕ್ಕೆ ಹಾಗೆ ನಿರಾಕರಣೆ ಮಾಡಿದವರನ್ನೆಲ್ಲಾ ಅದ್ವೈತಿಗಳೆನ್ನಲಾಗುವುದಿಲ್ಲ. ಇದಲ್ಲದೇ ಶ್ರೀ ಸಿದ್ಧಾಶ್ರಮ ಅವರ ವಾದದಲ್ಲಿ ಇನ್ನೂ ಎರಡು ಪ್ರಾಥಮಿಕ ದೋಷಗಳಿವೆ. ಮೊದಲನೆಯದು 'ನಿರಾಕಾರ=ನಿರ್ಗುಣ' ಎಂಬ ಬಾಲಿಶ ಸಮೀಕರಣ. 'ಆಕಾರ'ವೂ ಒಂದು ಗುಣವಾದ್ದರಿಂದ ನಿರ್ಗುಣವಾದದ್ದು ನಿರಾಕಾರವೂ ಆಗಿರಬೇಕು; ಆದರೆ ನಿರಾಕಾರವಾದದ್ದು ನಿರ್ಗುಣವೂ ಆಗಬೇಕಾದ್ದಿಲ್ಲ. ಇಸ್ಲಾಂನಲ್ಲಿ ದೇವರಿಗೆ 'ಆಕಾರ' ಎಂಬ ಗುಣ ಇಲ್ಲ; ಆದರೆ ಇತರ ಗುಣಗಳು ಅವನಿಗೆ ಇವೆ. ನಿರಾಕಾರನಾದ ಅಲ್ಲಾ ನಿರ್ಗುಣನೂ ಅಲ್ಲ. ಎರಡನೆಯದು 'ದೇವರು = (ಅದ್ವೈತದ) ನಿರ್ಗುಣಬ್ರಹ್ಮ' ಎಂಬ ಭಯಾನಕ ಸಮೀಕರಣ. ಭಾರತೀಯ ದಾರ್ಶನಿಕರು ಒಪ್ಪಿರುವ 'ಪರತತ್ತ್ವ = ದೇವರು' 'ಪರತತ್ತ್ವ = ನಿರ್ಗುಣಬ್ರಹ್ಮ' ಎಂಬ ಎರಡು ಸಮೀಕರಣಗಳಿಂದ 'ದೇವರು = ನಿರ್ಗುಣಬ್ರಹ್ಮ' ಎಂಬ ಮೂರನೆಯ ಸಮೀಕರಣವೊಂದನ್ನು ಲೇಖಕರು ಸೃಷ್ಟಿಸಿ ತಮ್ಮಪೇನ ಚೌಡಯ್ಯನನ್ನು ಅದ್ವೈತಿಯಾಗಿಸಿದ್ದಾರೆ. ಆದರೆ ಇದಕ್ಕಾಗಿ ತೆರಬೇಕಾದ ತಾತ್ತ್ವಿಕ ಬೆಲೆ ಲೇಖಕರ ಗಮನಕ್ಕೆ ಬಂದಂತಿಲ್ಲ. ಈ ಹೊಸ ಸಮೀಕರಣವು ಭಾರತೀಯ ತತ್ತ್ವಶಾಸ್ತ್ರದಲ್ಲಿ ನಿರ್ಗುಣಬ್ರಹ್ಮ ಹಾಗೂ ಸಗುಣಬ್ರಹ್ಮಗಳ ನಡುವಿನ ವ್ಯತ್ಯಾಸವನ್ನು ತೊಡೆದು ಹಾಕಿ ರಾಮಾನುಜವೇದಾಂತಕ್ಕೂ ಶಾಂಕರವೇದಾಂತಕ್ಕೂ ಇರುವ ಭೇದವನ್ನೇ ನಾಶಮಾಡಿ ಹೊಸಬಗೆಯ ಅದ್ವೈತವೊಂದನ್ನು ಸೃಷ್ಟಿಸುತ್ತದೆ!

ಈ ಪರಿಯಲ್ಲಿ ಚೌಡಯ್ಯನ ಕಲ್ಪನೆಯ ಪರದೈವವು ಅದ್ವೈತದ ನಿರ್ಗುಣಬ್ರಹ್ಮವೆಂದು ಪ್ರತಿಪಾದಿಸಿದ ಮೇಲೆ ಅದು ನಿರ್ಗುಣಬ್ರಹ್ಮದಂತೆಯೇ ವಾಕ್ಕು-ಮನಗಳಿಗೆ ಅತೀತವೆಂದೂ ಸಿದ್ಧಮಾಡಬೇಡವೆ? ಅದನ್ನೂ ಲೇಖಕರು ಮಾಡಿದ್ದಾರೆ.[8] ಅದಕ್ಕಾಗಿ ಲೇಖಕರು ಬಳಸಿರುವ ವಚನ "ಅಜಾತನನೊಲಿಸದೊಡೆ ಅದೇತರ ಮಂತ್ರ, ಅದೇತರಾಗಮ ಹೇಳಿರೊ?" ಎಂದು ಪ್ರಾರಂಭವಾಗುತ್ತದೆ. ಅವರು ಬಳಸಿರುವ ಇನ್ನೊಂದು ವಚನ "ನಾದದ ಬಲದಿಂದ ವೇದಂಗಳಾದವಲ್ಲದೆ ವೇದ ಸ್ವಯಂಭುವಲ್ಲ ನಿಲ್ಲು..." ಎಂದು ಪ್ರಾರಂಭವಾಗುತ್ತದೆ. ಈ ಎರಡೂ ವಚನಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ ಅವುಗಳಲ್ಲಿ ವೇದ, ಮಂತ್ರ, ಶಾಸ್ತ್ರ, ಆಗಮಗಳ ಮೂಲಕ ದೈವಸಾಕ್ಷಾತ್ಕಾರ ಮಾಡಿಕೊಳ್ಳಬಹುದೆಂಬ ಸಿದ್ಧಾಂತದ ನಿರಾಕರಣೆ ಕಂಡುಬರುತ್ತದೆಯೇ ಹೊರತು ಪರತತ್ತ್ವವು ವಾಙ್ಮನಾತೀತವೆಂಬ ತಾತ್ತ್ವಿಕ ಸಿದ್ಧಾಂತ ಕಾಣಿಸುವುದಿಲ್ಲ. ಮಂತ್ರ, ಆಗಮಗಳಿಂದ ಅಜಾತನನ್ನು ಒಲಿಸಲು ಆಗದು; ಆದ್ದರಿಂದ ಅವು ನಿರರ್ಥಕ ಎಂಬುದೇ ಈ ವಚನಗಳ ಸಾರ. ಈ ಎರಡು

ವಚನಗಳಲ್ಲಿ ಮನಸ್ಸಿನ ಪ್ರಸ್ತಾಪವೇ ಇಲ್ಲದಿದ್ದರೂ ಅವುಗಳಿಂದ ಲೇಖಕರು ಹೊರಡಿಸಿರುವ 'ಪರತತ್ತ್ವವು ಮನಸ್ಸಿಗೆ ಸಿಲುಕದಂತಹ ತತ್ತ್ವ' ಎಂಬ ತೀರ್ಮಾನ ಆಶ್ಚರ್ಯಕರವಾದುದು.

ದೇವರಿಗೆ ಒಂದು ನಿರ್ದಿಷ್ಟ ಆಕಾರವನ್ನು ಕಲ್ಪಿಸುವುದಕ್ಕೂ ಮತ್ತು ಈ ಆಕೃತಿಗಳ ಪೂಜೆಗೆ ಸಂಬಂಧಿಸಿದ ಮಂತ್ರ - ಆಗಮಗಳಿಗಾಗಿ ಅನಿವಾರ್ಯ ಸಂಬಂಧ ಇರುವುದರಿಂದ ದೇವರ ನಿರಾಕಾರತ್ವವನ್ನು ಎತ್ತಿಹಿಡಿದ ಚೌಡಯ್ಯ ಸಹಜವಾಗಿ ವೇದ, ಮಂತ್ರ, ಆಗಮಗಳನ್ನು ತಿರಸ್ಕರಿಸುತ್ತಾನೆ.

ಚೌಡಯ್ಯನ ವಚನಗಳ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿದು ಬರುವ ಅಂಶವೆಂದರೆ ಅವನ ಪ್ರಕಾರ ದೇವರು ನಿರಾಕಾರ, ನಾವು ಪೂಜಿಸುವ ವಿಗ್ರಹಾದಿಗಳು ಪ್ರತೀಕ ಮಾತ್ರ ; ಅವೇ ದೇವರಲ್ಲ. ಈ ನಿರಾಕಾರ ಶಿವನ ಪೂಜೆಗೆಂದು ಪತ್ರ ಪುಷ್ಪಗಳನ್ನು ಅರಸುವವರು 'ಗಿಡದ ವೈರಿಗಳು, ಗಿಡದ ದಾಯಾದ್ಯರು ; ಲಿಂಗಕ್ಕೆ ಮಾಡುವ ಪೂಜೆ ಕೇವಲ ಒಂದು ಪ್ರತೀಕಕ್ಕೆ (ಕುರುಡಿಗೆ) ಮಾತ್ರ ಮಾಡುವ ಪೂಜೆ. ಅದು ಪ್ರತಿನಿಧಿಸುವ ನಿರಾಕಾರ ಶಿವನಿಗೆ ಪೂಜೆ ಹೇಗೆ ಸಾಧ್ಯ ? 'ಕುರುಡಿಗೆ ಪೂಜೆಯಲ್ಲದೆ ಅರುಹಿಂಗೆ ಪೂಜೆಯುಂಟೆ ? ' ನಾವು ಪೂಜಿಸುವ ಪ್ರತೀಕಕ್ಕೆ ಆಕಾರವಿದೆಯಲ್ಲದೇ ಅದು ಪ್ರತಿನಿಧಿಸುವ ಶಿವನಿಗೆ ಆಕಾರವುಂಟೆ ? 'ಬೆಲ್ಲಕ್ಕೆ ಮಧುರರಸವಲ್ಲದೆ ಸಿಹಿಗೆ ಮಧುರ ರಸವುಂಟೆ ? ' ಆದ್ದರಿಂದಲೇ ಚೌಡಯ್ಯನ ನಿರ್ಧಾರ : 'ತರುಗಳ ಹರಿಯೆ, ಸ್ಥಾವರವ ಪೂಜಿಸೆ, ವಚನಕ್ಕೆ ತಾರೆ...' ಇದೇ ಕಾರಣಕ್ಕಾಗಿ 'ಕಲ್ಲ ದೇವರ ಪೂಜೆ ಮಾಡಿ ಕಲಿಯುಗದಿ ಕತ್ತೆಗಳಾಗಿ ಹುಟ್ಟಿದರು...' ಇತ್ಯಾದಿಯಾಗಿ ಹಳಿಯುತ್ತಾನೆ, ಇದೆಲ್ಲದರಿಂದ ಸ್ಪಷ್ಟವಾಗುವ ಅಂಶವೆಂದರೆ ಚೌಡಯ್ಯನ ಪ್ರಕಾರ ಶಿವನು ನಿರಾಕಾರನಾದ್ದರಿಂದ ಅವನು ಸಾಕಾರ ಪೂಜೆಯನ್ನು ವಿರೋಧಿಸುತ್ತಾನೆ. ಲೇಖಕರು ತೀರ್ಮಾನಿಸಿದಂತೆ ಅವನು ನಿರ್ಗುಣೋಪಾಸಕನಲ್ಲ.

'ಅಂಗದೊಳಗಿಪ್ಪುದು ಲಿಂಗವಲ್ಲ...' ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಪರತತ್ತ್ವವು ಅಖಂಡವೆಂಬ ನಿರಾಧಾರವಾದ ತೀರ್ಮಾನಕ್ಕೆ ಲೇಖಕರು ಬಂದಿದ್ದಾರೆ. 'ಅಖಂಡವಾದ ತತ್ತ್ವವಿದಾದ್ದರಿಂದ ಹೋಗಲು – ಬರಲು ಅವಕಾಶವೆಲ್ಲಿ ? ' ಎಂದಿರುವ [9] ಲೇಖಕರು ಪರತತ್ತ್ವದ ಅಚಲತ್ವದಿಂದ ಅಖಂಡತ್ವವನ್ನು ನಿರ್ಣಯಿಸಿರುವಂತೆ ಕಾಣುತ್ತದೆ. ಇದನ್ನು ಒಪ್ಪಿಕೊಂಡರೂ ಸಹಾ ಈ ಅಖಂಡವಾದ "ಪರದೈವದ ಗರ್ಭದೊಳಗೆ ಜೀವಾತ್ಮ"ನು ಇರುವನೆಂದು ಅದೇ ಲೇಖಕರು ಹೇಳಿದಾಗ ನಾವು ಗೊಂದಲಕ್ಕೆ ಬೀಳುತ್ತೇವೆ. 'ಎಲ್ಲ ಅಂಗಂಗಳನೊಳಕೊಂಡಿಪ್ಪ ಲಿಂಗ'ವು ಅಖಂಡವೂ ಹೇಗಾಗುತ್ತದೆಂಬ ಸಮಸ್ಯೆಗೆ ಲೇಖಕರು ಸಮಾಧಾನ ನೀಡಬೇಕಾಗುತ್ತದೆ. ಅಂಗಗಳಿಗೂ ಹಾಗೂ ಲಿಂಗಕ್ಕೂ ಪೂರ್ಣ ಅಭೇದವಿದ್ದು ಇದಕ್ಕೆ

ಚೌಡಯ್ಯನ ವಚನಗಳಲ್ಲೂ ಆಧಾರವಿದ್ದರೆ ಮಾತ್ರ ಚೌಡಯ್ಯನು ಅಖಂಡವಾದ ಹಾಗೂ ಸಕಲಭೇದ ವಿಸರ್ಜಿತವಾದ ನಿರ್ಗುಣ ತತ್ತ್ವವನ್ನೇ ಪ್ರತಿಪಾದಿಸಿದನೆಂದು ಒಪ್ಪಬಹುದು. ಇಲ್ಲದಿದ್ದರೆ ಒಪ್ಪಲಾಗುವುದಿಲ್ಲ.

'ನೆನೆವೆನೆ ? ಮರೆದವನಲ್ಲ...' ಎಂಬ ವಚನದಲ್ಲಿನ 'ಎರಡಳಿದು ಒಂದುಳಿದ ಕಾರಣ ನೆನೆಯಲಿಲ್ಲ' ಎಂಬ ಸಾಲನ್ನು ವ್ಯಾಖ್ಯಾನಿಸುವಾಗ ಇದು "ಆತ್ಮಪರಮಾತ್ಮ, ಶಿವ–ಜೀವ, ದೃಕ್-ದೃಶ್ಯ ಇತ್ಯಾದಿ ದ್ವಂದ್ವ (ದ್ವೈತ) ಅಳಿದು ಒಂದೇ (ಅದ್ವೈತ) ಉಳಿದ" ಸ್ಥಿತಿಯೆಂದು ಲೇಖಕರು ಹೇಳುತ್ತಾರೆ.[10] 'ಅದ್ವೈತ' ಎಂಬ ಶಬ್ದಕ್ಕೆ 'ಎರಡಿಲ್ಲದ ಸ್ಥಿತಿ' ಎಂಬ ಸಾಧಾರಣ ಅರ್ಥವನ್ನು ಕೊಟ್ಟರೆ ಮಾತ್ರ ಈ ಸಾಲುಗಳಲ್ಲಿ ಅದ್ವೈತ ಕಾಣುತ್ತದೆಂದು ಹೇಳಬಹುದು. 'ಎರಡಳಿದು ಒಂದುಳಿಯುವುದು' ಎಂದರೆ ದ್ವೈತವು ಮಾಯವಾಗಿ 'ಅದ್ವೈತ' (ಒಂದೇ) ಉಳಿಯುವುದು ಎಂದಾದರೆ ವಾಸ್ತವವಾಗಿ ಅದ್ವೈತಿಗಳ ಪ್ರಕಾರ ಇದು ಸಂಭವಿಸುವುದೇ ಇಲ್ಲ. ಅದ್ವೈತವು ಒಂದು ನಿರ್ದಿಷ್ಟ ಕಾಲದಲ್ಲಿ 'ಉಂಟಾಗುವ' ಸ್ಥಿತಿ ಅಲ್ಲ ; ಅದು ಯಾವಾಗಲೂ 'ಇರುವ' ಸ್ಥಿತಿ. ಅದು ಇಲ್ಲವೆಂದು ನಾವು ತಪ್ಪಾಗಿ ಭಾವಿಸಿ ದ್ವೈತಭಾವದಲ್ಲಿ ವ್ಯವಹರಿಸುತ್ತಿರುವಾಗಲೂ ಸಹಾ ಅದು ಇದ್ದೇ ಇರುತ್ತದೆ. ಅದ್ವೈತವು ನಾವು ಇಲ್ಲವೆಂದು ಭಾವಿಸಿರುವಾಗಲೂ ಸಹ ಇರುವ ಸ್ಥಿತಿ ; ದ್ವೈತವು ನಾವು ಇದೆಯೆಂದು ಭಾವಿಸಿರುವಾಗಲೂ ಸಹ ವಾಸ್ತವವಾಗಿ ಇಲ್ಲದೆಯೇ ಇರುವ ಸ್ಥಿತಿ. ಆದ್ದರಿಂದ ಈ ಎರಡನೆಯದು ಅಳಿದು ಒಂದೇ ಉಳಿಯುತ್ತದೆ ಎನ್ನುವುದೂ ಸಹ ಅಜ್ಞಾನವೇ. ಅಳಿಯುವುದಕ್ಕೆ ಎರಡನೆಯದೆಂಬುದೊಂದು ಆ ಮೊದಲು ಇರಬೇಕಲ್ಲವೆ ? ಇದು ಸಾಂಪ್ರದಾಯಿಕ ಅದ್ವೈತದ ನಿಲುವು. ಈ ನಿಲುವು ಚೌಡಯ್ಯನಲ್ಲಿ ಕಂಡುಬರುವುದಿಲ್ಲ. ಜೀವವು ಈಶ್ವರನಲ್ಲಿ ಒಂದಾಗುತ್ತದೆ ; ಜೀವವೇ ಈಶ್ವರನಲ್ಲ, ಜೀವವು ಈಶ್ವರನಲ್ಲಿ ಒಂದಾಗುವುದರಿಂದ ಉಂಟಾಗುವ ಅದ್ವೈತವು ಜೀವವೇ ಸಾಕ್ಷಾತ್ ಪರಬ್ರಹ್ಮ ಎಂದು ಭಾವಿಸುವ ಅದ್ವೈತಕ್ಕಿಂತ ತೀರಾ ಭಿನ್ನವಾದುದು. ಮೊದಲ ಪ್ರಕಾರದ ಅದ್ವೈತದಲ್ಲಿ ಈಶ್ವರನು ಸಗುಣ, ಆದರೆ ನಿರಾಕಾರ. ಆದ್ದರಿಂದ ಈ ಈಶ್ವರನಿಗೂ, ಜೀವರಿಗೂ ಜಗತ್ತಿಗೂ ಗುಣಭೇದವಿದೆ. ಜೀವನು ತನಗೂ ಈಶ್ವರನಿಗೂ ಇರುವ ಕಡಿಮೆ ಮಾಡಿಕೊಳ್ಳುತ್ತಾ ಹೋಗಿ ಕೊನೆಗೆ ಈಶ್ವರನಲ್ಲಿ ಒಂದಾಗಬಹುದು ; ಲಿಂಗೈಕ್ಯನಾಗಬಹುದು. ಆದರೆ ಎರಡನೇ ಪ್ರಕಾರದ ಅದ್ವೈತದಲ್ಲಿ ಪರತತ್ತ್ವವು ನಿರ್ಗುಣ. ಈ ನಿರ್ಗುಣ ತತ್ತ್ವದಲ್ಲಿ ಅಜ್ಞಾನದಿಂದಾಗಿ ಜೀವ, ಜಗತ್ತುಗಳ ಸುಳ್ಳು ಪ್ರತೀತಿ ಉಂಟಾಗುತ್ತದೆಯೇ ಹೊರತು, ಅವು ಇವೆಯೆಂಬ ಭ್ರಮೆ ಉಂಟಾಗುತ್ತದೆಯೇ ಹೊರತು ವಸ್ತುತಃ ಅವು ಎಂದೂ ಇರುವುದೇ ಇಲ್ಲ. ಈ ರೀತಿಯ ಅದ್ವೈತವನ್ನು ಪ್ರತಿಪಾದಿಸುವವರು ಅವಿದ್ಯೆ, ಮಾಯೆ, ಅಭ್ಯಾಸ ಇತ್ಯಾದಿ ಕಲ್ಪನೆಗಳನು ಬಳಸ

ದಿರಲು ಸಾಧ್ಯವೇ ಇಲ್ಲ. ಈ ಯಾವ ಕಲ್ಪನೆಗಳ ಕುರುಹೂ ಸಹ ಚೌಡಯ್ಯನ ವಚನಗಳಲ್ಲಿ ಕಾಣದಿರುವಾಗ ಅವನೊಬ್ಬ ನಿರ್ಗುಣ ತತ್ತ್ವೋಪಾಸಕ ಎಂಬ ಲೇಖಕರ ನಿಲುವನ್ನು ಒಪ್ಪಲು ಸಾಧ್ಯವೇ ಇಲ್ಲ, ಚೌಡಯ್ಯನು ಶಿವನು ಶಕ್ತಿಮುಖೇನ ಸೃಷ್ಟಿ ಮಾಡುತ್ತಾನೆಂದು ಹೇಳಿಲ್ಲವಾದ್ದರಿಂದ ಅವನನ್ನು ಶಕ್ತಿ ವಿಶಿಷ್ಟಾದ್ವೈತಿಯೆಂದು ಹೇಳಲಾಗದೆಂದು ನಿಷ್ಠುರವಾಗಿ ನುಡಿಯುವ ಲೇಖಕರು[11] ಚೌಡಯ್ಯನಲ್ಲಿ ಅಧ್ಯಾಸ, ಮಾಯೆ, ಜಗನ್ಮಿಥ್ಯಾತ್ವ ಇತ್ಯಾದಿಗಳ ಪ್ರಸ್ತಾಪವೇ ಇಲ್ಲದಿದ್ದರೂ ಅವನು ಅದ್ವೈತಿ ಯೆಂದು ವಾದಿಸುವುದು ಬೌದ್ಧಿಕ ವಿಪರ್ಯಾಸವಲ್ಲವೆ ?

'ಒಂದಾಗು'ವುದಕ್ಕೂ 'ಒಂದೇ ಆಗಿರು' ವುದಕ್ಕೂ ಇರುವ ಸೂಕ್ಷ್ಮವಾದ, ಆದರೆ ಗಾಢವಾದ ಭೇದವನ್ನು ಲೇಖಕರು ಅರಿತಿದ್ದರೆ ಚೌಡಯ್ಯನೊಬ್ಬ ಅದ್ವೈತಿ ಯೆಂಬ ಅವರ ಭ್ರಾಮಕ ಪ್ರತಿಪಾದನೆ ಹಾಗೂ ತದುದ್ಭವ ಮಿಥ್ಯಾಕಲ್ಪನೆಗಳಿಗೆ ಅವಕಾಶವಿರುತ್ತಿರಲಿಲ್ಲ.

ಶ್ರೀ ಸಿದ್ಧಾಶ್ರಮ ಅವರ ಲೇಖನದಲ್ಲಿನ ಅತ್ಯಂತ Shocking ಆದ ಅಂಶ ವೆಂದರೆ ಅವರ 'ಆತ್ಮಾದ್ವೈತ' ಹಾಗೂ 'ಸತ್ತಾದ್ವೈತ' ಗಳೆಂದರೇನೆಂಬುದರ ನಿರೂಪಣೆ. ಈ ನಿರೂಪಣೆಯನ್ನು ಅವರು ತೀರಾ ನಿರ್ಲಕ್ಷ್ಯ ಮನಸ್ಥಿತಿಯುಲ್ಲಿದ್ದಾಗ ಮಾಡದೇ ಪ್ರಜ್ಞಾಪೂರ್ವಕವಾಗಿಯೇ ಮಾಡಿದ್ದರೆ ಅವರಿಗೆ ಅದ್ವೈತವೆಂದರೆ ಏನೆಂಬುದರ ಕಲ್ಪನೆಯೇ ಸರ್ವಥಾ ಇಲ್ಲವೆಂದು ಹೇಳಬೇಕಾಗುತ್ತದೆ. ಅವರ ಪ್ರಕಾರ "ಸತ್ತಾದ್ವೈತವೆಂದರೆ ಹೊರಗೊಂದು 'ಬ್ರಹ್ಮ' ಅಥವಾ 'ಸತ್ಯ' ಇದೆ, ಅದೊಂದೇ ಸತ್ಯ ಎನ್ನುವುದು ; ಹಾಗೂ ಆತ್ಮಾದ್ವೈತವೆಂದರೆ, ನಮ್ಮೊಳಗಣ ಆತ್ಮ ಒಂದೇ ಸತ್ಯವೆಂಬುದು,"[12] ಅಂದರೆ 'ಹೊರಗೆ' ಇರುವುದು 'ಬ್ರಹ್ಮ' ; 'ಒಳಗೆ' ಇರುವುದು 'ಆತ್ಮ', ಕೆಲವರು 'ಹೊರಗೆ' ಇರುವ 'ಬ್ರಹ್ಮ' ವೊಂದೇ ಸತ್ಯವೆಂದರೆ (ಇವರು ಸತ್ತಾದ್ವೈತಿಗಳು) ಇನ್ನು ಕೆಲವರು 'ಒಳಗೆ' ಇರುವ 'ಆತ್ಮ' ವೊಂದೇ ಸತ್ಯವೆಂದು ಹೇಳುತ್ತಾರೆ (ಇವರು ಆತ್ಮಾದ್ವೈತಿಗಳು). ಆದರೆ ಪ್ರತಿಯೊಬ್ಬ ಅದ್ವೈತಿಯೂ 'ಸತ್ತಾದ್ವೈತಿ'ಯೋ ಅಥವಾ 'ಆತ್ಮಾದ್ವೈತಿ'ಯೋ ಆಗಿರಬೇಕು. ಅಂದರೆ ಕೇವಲ 'ಬ್ರಹ್ಮ' ವೊಂದನ್ನೇ ಅಥವಾ 'ಆತ್ಮ'ವೊಂದನ್ನೇ ಸತ್ಯವೆಂದು ನಂಬಬೇಕು. ಹೀಗಿದ್ದರೆ ಬ್ರಹ್ಮ ಆತ್ಮಗಳೆರಡನ್ನೂ ಸಮೀಕರಿಸಿ (ಅವೆರಡೂ ಒಂದೇ ಆದ್ದರಿಂದ) ಅದನ್ನು ಸತ್ಯವೆಂದು ನಂಬುವ ನಿಜವಾದ ಅದ್ವೈತಿಯು ಇತ್ತ ಆತ್ಮಾದ್ವೈತಿಯೂ ಆಗುವುದಿಲ್ಲ ; ಅತ್ತ ಸತ್ತಾದ್ವೈತಿಯೂ ಆಗುವುದಿಲ್ಲ. ಶ್ರೀ ಸಿದ್ಧಾಶ್ರಮ ಅವರ ವಿವರಣೆಗನುಗುಣವಾಗಿ ಅವನು ಅದ್ವೈತಿಯೇ ಅಲ್ಲ. ಏಕೆಂದರೆ ಅವನು 'ಹೊರಗೆ' ಇರುವ ಬ್ರಹ್ಮ ಮತ್ತು ಅದರಿಂದ ಭಿನ್ನವಾಗಿ 'ಒಳಗೆ' ಇರುವ ಆತ್ಮ ಎರಡನ್ನೂ ನಂಬುವ 'ದ್ವೈತಿ' ಆಗುತ್ತಾನೆ, ಹೀಗೆ ಶ್ರೀ ಸಿದ್ಧಾಶ್ರಮ ಅವರ ಕಲ್ಪನೆಯು 'ಆತ್ಮಾ

ದ್ವೈತ' 'ಸತ್ತಾದ್ವೈತ'ಗಳನ್ನು ಒಪ್ಪಿಕೊಂಡರೆ 'ಆತ್ಮ' 'ಬ್ರಹ್ಮ' ಇವು ಎರಡು ಬೇರೆ ಬೇರೆ ತತ್ತ್ವಗಳೆಂದು ಹೇಳಲೇ ಬೇಕಾಗುತ್ತದೆ. ಹಾಗಿಲ್ಲದೇ ಇವೆರಡೂ ಒಂದೇ ಎಂದು ಲೇಖಕರು ಹೇಳುವುದಾದರೆ ಅವರು 'ಆತ್ಮಾದ್ವೈತ' 'ಸತ್ತಾದ್ವೈತ' ಗಳ ನಡುವೆ ಮಾಡುವ ಭೇದವು ಬಂಜೆಯು ಮಗನ ಜೀವನ ಚರಿತ್ರೆಯಷ್ಟೇ ನಿಗೂಢ ವಾಗುತ್ತದೆ !

ಅದ್ವೈತಭಾವದ ಛಾಯೆಯಿರುವ ಸಾಲುಗಳು ಚೌಡಯ್ಯನ ಅಥವಾ ಇತರರ ರಚನೆಗಳಲ್ಲಿ ಕಂಡುಬಂದ ಮಾತ್ರಕ್ಕೆ ಅವರನ್ನು ತತ್ತ್ವಶಾಸ್ತ್ರದ ಅಸಂಖ್ಯ ಗೂಡು (Pigeonholes) ಗಳಲ್ಲೊಂದಾದ ಅದ್ವೈತದೊಳಕ್ಕೆ ತೂರಿಸುವ ಇಂತಹ ಅಪ್ರಬುದ್ಧ ಯತ್ನಗಳಿಂದ ಚೌಡಯ್ಯನಂತಹ ವಿಶಿಷ್ಟವ್ಯಕ್ತಿಗಳಿಗೂ ಹಾಗೂ ಅದ್ವೈತ ವೇದಾಂತಕ್ಕೂ ಏಕಕಾಲದಲ್ಲಿ ಅಪಚಾರವಾಗುತ್ತದೆಂಬುದನ್ನು ನೆನಪಿನಲ್ಲಿಡುವುದು ಅಗತ್ಯ.

ಅಡಿಟಿಪ್ಪಣಿಗಳು

1 ಶ್ರೀ ಬಸವರಾಜ ಸಿದ್ಧಾಶ್ರಮ : 'ಅಂಬಿಗರ ಚೌಡಯ್ಯನ ತಾತ್ತ್ವಿಕ ಚಿಂತನೆ', ಸಾಧನೆ, ಸಂಪುಟ 9, ಸಂಚಿಕೆ 2 ; ಏಪ್ರಿಲ್–ಜೂನ್ 1980, ಪುಟ 86
2 ಅದೇ, ಪುಟ 87
3 ಅದೇ, ಪುಟ 92
4 ಅದೇ, ಪುಟ 90
5 ಅದೇ, ಪುಟ 87
6 ಅದೇ, ಪುಟ 87
7 Werner Jaeger : The Theology of the Early Greek Philosophers, oxford University Press, London, 1960, Page 47
8 ಶ್ರೀ ಬಸವರಾಜು ಸಿದ್ಧಾಶ್ರಮ : 'ಅಂಬಿಗರ ಚೌಡಯ್ಯನ ತಾತ್ತ್ವಿಕ ಚಿಂತನೆ', ಸಾಧನೆ, ಸಂಪುಟ 9, ಸಂಚಿಕೆ 2 ; ಏಪ್ರಿಲ್–ಜೂನ್ 1980, ಪುಟ 87–88
9 ಅದೇ, ಪುಟ 88
10 ಅದೇ, ಪುಟ 91
11 ಅದೇ, ಪುಟ 90 (ಅಡಿಟಿಪ್ಪಣಿ)
12 ಅದೇ, ಪುಟ 90

ನೆಲವತ್ತಿ : ಊರು ಮಾತ್ರ 'ಇದೆ' !

ಒಂದು ವ್ಯಕ್ತಿಯ ಚರಿತ್ರೆಯಲ್ಲಿ ಏಳುಬೀಳುಗಳಿರುವಂತೆ ಒಂದು ಊರಿನ ಚರಿತ್ರೆಯಲ್ಲಿಯೂ ಇರುವುದುಂಟು. ವಿಜಯನಗರ ಈಗ 'ಹಾಳು ಹಂಪೆ' ಹಳೆಯ ಬೀಡು ಹಳೆಯಬೀಡು. ಮಾನ್ಯ ಖೇಟ ಇಂದಿನ ಮಳ್ಖೇಡ್ ; ತಲಕಾಡು, 'ಹುಡುಕ್ಯಾಡು'. ಹೀಗೆಯೇ 'ನೇಮತಿ'ಯ ಪಾಡು.

ಡಾ|| ಡಿ.ಎಲ್. ನರಸಿಂಹಾಚಾರ್ಯರು 'ಪದಗಳ ಹುಟ್ಟು ಸಾವು' ಎಂಬ ಲೇಖನದಲ್ಲಿ ಹೀಗೆಂದಿದ್ದಾರೆ : "ನೆಲವತ್ತಿ ಎಂಬ ಊರು ಮಾತ್ರ ಇಲ್ಲ. ಆ ಊರು ಅದರ ಹೆಸರು, ಅಲ್ಲಿನ ಅಡಕೆ ಈ ಮೂರು ಈಗ ಮಾಯವಾಗಿವೆ."

ಡಾ|| ಚಿದಾನಂದಮೂರ್ತಿ ಅವರು "ಅಡಕೆಗೆ ಪ್ರಸಿದ್ಧವಾಗಿದ್ದ ನೆಲವತ್ತಿ ಗ್ರಾಮ ಯಾವುದು" ಎಂಬ ಲೇಖನದಲ್ಲಿ ಇಂದಿನ ನೇಮತಿಯೇ ಹಿಂದಿನ ನೆಲವತ್ತಿ ಎಂದು, ಸರಿಯಾಗಿಯೆ ನಿರ್ಣಯಿಸಿದ್ದಾರೆ. ಅದೇ ವಿಚಾರವಾಗಿ ಈ ಲೇಖನವು.

ವಡ್ಡಾರಾಧನೆಯ ಭದ್ರಬಾಹು ಭಟ್ಟಾರರ ಕಥೆಯಲ್ಲಿ "ನೆಲವತ್ತಿಯಡಕೆ" ಎಂಬ ಮಾತು ಬಂದಿದೆ. ಅದೇ ಮಾತು ಪೊನ್ನ (ಕ್ರಿ.ಶ. 950)ನ 'ಶಾಂತಿನಾಥ ಪುರಾಣ'ದಲ್ಲಿಯೂ ಬಾಹುಬಲಿ (ಕ್ರಿ.ಶ. 1352) ಯ ಧರ್ಮನಾಥ ಪುರಾಣದಲ್ಲಿಯೂ ಇದೆ. 1184ರಲ್ಲಿ ಲಿಖಿತವಾದ ಒಂದು ಶಾಸನದಲ್ಲಿ "ನೆಲವರ್ತಿ" ಎಂಬ ಪದವಿದೆ. ಶಿವಮೊಗ್ಗೆಯ ತಾಲ್ಲೂಕಿನ 10ನೆಯ ಶಾಸನ (1079)ದಲ್ಲಿ ನೆಲ್ಲವತ್ತಿಯನ್ನು ಹೆಸರಿಸಿದೆ. ಒಂದಾನೊಂದು ಕಾಲದಲ್ಲಿ ನೆಲವತ್ತಿ ಎಂಬ ಊರು ಉತ್ತಮ ಗುಣ ಮಟ್ಟದ ಅಡಕೆಯನ್ನು ಬೆಳೆಯುವ ಪ್ರದೇಶದ ಮೇಟಿಯಾಗಿತ್ತು–ಇಷ್ಟು ಡಿ.ಎಲ್. ನರಸಿಂಹಾಚಾರ್ಯರ ಲೇಖನದ ತಿರುಳು.

ಆದರೆ 'ಶಾಂತಿ ಪುರಾಣ'ದ ಆ ಪದ್ಯದಲ್ಲಿಯ

"ಅಡಸಿದ ಪಾರಿಜಾತಕದ ಕಪ್ಪುರವಳ್ಳಿಯಂ ನೇಲವತ್ತಿಯಾಯ್ದಡಕೆಯು..."

ಈ ಪದಪುಂಜದಲ್ಲಿ 'ಕಪ್ಪುರವಳ್ಳಿಯ' ಎಂಬುದೂ ಪರಿಶೀಲನಾರ್ಹವಾದ ಸಮಸ್ತಪದ 'ಬಳ್ಳಿಯ' ಎಂಬುದು ನೇಲವತ್ತಿ (ನೆಲವತ್ತಿ) ಗ್ರಾಮವು ಯಾವ ನಾಡಿನಲ್ಲಿದ್ದಿತೆಂಬುದನ್ನು ಸೂಚಿಸುತ್ತಿದೆ.

ಡಾ॥ ಮೂರ್ತಿ ಅವರು ಮತ್ತೆ ಏಳು ಶಾಸನೋಕ್ತಿಗಳನ್ನು ಉಲ್ಲೇಖಿಸಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನಲ್ಲಿರುವ ನೇಮತಿಯೇ ಹಿಂದಿನ ಕಾಲದ ನೆಲವತ್ತಿ ಎಂದು ತೀರ್ಮಾನಿಸಿದ್ದಾರೆ. ಅವರು ಉಲ್ಲೇಖಿಸಿರುವ ಶಾಸನ ಭಾಗಗಳಲ್ಲಿ,

"ಅಗ್ರಹಾರಂ ನೆಲವತ್ತಿಯ ಸಾಸಿರ್ವರು ಮಹಾಜನಮಿರ್ದು"

''ಬಳ್ಳಿಯ ನಾಡ ನೆಲವತ್ತಿಯ''

''ನಲ್ಮಬ್ಬೆಯ ಕಮ್ಮರವೀದಿ''

''ಒಳ್ಳಿಯ ನಾಡ ನೇಮತ್ತಿಯ ಗ್ರಾಮದ ಕಾಲುವಳಿ ಸುರಹೊನ್ನೆಯ ಪುರದಲು''

—ಇವು ಮುಖ್ಯವಾದುವು. ಈಗ ನೇಮತಿ ಸುರಹೊನ್ನೆ ಗ್ರಾಮಗಳೆರಡೂ ಬೆಳೆದು ಒಂದರೊಡನೊಂದು ಹೆಣೆದುಕೊಂಡಿವೆ. ಎರಡು ಊರುಗಳಿಗೂ ಒಂದೇ ಪುರಸಭೆ ಇದೆ.

ಆದರೂ ಡಾ॥ ಮೂರ್ತಿ ಅವರಿಗೇ ಸಂಶಯ. ''ಈಗಿನ ನ್ಯಾಮತಿಯು ಹಿಂದೆ ಅಡಕೆ ಬೆಳೆಯುವ ಜಾಗವಾಗಿತ್ತೆಂದು ಯಾರಾದರೂ ತೋರಿದರೆ ಆಗ 'ನೆಲವತ್ತಿಯಡಕೆ' ಎಂದರೆ ನೆಲವತ್ತಿ ಪ್ರದೇಶದಲ್ಲಿ ಬೆಳೆಯುತ್ತಿದ್ದ ಅಡಕೆ ಎಂದು ಅರ್ಥೈಸಲು ಬರುತ್ತದೆ" ಎಂದು ದುಂಡುಕಂಸದಲ್ಲಿ ಸೂಚಿಸಿದ್ದಾರೆ.

ನಾನು ಕಂಡಂತೆ ನೇಮತಿಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಆ ಊರಿಗೆ ಸೇರಿದ ಭೂಮಿಯಲ್ಲಿಯೆ ಅಡಕೆಯ ತೋಟ ಅಲ್ಲದಿದ್ದರೂ ಎಲೆಯ ತೋಟಗಳಿದ್ದುವು. ಅದೇ ಊರಿನ ದಕ್ಷಿಣಕ್ಕೆ ಒಂದೆರಡು ಮೈಲಿದೂರದಲ್ಲಿರುವ ಸೋಗಲು, ಚಟ್ನಹಳ್ಳಿ, ಒಡೆಯರ ಹತ್ತೂರು ಮುಂತಾದ ಊರುಗಳಲ್ಲಿ ಈಗಲೂ ಅಡಕೆ ತೋಟಗಳಿವೆ. ಆ ಊರಿನ ಉತ್ತರ ಪಶ್ಚಿಮ ದಿಕ್ಕುಗಳಲ್ಲಿರುವ ಜಕ್ಕಿನ ಕೊಪ್ಪ, ಕತ್ತಿಗೆ, ಬೆಳಗುತ್ತಿ, ಕುಳ್ಳ ಹಳ್ಳಿಗಳಲ್ಲಿ ಅಡಕೆ ತೋಟಗಳಿದ್ದುವು. ಹಿಂದಿನ ಕಾಲದಲ್ಲಿ ಈ ಪ್ರದೇಶದ ಹಳ್ಳಿಗಳಲ್ಲೆಲ್ಲಾ ಅಟ್ಟಕ್ಕಾಗಿ ಅಡಕೆಯ ಪಟ್ಟೆ (ದೆಬ್ಬೆ)ಗಳನ್ನೇ ಬಳಸುತ್ತಿದ್ದರು. ಈ ಶತಮಾನದ ಮೊದಲ ದಶಕಗಳಲ್ಲಿ ಕೂಡ, ಸಂಚಾರ ಸಾರಿಗೆ ವ್ಯವಸ್ಥೆ ಇಂದಿನಂತೆ ಇಲ್ಲದಿದ್ದಾಗ ನೇಮತಿಯು ಬೆಲ್ಲ ಮತ್ತು ಅಡಕೆಯ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ವ್ಯಾಪಾರಿಗಳು ಉತ್ತರ ಕರ್ನಾಟಕದಿಂದ, ಮಲೆನಾಡು ಪ್ರದೇಶದಿಂದ ಇಲ್ಲಿಗೆ ಬಂದು ಇಲ್ಲಿಯೇ ನೆಲಸಿ ಇಲ್ಲಿಂದ ಬೇರೆ ಊರುಗಳಿಗೆ ಮಾಲು ಸಾಗಿಸುತ್ತಿದ್ದರು; ಇಲ್ಲಿಯ ಜನರಿಗೆ ಬೇಕಾದ ದಿನಸನ್ನು ಬೇರೆ ಕಡೆಯಿಂದ ತಂದುಹಾಕುತ್ತಿದ್ದರು. ಈ ಊರಿನ ವರ್ತಕರ ಮನೆತನಗಳ ಹೆಸರುಗಳೂ ಇಲ್ಲಿ ಉಲ್ಲೇಖನಾರ್ಹವಾಗಿದೆ. ಸಂಗಪ್ಪ ಕಮ್ಮರಡಿ, ಕಲ್ಲಪ್ಪ ಯಲಬುರ್ಗಿ, ನವಿಲೇರ ವೀರಪ್ಪ, ಮುಂಡರಿಗೇರ ಮನೆ,

ಸೊಂಡೂರು ಶಂಕರಪ್ಪ, ನಗರದ ಗುರುಲಿಂಗಪ್ಪ - ಇವು ನನಗೆ ಕೂಡಲೇ ನೆನಪಿಗೆ ಬರುವ ಹೆಸರುಗಳು, ಬಿ. ಎಲ್. ರೈಸ್ ಅವರು.

"Nyamati is a town of very modern date, the petta having been established in the time of Devan Purnaiya. Being situated between Malnad and Maidan regions, a considerable trade is carried on by the merchants, who are all Lingayits, in exchanging the products of both tracts. The grain of the Malnad and the joggary of the neighbouring taluqs. which can be stored in this dry climate for sometime without risk or damage, with arecanut from Nagar and Koppa, are forwarded to Bellary, Dharwar, etc., in return for clothes and other articles, which are sent to Malnad and Canara." ಎನ್ನುತ್ತಾರೆ.

ವಾಸ್ತವವಾಗಿ ಈಗ ನೇಮತಿಯು ಅಗ್ರಹಾರ ಹಾಳಾಗಿದೆ; ಈಗಿರುವುದು ಪೇಟೆ ಮಾತ್ರ. ರೈಸ್‌ರವರು ಹೇಳುವಂತೆ ಪೇಟೆ ನಿರ್ಮಾಣವಾದುದು ದಿವಾನ್ ಪೂರ್ಣಯ್ಯನವರ ಕಾಲದಲ್ಲಿ. ವ್ಯಾಪಾರ ಮೊದಲಿನಿಂದಲೂ ನಡೆಯುತ್ತಲೆ ಇದ್ದಿತೆಂಬುದಕ್ಕೆ ಮೇಲೆಹೇಳಿದ ಶಾಸನಗಳೇ ಸಾಕ್ಷಿ.

ಆದರೆ, ಡಾ|| ಮೂರ್ತಿ ಅವರ ನೆಲವತ್ತಿ>ನೇಮತ್ತಿ>ನ್ಯಾಮತಿ—ಎಂಬ ನಿರ್ಣಯವನ್ನು ಪುನರ್ ಪರಿಶೀಲಿಸ ಬೇಕಾಗುತ್ತದೆ.

'ನೆಲ್ಮಬ್ಬೆಯ ಕಮ್ಮರ ಬೀದಿ' ಎಂಬ ಮಾತು ನೇಮತಿಯಲ್ಲಿರುವ ಒಂದು ಶಾಸನ (ಹೊನ್ನಾಳಿ ೭೪)ದಲ್ಲಿ ಬರುತ್ತದೆ. ಅದರ ಕಾಲ ಕ್ರಿ.ಶ. ೯೭೪. ನೆಲ್ಮಬ್ಬೆಯು ಇವರು ಊಹಿಸಿರುವಂತೆ ನೆಲವತ್ತಿ ಎಂಬುದರ ಅಪಲಿಖಿತವಲ್ಲ; ನೆಲವತ್ತಿಯೂ ನೆಲ್ಮಜ್ಜೆ ಎಂಬುದರ ಅಪಲಿಖಿತವಲ್ಲ. ಶಾಸನ ಓದಿದವರು ನೆಲ್ಮಜ್ಜೆಯನ್ನು 'ನೆಲ್ಮಬ್ಬೆ' ಎಂದು ಓದಿಕೊಂಡಿರಬೇಕು. ಒಂಬತ್ತು ಹತ್ತನೆಯ ಶತಮಾನಗಳಲ್ಲಿ 'ಬ' ಮತ್ತು 'ಜ' ಲಿಪಿಗಳಿಗೆ ಹೆಚ್ಚು ವ್ಯತ್ಯಾಸವಿರಲಿಲ್ಲ. 'ನೆಲ್ಮಜ್ಜೆ'ಯನ್ನು 'ನೆಲ್ಮಬ್ಬೆ' ಎಂದು ಓದಿಕೊಂಡಿದ್ದಾರೆ. ಮಜ್ಜೆ ಎಂದರೇ ಮತ್ತಿ, ಕಪ್ಪು ಎಂದು ಅರ್ಥ. ಮತ್ತಿಯಂ ಮರಕ್ಕೆ ಕರಿಯ ಮರ ಎಂದು ಈಗಲೂ ಕರೆಯುತ್ತಿದ್ದೇವೆ. ಚಕಾರ ತಕಾರಗಳ ವಿನಿಮಯ ದ್ರಾವಿಡ ಭಾಷೆಯಲ್ಲಿ ಸಾಮಾನ್ಯ ಉದಾ : ತೇಳು> ಚೇಳು, ತೋಮ್ಮ>ಜೋಮು, ತ್ಸೆಂಡು>ಚೆಂಡು (ಸೆಂಡು). ಮಿಡಿತೆ>ಮಿಡಿಚೆ. ಆದುದರಿಂದ 'ನೆಲ್ಮತ್ತಿ'ಯು 'ನೆಲ್ಮಜ್ಜೆ'ಯಾಗಿ ಅನಂತರ ನೆಲ್ಮಜ್ಜೆಯಾಗಿರಬೇಕು. ಜನರ ಬಾಯಲ್ಲಿ ನೆಲ್ಮತ್ತಿಯೂ ಉಳಿದು ಬಂದಿರಬೇಕು. ನೆಲ + ಮತ್ತಿಯು ನೆಲ್ಮತ್ತಿಯಾಗಿ ಕಾಲಕ್ರಮದಲ್ಲಿ ('ಲ' ಲೋಪವಾಗಿ ಹಿಂದಿನ ಸ್ವರ ದೀರ್ಘವಾಗಿ) ನೇಮತ್ತಿಯಾಗಿ

ಈಗ ನೇಮತಿ ಆಗಿದೆ ಎಂದು ನನಗೆ ತೋರುತ್ತದೆ; ಇನ್ನೊಂದುಕಡೆ, 'ನೆಲಮತ್ತಿ'ಯು 'ನೆಲವತ್ತಿ' ಆಗಿದ್ದರೆ ಆಶ್ಚರ್ಯವೇನಿಲ್ಲ.

ಈಗ 'ನೆಲಮತ್ತಿ'ಗೆ ಏನು ಅರ್ಥ ಎಂಬುದರ ಬಗೆಗೆ, ನೇಮತಿಯ ಪೂರ್ವ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಬಹು ಫಲವತ್ತಾದ, ಹತ್ತಿ ಬೆಳೆಯುವ (ಈಗ ಬೆಳೆಯುತ್ತಿಲ್ಲ, ಹಿಂದೆ ಬೆಳೆಯುತ್ತಿದ್ದರು) 'ಥೇಟ್' ಎರೆಯ ಭೂಮಿಯಿದೆ. ಬೆಳೆಯಿಲ್ಲದ ಕಾಲದಲ್ಲಿ, ನೇಮತಿಯು ಪಶ್ಚಿಮಕ್ಕಿರುವ ತೀರ್ಥಗಿರಿಯಿಂದ್ನೇರಿ ನಿಂತು ಪೂರ್ವದಿಕ್ಕಿನ ಭೂಮಿಯ ಮೇಲೆ ದೃಷ್ಟಿ ಹಾಯಿಸಿದರೆ ಅಚ್ಚ ಎರೆಯ ಭೂಮಿಯನ್ನು ಗೆರೆಹಾಕಿ ಗುರುತಿಸಬಹುದು. ಅಂತಹ ನೆಲದ ನಡುವೆ ಇದೆ ನೇಮತಿ ಎಂಬ ಊರು. ನೆಲದ ಬಣ್ಣವನ್ನು ಗಮನಿಸಿ ಊರಿನ ಹೆಸರಿಟ್ಟಿದೆ.

ವಿಶೇಷಣವು ಉತ್ತರ ಪದವಾಗಿ ವಿಶೇಷ್ಯವೇ ಪೂರ್ವ ಪದವಾಗಿರುವುದಕ್ಕೆ ನಿದರ್ಶನಗಳುಂಟು. ಕಳ್ವೆಪ್ಪು (ಕಳ್ವಪ್ಪು), ಸೀರ್‌ಬೀಳ್ ಈ ಎರಡು ಮಾತ್ರ ಸದ್ಯದಲ್ಲಿ ನೆನಪಿಗೆ ಬರುತ್ತಿವೆ. ಹೊತ್ತಾರೆ ಎಂಬದನ್ನು ಸೇರಿಸಬಹುದೋ ಏನೋ— ಈ ಪುಟ್ಟ ಲೇಖನ ಬರೆಯಲು ಪ್ರಚೋದನೆಯಿತ್ತ ಡಾ॥ ಚಿದಾನಂದಮೂರ್ತಿಯವರಿಗೆ ನಾನು ತುಂಬ ಋಣಿ.

ಟಿಪ್ಪಣಿ

1. ಪೀಠಿಕೆಗಳು ಮತ್ತು ಲೇಖನಗಳು (ಡಿ. ವಿ. ಕೆ. ಮೂರ್ತಿ ಮೈಸೂರು ೧೯೭೧), ಪು. ೯೨೪–೯೨೫
2. ಸಾಧನೆ : ಸಂಪುಟ ೧೦, ಸಂಚಿಕೆ ೨; ಏಪ್ರಿಲ್ ಜೂನ್ ೧೯೮೧
3. B. L. Rice ; Mysore Vol II ೧೮೯೭ ; ಪು. ೪೬೫.

ಎಚ್. ದೇವಿರಪ್ಪ

ಹಿಂದಿನ 'ನೆಲವತ್ತಿ'ಯೇ ಈಗಿನ ನ್ಯಾಮತಿ ಎಂಬುದಕ್ಕೆ ಹೆಚ್ಚಿನ ಸಮರ್ಥನೆ

ಅಡಕೆಗೆ ಹಿಂದೆ ಪ್ರಸಿದ್ಧವಾಗಿದ್ದ 'ನೆಲವತ್ತಿ' ಗ್ರಾಮವೇ ಹೊನ್ನಾಳಿ ತಾಲೂಕಿನ ಇಂದಿನ ನ್ಯಾಮತಿ ಎಂಬುದನ್ನು ಶಾಸನಾಧಾರಗಳಿಂದ ನಾನು ಈ ಹಿಂದೆ ಪ್ರತಿಪಾದಿಸಿದ್ದೇನೆ (ಸಾಧನೆ, 10.2.ಪು.32–37). ನೆಲವತ್ತಿಯಲ್ಲಿ ಬಹುಶಃ ಅಡಕೆಯನ್ನು ಬೆಳೆಯುತ್ತಿರಲಿಲ್ಲ, ಅಥವಾ ಅಲ್ಲಿ ಅಲ್ಪಪ್ರಮಾಣದಲ್ಲಿ ಬೆಳೆಯುತ್ತಿದ್ದಿರಬಹುದಾದ ಅಡಕೆಯಿಂದ ಅದು ಪ್ರಸಿದ್ಧವಾಗಿರಲಿಲ್ಲವೆಂದೂ, ಅಡಕೆಯನ್ನು ಬೆಳೆಯುತ್ತಿದ್ದ ಮಲೆನಾಡಿನ ಕೇಂದ್ರಗಳಾದ ಸಾಗರ, ಸಿರ್ಸಿ ಇತ್ಯಾದಿ ಕಡೆಗಳಿಂದ ಅಡಕೆಯನ್ನು ಸಂಗ್ರಹಿಸಿ ನೆಲವತ್ತಿಯ ವರ್ತಕರು ಆ ಅಡಕೆಯನ್ನು ವ್ಯಾಪಾರ ಮಾಡು

ತ್ತಿದ್ದುದರಿಂದ 'ನೆಲವತ್ತಿಯಡಕೆ' ಎಂದು ಪ್ರಸಿದ್ಧವಾಗಿರಬೇಕೆಂದೂ ನಾನು ಊಹೆ ಮಾಡಿದ್ದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, 'ನೆಲವತ್ತಿಯಡಕೆ' ಯು ನೆಲವತ್ತಿಯಲ್ಲಿ ಬೆಳೆದ ಅಡಕೆ ಅಲ್ಲ, ನೆಲವತ್ತಿ ಮೂಲಕ ವ್ಯಾಪಾರಿಗಳಿಂದ ಪ್ರಸಿದ್ಧಿ ಹೊಂದಿದ ಅಡಕೆ, ಇದಕ್ಕೆ ಹೆಚ್ಚಿನ ಸಮರ್ಥನೆ ಶ್ರೀ ಸಿ. ಹಯವದನರಾಯರು ಸಂಪಾದಿಸಿದ Mysore Gazetteer (Vol. v, Bangalore. 1930) ಗ್ರಂಥದಲ್ಲಿ (ಪು. 1320) ದೊರೆಯುತ್ತದೆ.[1] ಆ ಭಾಗ ಹೀಗಿದೆ :

"Nyamati is a town of very modern date, the *Petta* having been established in the time of the Dewan Purnaiya[2], Being situated betwean *malnad* and the *maidan* regions, a considerable trade is carried on by the merchants, who are all Lingayats, in exchanging the products of both tracts. The grain of the *malnad* and the jaggory of the neighbouring talnks which can be stored in this dry climate for some time without risk of damage. *with areca-nut from Nagar and Koppa*[3], are forwarded to Bellary, Dharwar, etc., in return for cloths and other articles, which are sent to the *malnad* and Kanara. During the American Civir war of 1864–5, much money was made here by the cotton trade"

ಬಯಲು ಸೀಮೆ ಮಲೆನಾಡುಗಳ ಮಧ್ಯೆ ಇರುವ ನ್ಯಾಮತಿಯ ವರ್ತಕರು ಬಹು ಹಿಂದಿನಿಂದ ಮಲೆನಾಡಿನ ಬೆಳೆಗಳಾದ ಬೆಲ್ಲ ಅಡಕೆಯನ್ನು ಸಂಗ್ರಹಿಸಿ ಬಯಲು ಸೀಮೆಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಈ ಹೊತ್ತಿಗೂ ಜಿಲ್ಲಾ ಕೇಂದ್ರವಾದ ಶಿವಮೊಗ್ಗದ ಹಲವು ಅಡಕೆ ಮಂಡಿಗಳು ನ್ಯಾಮತಿ ವರ್ತಕರ ಕೈಯಲ್ಲಿವೆ ಎಂಬುದು ಗಮನಾರ್ಹ ಸಂಗತಿ. ಎಂದರೆ, ಹಿಂದೆ 'ನೆಲವತ್ತಿಯಡಕೆ' ಎಂಬುದು ನ್ಯಾಮತಿಯ ವರ್ತಕರ ಮೂಲಕ ಮಾರಾಟಗೊಂಡ ಅಡಕೆಯಾಗಿತ್ತು. ಕರ್ನಾಟಕದ ಉಳಿದ ಕಡೆಯ ಅಡಕೆಗಿಂತ ನ್ಯಾಮತಿ ಮೂಲಕ ಮಾರಾಟಗೊಂಡ ಮಲೆನಾಡಿನ ಅಡಕೆ ಗುಣದಲ್ಲಿ ಶ್ರೇಷ್ಠವಾಗಿದ್ದಿತು.

ಎಂ. ಚಿದಾನಂದಮೂರ್ತಿ

---

1. ಇದರತ್ತ ನನ್ನ ಗಮನ ಸೆಳೆದವರು ಶ್ರೀ ಎಚ್. ದೇವೀರಪ್ಪನವರು.
2. ನ್ಯಾಮತಿಯು ಈಚಿನ ಊರು ಎಂಬುದನ್ನು ನಾವು ಒಪ್ಪಾಗಿ ಲಕ್ಷಿಸಬೇಕಾಗಿಲ್ಲ. ಆ ಊರಲ್ಲಿ ದೊರೆಯುವ ಶಾಸನಗಳಿಂದ ಅದು ಕೊನೆಯ ಪಕ್ಷ ಸಾವಿರ ವರ್ಷಗಳಷ್ಟು ಹಳೆಯ ಊರು. ಅಲ್ಲಿಯ ಶಾಸನಗಳನ್ನು ಗೆಜೆಟಿಯರ್ ಗಮನಿಸದಿರುವುದು ಆಶ್ಚರ್ಯ. ಗಮನಿಸಿದ್ದಿದ್ದರೆ ಅಂದಿನ ನೆಲವತ್ತಿಯೇ ಇಂದಿನ ನ್ಯಾಮತಿ ಎಂಬುದನ್ನು ಗುರುತಿಸುತ್ತಿತ್ತು.
3. ಓರೆ ಅಕ್ಷರಗಳು ನನ್ನವು.

ಮೂಗುತಿಯು (ನಾಸಾಭರಣ)

"ಭಾರತೀಯರಲ್ಲಿ ಮೂಲತಃ ಮೂಗುತಿಯನ್ನು ಹಾಕುವ ಸಂಪ್ರದಾಯ ಇರದೆ, ಮುಸಲ್ಮಾನರ ಸಂಪರ್ಕದಿಂದ ಅದು ಬಳಕೆಯಲ್ಲಿ ಬಂದಿರಬೇಕು; ಈಗ ಧಾರ್ಮಿಕವಲ್ಲದ ಆ ಸಂಪ್ರದಾಯವನ್ನು ಬಿಟ್ಟರೆ ದೋಷವೇನಿಲ್ಲ" ಎಂಬೊಂದು ವಾದವಿದೆ. ಈ ವಿಷಯವನ್ನು ಸಮರ್ಥಿಸಲು ಈ ಕಾರಣಗಳನ್ನು ಹೇಳುತ್ತಾರೆ:

೧. ದಿ॥ ಜವಹರಲಾಲರು ಮೂಗುತಿಯನ್ನು ಹಾಕಿದವರನ್ನು ಕಂಡರೆ ರೇಗುತ್ತಿದ್ದರು.

೨. ಗೃಹ್ಯಸೂತ್ರ, ಕಾಮಂದಕ ಮೊದಲಾದ ಭಾರತೀಯ ಗ್ರಂಥಗಳಲ್ಲಿ ಮೂಗುತಿಯ ವಿಷಯಕವಾದ ಉಲ್ಲೇಖವಿಲ್ಲ.

೩. ಬೌದ್ಧ ಕಾಲದ ಮತ್ತು ಅದರ ಹಿಂದು ಮುಂದಿನ ಕಾಲದ ಶಿಲಾ ವಿಗ್ರಹಗಳಲ್ಲಿ ನಾಸಾಭರಣಗಳಿಲ್ಲ.

೪. ಕಾಳಿದಾಸಾದಿಗಳ ಸಂಸ್ಕೃತ ಗ್ರಂಥಗಳಲ್ಲಿ ಎಲ್ಲಿಯೂ ಮೂಗುತಿಯ ವರ್ಣನೆಯಿಲ್ಲ.

ಈ ವಾದವನ್ನು ಎತ್ತಿ ಶ್ರೀ ಜಿ. ಕೆ. ಹೆಗಡೆಯವರು ಹಲವಾರು ಆಧಾರಗಳನ್ನು ಹೇಳಿ ಬರೆದಿದ್ದಾರೆ (1965ನೇ ಫೆಬ್ರವರಿ, ಕೈಲಾಸ ಮಾಸಪತ್ರಿಕೆ ಬೆಂಗಳೂರು.) ಆ ಲೇಖನದಲ್ಲಿ ಸಂಸ್ಕೃತದ ಲಲಿತಾಸಹಸ್ರನಾಮ, ಕಾಮಾಕ್ಷೀ ಸ್ತೋತ್ರ, ಅಂಬಾಮಾನಸ ಪೂಜಾ, ಸ್ತೋತ್ರ, ಲಲಿತಾಪಂಚಕ, ಸೌಂದರ್ಯಲಹರೀ, ಶ್ಯಾಮಲಾದಂಡಕ, ಅಷ್ಟಪದಿ (ಗೀತ ಗೋವಿಂದ), ಕಾದಂಬರಿ, ಚಂಪೂ ಭಾರತ, ಋಗ್ವೇದಗಳಲ್ಲೂ ಮೂಗುತಿ ಇತ್ಯಾದಿ ಮಂಗಲಾಭರಣಗಳನ್ನು ಕಾಣುವಂತೆ ಎತ್ತಿ ಹೇಳಿ, ಬರೆದಿದ್ದಾರೆ. ಈ ಲೇಖನದ ಬಗೆಗೆ ಮತ್ತೊಮ್ಮೆ ಬೆಂಗಳೂರ ವಿಕ್ರಮ–ಸಾಪ್ತಾಹಿಕದಲ್ಲೂ ವಾದಗಳೆದ್ದಿವೆ, ಪ್ರತಿವಾದ ಬರೆಯಲಾಗಿವೆ. ಇಂದಿಗೆ ಹದಿನಾರು ವರ್ಷದ ಹಿಂದಿನ ಮಾತೆಂದು ಇದು ಮರೆಯಲಾಗದದು; ಇಂದಿಗೂ ಈ ವಾದ ರೂಪಾಂತರದಿಂದ ಕಾಣಿಸುತ್ತದೆ.

'ಸಾಧನೆ'ಯ 1980ರ ದಶಂಬರ ಸಂಚಿಕೆಯಲ್ಲಿ ಶ್ರೀ ಕಂಠಯ್ಯನವರು ಈ ಬಗೆಗೆ ಎರಡು ಪುಟದಷ್ಟು ವಿಚಾರ ಮಾಡಿದ್ದು ಸ್ವಾಗತಾರ್ಹ ಇವೆರಡು ಬರೆಹಗಳಲ್ಲೂ ಹೇಳದ–ಕನ್ನಡದ ಕೃತಿಗಳಲ್ಲಿ ಹೇಳಿರುವ–ಒಂದೆರಡು ಉದಾಹರಣ-ವಿವರಣಗಳು ಇಲ್ಲಿ ಬರೆಯಲಾಗಿವೆ.

"ಯಾವ ಧರ್ಮ ಸೂತ್ರದಲ್ಲಿಯೂ ಮಾಂಗಲ್ಯದ ಉಲ್ಲೇಖ ಕಂಡುಬರುವುದಿಲ್ಲ. ನಾಸಿಕಾಭರಣ ಕೂಡಾ ೧೧ನೆಯ ಶತಮಾನದನಂತರ ಆರ್ಯರಲ್ಲಿ ಪ್ರಚಾರಕ್ಕೆ

ಬಂದಿತು" ಎಂದು ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು ಬರೆದಿದ್ದಾರೆ (ಭಾರತೀಯ ಸಂಸ್ಕೃತಿ ಪು. 84). ಇಲ್ಲೊಂದು ಪ್ರಶ್ನೆಯೇ ಆಗುತ್ತದೆ! ಮಾಂಗಲ್ಯ ಧಾರಣ ವಿಲ್ಲದೆ ವಿವಾಹದ ಪೂರ್ಣತೆಯಾಗುವುದೆಂದು ಅದಾವ ಧರ್ಮಸೂತ್ರದಲ್ಲಾಗಲೀ ಹೇಳಿದೆಯೆ ? 'ಮಾಂಗಲ್ಯ ತಂತುನಾನ್ಯೇನ' ಎಂಬುದಾಗಿ ಮಾಂಗಲ್ಯ ಸೂತ್ರವನ್ನು ಕಟ್ಟಲು 'ಆಶ್ವಲಾಯನ ಸ್ಮೃತಿ'ಯಲ್ಲಿ ಹೇಳಲಾಗಿದೆ. ಈ ವಿಚಾರವನ್ನು ಡಾ. ಶಾಸ್ತ್ರಿಯವರು ಕಂಡಂತಿಲ್ಲ, ಹೇಳಿಲ್ಲ! ಶ್ರೀ ಕೆ. ಶ್ರೀಕಂಠಯ್ಯನವರು ಆ ಪುಸ್ತಕ ದಿಂದ ಎತ್ತಿದ (ಪು. 200) 'ಇದು 12ನೆಯ ಶತಕದಿಂದೀಚೆಗೆ ಸುಮಂಗಲಿಯರ ಲಕ್ಷಣವೆಂದು ಕಂಡುಬಂದಿದೆ'ಯೆಂಬುದೂ ಸಾಧುವಲ್ಲ !

ಮೂಗುತಿ ಋಗ್ವೇದದ ಕಾಲದಿಂದಲೂ ಕಾಣಬಹುದಾದರೆ, ಅದು 'ಅನಾರ್ಯ' ವೆಂದು, ವಿದೇಶೀಯವೆಂದು, ಮುಸಲ್ಮಾನರೆಂದು ಹೇಳುವುದು ಮೌಢ್ಯವಾದೀ ತಲ್ಲವೇ ? ಹರಪ್ಪ, ಮೊಹೆಂಜದಾರೊ ಇತ್ಯಾದಿ ಪ್ರಾಚೀನ ಅವಶೇಷಗಳಲ್ಲೂ ಮೂಗುತಿಯ ಕುರುಹು ಇದೆಯೆನ್ನುವ ಡಾ. ಶಾಸ್ತ್ರಿಯವರು ಈ ಮೇಲಿಂದಂತೆ ಬರೆದುದು ತೀರಾ ಅಸಮರ್ಪಕವಾಗಿದೆಯಲ್ಲವೇ ?

ಕನ್ನಡದ ಹಳೆಯ ಕೃತಿಗಳಲ್ಲೂ ಮೂಗುತಿಯ ಪ್ರಸ್ತಾಪ ಇದೆಯೆಂದು ಹೇಳ ಬಹುದು ; "ಕಟಕ ಕಟಿಸೂತ್ರಕುಂಡಲಾಭರಣ ಮೊದಲಾಗೊಡೆಯ 'ಹದಿನಾರು ಆಭರಣಗಳೆಂದು ವಡ್ಡಾರಾಧನೆ'ಯಲ್ಲಿದೆ. 'ಪದಿನಾರಲ್ಲವಲಂಕ್ರಿಯಾರಚನೆ ಮೂವತ್ತಾರು ನೇರ್ಪಟ್ಟುವು' ಎಂದು ಮಹಾಕವಿ ರನ್ನನು 'ಗದಾಯುದ್ಧ'ದಲ್ಲಿ ಶ್ಲೇಷಾಲಂಕಾರದಿಂದ ಸೂಚಿಸಿದ್ದಾನೆ. ಈ 16 ಅಲಂಕಾರಗಳೇನೆಂದು ಶ್ರೀ ತೀ ನಂ. ಶ್ರೀ ಅವರು ಟಿಪ್ಪಣಿಯಲ್ಲಿ ಹೇಳಿದ್ದಾರೆಂಬುದು ಸಹಜವಾಗಿದೆ.

ವಿವಾಹಿತ ಸ್ತ್ರೀಯರು ನಿತ್ಯದಲ್ಲೂ ಧರಿಸತಕ್ಕ ಮೌಲಿಕಗಳಾದ ಪಂಚಾಭರಣ ಗಳಲ್ಲಿ ಮೂಗುತಿ ಒಂದಾಗಿದೆಯೆಂದು ತೌಳವರಲ್ಲಿ ರೂಢಿಯಿದೆ. ಈ ಬಗೆಗೆ ಎ. ಮೆನರ್ ಸಂಕಲಿಸಿದ ತುಳು, ಅಂಗ್ಲ ಕೋಶದಲ್ಲಿ ವಿವರವಾಗಿ ಹೇಳಿದುದು (ಪುಟ 221) : "ಮುತ್ತೈಸ, S. The fine principle ornaments. ಕರ್ಯಮಣಿ, ಬೊಟ್ಟು, ಮೂಕುತಿ, ಕಾಜಿ, ಕಾರವುಂಗಿಲ್ಲ." ಅಂದರೆ, ಕರಿಮಣಿ, ಕುಂಕುಮ ಬೊಟ್ಟು, ಮೂಗುತಿ, ಬಳೆ, ಕಾಲುಂಗುರಗಳು ಇವನ್ನು ಧರಿಸಿದ ಹೆಂಗಸು ಸಧವೆಯೆಂದು, ಇವನ್ನು ಧರಿಸಿದ ಹೆಂಗಸು ಅವಿವಾಹಿತೆ ಅಥವಾ ವಿಧವೆ ಯೆಂದು ರೂಢಿಯಿದೆ. 'ನಿನ್ನ ಗಂಡ ತೀರಲಿ' ಎಂಬುವ ಬದಲು, 'ನಿನ್ನ ಮೂಗುತಿ ಕಳಚಲಿ' ಎಂಬುದೂ ರೂಢಿಯಲ್ಲಿದೆ. ಇಂದಿಗೂ ಗಂಡ–ತೀರಿದ–ಇಲ್ಲದ–ಗುರುತಿಗೆ ಮೂಗುತಿ ಮೊದಲಾದ ಅಯ್ದು ಮುಖ್ಯಾಭರಣಗಳನ್ನು ಕಳಚುತ್ತಾರೆ!

ಮೂಗುತಿಯು ಹೆಂಗಸರಿಗೆ ಮೀಸಲೆಂಬಂತೆ, ಗಂಡಸಿನ ವೀರತ್ವವನ್ನು ಹೇಳು ವಲ್ಲಿಯೂ 'ಮೂಗುತಿ'ಯೆಂಬ ಪದವನ್ನು ಬಳಸಿದ ಪ್ರಾಚೀನ ಉದಾಹರಣವು

ಮರೆಯಲಾಗದುದು! ನಾಗವರ್ಮನ 'ಛಂದೋಂಬುಧಿ'ಯಲ್ಲಿ ಚಾವುಂಡರಾಯನನ್ನು ಕುರಿತು ಹೊಗಳುವಲ್ಲಿದೆ: "ಗಂಡರ ಮಊಕುತಿಯೆನಿಸಿದ, ಮಾಂಡಳಿಕರ ಮಂತ್ರಿ ಸಂಧಿ ವಿಗ್ರಹಿ ರಾಯಂ" ಈ ತರದ ಬಿರುದಿನ ಪ್ರಯೋಗ ವಿರಳವಾದರೂ ಸರಸವಾಗಿದೆ!

ಋಗ್ವೇದ ಮೊದಲಾದ ಪ್ರಾಚೀನ ಕೃತಿಗಳಲ್ಲಿ ಹೇಳಿರುವ, ಹರಪ್ಪ ಮೊದಲಾದೆಡೆಯ ಸಂಸ್ಕೃತಿಯಿಂದ ತಿಳಿಯುವ ಮಊಗುತಿ ಅನಾರ್ಯರದೂ ವಿದೇಶೀಯರದು ಇತ್ಯಾದಿ ಬರೆದ ಹೇಳುವ ಚಾಪಲ್ಯ ನಮ್ಮ ನಾಸ್ತಿಕ್ಯವನ್ನು–ಮೌಢ್ಯವನ್ನು–ಹರಡುತ್ತದೆ. ಇಂತಹ ಮೌಲಿಕ–ಪ್ರಾಚೀನ–ಸಾಂಸ್ಕೃತಿಕ ವಿಚಾರಗಳನ್ನು ಕುರಿತು ಈ ಮೊದಲು ಯಾರು ಬರೆದರು, ಏನು ಬರೆದರೆಂದು ಸಿಂಹಾವಲೋಕನ ಕ್ರಮದಿಂದ ಪರೀಕ್ಷಿಸುವುದರಿಂದ ನಮ್ಮ ವಿಚಾರಧಾರೆಗೆ ಪುಷ್ಟಿಯೊದಗುತ್ತದೆಯೆಂದೇ ಹೇಳಲಡ್ಡಿಯಿಲ್ಲ!

ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಬಸವಣ್ಣನವರ ಷಟ್‌ಸ್ಥಲವಚನ ವ್ಯಾಖ್ಯಾನದ ಕರ್ತೃ

"ಬಸವಣ್ಣನವರ ಷಟ್‌ಸ್ಥಲ ವಚನಗಳು" ಗ್ರಂಥಕ್ಕೆ ಈವರೆಗೆ ೫ ಜನ ಟೀಕೆ ಬರೆದಿದ್ದು, ಇವೆಲ್ಲ "ಬಸವಣ್ಣನವರ ಟೀಕಿನ ವಚನಗಳು" ಎಂಬ ಹೆಸರಿನ ಗ್ರಂಥದಲ್ಲಿ I, II, III, IV, V ಸಂಕೇತದಿಂದ ಪ್ರಕಟವಾಗಿವೆ. ಇವುಗಳಲ್ಲಿ I, II ನೆಯ ಟೀಕಾಕಾರರು ಯಾರೆಂಬುದು ತಿಳಿದುಬಂದಿರಲಿಲ್ಲ. Iನೆಯ ಟೀಕಾಕಾರನನ್ನು ಶೋಧಿಸುವುದೇ ಈ ಲೇಖನದ ಉದ್ದೇಶ.

ಈ ಐದು ಟೀಕೆಗಳಲ್ಲಿ ಕೊನೆಯ ನಾಲ್ವರು ತಮಗೆ ಸೂಕ್ತವೆನಿಸಿದ ವಚನಗಳಿಗೆ ಟೀಕೆ ಬರೆದರೆ 1ನೆಯಂವನು ಮಾತ್ರ ಒಂದೂ ಬಿಡದಂತೆ ಎಲ್ಲ ವಚನಗಳಿಗೆ ವಾಚ್ಯಾರ್ಥ, ವಿಶೇಷಾರ್ಥ, ಆಗಾಗ ಇನ್ನು ವಿಶೇಷಾರ್ಥದ ಟೀಕೆ ಬರೆದಿರುವನು. ಈ ಟೀಕೆಯ ಕೆಲವು ಹಸ್ತಪ್ರತಿಗಳಲ್ಲಿ "ಶ್ರೀ ಗುರುಬಸವರಾಜ ದೇವರು ನಿರೂಪಿಸಿದ ಷಟ್‌ಸ್ಥಲದ ವಚನ ವ್ಯಾಖ್ಯಾನ" ಎಂಬ ಹೇಳಿಕೆ ಇರುವುದರಿಂದ ಟೀಕಾಕಾರ ಇದನ್ನು "ವಚನ ವ್ಯಾಖ್ಯಾನ" ಎಂದೇ ಕರೆದಿರಬೇಕೆನಿಸುತ್ತದೆ. ಈವರೆಗೆ ಮರೆಯಾಗಿದ್ದ ಈತನನ್ನು ಶೋಧಿಸುವಲ್ಲಿ ಸಿದ್ಧವೀರಸ್ವಾಮಿ ಕೃತ "ಮುಕ್ತಿಕಂಠಾಭರಣ" ಹೆಸರಿನ ವಚನ ಸಂಕಲನ ಗ್ರಂಥ ನೆರವಾಗುತ್ತದೆ.

ಮುಕ್ತಿಕಂಠಾಭರಣದ ೪೭೨ನೆಯ ವಚನದ ಟೀಕೆಯಲ್ಲಿ "ಮೂಲಪ್ರತಿಯಲ್ಲಿ ಸಿದ್ಧವೀರಸ್ವಾಮಿಗಳು ಬರೆಯದ ಕಾರಣ ಇಲ್ಲಿ ಬಸವೇಶ್ವರ ವಚನ ಒಂಬೈನೂರಾ

ಐವತ್ತೇಳು ವಚನಕ್ಕೆ ಹುಮನಾಬಾದಿ ವಿರಕ್ತಮಠದ ನಿರಂಜನಸ್ವಾಮಿಗಳು ವ್ಯಾಖ್ಯಾನ ಬರೆದ ಪ್ರತಿಯಲ್ಲಿಯ ಈ ವಚನದ ಟೀಕು, ಕುಂಟೋಜಿಮಠದ ಗುರುಪಾದಪ್ಪನವರ ಕರಸಂಜಾತನಾದ ಚನ್ನಬಸವನು ಬರೆದಿರುತ್ತಾನೆ" ಎಂಬ ಮಾತು ಬರುತ್ತದೆ. ಸಿದ್ಧವೀರಸ್ವಾಮಿ ಮುಕ್ತಿಕಂಠಾಭರಣವನ್ನು ಸಂಕಲಿಸುತ್ತ ಅಲ್ಲಿಯ ೫೭೨ನೆಯ ಬಸವಣ್ಣನವರ ವಚನಕ್ಕೆ ಟೀಕೆ ಬರೆಯುದ ಪ್ರಯುಕ್ತ, ನಿರಂಜನ ಸ್ವಾಮಿಗಳು ಬರೆದಿದ್ದ "ಬಸವಣ್ಣನವರ ವಚನ ವ್ಯಾಖ್ಯಾನ" ದಿಂದ ಉದ್ಧರಿಸಿ ಜೋಡಿಸಿದವನು ಚೆನ್ನಬಸವನೆಂಬುದು ಇಲ್ಲಿಯ ಆಶಯ. ಮುಕ್ತಿಕಂಠಾಭರಣದಲ್ಲಿ ಉದ್ಧರಿಸಲಾದ ಟೀಕೆ ಈಗ ಪ್ರಕಟವಾದ "ಬಸವಣ್ಣನವರ ಟೀಕಿನ ವಚನೆಗಳು" ಗ್ರಂಥದ 1ನೆಯ ಟೀಕೆಯಲ್ಲಿ ಸಿಗುವುದರಿಂದ ಇದನ್ನು ಬರೆದವನು ಹುಮನಾಬಾದಿ ವಿರಕ್ತ ಮಠದ ನಿರಂಜನಸ್ವಾಮಿ ಎಂದು ಸ್ಪಷ್ಟವಾಗುತ್ತದೆ.

'ಬಸವಣ್ಣನವರ ಟೀಕಿನ ವಚನಗಳು' ಗ್ರಂಥದ ಪ್ರಸ್ತಾವನೆಯಲ್ಲಿ 1ನೆಯ ಟೀಕೆಯಲ್ಲಿಯ ಕೆಲವು ಪದಗಳನ್ನು ಗಮನಿಸಿ ಈ ಟೀಕಾಕಾರನು ಬಳ್ಳಾರಿ ಪ್ರದೇಶ ದವನಾಗಿರಬಹುದೆಂದು ಸೂಚಿಸಲಾಗಿದ್ದಿತು. ಈಗ ಇವನು ಕಲ್ಯಾಣ ಪ್ರದೇಶದ ಹುಮನಾಬಾದಿಯವನೆಂದು ತಿದ್ದಿಕೊಳ್ಳಬೇಕಾಗುತ್ತದೆ. ಇಲ್ಲವೆ ಈತನು ಮೂಲತಃ ಬಳ್ಳಾರಿ ಪ್ರದೇಶದವನಿದ್ದು ಆಮೇಲೆ ಹುಮನಾಬಾದಿ ವಿರಕ್ತಮಠದ ಅಧಿಕಾರಕ್ಕೆ ಹೋಗಿರಬಹುದೆಂದು ಹೇಳಬೇಕಾಗುತ್ತದೆ.

ಏಕೋತ್ತರಶತಸ್ಥಲ (ಮಹಾಲಿಂಗದೇವ ?), ಕರಣಹಸಿಗೆ [ಚೆನ್ನಬಸವಣ್ಣ], ಕರಸ್ಥಲದ ನಾಗಲಿಂಗನ ತ್ರಿವಿಧಿ, ಕೈವಲ್ಯ ಪದ್ಧತಿ [ನಿಜಗುಣ ಶಿವಯೋಗಿ] ಗಳಿಗೆ ಬರೆದ ಟೀಕೆ ಇವನದಾಗಿರುವ ಸಂಭವವಿದೆಯೆಂದು "ಬಸವಣ್ಣನವರ ಟೀಕಿನ ವಚನ ಗಳು" ಗ್ರಂಥದ ಪ್ರಸ್ತಾವನೆಯಲ್ಲಿ ಊಹಿಸಲಾಗಿದೆ. ಇದು ನಿಜವಿದ್ದರೆ ಈತನ ಟೀಕಾ ಸಾಹಿತ್ಯ ನಿರ್ಮಿತಿಯ ಆಸಕ್ತಿ, ವ್ಯಾಪ್ತಿಗಳು ಬೆರಗು ಹುಟ್ಟಿಸುತ್ತವೆ.

ಎಂ. ಎಂ. ಕಲಬುರ್ಗಿ

---

೧ ಡಾ॥ ಎಂ. ಎಂ. ಕಲಬುರ್ಗಿ - ಬಸವಣ್ಣನವರ ಟೀಕಿನ ವಚನಗಳು (ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ)

ಈ ಸಂಚಿಕೆಯ ಲೇಖಕರು

1 ಜಯಸುದರ್ಶನ
460-ಎ, 6ನೇ ಕ್ರಾಸ್, 7ನೇ ಬ್ಲಾಕ್ ಪಶ್ಚಿಮ
ಜಯನಗರ, ಬೆಂಗಳೂರು–560082

2 ಗೌರೀಶ ಕಾಯ್ಕಿಣಿ
ಗೋಕರ್ಣ

3 ಎಚ್. ಎಸ್. ಅನಂತನಾರಾಯಣ
ಉಸ್ಮಾನಿಯಾ ವಿಶ್ವವಿದ್ಯಾನಿಲಯ
ಹೈದರಾಬಾದು

4 ಟಿ. ಆರ್. ಮಹದೇವಯ್ಯ
ನಿಘಂಟು ಕಛೇರಿ, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು–560020

5 ಜಯಸಿಂಹ
178, 'ಪರಿಮಳ' ಶ್ರೀನಗರ
ಬನಶಂಕರಿ 1ನೇ ಸ್ಟೇಜ್, 2ನೇ ಬ್ಲಾಕ್
ಬೆಂಗಳೂರು–560050

6 ಎಸ್. ಎನ್. ಶಿವಸ್ವಾಮಿ
ಅಧ್ಯಾಪಕರು
ಕಲ್ಪತರು ಕಾಲೇಜು, ತಿಪಟೂರು-572202

7 ಟಿ. ಎನ್. ವಿಜಯಪ್ಪ
ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

8 ಜಯಶ್ರೀ ಜಾಟೆ c/o ಭೀಮರಾವ್ ಜಾಟೆ
ಬೀಳಗಿ–587116
ಬಿಜಾಪುರ ಜಿಲ್ಲೆ

9 ಪ್ರಹ್ಲಾದ್ ಮುದ್ಗಲ್
ಇ-2, ಶ್ರದ್ಧಾ ಮಾತಾ, ಸಿಎಚ್.ಎಸ್
ಪೋವೈ, ಮುಂಬಯಿ–400076

10 ಎಸ್. ವಿದ್ಯಾಶಂಕರ
ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

11 ಎನ್. ವೆಂಕಟಕೃಷ್ಣ
ಸರಕಾರಿ ಕಲಾ ಕಾಲೇಜು
ಬೆಂಗಳೂರು

12 ವಿ. ಶಿವಾನಂದ
ಅಧ್ಯಾಪಕರು, ಕನ್ನಡ ವಿಭಾಗ
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗ

13 ಶ್ರೀನಿವಾಸರಾವ್
ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥರು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

14 ಎಸ್. ಬಿ. ಪರಿಮಳಾ
ಎಂ.ಫಿಲ್. ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

15 ಎಚ್. ದೇವೀರಪ್ಪ
'ಹರಿಹರ' ವಿಜಯನಗರ
ಬೆಂಗಳೂರು

16 ಎಂ. ಚಿದಾನಂದಮೂರ್ತಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560056

17 ವಿದ್ವಾನ್ ಕೆ. ವೆಂಕಟರಾಯಾಚಾರ್ಯ
ಸುರತ್ಕಲ್ಲು

18 ಎಂ. ಎಂ. ಕಲ್ಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಧಾರವಾಡ ವಿಶ್ವವಿದ್ಯಾಲಯ
ಧಾರವಾಡ

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00 ರೂ.
(ವಿದ್ಯಾರ್ಥಿಗಳಿಗೆ) 5–00 ರೂ.
ಆಜೀವ ಚಂದಾ ಹಣ 100-00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6–00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056